# ಡಾ. ವ್ಹಿ. ಎಸ್. ಮಾಳಿಯವರ ಸಂಶೋಧನ ಸಾಹಿತ್ಯದ ಅಧ್ಯಯನ

ಕನ್ನಡ ವಿಷಯದಲ್ಲಿ ಎಂ. ಫಿಲ್. ಪದವಿಗಾಗಿ,
ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಸಾದರಪಡಿಸಿದ ಸಂಶೋಧನ ನಿಬಂಧ


ಸಂಶೋಧಕರು

**ಶ್ರೀ ಸಂಗಪ್ಪ ಬಸಪ್ಪ ಹಂಚಿನಾಳ**

ಅ. ವ್ಹಿ. ದ. ಸಂಘದ ಶ್ರೀ ಪಿ. ಎಸ್. ಸಜ್ಜನ ಕಲಾ ಮಹಾವಿದ್ಯಾಲಯ.
ಬೀಳೂರ. ತಾ|| ಜಿ|| ಬಾಗಲಕೋಟ

ಮಾರ್ಗದರ್ಶಕರು

**ಡಾ|| ಅಶೋಕ ಎಮ್. ನರೋಡೆ**

ಕನ್ನಡ ವಿಭಾಗ ಕೆ. ಎಲ್. ಇ. ಸಂಸ್ಥೆಯ ಪದವಿ ಮಹಾವಿದ್ಯಾಲಯ.
ಮಹಾಲಿಂಗಪೂರ. ಜಿ|| ಬಾಗಲಕೋಟ



**ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ,**

**ಹಾರೂಗೇರಿ. ತಾ|| ರಾಯಬಾಗ ಜಿ|| ಬೆಳಗಾವಿ**

ಮಾನ್ಯತೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩೨೭೬

**೨೦೧೨-೧೩**

# ಡಾ. ವ್ಹಿ. ಎಸ್. ಮಾಳಿಯವರ ಸಂಶೋಧನ ಸಾಹಿತ್ಯದ ಅಧ್ಯಯನ

ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಸಂಶೋಧನ ನಿಬಂಧ

ಸಂಶೋಧಕರು
**ಶ್ರೀ ಸಂಗಪ್ಪ ಬಸಪ್ಪ ಹಂಚಿನಾಳ**
ಶ್ರೀ ಪಿ. ಎಸ್. ಸಜ್ಜನ ಕಲಾ ಮಹಾವಿದ್ಯಾಲಯ, ಬೇವೂರ.
ತಾ - ಜಿ. : ಬಾಗಲಕೋಟ

ಮಾರ್ಗದರ್ಶಕರು
**ಡಾ. ಅಶೋಕ ಎಮ್. ನರೋಡೆ**
ಕನ್ನಡ ವಿಭಾಗ ಕೆ.ಎಲ್.ಇ. ಸಂಸ್ಥೆಯ ಪದವಿ ಮಹಾವಿದ್ಯಾಲಯ,
ಮಹಾಲಿಂಗಪೂರ. ಜಿ ॥ ಬಾಗಲಕೋಟ

**ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ,**
**ಹಾರೂಗೇರಿ ಜಿ. ಬೆಳಗಾವಿ**
ಮಾನ್ಯತೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

**೨೦೧೩-೧೪**

# ಧೃಢೀಕರಣ ಪತ್ರ

ಶ್ರೀ ಸಂಗಪ್ಪ ಬಸಪ್ಪ ಹಲಬಿನಾಳ ಇವರು **'ಡಾ. ಬಿ. ಎಸ್. ಮಾಳಿಯವರ ಸಂಶೋಧನಾ ಸಾಹಿತ್ಯದ ಅಧ್ಯಯನ'** ಎಂಬ ಶೀರ್ಷಿಕೆಯ ನಿಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಹಾರೂಗೇರಿಯ **ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರದ** ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ನಿಬಂಧವನ್ನು ಇವರು ಈ ಮೊದಲು ಇಡಿಯಾಗಿಯಾಗಲಿ, ಬಿಡಿಯಾಗಿಯಾಗಲಿ ಎಲ್ಲಿಯೂ ಪ್ರಕಟಿಸಿಲ್ಲವೆಂದೂ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದೂ ದೃಢೀಕರಿಸುತ್ತೇನೆ.

ಸ್ಥಳ : ಹಾರೂಗೇರಿ
ದಿನಾಂಕ : ೨೦-೦೭-೨೦೧೩

**ಡಾ. ಅಶೋಕ ಎಮ್. ನರೋಡೆ**
ಮಾರ್ಗದರ್ಶಕರು,
ಕನ್ನಡ ವಿಭಾಗ ಕೆ.ಎಲ್.ಇ. ಸಂಸ್ಥೆಯ
ಪದವಿ ಮಹಾವಿದ್ಯಾಲಯ,
ಮಹಾಲಿಂಗಪೂರ. ಜಿ|| ಬಾಗಲಕೋಟ.

# ಪ್ರಮಾಣ ಪತ್ರ

**'ಡಾ. ವ್ಹಿ. ಎಸ್. ಮಾಳಿಯವರ ಸಂಶೋಧನ ಸಾಹಿತ್ಯದ ಅಧ್ಯಯನ'** ಎಂಬ ಶೀರ್ಷಿಕೆಯ ನಿಬಂಧವನ್ನು **ಡಾ. ಅಶೋಕ ಎಮ್. ನರೋಡೆ** ಅವರ ಮಾರ್ಗದರ್ಶನದಲ್ಲಿ ನಾನು ಸಿದ್ಧಪಡಿಸಿದ್ದೇನೆ. **ಹಾರೂಗೇರಿಯ ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರದ** ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವನ್ನು ಈ ಮೊದಲು ಇಡಿಯಾಗಿಯಾಗಲಿ, ಬಿಡಿಯಾಗಿಯಾಗಲಿ ನಾನು ಪ್ರಕಟಿಸಿರುವುದಿಲ್ಲವೆಂದೂ ಹಾಗೂ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದೂ ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ಹಾರೂಗೇರಿ
ದಿನಾಂಕ : ೨೦-೦೭-೨೦೧೩

**ಶ್ರೀ ಸಂಗಪ್ಪ ಬಿ. ಹಂಚಿನಾಳ**
ಸಂಶೋಧನ ವಿದ್ಯಾರ್ಥಿ
ಶ್ರೀ ಬಿ.ಆರ್. ದರೂರ
ಸಂಶೋಧನ ಕೇಂದ್ರ, ಹಾರೂಗೇರಿ.

# • ಪರಿವಿಡಿ •

ಅಧ್ಯಾಯ - ೧ :

# ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ

## ಅಧ್ಯಾಯ – ೧ :

# ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ

### ೧.೧ ಅಧ್ಯಯನ ಉದ್ದೇಶ :

ಸಂಶೋಧನಾ ಸಾಹಿತ್ಯ ಸಂಸ್ಕೃತಿಯ ದಿವ್ಯ ಪರಂಪರೆಯ ಜಗತ್ತಿನಾದ್ಯಂತ ಕೂತುಹಲ ಕೆರಳಿಸುತ್ತಿರುವ ಅಧ್ಯಯನಗಳಲ್ಲಿ ಸಂಶೋಧನ ಅಧ್ಯಯನವು ಒಂದು. ಸಾಹಿತ್ಯ, ಸಂಸ್ಕೃತಿ ಪರಂಪರೆ ಸಂಶೋಧನೆಯ ತಳಪಾಯವಾಗಿದೆ. ಸತ್ಯಾಸತ್ಯತೆಗಳನ್ನು ಅನಾವರಣಗೊಳಿಸುವ ಸಾಹಿತ್ಯ ಸಂಶೋಧನೆಯು ಕತ್ತಲೆಯಿಂದ ಬೆಳಕಿನಡೆಗೆ, ಅಜ್ಞಾನದಿಂದ ಜ್ಞಾನದಡೆಗೆ ಸಾಗಲು ನಡೆಸುವ ಪ್ರಯತ್ನವೆ ಸಂಶೋಧನೆಯಾಗಿದೆ.

ಸಾಹಿತ್ಯ ಸಂಶೋಧನೆಯು ಹೃದಯಗಮ್ಯವೂ ಮತ್ತು ಆಹ್ಲಾದವನ್ನು ನೀಡುವಂಥದ್ದು, ತಾತ್ವಿಕ ವಿಚಾರಶೀಲ, ಚಿಂತನೆಯ ಮೂಲಕ ಭಿನ್ನ ವಿಭಿನ್ನ ಸಾಹಿತ್ಯದ ಆಯಾಮಗಳನ್ನು ಅರಿತುಕೊಳ್ಳುವುದೆ ಸಂಶೋಧನೆಯಾಗಿದೆ. ಸೂಕ್ಷ್ಮ ವಿಚಾರಗಳನ್ನು ತಿಳಿಯಲು ಶೋಧಿಸುವ ಪ್ರಯತ್ನ ಮಾಡಬೇಕೆಂದು ತಿಳಿದು ಬೆಳಗಾವಿ ಜಿಲ್ಲೆಯ ಸಂಶೋಧನೆಯ ರತ್ನ ಶಂಬಾ ಜೋಷಿ, ಡಾ. ಜ್ಯೋತಿ ಹೊಸರು ಮುಂತಾದವರ ಜಾಡಿನಲ್ಲಿ ಬೆಳೆದ ಡಾ. ವ್ಹಿ. ಎಸ್. ಮಾಳಿಯವರು ಸಂಶೋಧನೆಯ ಮೂಲಕ ಸಂಸ್ಕೃತಿಯ ಬೆಳಕನ್ನು ಬೆಳಗುತ್ತಿದ್ದಾರೆ. ವಿಮರ್ಶೆ ಮತ್ತು ಸಂಶೋಧನ ನೆಲೆಗಳ ಸಾಂಸ್ಕೃತಿಕ ಸಾಮಗ್ರಿಗಳ, ಸಂಶೋಧನಾ ಮಹಾಪ್ರಬಂಧ ಮತ್ತು ಸಂಶೋಧನೆಗಳ ಕುರಿತು ಅಧ್ಯಯನ ಮಾಡಬೇಕೆಂಬ ಉದ್ದೇಶದಿಂದ ಪ್ರಸ್ತುತ ವಿಷಯವನ್ನು ಆಯ್ಕೆ ಮಾಡಿಕೊಳ್ಳಲಾಯಿತು.

ಕನ್ನಡ ಸಾಹಿತ್ಯ ಸಂಶೋಧನೆಯ ಇತಿಹಾಸವನ್ನು ನಿರೂಪಿಸುತ್ತಾ ಸಾಗುವಾಗ ಕನ್ನಡ ಸಂಶೋಧಕರಲ್ಲಿ ಕಂಡು ಬರುವ ಮುಖ್ಯ ಪ್ರವೃತ್ತಿಗಳು ಪ್ರೇರಣೆ, ದೋರಣೆಗಳು, ಪ್ರಯೋಗಗಳು, ಪ್ರಭಾವಗಳು ಹಾಗೂ ಫಲ ಶೃತಿಗಳು ಎಂದು ತಿಳಿಯುತ್ತದೆ. ರಸನಿಷ್ಟ ವಿಮರ್ಶಕರೆಲ್ಲರೂ ಸಂಶೋಧಕರಾಗಿಯೆ ಇರುವ ಡಾ. ಬಿ. ಎಲ್. ರೈಸ್, ಡಾ. ಆರ್. ಎಫ್. ಕಿಟೆಲ್, ಡಾ. ಜೆ. ಎಫ್. ಪ್ಲೀಟ್, ಡಾ. ಮೇಕೆಂಜಿ ಮುಂತಾದವರು ಪಾಶ್ಚಾತ್ಯ ವಿದ್ವಾಂಸರು, ಕನ್ನಡದಲ್ಲಿ ಡಾ. ಡಿ. ಎಲ್. ನರಸಿಂಹಚಾರ್ಯರು, ಶಂಬಾ ಜೋಶಿ, ಪ. ಗು. ಹಳಕಟ್ಟಿ, ಗೋವಿಂದ ಪೈ ಪ್ರಮುಖರು. ೨ನೇ ತಲೆಮಾರಿನ ಡಾ. ಬಿ. ಆರ್. ಹಿರೇಮಠ, ಡಾ. ಎಂ. ಚಿದಾನಂದ ಮೂರ್ತಿ,

ಡಾ. ಎಂ. ಎಂ. ಕಲಬುರ್ಗಿ ಸಂಶೋಧನೆ ತ್ರೀರತ್ನಗಳಿದ್ದಂತೆ. ಇವರ ಗರಡಿಯಲ್ಲಿ ಪಳಗಿದ ಡಾ. ವ್ಹಿ. ಎಸ್. ಮಾಳಿಯವರು ಪ್ರಸಿದ್ಧ ಸಂಸ್ಕೃತಿ ಸಂಶೋಧಕ ಚಿಂತಕರು.

೩ನೇ ತಲೆಮಾರಿನ ಡಾ. ಆರ್. ಸಿ. ಹಿರೇಮಠ, ಡಾ. ಬಿ. ಕೆ. ಹಿರೇಮಠ, ಡಾ. ಬಿ. ವ್ಹಿ. ಶಿರೂರ ಮುಂದುವರೆದು ಡಾ. ವ್ಹಿ. ಎಸ್. ಮಾಳಿ, ಡಾ. ರಹಮತ್ ತರಕೇರಿ, ಡಾ. ಬಸವರಾದ ಸಬರದ, ಡಾ. ಇಚ್ಚಂಗೆ, ಡಾ. ಅಶೋಕ ಎಂ. ನರೋಡೆ, ಡಾ. ಮರೆಗುದ್ದಿ, ಡಾ. ಶಾಂತಿನಾಥ ದಿಬ್ಬದ, ಡಾ. ಕೆ. ರವೀಂದ್ರನಾಥ, ಡಾ. ವಿರೇಶ ಬಡಿಗೇರ, ಡಾ. ಎಸ್. ಸಿ. ಪಾಟೀಲ, ಡಾ. ಅಂಗಡಿ ಮುಂತಾದವರು ಕನ್ನಡ ನಾಡಿನ ಹಿರಿಮೆ ಗರಿಮೆ ಮುಂದುವರೆಸಿಕೊಂಡು ಬಂದಿದ್ದಾರೆ.

ಬೆಳಗಾವಿ ಜಿಲ್ಲೆಯ ಪರಿಸರದಲ್ಲಿ ಹತ್ತು ಹಲವು ವಿಷಯಗಳು ಅದರಲ್ಲಿ ಸಾಹಿತ್ಯ ಸಾಧನೆಯು ಅಪಾರ. ಸಾಹಿತ್ಯ ಸಾಧನೆ ಮಾಡಿದ ವ್ಯಕ್ತಿಗಳು ಬಹಳ ಜನ ಇದ್ದಾರೆ. ಸಾಹಿತಿ, ಸಂಶೋಧನೆಯ ಮೂಲಕ ಗ್ರಾಮೀಣ ಸಂಸ್ಕೃತಿಯ ಪರಂಪರೆ ಚಿಂತಕರು, ವಿಶೇಷವಾಗಿ **'ವಿಮರ್ಶೆ ಮತ್ತು ಸಂಶೋಧನೆ'** ಕ್ಷೇತ್ರದಲ್ಲಿ ತೊಡಗಿದ **'ಡಾ. ವ್ಹಿ. ಎಸ್. ಮಾಳಿಯವರ ಸಂಶೋಧನ ಸಾಹಿತ್ಯದ ಅಧ್ಯಯನ'** ಕ್ಕೆ ಆಯ್ಕೆ ಮಾಡಿಕೊಳ್ಳಲು ಕಾರಣವನೆಂದರೆ ಕರ್ನಾಟದಲ್ಲಿ ಬೆಳಗಾವಿ ಸಂಸ್ಕೃತಿ, ಸಂಶೋಧನೆಯಲ್ಲಿ ವಿದ್ವಾನ ಪಂಡಿತರು. ಇಂತಹವರ ಸಾಹಿತ್ಯ ಸಂಶೋಧನೆ ಸಾಧನೆಗಳು ಗಮನಾರ್ಹವಾಗಿವೆ.

ಎಂ.ಫಿಲ್. ಮಾಡುವ ಉದ್ದೇಶದಿಂದ ಸೂಕ್ತ ವಿಷಯದ ಅಧ್ಯಯನಕ್ಕಾಗಿ ಹುಡುಕಾಡುವಾಗ ಬಾಗಲಕೋಟ ಜಿಲ್ಲೆಯ ಮಹಾಲಿಂಗಪೂರದ ಕೆ.ಎಲ್.ಇ. ಸಂಸ್ಥೆಯ ಪ್ರಾಧ್ಯಾಪಕರು ಮತ್ತು **ಶ್ರೀ ಬಿ. ಆರ್. ದರೂರ ಸಂಶೋಧನಾ ಅಧ್ಯಯನ ಕೇಂದ್ರದ** ಮಾರ್ಗದರ್ಶಕರು ನಾಡಿನ ವಿದ್ವಾಂಸರು ಹೊಸ ಉತ್ಸಾಹಿಗಳಿಗೆ ಹಳೆ ತಲೆಮಾರಿನ ಚಿಂತನೆಯನ್ನು ಬಿತ್ತುವ ವಿಮರ್ಶಕರಾದ **'ಡಾ. ಅಶೋಕ ಎಂ. ನರೋಡೆ'**ಯವರನ್ನು ಕಂಡು ಸಮಾಲೋಚನೆ ನಡೆಸಿದಾಗ ನನ್ನ ಪದವಿ ವಿದ್ಯಾಗುರುಗಳು ನಾಡಿನ ಪ್ರಖ್ಯಾತ ಸಂಶೋಧಕರು. ಎಲೆ ಮರೆಯ ಕಾಯಿಯಂತಿರುವ **'ಡಾ. ವ್ಹಿ. ಎಸ್. ಮಾಳಿ'**ಯವರ ಸಾಹಿತ್ಯ ಸಂಶೋಧನೆ **'ಸಂಶೋಧನ ಸಾಹಿತ್ಯ'** ಅಧ್ಯಯನ ಮಾಡಲು ಸೂಕ್ತ ವಿಷಯವಾಗಿದೆ. ಅದಕ್ಕಾಗಿ ಅವರ ಪಿ.ಎಚ್.ಡಿ. ಮಹಾಪ್ರಬಂಧ, ಸಂಶೋಧನಾ ಗ್ರಂಥಗಳ (ತಾಣದೀವಿಗೆ), ಕೊಕಟನೂರ ಸಾಂಸ್ಕೃತಿಕ ಅಧ್ಯಯನದ ಬಿಡಿ ಲೇಖನಗಳ ಮಾಹಿತಿ ತಿಳಿಸಿ ಅಧ್ಯಯನ ಮಾಡಲು ಸೂಚಿಸಿದರು.

## ೧.೨ ಅಧ್ಯಯನ ಸ್ವರೂಪ :

ಸಾಹಿತ್ಯ ಸಂಸ್ಕೃತಿಯ ದಿವ್ಯ ಪರಂಪರೆಯಲ್ಲಿ '**ಡಾ. ಎಂ. ಚಿದಾನಂದ ಮೂರ್ತಿ, ಡಾ. ಬಿ. ಆರ್. ಹಿರೇಮಠ, ಡಾ. ಎಂ. ಎಂ. ಕಲಬುರ್ಗಿ**'ಯವರ ಗರಡಿಯಲ್ಲಿ ಪಳಗಿದ **ಡಾ. ವ್ಹಿ. ಎಸ್. ಮಾಳಿ**ಯವರು ನಾಡಿನ ಹಿರಿಮೆ ಗರಿಮೆ ಸಂಶೋಧನೆಯ ಸಂಸ್ಕೃತಿಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ.

ಕನ್ನಡ ಸಾಹಿತ್ಯ ಸಂಶೋಧನೆ ಕಳೆದ ಒಂದೂವರೆ ಶತಮಾನದ ಹಿಂದೆ ಪ್ರಾರಂಭವಾಗಿದೆ. ಎರಡು ದಶಕಗಳಲ್ಲಿ ಅದು ಅಧ್ಯಯನ ಕ್ಷೇತ್ರವಾಗಿಯೆ ಬೆಳೆದಿದೆ. ಸಂಶೋಧನೆ ಸ್ಪಷ್ಟಕಲ್ಪನೆ, ಕನ್ನಡ ಸಾಹಿತ್ಯ ಸಂಶೋಧನೆಯ ಕಾಲ ಘಟ್ಟಗಳು, ಸಂಶೋಧನೆಯನ್ನು ಶಾಸ್ತ್ರೀಯ ವಿಧಾನಗಳನ್ವಯ ವಿಶಿಷ್ಟ ಬರವಣಿಗೆ ಮೂಲಕ ಕನ್ನಡದಲ್ಲಿ ಹುಲಸಾಗಿ ಬೆಳೆದದ್ದು ೨೦ನೇ ಶತಮಾನದ ಉತ್ತರಾರ್ಧದಲ್ಲಿ. ಕರ್ನಾಟಕ ಸಂಸ್ಕೃತಿ ನಾಡು-ನುಡಿ, ಇತಿಹಾಸ ಪರಂಪರೆ ಕನ್ನಡ ಸಾಹಿತ್ಯ ಕವಿಗಳ, ಕಾಲ, ಸ್ಥಳ, ಮತ ಮುಂತಾದವುಗಳಿಗೆ ಸಂಬಂಧಪಟ್ಟ ಸಾಹಿತ್ಯ ಸಂಶೋಧನೆಯ ಕ್ಷೇತ್ರ ಇನ್ನಷ್ಟು ವಿಸ್ತಾರವಾಯಿತು.

ಡಾ. ವ್ಹಿ. ಎಸ್. ಮಾಳಿಯವರು ಬೆಳಗಾವಿ ಜಿಲ್ಲೆಯವರು. ಸಂಪಾದಕರಾಗಿ ಸಾಹಿತಿಯಾಗಿ, ಕಾದಂಬರಿಕಾರರಾಗಿ, ಅಂಕಣಕಾರರಾಗಿ, ವಿಮರ್ಶೆ ಮತ್ತು ಸಂಶೋಧನೆಯಲ್ಲಿ ತೊಡಗಿ ಕನ್ನಡ ಸಾಹಿತ್ಯದ ಬಹುತೇಕ ಪ್ರಕಾರಗಳಲ್ಲಿ ಸುಮಾರು ೪೦ ಕ್ಕೂ ಅಧಿಕ ಗ್ರಂಥಗಳನ್ನು, ೨೦೦ ಕ್ಕೂ ಹೆಚ್ಚಿನ ಬಿಡಿ ಲೇಖನಗಳನ್ನು ಪ್ರಕಟಿಸಿದ್ದಾರೆ. ಅದರಲ್ಲಿ ೧ ಮಹಾಪ್ರಬಂಧ, ೧ ಕಾದಂಬರಿ, ೨೦ ಕ್ಕೂ ಹೆಚ್ಚು ಸಂಪಾಧನೆ, ೮ ವಿಮರ್ಶಾಕೃತಿ, ೨ ಅಂಕಣಬರಹ, ೪ ಸಂಶೋಧನ ಗ್ರಂಥಗಳು, ೫ ಸಾಂಸ್ಕೃತಿಕ ಸಂಶೋಧನ ಲೇಖನಗಳು, ೧ ವ್ಯಾಕರಣ ಪರಿಚಯ, ೨ ಜೀವನ ಚರಿತ್ರೆಗಳು ಹೀಗೆ ಮುಂತಾದವುಗಳು ಪ್ರಕಟಿಸಿದ್ದಾರೆ. ಅದರಲ್ಲಿ ೨೫ ಕ್ಕೂ ಹೆಚ್ಚು ರಾಜ್ಯ ಮತ್ತು ರಾಷ್ಟ್ರ ಮಟ್ಟದ ವಿಚಾರ ಸಂಕೀರ್ಣಗಳಲ್ಲಿ ಪ್ರಬಂಧ ಮಂಡನೆ, ೧೦೦೦ ಕ್ಕೂ ಹೆಚ್ಚು ಸಾರ್ವಜನಿಕ ಉಪನ್ಯಾಸಕಗಳು. ಕನ್ನಡ ವಿಶ್ವವಿದ್ಯಾಲಯ ಹಂಪಿ, ಸಹಭಾಗಿತ್ವದ ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರದಲ್ಲಿ ಸಂಶೋಧನಾ ಎಂ.ಫಿಲ್. ಹಾಗೂ ಪಿ.ಎಚ್.ಡಿ. ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ ಹೊಸ ತಲೆಮಾರಿನ ಬರಹಗಾರರಲ್ಲಿ ಡಾ. ವ್ಹಿ. ಎಸ್. ಮಾಳಿಯವರು ಸಂಶೋಧನಾ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ ಮಾಡಿದ್ದಾರೆ.

## ಡಾ. ವ್ಹಿ. ಎಸ್. ಮಾಳಿಯವರ ಸಾಹಿತ್ಯ ಸಾಧನೆ :

### ೧) ಸಂಶೋಧನೆ ಸಾಹಿತ್ಯ

೧. ಕೊಕಟನೂರ ಸಾಂಸ್ಕೃತಿಕ ಶೋಧ

೨. ಕನ್ನಡ ಸಾಹಿತ್ಯದಲ್ಲಿ ಕರ್ಣ

೩. ತಾಣದೀವಿಗೆ ಸಂಶೋಧನೆ

೪. ಐನಾಪೂರ ಗ್ರಾಮ ಸಾಂಸ್ಕೃತಿಕ ಅಧ್ಯಯನ

೫. ಅಥಣಿ ತಾಲೂಕಾ ದರ್ಶನ

೬. ಮೊಟಗಿ ಮಠದ ಪರಂಪರೆ

### ೨) ವಿಮರ್ಶೆ : (ವಿಮರ್ಶಾ ಸಾಹಿತ್ಯ)

೧. ರಸಾಲ

೨. ಸ್ಪಂದನ

೩. ಮರಾಳ

೪. ಅಮೃತದ ಬೆಳಸು

೫. ಕನ್ನಡಿ

೬. ಸಂವಾದ

೭. ಸಖ್ಯದ ಆ ಖ್ಯಾನ

೮. ಕನ್ನಡ ಪ್ರಾಚೀನ ಸಾಹಿತ್ಯ ಸ್ವರೂಪ

೯. ಬೆಡಗಿನ ವಚನಗಳು

### ೩) ಕಾದಂಬರಿ :

೧. ಕೂಡಲದ ಕಲ್ಪತರು

### ೪) ಅಂಕಣ ಸಾಹಿತ್ಯ :

೧. ಕಡೆಗೀಲು

೨. ಮಹಾಮನೆಯ ಮಕ್ಕಳು

### ೫) ಲಿಂಗಾಯತ ಪತ್ರಿಕೆ :

೧. ಶರಣ ಚೇತನ ಪತ್ರಿಕೆ

೨. ಪುಸ್ತಕ ಮಾಲೆ ಪತ್ರಿಕೆ

೩. ವಿಮೋಚನಾ ಪ್ರಕಟನಾಂಗ : (ನಿರ್ದೇಶಕ)

೪. ಆಜೂರ ಪುಸ್ತಕ ಪ್ರತಿಷ್ಠಾನ

೬) **ಸಂಪಾದನಾ ಸಾಹಿತ್ಯ :**

೧. ಅರಳು

೨. ಭೂಮಿವಿಸ್ತಾರ

೩. ಮಲ್ಲಿಕಾಲತೆ

೪. ಭಗವಂತ

೫. ಶುಭಲಗ್ನವೆನ್ನಿರಯಾ

೬. ಐನಾಪೂರ ಒಂದು ಅಧ್ಯಯನ

೭. ಸಮೂಹ ಸಂವಹನ

೮. ನೆಲ–ಜಲ–ಕನ್ನಡ

೯. ಐನಾಪೂರ ಐಸಿರಿ

೧೦. ಹಳಕಟ್ಟಿ ಸಮಗ್ರ ಸಾಹಿತ್ಯ ಸಂ. ೫

೧೧. ಯುವ ಭಾರತಿ

೧೨. ಸಾಹಿತ್ಯ ನಿಧಿ

೧೩. ಅಥಣೀಶ ಸಾಹಿತ್ಯ

೧೪. ಚೆನ್ನಬಸವಣ್ಣನವರ ವಚನಗಳ

೧೫. ಅಥಣಿ : ಬನಿ–ದನಿ

೧೬. ಹಳಗನ್ನಡ ಕಾವ್ಯ, ಸಂಚಯ

ಇಂತಹ ಅನೇಕ ಪ್ರಕರಣಗಳಲ್ಲಿ ಸಾಹಿತ್ಯಿಕ ಬರಹಗಳು ಕನ್ನಡ ಸಾಹಿತ್ಯಕ್ಕೆ ನೀಡಿದ ಅಮೂಲ್ಯ ಕೊಡುಗೆಗಳು ಇವಾಗಿವೆ.

## ಡಾ. ವ್ಹಿ. ಎಸ್. ಮಾಳಿಯವರಿಗೆ ಸಂದ ಪ್ರಶಸ್ತಿಗಳು :

* ಆಜೂರ ಪುಸ್ತಕ ಪ್ರತಿಷ್ಠಾನ ಪ್ರಶಸ್ತಿ
* ಸಾಹಿತ್ಯ ರತ್ನ ಪ್ರಶಸ್ತಿ
* ವಾಗ್ಭೂಷಣ ಪ್ರಶಸ್ತಿ
* ಆದರ್ಶ ಪ್ರಾಧ್ಯಾಪಕ ಪ್ರಶಸ್ತಿ
* ಹಳಕಟ್ಟಿ ಶ್ರೀ ಪ್ರಶಸ್ತಿ
* ಸಿರಿಗನ್ನಡ ಸಾಹಿತ್ಯ ಶ್ರೀ ಪ್ರಶಸ್ತಿ

* ಮಿರ್ಜಿ ಅಣ್ಣಾರಾಯ ಪ್ರಶಸ್ತಿ
* ಬಸವಶ್ರೀ ಪ್ರಶಸ್ತಿ

ಹೀಗೆ ಹಲವಾರು ಮಾನ ಪ್ರಶಸ್ತಿ-ಪುರಸ್ಕಾರ ಸಂದಿವೆ. ಹಾಗೂ ಸಲಹಾ ಮಂಡಳಿಯ ಸದಸ್ಯರಾಗಿ, ಮಾರ್ಗದರ್ಶಕರಾಗಿ ನವ ಪಿಳಿಗೆಗೆ ಆದರ್ಶ ಮಾರ್ಗದರ್ಶಕರಾಗಿರುವರು. ಪ್ರಸ್ತುತ ಐದು ಅಧ್ಯಾಯಗಳಲ್ಲಿ ವಿಂಗಡಿಸಿ ಅಧ್ಯಯನ ಮಾಡಲಾಗಿದೆ.

**ಡಾ. ವ್ಹಿ. ಎಸ್. ಮಾಳಿಯವರ ಸಂಶೋಧನ ಸಾಹಿತ್ಯ :**

ಅಧ್ಯಾಯ : ೧ – ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನದ ಬಗ್ಗೆ ವಿವರಿಸಲಾಗಿದೆ.

ಅಧ್ಯಾಯ : ೨ – ಡಾ. ವ್ಹಿ. ಎಸ್. ಮಾಳಿಯವರು ಮತ್ತು ಕನ್ನಡ ಸಂಶೋಧನ ಪರಂಪರೆ ಕುರಿತು ವಿವರಿಸಲಾಗಿದೆ.

ಅಧ್ಯಾಯ : ೩ – ಡಾ. ವ್ಹಿ. ಎಸ್. ಮಾಳಿಯವರ ಸಂಶೋಧನೆಗಳು ಬಗ್ಗೆ ವಿಶ್ಲೇಷಿಸಿ ಸಂಕುಚಿತ ಅರ್ಥದಲ್ಲಿ ಬರೆಯಲಾಗಿದೆ.

೩.೧ ಪಿ.ಎಚ್.ಡಿ. ಮಹಾಪ್ರಬಂಧ ಬಗ್ಗೆ ವಿವರಿಸಲಾಗಿದೆ.

೩.೨ ಸಂಶೋಧನಾ ಗ್ರಂಥಗಳು ಬಗ್ಗೆ ವಿವರಿಸಲಾಗಿದೆ.

೩.೩ ಸಂಶೋಧನಾ ಲೇಖನಗಳು ಬಗ್ಗೆ ವಿವರಸಲಾಗಿದೆ.

ಅಧ್ಯಾಯ : ೪ – ಡಾ. ವ್ಹಿ. ಎಸ್. ಮಾಳಿಯವರ ಸಂಶೋಧನೆಯ ವೈಶಿಷ್ಟ್ಯತೆ ಕುರಿತು ಚರ್ಚಿಸಿ ಬರೆಯಲಾಗಿದೆ.

ಅಧ್ಯಾಯ : ೫ – ಸಮಾರೋಪವಾಗಿದೆ.

ಇದರಲ್ಲಿ ಒಟ್ಟು ಫಲಿತಗಳ ನಿರೂಪಣೆಯಿದೆ. ಕೊನೆಯಲ್ಲಿ ಅನುಬಂಧವಿದೆ. ಪ್ರಸ್ತುತ ಡಾ. ವ್ಹಿ. ಎಸ್. ಮಾಳಿಯವರ ಸಂಶೋಧನ ಸಾಹಿತ್ಯದ ಅಧ್ಯಯನದ ಜೊತೆಗೆ ಸಂಶೋಧನ ಹಿತಾಸಕ್ತಿ ಹೆಚ್ಚಿಸಿಕೊಳ್ಳುವುದು. ಸಂಶೋಧನೆ ಬಗ್ಗೆ ಹೊಸ ಹೊಸ ವಿಚಾರಗಳ ಬೆಳಕು ಚೆಲ್ಲುವುದು, ಗೌರವ ಕಾಳಜಿವಹಿಸಲು ಸಾಧ್ಯ. ಸಂಶೋಧನ ಕ್ರಿಯೆ ನಡೆಯಲಿಲ್ಲವೆಂದರೆ ಎಷ್ಟೋ ಸಂಗತಿಗಳು ನಸಿಶಿ ಹೋಗಬಹುದು. ಇದನ್ನರಿತು ಇಂತಹ ಸಂಶೋಧಕರ ಫಲಿತ ಸಂಶೋಧನೆಗಳ ಅಧ್ಯಯನ ಕೈಗೊಳ್ಳಲಾಗಿದೆ.

## ೧.೩ ಅಧ್ಯಯನ ವ್ಯಾಪ್ತಿ :

ಒಟ್ಟಾರೆಯಾಗಿ ಎಂ.ಫಿಲ್. ಅಧ್ಯಯನವು ಕಾಲಮಿತಿಯು ಇರುವುದರಿಂದ ಡಾ. ವ್ಹಿ. ಎಸ್. ಮಾಳಿಯವರ ಸಂಶೋಧನ ಸಾಹಿತ್ಯದ ಬೆಲೆಕಟ್ಟುವಾಗ ಅವರ ಸಮಕಾಲೀನ ಸದಬಿರುಚಿಯ ಸಾಹಿತಿಗಳೊಂದಿಗೆ ತೌಲನಿಕವಾಗಿ ನೋಡಬಹುದಿತ್ತು. ಡಾ. ರಹಮತ ತರಕೇರಿ, ಡಾ. ಬಸವರಾಜ ಸಬರದ, ಡಾ. ಶಾಂತಿನಾಥ ದಿಬ್ಬದ, ಡಾ. ಮರೆಗುದ್ದಿ, ಡಾ. ಬಿ. ವ್ಹಿ. ಶಿರೂರ, ಡಾ. ಬಿ. ಕೆ. ಹಿರೇಮಠ ಹೀಗೆ ಮುಂತಾದವರ ಸಂಶೋಧನಾ ಕ್ಷೇತ್ರದಲ್ಲಿ ತೋಡಗಿದವರು.

ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ "ಡಾ. ವ್ಹಿ. ಎಸ್. ಮಾಳಿಯವರ ಸಂಶೋಧನ ಸಾಹಿತ್ಯದ ಅಧ್ಯಯನ" ಇಲ್ಲಿದೆ.

೧) ಪಿ.ಎಚ್.ಡಿ. ಸಂಶೋಧನ "ಕನ್ನಡ ಸಾಹಿತ್ಯದಲ್ಲಿ ಕರ್ಣ" ಮಹಾಪ್ರಬಂಧ.

೨) ತಾಣದೀವಿಗೆ ಸಂಶೋಧಿತ ಗ್ರಂಥಗಳ ವಿಶ್ಲೇಷಣೆ.

೩) ಕೊಕಟನೂರ : ಸಾಂಸ್ಕೃತಿಕ ಅಧ್ಯಯನ.

ಸಂಪ್ರಬಂಧದ ವ್ಯಾಪ್ತಿಯನ್ನು ಗಮನಿಸಿ ಕೆಲವು ಸಂಶೋಧಿತ ಲೇಖನಗಳನ್ನು ಕೈಬಿಡುವ ಅನಿವಾರ್ಯತೆ ಒದಗಿತು. ಮೇಲೆ ಸೂಚಿಸಿದ ವ್ಯಾಪ್ತಿಯಲ್ಲಿಯೇ ಈ ಸಂಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

## ೧.೪ ಅಧ್ಯಯನ ವಿಧಾನ :

**'ಡಾ. ವ್ಹಿ. ಎಸ್. ಮಾಳಿಯವರ ಸಂಶೋಧನಾ ಸಾಹಿತ್ಯದ ಅಧ್ಯಯನ'**ವು ಐದು ಅಧ್ಯಾಯಗಳನ್ನು ಒಳಗೊಂಡಿದೆ. ಮೊದಲನೆಯದು ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಹಾಗೂ ವಿಧಾನವನ್ನು ವಿವರಿಸುವುದರ ಜೊತೆಗೆ ಅಧ್ಯಯನದ ಅಗತ್ಯವನ್ನು ಪ್ರತಿಪಾದಿಸುವುದು.

ಅಧ್ಯಾಯ ಎರಡು – ಡಾ. ವ್ಹಿ. ಎಸ್. ಮಾಳಿಯವರು ಮತ್ತು ಸಂಶೋಧನೆಯ ಪರಂಪರೆಯ ಮುಖ್ಯ ನೆಲೆಗಳನ್ನು ಗುರುತಿಸಿ, ಅವರ ಕೃತಿಗಳನ್ನು ವರ್ಗಿಕರಿಸುವುದು, ವಿಮರ್ಶೆ, ಸಂಶೋಧನೆ, ಸಂಪಾದನೆ, ಅಂಕಣಬರಹ, ವೈಚಾರಿಕ ಚಿಂತನೆ ಹೀಗೆ ಮೊದಲಾದ ನೆಲೆಗಳಲ್ಲಿ ಮಾಳಿಯವರ ಸಂಶೋಧನಾ ಸಾಹಿತ್ಯದ.

ಅಧ್ಯಾಯ ಮೂರರಲ್ಲಿ – ಡಾ. ವ್ಹಿ. ಎಸ್. ಮಾಳಿಯವರ ವಿವೇಚನೆ, ವಿಶ್ಲೇಷಣೆ ಲೇಖಕರ ಜೊತೆ ಚರ್ಚೆ, ವಿದ್ವಾಂಸ ಜೊತೆ ಸಂವಾದವು ವಿಧಾನದ ಸ್ಥೂಲ ನಕ್ಷೆ ಇಲ್ಲಿದೆ.

ಅಡಿಟಿಪ್ಪಣಿ :

೧) ಅಥಣಿ, ಹಾರುಗೇರಿ ಪರಿಸರ ಮತ್ತು ಮಾಳಿಯವರು

೨) ಮಾಳಿಯವರ ಸಂಶೋಧನೆ

೩) ಡಾ. ಅಶೋಕ ಎಂ. ನರೋಡೆಯವರ ಜೊತೆ ಸಂಭಾಷಣೆಯ ಸನ್ನಿವೇಶದಲ್ಲಿ

೪) ಮಾಳಿಯವರ ಸಾಂಸ್ಕೃತಿಕ ವೈಚಾರಿಕತೆ

೫) ಅದೇ

೬) 'ಕನ್ನಡ ಸಾಹಿತ್ಯದಲ್ಲಿ ಕರ್ಣ' ಮಾಳಿಯವರ ಮಹಾಪ್ರಬಂಧ

೭) ತಾಣದೀವಿಗೆ ಸಂಶೋಧನ ಗ್ರಂಥಗಳ ಶೋಧನೆ

೮) ಕೊಕಟನೂರ ಸಾಂಸ್ಕೃತಿಕ ಅಧ್ಯಯನ

* * * * *

ಅಧ್ಯಾಯ - ೨ :

# ಕನ್ನಡ ಸಂಶೋಧನಾ ಪರಂಪರೆ ಮತ್ತು ಮಾಳಿ

## ಅಧ್ಯಾಯ – ೨ :

# ಕನ್ನಡ ಸಂಶೋಧನಾ ಪರಂಪರೆ ಮತ್ತು ಡಾ. ವ್ಹಿ. ಎಸ್. ಮಾಳಿಯವರು

ಭಾರತದ ಸಾಂಸ್ಕೃತಿಕ ಇತಿಹಾಸದಲ್ಲಿ ಆರ್ಯರ ಆಗಮನ, ಮುಸಲ್ಮಾನರ ದಾಳಿ ಮತ್ತು ಆಂಗ್ಲರ ಪ್ರವೇಶಗಳು ಚರಿತ್ರಾರ್ಹ ಘಟನೆಗಳೆನಿಸಿವೆ. ಇದರ ಸಂಪರ್ಕದಿಂದಾಗಿ ಭಾರತೀಯರ ಜೀವನ ವಿಧಾನ, ಆಲೋಚನಾ ಪದ್ಧತಿಗಳಲ್ಲಿ ಬಹುದೊಡ್ಡ ಬದಲಾವಣೆಗಳಾಗಿವೆ.

ಕೃಷಿ ಸಂಸ್ಕೃತಿಯ ಅರ್ಯರು, ಯಂತ್ರ ಸಂಸ್ಕೃತಿಯ ಆಂಗ್ಲರ ಪ್ರವೇಶಗಳು ಹೆಚ್ಚು ಮಹತ್ವಪೂರ್ಣ ಬೌದ್ಧಿಕ ಬದುಕಿನಲ್ಲಿ ಹೊಸ ಹೊಸ ಬದಲಾವಣೆಗಳಾಗಿವೆ. ನಮ್ಮ ಹಳೆಯ ಜ್ಞಾನ ಶಾಖೆಗಳು ಈಗ ಹೊಸ ಹೊಸ ರೂಪ ಪಡೆದವು. ಪಶ್ಚಿಮದ ಹೊಸ ಜ್ಞಾನ ಶಾಖೆಗಳು ನಮ್ಮಲ್ಲಿ ಅಸ್ತಿತ್ವಕ್ಕೆ ಬಂದವು. ಇದರಲ್ಲಿ ಸಂಶೋಧನೆಯೊಂದು.

### ಸಂಶೋಧನೆಯ ಅರ್ಥ :

ಸಂಶೋಧನೆಯ ಮೂಲ ಸಂವಾದಿ ಇಂಗ್ಲೀಷಿನ (Research) Re ಎಂಬ ಪೂರ್ವ ಪ್ರತ್ಯಯ (Search) ಸಂಯುಕ್ತ ರೂಪ (Sarch) 'ಹುಡುಕು' (Research) ಎಂಬುದು ಚೆನ್ನಾಗಿ ಹುಡುಕು ಸರಿಯಾಗಿ ಹುಡುಕು. ಇದಕ್ಕೆ ನಾವು ಬಳಸುತ್ತಲಿರುವ ಪರ್ಯಾಯಪದ 'ಸಂಶೋಧನೆ'. ಸಂಶೋಧನೆ ಮೂಲ ಸಂಸ್ಕೃತದ ಶುದ್ = (ಶುದ್ಧ ಮಾಡು), ಶೋಧ – (ಶುದ್ಧ ಮಾಡಿದುದು), ಶೋಧನ = (ಶುದ್ಧ ಮಾಡುವುದು), ಶೋಧನೆ ಎಂಬುದಕ್ಕೆ ಸರಿ = (ಚೆನ್ನಾಗಿ, ಸರಿಯಾಗಿ) ಪೂರ್ವ ಪ್ರತ್ಯಯ ಸಂಶೋಧನೆ = ಚೆನ್ನಾಗಿ ಶುದ್ಧ ಮಾಡುವುದು, ಸರಿಯಾಗಿ ಶುದ್ಧ ಮಾಡುವುದು.

ಕನ್ನಡಕ್ಕೆ ಬರುವಾಗ ಸಂಶೋಧನೆ ಸಮಸಂಸ್ಕೃತ ರೂಪ ಬರುತ್ತದೆ.

| | | |
|---|---|---|
| ಶುದ್ಧ | = | ಶುದ್ಧ ಮಾಡು |
| ಶೋಧ | = | ಶುದ್ಧ ಮಾಡಿದುದು |
| ಶೋಧನೆ | = | ಶುದ್ಧ ಮಾಡುವುದು |
| ಸಂಶೋಧನೆ | = | ಚೆನ್ನಾಗಿ ಶುದ್ಧ ಮಾಡುವುದು, ಸರಿಯಾಗಿ ಮಾಡುವುದು. |

'ಸಂಶೋಧನೆ' ಎಂಬುದರ ಸಮಸಂಸ್ಕೃತ ರೂಪ 'ಶುದ್ಧೀಕರಿಸು' ವಾಚ್ಯಾರ್ಥದಲ್ಲಿ 'ಹುಡುಕು' ಎಂಬ ವಿಶೇಷಾರ್ಥದಲ್ಲಿ 'ಸಂಶೋಧನೆ', ಇಂಗ್ಲೀಷರಿಂದಾಗಿ ಒಂದು ಶೈಕ್ಷಣಿಕ ಶಿಸ್ತು ಪ್ರತಿನಿಧಿಸುವ ಪದವಾಗಿ ಬೆಳೆದು ಬಂದಿತು. ಕೂತುಹಲ, ಅವಶ್ಯಕತೆ, ಸುಖಜೀವನಾಶಕ್ತಿ, ಪ್ರಕೃತಿಯ ನಿಜದರಿವು, ಮನುಷ್ಯನ ಮೂಲಭೂತ ಹುಡುಕುವಿಕೆ, ಪರಿವರ್ತನೆಗೊಂಡಾಗ ಅವನ ಕೈಗಳು ಸ್ವತಂತ್ರವಾದವು. ಮಾತು ಕಲಿತು ಅದ್ಭುತ ಶಕ್ತಿ ಕರಗತವಾಗಿ 'ಜೀವಿ' ಸ್ತರದಿಂದ 'ನಾಗರಿಕ' ಸ್ತರಕ್ಕೆ ಪರಿವರ್ತಿತನಾದ ಮೇಲೆ ವಿಚಾರ, ಬುದ್ಧಿ, ಕಲ್ಪನೆ, ಮನಸ್ಸು, ಹೃದಯಗಳನ್ನು ಚುರುಕುಗೊಳಿಸಿ, ಪ್ರಾಣಿಗಳಿಗಿಂತ ತೀರ ಭಿನ್ನವಾಗಿ ಪ್ರಕೃತಿಯನ್ನು ತನ್ನ ವಶದಲ್ಲಿಟ್ಟುಕೊಳ್ಳುವವರೆಗೂ ಮುಂದುವರೆದು ಪ್ರತಿಯೊಂದು ಸಂಶೋಧನೆಗಳ ತನ್ನದೇ ಆದ ತಂತ್ರ, ಚೌಕಟ್ಟು, ವ್ಯಾಪ್ತಿ ಇರುತ್ತದೆ.

**ಸಂಶೋಧನೆಯ ವ್ಯಾಪ್ತಿ :**

ಇನ್‌ವೆನಶನ್, ಡಿಸ್ಕವರಿ, ರೀಸರ್ಚ, ಕನ್ನಡದಲ್ಲಿ ಸಂಶೋಧನೆ ಒಂದೇ ಪದವನ್ನು ಬಳಸುವುದು ಹೊಸ ಪದಗಳನ್ನು ಕನ್ನಡದಲ್ಲಿ ಸೃಷ್ಟಿಸುವುದು.

Discovery ಎಂಬ ನಾಮಪದ Discover ಎಂಬ ಕ್ರಿಯಾಪದದಿಂದ ಬಂದುದ್ದಾಗಿದೆ.

೧) Dis - ಎಂಬುದು ನಿಷೇಧಾರ್ಥಕ ಪ್ರತ್ಯಯ
Cover - ಎಂದರೆ ಆವರಣ
Discover - ಎಂಬುದಕ್ಕೆ ಆವಹಿಸಿರುವ ತೆರೆ
ಸತ್ಯವನ್ನು ಅನಾವರಣ (Uncover) ಗೊಳಿಸು ಎಂಬ ಅರ್ಥ.

ಉದಾ : ಹಲ್ಮಿಡಿ ಶಾಸನದ ಶೋಧ
ಕವಿರಾಜ ಮಾರ್ಗ ಕೃತಿಯ ಶೋಧ.

೨) Invention - ಎಂಬುದು (Invent) ಎಂಬುದರ ನಿಷ್ಪನ್ನವಾದ ಪದ.
Invent – ಎಂದರೇ ಸೃಷ್ಟಿಸು ಅಥವಾ ನಿರ್ಮಿಸು
Invention – ಎಂದರೇ ಹೊಸ ಸೃಷ್ಠಿ ಅಥವಾ ಹೊಸ ನಿರ್ಮಿತಿ

ಉದಾ : ಎಡಿಸನ್ ವಿದ್ಯುತ್ ಶೋಧ
ರೈಟ್ ಸಹೋದರರ ವಿಮಾನ ಶೋಧ

೩) Research - ಸಂಶೋಧನೆ
Discovery - ಹಳೆಯದನ್ನು ಹುಡುಕುವುದು, ಅಥವಾ ಭೂತಕಾಲಕ್ಕೆ ಸಂಬಂಧಿಸಿದ್ದಾಗಿದೆ.
Invention - ಹೊಸದನ್ನು ಹುಡುಕುವುದು, ಅಥವಾ ಭವಿಷ್ಯತ ಕಾಲಕ್ಕೆ ಸಂಬಂಧಿಸಿದ್ದಾಗಿದೆ.

ಡಿಸ್ಕವರಿ ಪ್ರಕಾರದ ಹಿಂದೆಯೂ ರೀಸರ್ಚವಿದೆ. Invention ದ ಹಿಂದೆಯೂ ರೀಸರ್ಚವಿದೆ. ಅವುಗಳ ಹಿಂದೆ ನಡೆಯುವ ಒಂದು ಪ್ರಕ್ರಿಯೆ. ಡಿಸ್ಕವರಿಯ ಹಿಂದೆ ನಡೆಯುವ ಶೋಧ ಪ್ರಕ್ರಿಯೆಯನ್ನು 'ಅನ್ವೇಷಣಾತ್ಮಕ ಸಂಶೋಧನೆ'. Invention ದ ಹಿಂದೆ ನಡೆಯುವ ಶೋಧ. ಪ್ರಕ್ರಿಯೆಯನ್ನು 'ಆವಿಷ್ಕರಣಾತ್ಮಕ ಸಂಶೋಧನೆ'. ಭಾವನಾತ್ಮಕ ಸಂಬಂಧ ಹೊಂದಿದ ಗತಕಾಲದ ವಿಷಯಗಳೊಂದಿಗೆ ವ್ಯವಹರಿಸುತ್ತಾನೆ.

ಶರಣರು ಶೋಧಿಸಿದ ಕಾಯಕ. ದಾಸೋಹ, ಮಾರ್ಕ್ಸ್‌ನ ಆರ್ಥಿಕ ಸಿದ್ಧಾಂತ, ಗಾಂಧೀಜಿಯವರ ಸತ್ಯಾಗ್ರಹಗಳು – ಆವಿಷ್ಕಾರಣಾತ್ಮಕ ಸಂಶೋಧನೆಗಳಾಗಿವೆ. ಆವಿಷ್ಕರಣಾತ್ಮಕ ಸಂಶೋಧನೆ, ಹಳೆಯದನ್ನು ಹೊಸದಾಗಿ ಶೋಧಿಸುವುದು, ಜ್ಞಾನವನ್ನು ವರ್ಧನೆ ಮಾಡುತ್ತ ಹೋಗುವುದು. ಅನ್ವೇಷಣಾತ್ಮಕ ಸಂಶೋಧನೆ – ಎಂಬುದು ಘಟಿಸಿ ಮರೆಯಾಗುವ ಇಲ್ಲವೇ ರೂಪಾಂತರ ಸ್ಥಿತಿಯಲ್ಲಿರುವುದರ **ರೂಪ ಗುಣ (Truth) ವನ್ನು ಕಂಡು ಹಿಡಿಯುವದಾಗಿದೆ.**

ರೂಪವನ್ನು ಸರಿಯಾಗಿ ಶೋಧಿಸಿದರೆ ಮಾತ್ರ ಗುಣದ ಶೋಧ ಸರಿಯಾಗಿ ಜರುಗುತ್ತದೆ. ಅನ್ವೇಷಣಾತ್ಮಕ ಸಂಶೋಧನೆ ಶೋಧಿತ ಆಕರಗಳ ಸಹಾಯದಿಂದ ಪೂರೈಸುವ ಅನ್ವೇಷಣಾತ್ಮಕ ಸಂಶೋಧನೆ. ನಾವು ಸಂಶೋಧನೆ ಎಂಬುದು ವಡ್ಡಾರಾಧನೆಯ ಹಸ್ತಪ್ರತಿ ಹುಡುಕಿದುದನ್ನು ವಡ್ಡಾರದಾಧನೆಯನ್ನು ಕುರಿತು ಮಾಡಿದ ಆಳವಾದ ಅಧ್ಯಯನವನ್ನು 'ಸಂಶೋಧನೆ' ಎಂದು ಕರೆಯುತ್ತಲ್ಲಿದ್ದೇವೆ.

ಆಕಸ್ಮಿಕ ಶೋಧನದ ಅಂಶ ಮಾತ್ರ ಇರುತ್ತದೆ. ಇಂತಹ ಹುಡುಕುವಿಕೆಯನ್ನು ಈ ಶೋಧಿತ ಆಕರವನ್ನು ಅವಲಂಬಿಸಿ ಮುಂದುವರಿಸುವ ಶೋಧವನ್ನು ಸಂಶೋಧನವೆನ್ನುವರು. ಹೀಗೆ ಮುಂದುವರಿಸುವವರನ್ನು 'ಸಂಶೋಧನಕ'ರೆಂದೂ ಕರೆಯಬಹುದಾಗಿದೆ. ಸಂಶೋಧನೆ ಎನ್ನುವುದು ಹೆಸರೇ ಸೂಚಿಸುವಂತೆ ಅನ್ವೇಷಣ ರೂಪದ ಬೌದ್ಧಿಕ ಕ್ರಿಯೆಯಾಗಿದೆ. ಕಲೆ, ವಿಜ್ಞಾನ, ಸಮಾಜ ವಿಜ್ಞಾನ ಕ್ಷೇತ್ರಗಳಲ್ಲಿ ಸಂಸ್ಥೆಗಳ ಮಟ್ಟದಲ್ಲಿ ಜಗತ್ತಿನಾದ್ಯಂತ ಸ್ಪರ್ಧಾತ್ಮಕ ರೀತಿಯಿಂದ ಮುನ್ನಡೆದಿವೆ.

ವಿದ್ವಾಂಸರು ಏಕಮುಖ ವಿಧಾನವನ್ನು ಅವಲಂಬಿಸಿದರೆ ಅಭ್ಯಾಸಕ್ಕೆ 'ಸಾಮಾನ್ಯಶಿಸ್ತು' ಪ್ರಾಪ್ತವಾಗುತ್ತದೆ. ಸಂಶೋಧನೆ ಎನ್ನುವುದು ಒಂದು ಪುಸ್ತಕ ಬರೆಯುವುದಲ್ಲ. ಅದರ ಉದ್ದೇಶ ಒಂದು ಹೊಸ ಸಮಸ್ಯೆಯ ಮೇಲೆ ಬೆಳಕು ಬಿರುವುದು.

ಹಿಂದಿನವರು ಆರಿಸಿಕೊಂಡಿದ್ದ ಸಮಸ್ಯೆಯ ಮೇಲೆ ಇನ್ನೂ ಹೊಸ ಬೆಳಕು ಬಿರುವುದು. ಎಲ್ಲರಿಗೂ ಗೊತ್ತಿರುವ ವಿಷಯಗಳನ್ನೇ ಒಂದು ವ್ಯವಸ್ಥಿತ ರೂಪಕ್ಕಿಳಿಸಿ, ಸಂಶೋಧನೆಯನ್ನು ಆರಂಭಿಸುವ

ಹೊಸದರಲ್ಲಿ ಅನೇಕ ಕಷ್ಟಗಳ ಸೂಚನೆಯನ್ನು ಅನುಸರಿಸಿ, ಪಾಠಗಳಿಗೆ ಸಂಬಂಧಿಸಿದಂತೆ ಪುಸ್ತಕ ಭಂಡಾರದಲ್ಲಿ ಲೇಖನಗಳನ್ನು ಗ್ರಂಥಗಳನ್ನು ಓದಿ ಟಿಪ್ಪಣಿ ಮಾಡಿಕೊಳ್ಳುವುದು.

ಸೃಜನಶೀಲ ಸಾಹಿತಿ ಕುತೂಹಲ, ಅವಶ್ಯಕತೆ, ಸುಖ, ಜೀವನಾಸಕ್ತಿ, ಪ್ರಕೃತಿಯ ನಿಜದರಿವು ಮನುಷ್ಯನ ಮೂಲಭೂತ ಹುಡುಕುವಿಕೆಯೇ ಪರಿವರ್ತನೆಗೊಂಡಾಗ ಅವನ ಕೈಗಳು ಸ್ವತಂತ್ರವಾದವು. ಮಾತು ಕಲಿತು, ಅದ್ಭುತ ಶಕ್ತಿ ಕರಗತದ ಜೊತೆಗೆ ಬುದ್ಧಿಶಕ್ತಿಯು ಬೆಳೆಯ ತೊಡಗಿತು. 'ಜೀವಿ' ಸ್ತರದಿಂದ 'ನಾಗರೀಕ' ಸ್ತರಕ್ಕೆ ಪರಿವರ್ತಿತನಾದ ಮೇಲೆ ವಿಚಾರ, ಬುದ್ಧಿ, ಕಲ್ಪನೆ, ಮನಸ್ಸು, ಹೃದಯಗಳನ್ನು ಚುರುಕುಗೊಳಿಸಿ ಪ್ರಾಣಿಗಳಿಗಿಂತ ತೀರ ಭಿನ್ನವಾಗಿ ಪ್ರಕೃತಿಯನ್ನು ತನ್ನ ವಶದಲ್ಲಿಟ್ಟುಕೊಳ್ಳುವವರೆಗೂ ಮುಂದುವರಿದಿದೆ. ಪ್ರತಿಯೊಂದು ಸಂಶೋಧನೆಗೆ ತನ್ನದೇ ಆದ ತಂತ್ರ ಚೌಕಟ್ಟು, ವ್ಯಾಪ್ತಿ ಇರುತ್ತದೆ.

**ಸಾಹಿತ್ಯ ಮತ್ತು ಸಂಶೋಧನೆ :**

ಸಾಹಿತ್ಯ ಹೃದಯಗಮ್ಯವಾದರೂ ಸಾಹಿತ್ಯ ಸಂಶೋಧನೆಯು ಬುದ್ಧಿಗಮ್ಯವಾಗಿದೆ. ಸಾಹಿತ್ಯ ಸುಲಭವಾಗಿ, ಆಹ್ಲಾದ ನೀಡಿದರೆ ಸಾಹಿತ್ಯ ಸಂಶೋಧನೆ ಪರಿಶ್ರಮದ ಮೂಲಕ ಆಹ್ಲಾದವನ್ನು ನೀಡುತ್ತದೆ. ಸಾಹಿತ್ಯ ಸುಲಿದ ಬಾಳೆಯ ಹಣ್ಣಾದರೆ, ಸಾಹಿತ್ಯ ಸಂಶೋಧನೆ ತೊಗಟೆ ಚಿಪ್ಪುಗಳಿಂದ ಕೂಡಿದ ತೆಂಗಿನಕಾಯಿ ಇದ್ದಂತೆ. ಸಾಹಿತ್ಯ ಅನುಭವ ಪ್ರಧಾನವಾದರೆ ಸಾಹಿತ್ಯ ಸಂಶೋಧನೆ ಬುದ್ಧಿ ಪ್ರಧಾನ. ಬೌದ್ಧಿಕ ಕಾಳಜಿ ತಾತ್ವಿಕ ಚಿಂತನೆಯ, ಕಲ್ಪಕಲೆಯ ಮೂಲಕ ವಾಸ್ತವಿಕತೆಯ ಮೂಸೆಯಲ್ಲಿ ಘಟನೆಗಳನ್ನಿಟ್ಟು ಡಾ. ವ್ಹಿ. ಎಸ್. ಮಾಳೆಯವರು ಎಲ್ಲ ಅಂಶಗಳನ್ನು ಕೆದರಿ ನಿಶ್ಚಿತ ನಿರ್ಣಯಗಳನ್ನು ಸುಂದರ ಶೈಲಿಯಲ್ಲಿ ಎದುರಿಗಿಡುವ ಕಷ್ಟ ಸಾಧ್ಯವಾದ ಪ್ರಯತ್ನವೇ ಸಾಹಿತ್ಯ ಸಂಶೋಧನೆಯ ವೈಶಿಷ್ಟ್ಯ

ಸತ್ಯಾಸತ್ಯಾತತೆಗಳನ್ನು ಅನಾವರಣಗೊಳಿಸುವ ವ್ಯವಸ್ಥಿತ ಬರವಣಿಗೆಯ ಪ್ರಕ್ರಿಯೆಯೇ ಸಾಹಿತ್ಯ ಸಂಶೋಧನೆ ಕತ್ತಲೆಯಿಂದ ಬೆಳಕಿನಡೆಗೆ, ಅಜ್ಞಾನದಿಂದ ಜ್ಞಾನದೆಡೆಗೆ, ಅಳುಕಿನಿಂದ ಆತ್ಮವಿಶ್ವಾಸದೆಡೆಗೆ, ಅನಾಗರಿಕತೆಯಿಂದ ನಾಗರಿಕತೆಯೆಡೆಗೆ ಸಂದೇಹದಿಂದ ನಿಸ್ಸಂದೇಹದೆಡೆಗೆ, ಅಲ್ಪವಿರಾಮದಿಂದ ಪೂರ್ಣ ವಿರಾಮದೆಡೆಗೆ ಸಾಗಲು ನಡೆಸುವ ಪ್ರಯತ್ನವೇ ಸಂಶೋಧನೆಯಾಗಿದೆ.

ಸಾಹಿತ್ಯ ಸಂಶೋಧನೆಗೆ ಯಾವುದೇ ನಿರ್ದಿಷ್ಟ ವಿನ್ಯಾಸವಿಲ್ಲ. ಸಂಶೋಧನೆಯೇ ಉದ್ದೇಶ, ಕವಿ, ಕೃತಿ, ಮತ, ಕಾಲ, ದೇಶಾದಿ ಶೋಧನೆ ಬರಹಗಳ 'Oriental Studies' ಅಂದರೆ ಪ್ರಾಚ್ಯ ಸಂಶೋಧನೆಯ ಹಾದಿಯಲ್ಲಿ ಪ್ರಾರಂಭವಾದ ಈ ಕ್ರಿಯೆ ಆಕರಗಳ ಶೋಧ, ಆಕರಗಳ ವಿಶ್ಲೇಷಣಾತ್ಮಕ ಶೋಧ 'ಸಂಶೋಧನೆ' ಎನ್ನುವರು. ಆಕರ ಸಾಮಗ್ರಿಗಳ ಮೂಲಕ ಪುನಾರಚಿಸಿ, ಪುನಾಪರಿಶೀಲಿಸಿ, ಇತಿವೃತ್ತಗಳೊಂದಿಗೆ ಅದಾ ಅಂದಾದಿನ ಪ್ರಸ್ತುತತೆಯನ್ನು ಸ್ಪಷ್ಟಪಡಿಸುವುದಾಗಿದೆ.

'Past is to be made perfect in present' ಒಂದು ಬಗೆಯ ಸ್ಥೂಲ ಚೌಕಟ್ಟು ಸಾಹಿತ್ಯ ಸಂಶೋಧನ ಪ್ರಬಂಧಗಳಲ್ಲಿ ಕಂಡುಬರುತ್ತದೆ. ನಿರೂಪಣಾ ವಿಧಾನದಲ್ಲಿ ವಿವರಣಾಮುಖಿ, ವಿಶ್ಲೇಷಣಾಮುಖಿ, ಕಾಲ್ಪನಿಕ ಮುಖಿ, ಘಟನಾತ್ಮಕ ಮುಖಿ. ಇವೇ ವಿಧಾನಗಳನ್ನು ವಿಷಯ ಕ್ಷೇತ್ರಕೇಂದ್ರಿತ, ವಸ್ತುಕೇಂದ್ರಿತ ಕ್ಷೇತ್ರಕಾರ್ಯ ಕೇಂದ್ರಿತ. ಅಂತಶಿಸ್ತೀಯ ಎಂಬ ಶೋಧ ಇವುಗಳ ಸಂಶೋಧನೆ ಎಂಬ ವಿಶಾಲ ಹೆಸರಿನಲ್ಲಿ ಸಾಹಿತಿಗೂ ವಿಮರ್ಶಕನಿಗೂ ಸಾಹಿತ್ಯ ಸಂಶೋಧಕನಿಗೂ ಅಂತರ.

೧) ಸಾಹಿತಿ ತನ್ನ ಅನುಭವಗಳನ್ನು ಚಿಂತನೆಯ ಮೂಸೆಯಲ್ಲಿ ಪಾಕಗೊಳಿಸಿ ಕಲ್ಪಿಕತೆಯೊಂದಿಗೆ ಕಲಾತ್ಮಕವಾಗಿ ಭಾಷಾ ಮಾಧ್ಯಮದ ಮೂಲಕ ವಿವಿಧ ರೂಪಗಳಲ್ಲಿ ಅಭಿವ್ಯಕ್ತಗೊಳಿಸುವುದು ಸಾಹಿತ್ಯವಾದರೆ

೨) ವ್ಯವಸ್ಥಿತ ಆಲೋಚನಾ ಕ್ರಮಕ್ಕೆ ಅಳವಡಿಸಿ ಮರುಚಿಂತನೆಗೆ ಒಳಪಡಿಸಿ, ಸತ್ಯಾಸತ್ಯತೆಗಳನ್ನು ನಿರ್ಭೀತಿಯಿಂದ ವಿವರಿಸಿ ಕೃತಿಯ ಮೌಲ್ಯಮಾಪನ ಮಾಡುವುದು ವಿಮರ್ಶೆ.

೩) ಇವರೆಡಕ್ಕೂ ಭಿನ್ನವಾದ ನೆಲೆಯಲ್ಲಿ ಸಾಹಿತ್ಯ ಸಂಶೋಧಕ ನಿಲ್ಲುತ್ತಾನೆ. ಸಾಹಿತಿಯಂತೆ ಸೃಷ್ಟಿಸಲಾರ. ವಿಮರ್ಶಕನಂತೆ ಅದಕ್ಕೆ ಹೊಸ ದೃಷ್ಟಿ ಕೊಡಲಾರ. ತನ್ನ ಜ್ಞಾನದ ಪರಧಿಯಲ್ಲಿ ಸಮಗ್ರ ಹಾಗೂ ಆಳ ಪರಿಶೀಲನೆಗೆ ವಿಷಯವನ್ನು ಒಳಪಡಿಸಿ ನಿಜಾಂಶಗಳನ್ನು ಪ್ರಾಮಾಣಿಕ ಶಾಸ್ತ್ರ ಬದ್ಧವಾಗಿ ವಿವರಿಸುತ್ತಾನೆ.

**ಸಂಶೋಧಕ – ಸಂಶೋಧನೆ :**

ನಿರಂತರ ಆಸಕ್ತಿ ಅಧ್ಯಯನ, ಪರಿಶ್ರಮಶೀಲತೆ ಸಮತೋಲನ, ಮಾನಸಿಕ ಸ್ಥಿತಿ, ಹತಮಾರಿಯಾಗದ ಧೈರ್ಯ, ಪೂರ್ವ ಗ್ರಹಪೀಡಿತ ಭಾವನೆಗಳಿಂದ ಮುಕ್ತ ಮನಸ್ಸು. ಇನ್ನೊಬ್ಬರ ಪ್ರಭಾವಕ್ಕೆ ಒಳಗಾಗದೆ ಒರೆಗೆ ಹಚ್ಚಿ ನೋಡುವ ಪ್ರವೃತ್ತಿ. ಮನಸ್ಸಿನಿಂದ ನೋಡುವ ಸ್ವಭಾವ. ವ್ಯವಸ್ಥಿತ ಆಲೋಚನಾಕ್ರಮ, ಸರಳ ಶುದ್ಧ ನೇರ ಸಮರ್ಥ ಬರವಣಿಗೆಯ ಶೈಲಿಯನ್ನು ರೂಢಿಸಿಕೊಂಡಿರುವಿಕೆ. ಪ್ರಾಮಾಣಿಕ ಜೀವನ ಸಾಹಿತ್ಯ ಸಂಶೋಧಕನಿಗಿರಬೇಕಾದ ಪ್ರಮುಖ ಗುಣಗಳು. ನಿಜವಾದ ಸಾಹಿತ್ಯ ಸಂಶೋಧಕ ಉತ್ಕೃಷ್ಟ ವ್ಯಕ್ತಿತ್ವವನ್ನು ಸಾಹಿತ್ಯ ಕ್ಷೇತ್ರದಲ್ಲಿ ಗೌರವಾನ್ವಿತ ಸ್ಥಾನವನ್ನು ಪಡೆಯಬಲ್ಲ ದೇಶ ವಿದೇಶಗಳಲ್ಲಿ ಸಾಹಿತ್ಯ ಸಂಶೋಧಕರಿಗೆ ಮಾನ್ಯತೆ ಇದೆ.

**ಸಂಶೋಧನೆ :**

೧) ಹೊಸ ಹೊಸ ಸಂಗತಿಗಳನ್ನು ಶೋಧಿಸಿವುದು.

೨) ಶೋಧಿತ ಸಂಗತಿಗಳನ್ನು ಹೊಸ ದೃಷ್ಟಿಯಿಂದ ಪರಿಶೀಲಿಸಬಹುದು. ಮೌಲ್ಯಮಾಪನ ಮಾಡಬಹುದು.

೩)	ಮಾನವ ಜೀವನ ಕ್ರಮದ ಮೇಲೆ ಹೊಸ ಬೆಳಕು ಬೀರಬಲ್ಲದು.

೪)	ವ್ಯವಸ್ಥಿತ ಆಲೋಚನಾ ಕ್ರಮವನ್ನು ಬೆಳೆಸಬಲ್ಲದು.

೫)	ಸಂಶೋಧನೆ 'ಸತ್ಯ' ಅಥವಾ 'ಅಸತ್ಯಗಳ' ಅನಾವರಣವೆಂದು ಹೇಳಿದರು.

ಮೂಲ ಶೋಧನೆಯ ದೊಡ್ಡದಾದ ಮಾರ್ಗದಲ್ಲಿ ಇನ್ನೂ ಹೆಚ್ಚು ಆಳವಾಗಿ ಶೋಧಿಸುತ್ತ ವಿವರಣೆ, ವಿಶ್ಲೇಷಣೆಯನ್ನು ಕ್ರಿಯೆಯ 'ಸಂಶೋಧನೆ' ಮರುಶೋಧನೆಯಾದರೂ ಶೋಧನೆ Research (ರಿಸರ್ಚ್) ಎಂದರೆ ಶಬ್ದಶ : ಮತ್ತೆ ಶೋಧಿಸುವ ವಿಶಾಲವಾದ ಅರ್ಥ ವ್ಯಾಪ್ತಿಯನ್ನು ಕಾಲಾತೀತವಾಗಿ ಪ್ರದೇಶಾತೀತವಾಗಿ ಇಲ್ಲವೇ ವ್ಯಕ್ತಿ ನಿಷ್ಠೆಯವಾಗಿ ಕೆಲವೊಮ್ಮೆ ಸಾಮೂಹಿಕವಾಗಿ ಉದ್ದೇಶಪೂರ್ವಕ, ಉದ್ದೇಶರಹಿತವಾಗಿ ನಿರಂತರ ನಡೆಯುತ್ತಲೇ ಸಾಗುತ್ತವೆ. ಜ್ಞಾನ ಮುಖಿಯಾಗಿ ಸಾಗುವ ಸಂಶೋಧನೆಗೆ ಕಟ್ಟು ಪಾಡು ಇಲ್ಲಾ.

**ಸಂಶೋಧನೆ ನಡೆದು ಬಂದ ದಾರಿ :**

ಕನ್ನಡ ಸಾಹಿತ್ಯ ಸಂಶೋಧನೆ ಕಳೆದ ಒಂದೂವರೆ ಶತಮಾನದ ಹಿಂದೆ ಪ್ರಾರಂಭವಾಗಿದೆ. ಎರಡು ದಶಕಗಳಲ್ಲಿ ಅದು ಒಂದು ಅಧ್ಯಯನ ಕ್ಷೇತ್ರವಾಗಿಯೇ ಬೆಳೆದಿದೆ. ಕನ್ನಡ ಸಾಹಿತ್ಯದ ಇತಿಹಾಸ ಪರಂಪರೆ ಕರ್ನಾಟಕ ಸಂಸ್ಕೃತಿ ನಾಡು-ನುಡಿಗೆ ಕನ್ನಡ ಕವಿಗಳ ಕಾಲ, ಸ್ಥಳ, ಮತಗಳಿಗೆ ಸಂಬಂಧಪಟ್ಟ ಸಾಹಿತ್ಯ ಸಂಶೋಧನೆಯ ಕ್ಷೇತ್ರ ಇನ್ನಷ್ಟು ವಿಸ್ತಾರವಾಯಿತು. ಇತ್ತೀಚೆಗೆ ವಿಶ್ವವಿದ್ಯಾಲಯಗಳ ಸಂಖ್ಯೆಯೂ ಹೆಚ್ಚಾಗಿವೆ.

ಕರ್ನಾಟಕ ವಿದ್ಯಾವರ್ಧಕ ಸಂಘ, ಕುವೆಂಪು ಟ್ರಸ್ಟ, ಗೋವಿಂದ ಪೈ, ಸ್ಮಾರಕ ಪ್ರತಿಷ್ಠಾನ ಬಿ. ಎಂ. ಶ್ರೀ ಪ್ರತಿಷ್ಠಾನ, ದ. ರಾ. ಬೇಂದ್ರೆಯವರ ವಚನ ಸಾಹಿತ್ಯ ಹೀಗೆ ಮುಂತಾದ ಸಂಸ್ಥೆಗಳು ಸಂಶೋಧನೆಯ ಕಾರ್ಯ ಮಾಡಿತೋರಿಸಿವೆ ಹಾಗೂ ತೋರಿಸುತ್ತಲಿವೆ. ಸಂಶೋಧನೆಯನ್ನು ಕೈಗೊಳ್ಳುವುದಕ್ಕೆ ಮುಂದಾಗುವ ತರುಣರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಸಂಶೋಧನೆಯ ಸ್ಪಷ್ಟ ಕಲ್ಪನೆ, ಸ್ವರೂಪ, ಮೂಲ ತತ್ವಗಳನ್ನು ಮಣಗಾಣಿಸಿ, ಸಾಹಿತ್ಯ ಸಂಶೋಧನೆಯ ಮಾರ್ಗವನ್ನು ಪರಿಚಿಯಿಸಿ ಶಾಸ್ತ್ರೀಯವಾಗಿ ಅರಿಯುವಂತೆ ಮಾಡುವುದಾಗಿದೆ.

**ಕನ್ನಡ ಸಾಹಿತ್ಯ ಸಂಶೋಧನೆಯ ಕಾಲ ಘಟ್ಟಗಳು :**

ಸಂಶೋಧನೆಯನ್ನು ಶಾಸ್ತ್ರೀಯ ವಿಧಾನಗಳನ್ವಯ ನಿರ್ದಿಷ್ಟ, ವಿಶಿಷ್ಟ ಬರವಣಿಗೆ ಮೂಲಕ ಕನ್ನಡದಲ್ಲಿ ಹುಲುಸಾಗಿ ಬೆಳೆದದ್ದು ೨೦ ನೇ ಶತಮಾನದ ಉತ್ತರಾರ್ಧದಲ್ಲಿ ಕಾಲಮಾನದ ದೃಷ್ಟಿಯಿಂದ ಮೂರು ಘಟ್ಟಗಳಲ್ಲಿ ಕಾಣಬಹುದು.

೧) ಆರಂಭ ಕಾಲ : ಕ್ರಿ.ಶ. ೧೮೫೦ – ೧೯೫೦ ವರೆಗೆ

೨) ಮಧ್ಯಕಾಲ : ಕ್ರಿ.ಶ. ೧೯೫೦ – ೧೯೭೫ ವರೆಗೆ

೩) ಆಧುನಿಕ ಕಾಲ : ಕ್ರಿ.ಶ. ೧೯೭೬ – ೨೦೦೦ ವರೆಗೆ

ಈ ಬಗೆಯ ವಿಂಗಡನೆ ಕೇವಲ ಅಧ್ಯಯನದ ಅನುಕೂಲತೆಗಾಗಿ ಮಾಡಿಕೊಂಡದ್ದು, ನಿಕರವಾಗಿ ಇದೇ ಕಾಲದಲ್ಲಿ ಸಂಶೋಧನೆ ಆರಂಭವಾಗಿದೆ ಎಂದು ಹೇಳುವುದು ಕಷ್ಟ ಸಾಧ್ಯ. ಡಾ. ಎನ್. ಎಸ್. ತಾರಾನಾಥ ಅವರು ತಮ್ಮ 'ಶತಮಾನ ಸಂಶೋಧನೆ' ಕೃತಿಯಲ್ಲಿ ಕನ್ನಡ ಸಾಹಿತ್ಯ ಸಂಶೋಧನೆಯ ಐತಿಹಾಸಿಕ ಕಾಲ ಘಟ್ಟಗಳನ್ನು ನಾಲ್ಕು ರೀತಿಯಲ್ಲಿ ವಿಂಗಡಿಸಿದ್ದಾರೆ.

೧) ಸಾಮಗ್ರಿ ಸಂಗ್ರಹ ಕಾಲ – ಕ್ರಿ.ಶ. ೧೯ ನೇ ಶತಮಾನದ ಅವಧಿವರೆಗೆ

೨) ಆಕರ ನಿರ್ಮಾನ ಕಾಲ – ಕ್ರಿ.ಶ. ೧೯೦೦ ರಿಂದ ೧೯೨೬ ವರೆಗೆ

೩) ಸಾಮಗ್ರಿ ವಿಶ್ಲೇಷಣಾ ಕಾಲ – ಕ್ರಿ.ಶ. ೧೯೨೭ ರಿಂದ ೧೯೫೯ ವರೆಗೆ

೪) ಸಂಸ್ಕೃತಿ ಶೋಧನ ಕಾಲ – ಕ್ರಿ.ಶ. ೧೯೬೦ ರಿಂದ ಮುಂದೆ

ಕನ್ನಡ ಸಾಹಿತ್ಯ ಚಟುವಟಿಕೆಗಳನ್ನು ಆಧರಿಸಿ ಹೇಳಿದ್ದಾರೆ. ಆದರೆ 'ಸಾಮಗ್ರಿ ಸಂಗ್ರಹ' ಎನ್ನುವುದು ಮುಂದಿನ ಘಟ್ಟಗಳಲ್ಲಿಯೂ ನಡೆದಿವೆ ಹಾಗೂ ಸಾಮಗ್ರಿ ವಿಶ್ಲೇಷಣೆಯಲ್ಲೂ ನಡೆದಿದೆ.

ಡಾ. ಕೆ. ಅನಂತರಾಮು ಅವರು ರಚಿಸಿದ 'ಕನ್ನಡ ಸಾಹಿತ್ಯ ಚರಿತ್ರೆಗಳ ಸಮೀಕ್ಷೆ' ಎಂಬ ಲೇಖನ (ಶ್ರೀ ಮುಖ – ೧೯೯೭) ರಲ್ಲಿ ನಾಲ್ಕು ಘಟ್ಟಗಳಲ್ಲಿ ವಿಂಗಡಿಸಿರುವರು.

೧) ಪ್ರಥಮ ಹಂತ : ಕ್ರಿ. ಶ. ೧೯೪೦ ರಿಂದ ೧೯೦೦ ವರೆಗೆ
ಈ ಹಂತದಲ್ಲಿ ವೆಯಗ್ಲೆ, ಕಿಟೆಲ್, ಇ. ಪಿ. ರೈಸ್ ಮುಂತಾದವರ ಸಾಧನೆಗಳು.

೨) ಎರಡನೆಯ ಹಂತ : ಕ್ರಿ. ಶ. ೧೯೦೧ ರಿಂದ ೧೯೫೦ ವರೆಗೆ
ಈ ಹಂತದಲ್ಲಿ ಶ್ರೀ ಆರ್. ನರಸಿಂಹಚಾರ್ಯ, ಇ. ಪಿ. ರೈಸ್, ಎ. ವೆಂಕಟಸುಬ್ಬಯ್ಯ, ಶ್ರೀ ಬಿ. ಎಂ. ಶ್ರೀ ಮುಂತಾದವರ ಸಾಧನೆಗಳು.

೩) ಮೂರನೆಯ ಹಂತ : ಕ್ರಿ. ಶ. ೧೯೫೧ ರಿಂದ ೧೯೭೪ ವರೆಗೆ
ಈ ಹಂತದಲ್ಲಿ ರಂ. ಶ್ರೀ. ಮುಗಳಿ, ಶ್ರೀ ಎಂ. ಮರಿಯಪ್ಪ ಭಟ್ಟ, ಶ್ರೀ ತಸುಶಾಮರಾಯ ಶ್ರೀ ಎನ್. ಅನಂತರಂಗಾಚಾರ್ಯ, ಶ್ರೀ ಕೆ. ವೆಂಕಟರಾಯಪ್ಪ ಮುಂತಾದವರ ಸಾಧನೆಗಳು.

೪) ನಾಲ್ಕನೆ ಹಂತ : ಕ್ರಿ. ಶ. ೧೯೭೫ ರಿಂದ ಮುಂದಕ್ಕೆ
ಈ ಹಂತವನ್ನು 'ಸುವರ್ಣಯುಗ' ಎಂದು ಮೈಸೂರ, ಬೆಂಗಳೂರ, ವಿಶ್ವವಿದ್ಯಾಲಯಗಳು ಸಮಗ್ರ ಸಾಹಿತ್ಯ ಸಂಪುಟಗಳನ್ನು ಹೊರತಂದವು. ಇಲ್ಲಿ ಎಲ್ಲಾ ಹಂತಗಳಲ್ಲಿ ಸಂಶೋಧನೆ ಬಹಳ ನಿಧಾನಗತಿಯಲ್ಲಿ ಸಾಗಿ ಬಂದಿವೆ.

ಉದಾ : ಆರ್. ನರಸಿಂಹಚಾರ್ಯರ ಕವಿಚರಿತ್ರೆಯ ಮೂರು ಸಂಪುಟಗಳು ಹೊರಬರಲು ೨೦ ವರ್ಷಗಳೇ ಬೇಕಾದವು. (೧೯೦೯ ರಿಂದ ೧೯೨೯)ವರೆಗೆ.

ಕನ್ನಡ ಸಾಹಿತ್ಯ ಚರಿತ್ರೆ ಈ ಎಲ್ಲ ಹಂತಗಳಲ್ಲಿಯೂ ಕೆಲವು ಸಾಹಿತ್ಯ ಸಂಶೋಧನೆಯ ಇತಿಹಾಸದ ಹೆಜ್ಜೆ ಗುರುತುಗಳನ್ನು ಗುರುತಿಸಬಹುದು.

೧) ಕವಿ, ಕೃತಿ, ಕಾಲ, ಸ್ಥಳ ವಿಚಾರಗಳು ಸ್ಪಷ್ಟವಾಗುತ್ತ ಸಾಗಿದ್ದು.

೨) ಹೊಸ ಹೊಸ ಕವಿ ಕೃತಿಗಳ ವಿಷಯ ಲಭ್ಯವಾಗುತ್ತ ಸಾಗಿದ್ದು.

೩) ಸಂದೇಹಗಳು, ಸಮಸ್ಯೆಗಳು ನಿವಾರಣೆಗೊಳ್ಳುತ್ತಾ ಸಾಗಿದ್ದು.

೪) ಕೃತಿ ಪರಿಚಯ, ವಿಮರ್ಶಾಮುಖ, ಮೌಲ್ಯ ಮಾಪನ, ತೌಲನಿಕ ಅನ್ವಯಿಕ ಸಂಶೋಧನೆಯೆಡೆಗೆ ಸಾಹಿತ್ಯ ಚರಿತ್ರೆಯ ದೃಷ್ಟಿಕೋನ ಬೆಳೆಯುತ್ತ ಸಾಗಿದ್ದು.

೫) ಕೃತಿಗಳ ಶಾಸ್ತ್ರೀಯ ಸಂಪಾದನೆ, ಸಂಪಾದಿತ ಕೃತಿಗಳಲ್ಲಿನ ಸುದೀರ್ಘ ಪ್ರಸ್ತಾವನೆಗಳು ಸಂಶೋಧನೆಯ ಮಾರ್ಗವನ್ನು ವಿಶಾಲಗೊಳಿಸಿದ್ದು.

೬) ವಿಪುಲ ಆಕರ ಸಾಮಗ್ರಿ ದೊರೆತಂತೆ ಬಿಡಿ-ಬಿಡಿ ಕಿರು ಲೇಖನಗಳು ಹುಟ್ಟಿಕೊಂಡಿದ್ದು.

೭) ವಿಶ್ವ ವಿದ್ಯಾಲಯಗಳಲ್ಲಿ ಪದವಿಗಳಿಗಾಗಿ ವ್ಯಾಪಕ ಸಂಶೋಧನ ಪ್ರಬಂಧಗಳು ರಚನೆಗೊಂಡಿದ್ದು.

ಕನ್ನಡ ಸಾಹಿತ್ಯ ಸಂಶೋಧನೆಯ ಇತಿಹಾಸವನ್ನು ಇಲ್ಲಿ ಮುಖ್ಯ ಪ್ರವೃತ್ತಿಗಳು, ಪ್ರೇರಣೆ, ದೊರಣೆಗಳು, ಪ್ರಯೋಗಗಳು, ಪ್ರಭಾವಗಳು ಹಾಗೂ ಫಲಶೃತಿಗಳನ್ನು ಸಂಕ್ಷೇಪದಲ್ಲಿ ನಿರೂಪಿಸಲಾಗಿದೆ. ಪ್ರತಿಯೊಂದು ಸಂಶೋಧನೆಯನ್ನು ಪ್ರತ್ಯೇಕವಾಗಿ ಸವಿವರವಾಗಿ ತಿಳಿಯಲು ಸಾಧ್ಯವಾಗಿಲ್ಲ.

ಉದಾ : ದ. ರಾ. ಬೇಂದ್ರೆ, ಕುವೆಂಪು ಮುಂತಾದವರು ಮೂಲತಃ ಕವಿಗಳಾದರೂ ಅವರ ಅನೇಕ ಗದ್ಯ ಬರಹಗಳು ಸಂಶೋಧನ ಮಿಶ್ರಿತ ವಿಮರ್ಶಾ ಬರಹಗಳಾಗಿವೆ.

ರಸನಿಷ್ಠ ವಿಮರ್ಶಕರೆಲ್ಲರೂ ಸಂಶೋಧಕರಾಗಿಯೇ ತೋರಿದ್ದಾರೆ. ಆಂಗ್ಲ ವಿದ್ವಾಂಸರು ಪರೋಕ್ಷ ಪ್ರೇರಣೆ ನೀಡಿರಬೇಕು. ಅವರಲ್ಲಿ ಪ್ರಮುಖರಾದವರಲ್ಲಿ ಬಿ. ಎಲ್. ರೈಸ್, ಕಿಟೇಲ್, ಜೆ. ಎಫ್. ಫ್ಲೀಟ್, ಮೆಕೆಂಜಿ, ವಾಲ್ಟರ್, ಎಲಿಯಟ್ ಮೊದಲಾದವರು ೧೯ ನೇ ಶತಮಾನದ ಅವಧಿಯಲ್ಲಿ ಪ್ರಾಚೀನ ಕನ್ನಡ ಸಾಹಿತ್ಯ ಭಾಷೆ, ಮಿಮಾಂಸೆ, ಶಾಸನ, ಹಸ್ತಪ್ರತಿಶಾಸ್ತ್ರ ಗ್ರಂಥಸಂಪಾದನೆ, ನಿಗಂಟುವಿಜ್ಞಾನ, ಜಾನಪದ, ಕ್ಷೇತ್ರದಲ್ಲಿ ಪ್ರಾಮಾಣಿಕ ನಿಷ್ಠಾವಂತ ಸಂಶೋಧಕರಾಗಿ ಕಾರ್ಯ ಮಾಡಿದ್ದಾರೆ. ಆಂಗ್ಲ ಭಾಷೆಯಲ್ಲಿ ಮೂಡಿ ಬಂದವರ ಬರವಣಿಗೆ ಪ್ರಪಂಚಕ್ಕೆ ಕನ್ನಡದ ಬೆಳಕಿಂಡಿ ನೀಡಿದಂತಾಯಿತು. ಮುಂದಿನ ಸಂಶೋಧಕರೆ ದೇಶಿ-ವಿದ್ವಾಂಸರಿಗೆ ದಾರಿ ದೀಪವಾಯಿತು. ಮೂಲಭೂತವಾಗಿ ಸಾಹಿತ್ಯ ಸಂಶೋಧಕನ ಕೆಲಸವನ್ನೇ ಮಾಡಿ ಕನ್ನಡ ಸಂಶೋಧಕರ ಚರಿತ್ರೆಗೆ ಭೂನಾದಿ ಹಾಕಿದೆ. ಸಾಂಸ್ಕೃತಿಕ

ಪರಂಪರೆಯಲ್ಲಿ ಸಂಶೋಧಕರು, ನಾಡ–ನುಡಿ, ಪ್ರಾಚೀನ ಪರಂಪರೆಯ ಕವಿ–ಕಾಲ ದೇಶಾದಿ ಚರಿತ್ರೆ, ಶಾಸನ, ಹಸ್ತಪ್ರತಿ ಶೋಧ, ಆಕರಗಳ, ದಾಖಲೆ ಸಂಗ್ರಹ ಪರಿಶೀಲನೆ ರಸನಿಷ್ಟ ವಿಮರ್ಶೆ, ಹಳಗನ್ನಡ, ಕೃತಿ ಮುಂತಾದ ಸಂಶೋಧನಾ ಚಟುವಟಿಕೆಗಳು ವ್ಯಯಕ್ತಿಕ ನೆಲೆಗಳಲ್ಲಿ ಮೂಡಿ ಬಂದಿವೆ.

ಪ್ರಾಚೀನ ಕನ್ನಡ ಸಾಹಿತ್ಯದ ಬಗ್ಗೆ ಸಂಶೋಧನೆ ೨೦ ನೇ ಶತಮಾನ ಮುಗಿದರು ಸಂಶೋಧನೆ ವಿಷಯ ಉಳಿದುಕೊಂಡಿದೆ. ಕವಿರಾಜಮಾರ್ಗದಲ್ಲಿ ವ್ಯಕ್ತವಾದ ಪೂರ್ವ ಕವಿ ಕೃತಿಗಳ ಬಗ್ಗೆ ಇನ್ನೂ ಬಹಳ ವಿಷಯಗಳು ತಿಳಿದಿಲ್ಲ. ಅನೇಕ ಕವಿಗಳ ಇತಿವೃತ್ತ ಅವರ ಕಾಲ, ಸ್ಥಳ, ಕೃತಿ, ಸಂಖ್ಯೆ ತಿಳಿಯದೇ ಕಗ್ಗಂಟಾಗಿದೆ. ಮಹಾಮಾರ್ಗ ಎಂ. ಎಸ್. ತಾರಾನಾಥ ಪುಟ – ೫೧, ಆರ್. ನರಸಿಂಹಚಾರ್ಯರು – ಕವಿ ಚರಿತೆ, ರಂ. ಶ್ರೀ. ಮುಗಳಿ – ಸಾಹಿತ್ಯ ಚರಿತ್ರೆ, ಎಂ. ಮರಿಯಪ್ಪ ಭಟ್ – ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ, ಗೋವಿಂದ ಪೈ – ಕನ್ನಡ ಸಾಹಿತ್ಯದ ಪ್ರಾಚೀನತೆ ಮುಂತಾದವರು ಜನಪದ ಸಾಹಿತ್ಯವನ್ನು ಶೋಧಿಸುವಲ್ಲಿ ನಡೆಸಿದ ಪ್ರಯತ್ನ ಸಂಶೋಧನೆ ಬಹುಮುಖ ಕಾರ್ಯವೆನಿಸಿದೆ.

### ೧) ಫ. ಗು. ಹಳಕಟ್ಟಿ : (೧೮೮೦ – ೧೯೬೪)

ಧಾರವಾಡದ ಫಕೀರಪ್ಪ ಗುರುಬಸಪ್ಪ ಹಳಕಟ್ಟಿ ವೀರಶೈವ ವಾಙ್ಮಯ ಸಂಶೋಧನ ಕ್ಷೇತ್ರದ ಇನ್ನೊಂದು ನಕ್ಷತ್ರ. 'ಶಿವಾನುಭವ ತ್ರೈಮಾಸಿಕ' ಹಾಗೂ 'ನವ ಕರ್ನಾಟಕ' ವಾರ ಪತ್ರಿಕೆಗಳನ್ನು ಪ್ರಕಟಿಸಿದ್ದರು. ರಾವ್‌ಬಹದ್ದೂರ, ರಾವಸಾಹೇಬ ಎಂಬ ಗೌರವ ಪ್ರಶಸ್ತಿಗಳು 'ವಚನ ಪಿತಾಮಹ'

### ೨) ಶಂಬಾ ಜೋಶಿ : (೧೮೮೬ – ೧೯೯೧)

ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಗುರ್ಲ ಹೊಸೂರಿನ ಶಂಕರಬಾಳ ದಿಕ್ಷೀತ ಅವರ ಸಂಶೋಧನೆ ಜಾಗತಿಕ ಮಟ್ಟದ ಸಂಶೋಧಕರು ಇಂಗ್ಲೀಷ, ಕನ್ನಡ, ಮರಾಠಿ ಹೀಗೆ ಮುಂತಾದ ಬಹುಭಾಷಾ ಪಡೆದು 'ಋಗ್ವೇದ ಸಾರ', 'ನಾಗಪ್ರತಿಮೆ ವಿಚಾರ', 'ಪ್ರವಾಹ ಪಡಿತರ ಕರ್ಮ ಹಿಂದೂ ಧರ್ಮ'. 'ಬುದ್ಧನ ಜಾತಕ' 'ಕೃತಿಗಳು ಬಿತ್ತಿದ್ದನ್ನು ಬೆಳೆದುಕೊ' ಎಂಬುದು ಅವರ ಕೊನೆಯ ವಿಚಾರ ಚಿಂತನ ಕೃತಿ. ಹೀಗೆ ಸಂಶೋಧನೆಯ ಹರಿವು ವಿಸ್ತಾರವಾಗುತ್ತಾ ಸಾಗಿದೆ.

### ೩) ಎಂ. ಚಿದಾನಂದ ಮೂರ್ತಿ : (೧೯೩೧ – )

ಚಿದಾನಂದ ಮೂರ್ತಿಯವರು ಚನ್ನಗಿರಿ ತಾಲೂಕಿನ ಹಿರೇಕೋಗಳೂರ (ಹಿರೇಕೊಗಲೂರು) ದಲ್ಲಿ ಜನಸಿದರು. ೧೦–೦೫–೧೯೩೧ ರಲ್ಲಿ ಶಿ. ಕೊಟ್ಟೂರಯ್ಯ, ತಾಯಿ ಪಾರ್ವತಮ್ಮರವರ ಉದರಲ್ಲಿ ಜನಿಸಿದರು. ಕನ್ನಡ ಸಾರಸ್ವತ ಲೋಕದಲ್ಲಿ ಅದು ಸಂಶೋಧಕರಾಗಿ ಕನ್ನಡ ನಾಡು–ನುಡಿ, ಸಂಸ್ಕೃತಿಯ ಕಳಕಳಿ, ಕಾಳಜಿ ಅನೇಕ ಸಂಶೋಧನಾ ಕೃತಿಗಳನ್ನು ರಚಿಸಿ ಹೊಸತನದ ಅರಿವು ಎಚ್ಚರಿಕೆಯನ್ನು ಬರವಣಿಗೆಯ ಮೂಲಕ ಹೇಳಿದ್ದಾರೆ. ಪ್ರಾಧ್ಯಾಪಕರಾಗಿ ವೃತ್ತಿ ಆರಂಭಿಸಿ, ಕನ್ನಡ ಸಾಹಿತ್ಯದಲ್ಲಿ,

ವಿಮರ್ಶಕರಾಗಿ, ಭಾಷಾ ಶಾಸ್ತ್ರಜ್ಞರಾಗಿ, ಸಂಶೋಧಕರಾಗಿ ತಮ್ಮ ಸೇವೆಯನ್ನು ಮಾಡಿ ಅನೇಕ ಕೃತಿಗಳನ್ನು ರಚಿಸಿದ್ದಾರೆ. 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಪಿ.ಎಚ್.ಡಿ. ಪ್ರಬಂಧ, ಸಂಶೋಧನೆ 'ಸಂಶೋಧನ ತರಂಗ', 'ಕರ್ನಾಟಕ ಸಂಸ್ಕೃತಿ', 'ಕನ್ನಡ ಸಂಸ್ಕೃತಿ', 'ಬಸವಣ್ಣನವರು' 'ವಿಮರ್ಶಾಕೃತಿ' ಹೀಗೆ ಹೊಸತು – ಹೊಸತು. 'ಭಾಷಾ ವಿಜ್ಞಾನದ ಮೂಲ ತತ್ವಗಳು' ಮುಂತಾದವುಗಳು ಫಲಕ್ಕೆತಕ್ಕ ಗೌರವ ಪುರಸ್ಕಾರ ಸಂದಿವೆ. ಸಮಗ್ರ ಸಾಹಿತ್ಯವನ್ನು ಹಲವು ಸಂಪುಟಗಳಲ್ಲಿ ಪ್ರಕಟಿಸಿದ್ದಾರೆ.

**೪) ಎಂ. ಎಂ. ಕಲಬುರ್ಗಿ : (೨೮–೧೧–೧೯೩೮)**

ಮಲ್ಲಪ್ಪ ಮಡಿವಾಳಪ್ಪ ಕಲಬುರ್ಗಿಯವರು ಗುಲ್ಬರ್ಗಾ ಜಿಲ್ಲೆಯ ಸಿಂದಗಿ ತಾಲೂಕಿನ ಗುಬ್ಬೆವಾಡ ಗ್ರಾಮದಲ್ಲಿ ಜನಿಸಿದರು. ಕ. ವಿ. ವಿದ್ಯಾಲಯದಿಂದ 'ಕವಿರಾಜ ಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಪಿ.ಎಚ್.ಡಿ. ಪ್ರಬಂಧ. ಅದೇ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗಿ ಸೇವೆ ಆರಂಭಿಸಿ ಕನ್ನಡ ಸಂಶೋಧನಾ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆ ಗಣನೀಯವಾದದ್ದು. ಅದರಂತೆ ಕಥೆ, ಸಂಪಾದನೆ, ಜಾನಪದ ಸಂಸ್ಕೃತಿ ಶೋಧ, ಸಂಶೋಧನೆ ಒಗ್ಗದ ಸಂಶೋಧನೆಯನ್ನು ಒಗ್ಗಿಸಿಕೊಂಡಿರುವುದೇ ವಿಶೇಷ. 'ಶಾಸನ ಸಂಪದ', 'ಶಾಸನದಲ್ಲಿ ಶಿವಶರಣರು', 'ಶಾಸನ ವ್ಯಸಂಗ', 'ಮಾರ್ಗ ೨, ೩, ೪, ಸಮಗ್ರ ವಚನ ಸಾಹಿತ್ಯ' ಹೀಗೆ ಮುಂತಾದವುಗಳು ಸದಾ ಕ್ರೀಯಾಶೀಲ ವ್ಯಕ್ತಿತ್ವ ಚಟುವಟಿಕೆಯ ಸದಾ ಸಂಶೋಧನಾ ಪ್ರವೃತ್ತಿಯವರು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿ ಸೇವೆ ಮಾಡಿದವರು. ಗೌರವ ಪುರಸ್ಕಾರಕ್ಕೆ ಭಾಜನರು ಸಂಶೋಧನ ಕ್ಷೇತ್ರದಲ್ಲಿ ಮುಂದುವರೆದು ತಲೆಮಾರು.

**೫) ಡಾ. ಬಿ. ಆರ್. ಹಿರೇಮಠ :**

ಡಾ. ಬಿ. ಆರ್. ಹಿರೇಮಠರವರು ಬಾಗಲಕೋಟ ಜಿಲ್ಲೆಯ ವಿದ್ವತ್ ಪರಂಪರೆಯ ಅರುಣೋದಯದ ಬೆಡಗು. ಶ್ರಮ ಸಂಸ್ಕೃತಿಯ ಕುಲುಮೆಯಲ್ಲಿ ರೂಪಗೊಂಡ ಕನ್ನಡದ ಬೆರಳೆಣಿಕೆಯ ಅಧ್ಯಯನ ನಿಷ್ಠ, ಸಂಶೋಧಕರಲ್ಲೊಬ್ಬರು. ಅವರ ಬದುಕಿಗೆ ಬಡತನದ ಹಿನ್ನಲೆಯಿತ್ತು. ಅಧ್ಯಯನಕ್ಕೆ ಡಾ. ಆರ್. ಸಿ. ಹಿರೇಮಠರ ಮುನ್ನೆಲೆಯಿತ್ತು. ದುಡಿಮೆಗೆ ಡಾ. ಎಂ. ಎಂ. ಕಲಬುರ್ಗಿಯವರ ಬೆವರಿನ ಸೆಲೆ ಮಾದರಿಯಾಗಿತ್ತು. ಇದರಿಂದ ಡಾ. ಬಿ. ಆರ್. ಹಿರೇಮಠರವರು ದಣಿವರಿಯದೆ ಕರ್ನಾಟಕದುದ್ದಕ್ಕೂ ಸುತ್ತಾಡಿ ಶಾಸನಗಳನ್ನು ಹುಡುಕಿದರು. ಹಸ್ತಪ್ರತಿಗಳನ್ನು ಶೋಧಿಸಿದರು. ಗ್ರಂಥಗಳನ್ನು ಸಂಪಾದಿಸಿದರು. ಶಾಸನ–ಹಸ್ತಪ್ರತಿ–ಪ್ರಾಚೀನ ಗ್ರಂಥಗಳಲ್ಲಿ ನಿಕ್ಷೇಪ್ತಗೊಂಡಿದ್ದ ಕನ್ನಡ ಸಂಸ್ಕೃತಿಯನ್ನು ಸಾರಸ್ವತದಲ್ಲಿ ಅನಾವರಣಗೊಳಿಸಿದರು.

**೬) ಡಾ. ಕೆ. ಎಂ. ರಹಮತ್ ತರಕೇರಿ :**

ಎಡ್. ಪಂಥೀಯ ಚಿಂತಕರೂ ಬಂಡಾಯ ವಿಮರ್ಶಕರಾದ ಕೆ. ಎಂ. ರಹಮತ್‌ಉಲ್ಲಾರವರು ಚಿಕ್ಕಮಗಳೂರ ಜಿಲ್ಲೆಯ ತರಿಕೇರಿಯಲ್ಲಿ ೨೬–೦೮–೧೯೫೯ ರಲ್ಲಿ ಜನಿಸಿದರು. 'ಆಧುನಿಕ ಕನ್ನಡ ಕಾವ್ಯ ಮತ್ತು ಪ್ರತಿಭಟನೆ' ಎಂಬ ಮಹಾಪ್ರಬಂಧ (ಪಿ.ಎಚ್.ಡಿ) ರಚಿಸಿ, ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಹಂಪಿ ಕನ್ನಡ ವಿಶ್ವ ವಿದ್ಯಾಲಯದ ರೀಡರಾಗಿ, ವಿಮರ್ಶಾ ನಿಲುವುಗಳ ಬಗ್ಗೆ ಚಿಂತನೆ, ವಿಚಾರ,

ಮಂಥನ, ಸಂಶೋಧನೆ, ಅನುವಾದ, ಸಂಪಾದನೆ, ಸಂಸ್ಕೃತಿ, ಚಿಂತನೆ, ಪ್ರವಾಸ ಕಥನ, ವಿಶ್ಲೇಷಣೆ, ಮೀಮಾಂಸೆ, ಸಂದರ್ಶನ, ಸಾಹಿತ್ಯ ವಿಮರ್ಶೆ ಹೀಗೆ ಎಲ್ಲಾ ಕ್ಷೇತ್ರದ ವೈಚಾರಿಕ ಬರಹಗಳ ನಾಡಿನ ತುಂಬಾ ಜನಪ್ರೀಯವಾಗಿವೆ.

ಡಾ. ಬಿ. ಆರ್. ಹಿರೇಮಠ, ಡಾ. ಎಂ. ಎಂ. ಕಲಬುರ್ಗಿ, ಡಾ. ಚಿದಾನಂದ ಮೂರ್ತಿಯವರ ಗರಡಿಯಲ್ಲಿ ಪಳಗಿದ ಡಾ. ವ್ಹಿ. ಎಸ್. ಮಾಳಿಯವರು ಮತ್ತೊಂದು ತಲೆಮಾರಿನ ಮುಂದುವರೆದು ಸಂಶೋಧಕರ ಸಾಲಿನಲ್ಲಿ ನಿಲ್ಲುತ್ತಾರೆ. ಡಾ. ಬಿ. ಕೆ. ಹಿರೇಮಠ, ಡಾ. ಮರೇಗುದ್ದಿ, ಡಾ. ಇಚ್ಚಂಗಿ, ಡಾ. ಶಾಂತಿನಾಥ ದಿಬ್ಬದ, ಡಾ. ಕೆ. ರವೀಂದ್ರನಾಥ, ಡಾ. ವಿರೇಶ ಬಡಿಗೇರ, ಡಾ. ಅಶೋಕ ಎಂ. ನರೋಡೆ ಮುಂತಾದವರು ಜೊತೆ ಜೊತೆಯಾಗಿ ಡಾ. ವ್ಹಿ. ಎಸ್. ಮಾಳಿಯವರು ಸಂಶೋಧನಾ ಕ್ಷೇತ್ರ ಅಲ್ಲದೆ, ಸಂಸ್ಕೃತಿ ಅಧ್ಯಯನ, ಸಂಪಾದನೆ, ಸಾಹಿತ್ಯ ವಿಮರ್ಶೆ, ವೈಚಾರಿಕ ಲೇಖನಗಳು ಮೂಲಕ ಉತ್ತರ ಕರ್ನಾಟಕ ಪ್ರಮುಖ ಸಂಶೋಧಕರಾಗಿದ್ದಾರೆ.

ಸಂಶೋಧನೆಯ ಒಂದು ವಿಶಿಷ್ಟ ವಿಷಯದ ಸಮಗ್ರ ಅಧ್ಯಯನ ಅಥವಾ ಒಂದು ವಿಶಿಷ್ಟ, ವಸ್ತು, ವಿಷಯ, ವ್ಯಕ್ತಿ ಅಥವಾ ಘಟನೆಗೆ ಸಂಬಂಧಿಸಿದ ಅಂಶಗಳನ್ನು ಹುಟ್ಟು, ಬೆಳವಣಿಗೆ, ಪರಿಣಾಮಗಳನ್ನು ನಿಖರವಾಗಿ ತಿಳಿಯಲು ಮಾಡುವ ಒಂದು ಆಳವಾದ ಅಧ್ಯಯನವೇ ಸಂಶೋಧನೆ ಎಂದು ಹೇಳಬಹುದು. 'ಸಮಾಜದ ಒಂದು ಅಂಗವನ್ನೆ ವಿಶ್ಲೇಷಿಸುವ ವಿಧಾನ'. ಈ ರೀತಿ ಡಾ. ವ್ಹಿ. ಎಸ್. ಮಾಳಿಯವರು ಕೈಗೊಂಡಿರುವ ಸಂಸ್ಕೃತಿ ಸಂಶೋಧನೆ ಸಾಹಿತ್ಯ ಸಂಶೋಧನೆಯ ಮಹತ್ವ ಪಡೆದುಕೊಳ್ಳುತ್ತದೆ.

ಶಾಸನ, ಹಳಗನ್ನಡ ಸಾಹಿತ್ಯದ ಭಾಷೆಯ ಬಗೆಗೆ ವಿಶೇಷ ಅಧ್ಯಯನ ಮಾಡಿರುವ ಮಾಳಿಯವರು ಕನ್ನಡ ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ಸಹಯೋಗದ ಬಿ. ಆರ್. ದರೂರ ಸಂಶೋಧನಾ ಕೇಂದ್ರದ ಮುಖ್ಯಸ್ಥರಾಗಿ, ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸಿದ್ದಾರೆ. ಅಥಣಿ, ರಾಯಬಾಗ, ಚಿಕ್ಕೋಡಿ, ನಿಪ್ಪಾಣಿ, ಕಾಗವಾಡ ಗಡಿ ಪ್ರದೇಶದ ಸಾಹಿತ್ಯ ಸಂಸ್ಕೃತಿಗಳನ್ನು ಶೋಧಿಸುವ ಆ ಜನಾಂಗದ ಜೀವನ ವಿಧಾನವನ್ನು ಮರಳಿ ಕಟ್ಟುವ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿದ್ದಾರೆ.

**ಅಡಿಟಿಪ್ಪಣಿ :**

೧) ಮಾಳಿಯವರ ಪರಿಚಯ ಮತ್ತು ಸಂಶೋಧನ ಪರಂಪರೆ

೨) ಎಂ. ಎಂ. ಕಲಬುರ್ಗಿ – ಮಾರ್ಗ ೩

೩) ಚಿದಾನಂದ ಮೂರ್ತಿ – ಸಂಶೋಧನೆ

೪) ಸಂಗಮೇಶ ಸವದತ್ತಿಮಠ – ಕನ್ನಡ ಸಾಹಿತ್ಯ ಸಂಶೋಧನೆ : ಮಾರ್ಗ ಮತ್ತು ಇತಿಹಾಸ.

೫) ಸಂಶೋಧನಾ ೩ ಘಟ್ಟಗಳ ಸಂಶೋಧಕರ ಪರಿಚಯ

೬) ಅಧ್ಯಯನದ ವಿಧಿ ವಿಧಾನಗಳು – (ಸಂ) – ಕೆ. ರವಿಂದ್ರನಾಥ

೭) ಏನು? ಏಕೆ? ಹೇಗೆ? (ಸಂ). – ಎಂ. ಚಂದ್ರಪೂಜಾರಿ

೮) ಕನ್ನಡ ಸಂಶೋಧನೆಯ ವೈಧಾನಿಕತೆಗಳು – ಅಮರೇಶ ನೂರಡೋಣಿ

೯) ಕನ್ನಡ ಸಂಶೋಧನೆ ತಾತ್ವಿಕ ವಿಚಾರ – ರಹಮತ್ ತರಕೇರಿ

೧೦) ಸಾಹಿತ್ಯ ವಿಮರ್ಶೆ – ಬಸವರಾಜ ಸಬರದ

೧೧) ಸತ್ಯಾನ್ವೇಷಕ – ಡಾ. ಶಂ. ಭಾ. ಜೋಷಿ – ೨೦೦೦

| | | |
|---|---|---|
| ೧೨) ಸಂಶೋಧನಾ ಸ್ವರೂಪ | : | ಡಾ. ಬಿ. ವ್ಹಿ. ಶಿರೂರ |
| ೧೩) ಕನ್ನಡ ಸಂಶೋಧನಾಶಾಸ್ತ್ರ | : | ಡಾ. ಎಂ. ಎಂ. ಕಲಬುರ್ಗಿ |
| ೧೪) ಕನ್ನಡ ಸಂಶೋಧನೆ ತಾತ್ವಿಕ ವಿಚಾರ | : | ಡಾ. ರಹಮತ್ ತರಿಕೇರಿ |
| ೧೫) ಸಂಶೋಧನ ಜವಾಬ್ದಾರಿ | : | ಶ್ರೀ ಎಂ. ಚಂದ್ರ ಪೂಜಾರಿ |
| ೧೬) ಶತಮಾನದ ಸಂಶೋಧನೆ | : | ಶ್ರೀ ಎಸ್. ಎಸ್. ತಾರಾನಾಥ |
| ೧೭) ಶತಮಾನದ ಸಂಶೋಧನೆ | : | ಡಾ. ಎನ್. ಎಸ್. ತಾರಾನಾಥ |
| ೧೮) ಕನ್ನಡ ಸಾಹಿತ್ಯ ಚರಿತ್ರೆಗಳ ಸಮೀಕ್ಷೆ | : | ಡಾ. ಕೆ. ಅನಂತರಾಮ |
| ೧೯) ಕವಿಚರಿತ್ರೆ | : | ಆರ್. ನರಸಿಂಹಚಾರ್ಯರು |
| ೨೦) ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ | : | ಎಂ. ಮರಿಯಪ್ಪಭಟ್ಟ |

* * * * *

## ಅಧ್ಯಾಯ – ೩ :

# ಡಾ. ವ್ಹಿ. ಎಸ್. ಮಾಳಿಯವರ ಸಂಶೋಧನೆಗಳು

# ಅಧ್ಯಾಯ – ೩ :
# ಡಾ. ವ್ಹಿ. ಎಸ್. ಮಾಳಿಯವರ ಸಂಶೋಧನೆಗಳು

## ೩.೧ 'ಕನ್ನಡ ಸಾಹಿತ್ಯದಲ್ಲಿ ಕರ್ಣ' ಮಹಾಪ್ರಬಂಧ :

ಕನ್ನಡ ಸಾಹಿತ್ಯದಲ್ಲಿ ಕರ್ಣ ಡಾ. ವ್ಹಿ. ಎಸ್. ಮಾಳಿಯವರ ಪಿ.ಎಚ್.ಡಿ. ಮಹಾಪ್ರಬಂಧ 'ಕನ್ನಡ ಸಾಹಿತ್ಯದಲ್ಲಿ ಕರ್ಣ' ಎಂಬುದು ಸಮುದ್ರ ಮಂಥನದಿಂದ ಪ್ರಾಪ್ತವಾದ ಲಕ್ಷ್ಮೀ, ಚಂದ್ರ, ಬೆಳ್ಳನೆಯ ಕುದರೆ, ಕೊನೆಗೆ ಬಂದ ಅಮೃತದಂತೆ, ಕರ್ಣ ರಸಾಯನ ಶ್ರೀಮಂತ ಸೃಜನತೆಯನ್ನು ಸಾಕ್ಷಿ ಕರಿಸುವ ಮೌಲಿಕ ಸಾಹಿತ್ಯ ಕೃತಿಯಾಗಿದೆ.

ಕರ್ಣನೆಂಬ ಪಾತ್ರವನ್ನು ಅವರು ನೋಡಿದ ದೃಷ್ಟಿ ನಿತ್ಯ ನೂತನವಾಗಿದೆ. ಕರ್ಣನ ಪಾತ್ರಕ್ಕೆ ಗಟ್ಟಿತನವನ್ನು ನೀಡಲು ಸಾರ್ಥಕ ಪ್ರಯತ್ನ ಮಾಡಿದ್ದಾರೆ. ಪ್ರಾಚೀನ ಕವಿಗಳಲ್ಲಿ ಕರ್ಣನೆಂಬ ಪಾತ್ರವನ್ನು ಚಿತ್ರಿಸಿದ ಶೈಲಿಯನ್ನೇ ಮೂಲವಸ್ತುವಾಗಿಸಿಕೊಂಡು ತೀರ ಗಂಭೀರವಾದ ಅಧ್ಯಯನ ಮಾಡಿದ್ದಾರೆ. ಆಯ್ದುಕೊಂಡ ಮೂಲ ಸಾಮಗ್ರಿಯೂ ವೈಶಿಷ್ಟ್ಯ ಪೂರ್ಣವಾಗಿದೆ. ಯಾಕೆಂದರೆ ಮಹಾಭಾರತ ಕಾವ್ಯವೇ ಬಹು ಸಂಕೀರ್ಣ, ಅದರಲ್ಲೂ ವ್ಯಾಸ ಸೃಷ್ಠಿ, ಸಹಜ ಸಾಮಾನ್ಯ ಗ್ರಹಿಕೆಗೆ ನಿಲುಕದಂತಹದು. ಅದೊಂದು ವೇದ ವಾಙ್ಮಯಿಂದ ಮೇರು ಕೃತಿ. ಇತಿಹಾಸ, ಸಾಹಿತ್ಯ ರಾಜ ನೀತಿ, ಸಮಾಜಶಾಸ್ತ್ರ ತತ್ವಶಾಸ್ತ್ರ, ದರ್ಶನ, ನ್ಯಾಯಶಾಸ್ತ್ರ ಎಲ್ಲವನ್ನು ಮೇಳೈಯಿಸಿಕೊಂಡು ರಚಿತಗೊಂಡ ಬೆಲೆ ಕಟ್ಟಲಾಗದ ಗ್ರಂಥ, ಇಡೀ ಭಾರತೀಯತೆಯನ್ನೇ ಸಾಕ್ಷಿಕರಿಸುವ ಮಹಾಕಾವ್ಯ. ಇದನ್ನೇ ಮೂಲವಾಗಿರಿಸಿಕೊಂಡು ಕನ್ನಡ ಪ್ರಾಚೀನ ಕವಿಗಳು ತಮ್ಮ ತಮ್ಮ ವಿಶಿಷ್ಟ ದೃಷ್ಟಿ ಕೋನಗಳಿಂದ ಮಹಾಭಾರತವನ್ನು ಕನ್ನಡದ ನೆಲೆಯಿಂದ ಪ್ರತಿ ಸೃಷ್ಟಿ ಮಾಡಿದ್ದಾರೆ. ಮಹಾಭಾರತ ಕಾವ್ಯವನ್ನು ಕನ್ನಡದ ಮಹಾಕವಿಗಳು ತಮ್ಮದೆ ಆದ ಪ್ರಗಲ್ಭ ಪಾಂಡಿತ್ಯದಿಂದ ಅದಕ್ಕೆ ಹೊಸ ರೂಪಗಳನ್ನೇ ನೀಡಿದ್ದಾರೆ.

ಡಾ. ವ್ಹಿ. ಎಸ್. ಮಾಳಿಯವರು ಈ ಸಂದರ್ಭದಲ್ಲಿ ಸಂಸ್ಕೃತದ ವ್ಯಾಸ ಭಾಸರಂತಹ ಕವಿಗಳನ್ನು ಕನ್ನಡದ ಜೈನ, ಬ್ರಾಹ್ಮಣ ಕವಿಗಳನ್ನು ಆಮೂಲಾಗ್ರವಾಗಿ ಅಭ್ಯಸಿಸಿ ಅವೆಲ್ಲವುಗಳ ತೌಲನಿಕ ಅಧ್ಯಯನವನ್ನು ಮಾಡಿದ್ದಾರೆ. ಹಾಗೂ ವಿವಿಧ ಕನ್ನಡ ಕವಿಗಳಿಂದ ರಚಿಸಲ್ಪಟ್ಟ ಕನ್ನಡ ಭಾರತಗಳಲ್ಲಿ ಬಹು ವಿಶಿಷ್ಟವಾದ ಸಂಕೀರ್ಣವಾದ ಚಿಂತನೆಗೆ ನೂಕುವ ಕರ್ಣನನ್ನು ಕುರಿತು ಸಂಶೋಧನೆ ಮಾಡಿದ್ದಾರೆ. ಮಹಾಭಾರತ ಕಾವ್ಯದ ಪ್ರತಿ ಪಾತ್ರವು ತನ್ನದೇ ಆದ ವಿಶೇಷತೆಯನ್ನು ಹೊಂದಿದೆ

ಎನ್ನಬಹುದು. ಡಾ. ವ್ಹಿ. ಎಸ್. ಮಾಳಿಯವರ ಸಂಶೋಧನೆಗೆ ಆಯ್ಕೆ ಮಾಡಿಕೊಂಡ ವಿಷಯ ತುಂಬಾ ಮಹತ್ವ ಪೂರ್ಣದ್ದಾಗಿದೆ ಹಾಗೂ ಅಧ್ಯಯನಕ್ಕೆ ಯೋಗ್ಯವಾಗಿದೆ. ಮಹಾಭಾರತ ಕಾವ್ಯದಲ್ಲಿ ಇದೊಂದು ವಿಶಿಷ್ಟ ಪಾತ್ರ. ಅಂದಿನ ಕಾವ್ಯ ಹುಟ್ಟುವ ಸಮಯದ ಸಮಾಜದ ಹಲವು ಮುಖಗಳು ಹಿಡಿದ ಕನ್ನಡಿಯೇ ಕರ್ಣ ಪಾತ್ರವಾಗಿದೆ. ಓದುಗನನ್ನು ಪ್ರಜ್ಞಾ ಪರಿಸರದಲ್ಲಿ ಸೆಳೆದುಕೊಳ್ಳುತ್ತದೆ.

ಅವರ ಸಂಶೋಧನೆಯ ಉದ್ದೇಶ ಖಂಡಿತ ಯಶಸ್ಸುಗಳಿಸಿದೆ. ಅಧ್ಯಯನ ಸ್ವರೂಪ ಮತ್ತು ವಿಶಾಲವಾಗಿದೆ ಹಾಗೂ ಸೂಕ್ಷ್ಮತೆಯಿಂದ ಸಮಗ್ರವಾಗಿದೆ. ದೃಷ್ಟಿಯಿಂದಲೂ ತೌಲನಿಕ ಅಧ್ಯಯನಕ್ಕೆ ಮಾದರಿಯಾಗಿದೆ. ಕನ್ನಡ ಮಹಾಕವಿ ಪಂಪ, ರನ್ನ, ಕುಮಾರವ್ಯಾಸರನ್ನು ಮಾತ್ರ ಪ್ರಾತಿನಿಧಿಕವಾಗಿ ಆಯ್ಕೆ ಮಾಡಿಕೊಂಡಿದ್ದಾರೆ. ಅನುಷಂಗಿಕವಾಗಿ ಬೇರೆ ಬೇರೆ ಕವಿಗಳ ಭಾರತವನ್ನು ಉಪಯೋಗಿಸಿದ್ದಾರೆ. ಕರ್ಣನ ಆದಿಮಧ್ಯಾಂತ ಸಹಿತ ಬದುಕಿನ ಮಜಲುಗಳನ್ನು ತಾರ್ಕಿಕವಾಗಿ ಝುರಡಿ ಹಿಡಿದು ಸೋಸಿದ್ದಾರೆ. ತರ್ಕದ ಸಾಣೆ ಹಿಡಿದು ಹದನಗೊಳಿಸಿದ್ದಾರೆ. ಡಾ. ವ್ಹಿ. ಎಸ್. ಮಾಳಿಯವರ ಈ ಕಾರ್ಯ ಬಹುಶ್ರುತವಾಗಿದೆ. ಶ್ರೀಯುತ ಕರ್ಣನೆಂಬ ಪಾತ್ರವನ್ನು ಶೋಧಿಸುವುದರೊಂದಿಗೆ ಇಡೀ ಭಾರತ ಕಾವ್ಯವನ್ನೇ ಸಮೀಕ್ಷೆಗೆ ಒಳಪಡಿಸಿಕೊಂಡದ್ದು ವಿಶೇಷ ಅಂಶವಾಗಿದೆ.

ಪ್ರಾಚೀನ ಕನ್ನಡ ಮಹಾಭಾರತ ಕೃತಿಗಳನ್ನು ಶ್ರೀಯುತರು ಒಂದರ್ಥದಲ್ಲಿ ಪುನರ್ಹ ಮೌಲ್ಯಮಾಪನ ಮಾಡಿದ್ದಾರೆ. ಪಂಪ, ರನ್ನ, ಕುಮಾರವ್ಯಾಸರಂತಹ ಮಹಾಕವಿಗಳ ಬಗೆಗೆ, ಅವರ ಸಾಹಿತ್ಯದ ಮೌಲ್ಯವನ್ನು ಪ್ರಸ್ತುತ ಪರಿಸ್ಥಿತಿಗೆ ಓದುಗರಿಗೆ ಹೊಸ ನೋಟದೊಂದಿಗೆ ದೃಷ್ಟೀಕರಿಸುವುದೇ ಸಂಶೋಧಕರ ಉದ್ದೇಶವಾಗಿದೆ. ಇಲ್ಲಿ ಸಂಶೋಧಕ ಉದ್ದೇಶ ಪೂರ್ಣ ಪ್ರಮಾಣದಲ್ಲಿ ಯಶಸ್ಸು ಕಂಡಿದೆ.

ಸಂಸ್ಕೃತ, ಕನ್ನಡದ ಮಹಾಭಾರತದ ಕಾವ್ಯಗಳನ್ನು ಡಾ. ವ್ಹಿ. ಎಸ್. ಮಾಳಿಯವರು ವಿಭಿನ್ನ ದೃಷ್ಟಿಕೋನಗಳಿಂದ ವಿಶ್ಲೇಷಿಸಿದ್ದಾರೆ. ಸಂಸ್ಕೃತದ ವ್ಯಾಸರು ಕಟ್ಟಿಕೊಟ್ಟ ಕರ್ಣನ ಪಾತ್ರಕ್ಕೋ ಕನ್ನಡ ಕವಿಗಳು ಕರ್ಣನ ಪಾತ್ರವನ್ನು ಚಿತ್ರಿಸಿದ ಶೈಲಿಗೂ ಇರುವ ವಿಭಿನ್ನ ನೋಟಗಳನ್ನು ಅಧ್ಯಯನದ ಮೂಲವಸ್ತುವನ್ನಾಗಿಸಿಕೊಂಡಿದ್ದಾರೆ. ವಿವಿಧ ಕವಿಗಳ ಪಾತ್ರ ಸಂಯೋಜನೆಯ ಮೂಲ ಉದ್ದೇಶಗಳನ್ನೆ ತರ್ಕದ ಸಾಣೆಗೆ ಹಿಡಿದು ಹಂಸ–ಕ್ಷೀರ ನ್ಯಾಯದಂತೆ ತುಲನೆ ಮಾಡಿದ್ದಾರೆ. ಅವರ ಹೊಸತನದ ಹುಡುಕಾಟವಿದೆ, ಹೊಸತನದ ಹಸಿವಿದೆ, ಸತ್ಯದ ಶೋಧನೆಯ ತುಡಿತವಿದೆ.

ಮಹಾಪ್ರಬಂಧದಲ್ಲಿ ಒಟ್ಟು ೮ (ಎಂಟು) ಅಧ್ಯಾಯಗಳಿವೆ. ಮಹಾಪ್ರಬಂಧದಲ್ಲಿ ಕರ್ಣನ ಬದುಕಿನ ಜೀವನ, ಜೀವಿತದ ಸ್ಥರಗಳನ್ನು ಡಾ. ವ್ಹಿ. ಎಸ್. ಮಾಳಿಯವರು ಮೂರು ಹಂತಗಳಲ್ಲಿ ಶೋಧಿಸಿ ಪ್ರತ್ಯೇಕಿಸಿ ಓದುಗರಿಗೆ ವಿಷಯ ಗ್ರಾಹ್ಯಕ್ಕೆ ಸರಳ ಸ್ಪಷ್ಟ ದಾರಿಯನ್ನೇ ಮಾಡಿಕೊಟ್ಟಿದ್ದಾರೆ. ಅವರ ಸಂಶೋಧನೆಯ ಜಾಡ ಸುಲಲಿತವಾಗಿದೆ. ಒಂದೇ ಮಾತಿನಲ್ಲಿ ಹೇಳಬಹುದಾದರೆ, ಮಹಾಭಾರತ

ಕಾವ್ಯವೆಂಬ ಮೊಸರನ್ನು ಕಡೆದು ಕರ್ಣನೆಂಬ ನವನೀತವನ್ನು ಓದುಗನ ಮನದೆಡೆಗೆ ಒಪ್ಪವಾಗಿಟ್ಟಿದ್ದಾರೆ. ಡಾ. ವ್ಹಿ. ಎಸ್. ಮಾಳಿಯವರ ಗ್ರಂಥದ ಪರಿವಿಡಿ ಹೀಗಿದೆ :

| | | | |
|---|---|---|---|
| ೧) | ಕನ್ನಡ ಭಾರತ ಭಾಂದವ್ಯ | ೨) | ರಾಧೇಯ – ಕರ್ಣ |
| ೩) | ಅಂಗಾಧಿಪತಿ – ಕರ್ಣ | ೪) | ಕೌಂತೆಯ – ಕರ್ಣ |
| ೫) | ಆಗಮಿಕರ – ಕರ್ಣ | ೬) | ವೈದಿಕರ – ಕರ್ಣ |
| ೭) | ಲೌಕಿಕರ – ಕರ್ಣ | ೮) | ವ್ಯಾಸ ಭಾಸರ – ಕರ್ಣ |

ಡಾ. ವ್ಹಿ. ಎಸ್. ಮಾಳಿಯವರು ಸಾಹಿತ್ಯಾಸಕ್ತರ ಸಾಹಿತ್ತಿಕ ಹಸಿವನ್ನೇ ಗುರಿಯಾಗಿಸಿಕೊಂಡೆ ಕರ್ಣನನ್ನು ಸಂಶೋಧಿಸಿದ್ದಾರೆ. ಆತನ ತನ್ಮೂಲಕ ವಿವಿಧ ಪ್ರಾಚೀನ ಕವಿಗಳ ಕವಿತ್ವದ ವಿರಾಟ ರೂಪದ ದರ್ಶನವನ್ನೇ ನಮಗೆ ಮಾಡಿಸಿದ್ದಾರೆ ಎಂದರೆ ತಪ್ಪಾಗಲಿಕ್ಕಿಲ್ಲ.

ಅಧ್ಯಯನದ ಸ್ವರೂಪವೇ ಹಿತ–ಮಿತವಾಗಿದೆ. ಎಲ್ಲಿಯೂ ಮಹಾಪ್ರಬಂಧವು ತನ್ನ ಚೌಕಟ್ಟಿನ ಗೌರವನ್ನು ದಾಟಿಲ್ಲ. ಮಹಾಪ್ರಬಂದದ ಚೌಕಟ್ಟಿನೊಳಗಡೆ ಡಾ. ವ್ಹಿ. ಎಸ್. ಮಾಳಿಯವರು ಅಳವಡಿಸಿಕೊಳ್ಳಬೇಕಾದ ತಮ್ಮ ಸಂಶೋಧನೆಯ ಕರ್ಣನನ್ನು ಬಹುಸುಂದರವಾಗಿ ಕಂಡರಿಸಿದ್ದಾರೆ. ಪ್ರಾಚೀನ ಕಾಲದ ಸಮಾಜದ ಸ್ಥಿತಿಗೆ ಇಂದಿನ ಪ್ರಸ್ತುತ ಸಮಾಜದ ಸ್ಥಿತಿಗೆ ಕರ್ಣನ ಪಾತ್ರದ ಮುಖಾ–ಮುಖಿಯಾಗಿಸಿ ವಾಸ್ತವಿಕ ನೆಲೆಗಟ್ಟಿನ ಮೇಲೆ ಅರ್ಥಪೂರ್ಣವಾಗಿ ವಿಮರ್ಶಿಸಿ ಸಂಶೋಧಿಸಿದ್ದಾರೆ. ಕರ್ಣನ ಪಾತ್ರದ ಜೀವಂತಿಕೆಯನ್ನು ಸಾರ್ವಕಾಲಿಕ ಪ್ರಸ್ತುತತೆಯನ್ನು ಎತ್ತಿ ಹಿಡಿದಿದ್ದಾರೆ.

ಡಾ. ವ್ಹಿ. ಎಸ್. ಮಾಳಿಯವರ ಸಂಶೋಧನೆಯ ಸ್ವರೂಪದಲ್ಲಿ ರಾಜಕೀಯ, ಸಾಮಾಜಿಕ, ತಾತ್ವಿಕ, ಸಾಹಿತ್ಯಿಕ ದೃಷ್ಟಿಕೋನಗಳಿವೆ. ಕರ್ಣ ಧೀಮಂತ, ತ್ಯಾಗಿ, ಸತ್ಯವಂತ, ಧೀರೋದಾತ್ತನಾಗಿ ಹೊರಹೊಮ್ಮುತ್ತಾನೆ. ಅಂದು ಇಂದಿನ ಸಮಾಜದ ಮುಖವಾಣಿಯಾಗುತ್ತಾನೆ. ಸಂಶೋಧಕರು ಕರ್ಣನಿಗೆ ಹೊಸ ಆಯಾಮವನ್ನೆ ಒದಗಿಸಿದ್ದಾರೆ. ಪ್ರಾಚೀನ ಕವಿಗಳ ಕಾವ್ಯ ರಚನೆಗೆಳ ಓರೆಕೋರೆಗಳನ್ನು ಎತ್ತಿ ತೋರಿಸಿದ್ದಾರೆ. ಅವರಲ್ಲಿಯ ಪಾತ್ರ ಜೋಡಣೆಯ ಅತಾರ್ಕಿಕತೆ ಪ್ರಶ್ನಿಸುತ್ತಾರೆ.

ಕೃತಿಗಳಲ್ಲಿ ಉಂಟಾದ ನ್ಯೂನ್ಯತೆಗಳನ್ನು ಗುರುತಿಸಿ ವಿಷಾದಿಸುತ್ತಾರೆ. ಉದಾಹರಣೆಗೆ ಪಂಪನ, ಕರ್ಣಸೃಷ್ಟಿ, ಪಂಪನ ದೃಷ್ಟಿಯಲ್ಲಿ ಕರ್ಣನು ಮೇರು ಪುರುಷನಾದರು ಸಹ ಆತನ ಕಾವ್ಯದ ನಾಯಕ ಅರ್ಜುನ ಆದ್ದುದ್ದರಿಂದ ಪಂಪನು ಕರ್ಣನನ್ನು ಗೌಣಸ್ಥಾನಕ್ಕೆ ಇಳಿಸುವ ಅನಿವಾರ್ಯಕ್ಕೆ ಸೋಲುತ್ತಾನೆ. ಇವನಂತೆ ರನ್ನ ಸಹ ಇನ್ನೂ ಕುಮಾರ ವ್ಯಾಸನಂತು ದುರಂತ ಕರ್ಣನನ್ನೇ ನಿರ್ಮಿಸಿದ್ದಾನೆ ಎಂದು ಅಭಿಪ್ರಾಯ ಪಡುತ್ತಾರೆ.

## ಕನ್ನಡ ಭಾರತ ಬಾಂಧವ್ಯ :

ಡಾ. ವ್ಹಿ. ಎಸ್. ಮಾಳಿಯವರು ಕನ್ನಡ ಭಾರತ ಬಾಂಧವ್ಯವನ್ನು ಐತಿಹಾಸಿಕ ಆಕರಗಳ ತಳಹದಿಯ ಮೇಲೆ ಸೂಕ್ತವಾಗಿ, ಸತ್ಯಕ್ಕೆ ಚ್ಯುತಿ ಬಾರದಂತೆ ಜೋಡಿಸಿಟ್ಟಿದ್ದಾರೆ.

ಹಿಮಾಲಯದಿಂದ ಕನ್ಯಾಕುಮಾರಿ ಭೂಶಿದವರೆಗೆ ಬೃಗುಕಚ್ಚದಿಂದ ಕಾಮರೂಪದವರೆಗೆ ಚಾಚಿಕೊಂಡಿರುವ ಭವ್ಯ ಭಾರತದ ತುಂಬೆಲ್ಲಾ ಸಾಂಸ್ಕೃತಿಕವಾಗಿ ಐಕ್ಯತೆಯನ್ನು ಮೇಳೈಸಿದುದೇ ವ್ಯಾಸರ ಮಹಾಭಾರತ ಕಾವ್ಯ. ರಾಮಾಯಣ ಮತ್ತು ಮಹಾಭಾರತಗಳು ಸನಾತನ ಸಂಸ್ಕೃತಿಯ ನಿರ್ಮಾತೃಗಳೆಂದರು ತಪ್ಪಾಗಲಿಕ್ಕಿಲ್ಲ. ಒಂದು ರೀತಿಯಲ್ಲಿ ಇವುಗಳು ಭಾರತೀಯರ ಜೀವನ ಉಸಿರಾಗಿವೆ. ಈ ಎರಡು ಕಾವ್ಯಗಳು ಸರ್ವ ಭಾರತೀಯ ಭಾಷೆಗಳಲ್ಲಿ ತರ್ಜುಮೆಗೊಂಡಿವೆ. ಜೊತೆಗೆ ಆಯಾ ಪ್ರಾದೇಶಿಕತೆಯ ನೆಲದ ಮಣ್ಣಿನ ವಾಸನೆಯಿಂದಲೂ ತಮ್ಮ ಮೂಲ ಸ್ವರೂಪಕ್ಕೆ ಬದಲಾವಣೆಯನ್ನು ಕಂಡಿವೆ.

"ರಾಮಾಯಣ – ಮಹಾಭಾರತಗಳು ಪೂಜನೀಯ ಸ್ವರೂಪವನ್ನು ಪಡೆದಿವೆ ಹಾಗೂ ಆಯಾ ಧರ್ಮಗಳ ಪ್ರಸಾರದ ಮಾಧ್ಯಮಗಳು ಸಹ ಆಗಿವೆ". ಮುಂದುವರೆದು ಹೀಗೆ ಹೇಳುತ್ತಾರೆ – 'ಮಹಾಭಾರತ ಕಾವ್ಯದಲ್ಲಿ ಇಲ್ಲದ್ದು ಈ ಲೋಕದಲ್ಲಿಯೇ ಇಲ್ಲ' ಜಗತ್ತಿನ ಎಲ್ಲ ಸಾಹಿತ್ಯ ಕೃತಿಗೂ ಮೂಲ ವಸ್ತು ಮಹಾಭಾರತ ಕಾವ್ಯವೇ ಆಗಿದೆ ಎಂಬುದನ್ನು ಒತ್ತಿ ಹೇಳಿದ್ದಾರೆ. 'ಜಗತ್ತೆಲ್ಲ ವ್ಯಾಸನ ಎಂಜಲು' ಎಂಬ ಉಕ್ತಿಯನ್ನು ಉದಾಹರಣೆ ನೀಡಿದ್ದಾರೆ.

ಡಾ. ವ್ಹಿ. ಎಸ್. ಮಾಳಿಯವರು ಅಭಿಪ್ರಾಯ ಸಾರ್ವತ್ರಿಕ ಸತ್ಯವೇ ಆಗಿದೆ. ಮಹಾಕವಿಗಳಾದ ಕುವೆಂಪುರವರ ಮಾತನ್ನು ಇಲ್ಲಿ ಸ್ಮರಿಸಬಹುದು. 'ಮಹಾಭಾರತವು ಅನೇಕ ಮಹಾಪುರುಷರ ಜೀವನ ವಾಹಿನಿಗಳಿಂದ ಕೂಡಿದ ಸರಿ ತಪ್ಪು, ಕಲೆಯ ಬಲೆ, ಮಣಿಯ ಗಣಿ, ವ್ಯಾಸನದೆ ಆದ ಅದ್ಭುತ ವಿಶ್ವ' ಎಂದಿದ್ದಾರೆ.

ಸೌಂದರ್ಯೋಪಾಸನೆಯೇ ಸಂಸ್ಕೃತಿ ಎನ್ನಬಹುದು. ಈ ಪರಿಕಲ್ಪನೆಯೇ ಸರ್ವಮಾನವ ಕುಲದ ಧ್ಯೇಯ. ಆನಂದದ ಅನ್ವೇಷಣೆಯೇ ಮನುಕುಲದ ಮೂಲ ಸ್ವಭಾವ. ಸೌಂದರ್ಯದ ಉಪಾಸನೆಯೇ ಆನಂದಕ್ಕೆ ಕಾರಣ. ಈ ಆನಂದದ ಹುಡುಕುವಿಕೆಯೇ ಸಾಹಿತ್ಯ ಸೃಷ್ಟಿಗೆ ಭೂಮಿಕೆ ಒದಗಿಸಿದೆ. ಅದಕ್ಕೆ ಕನ್ನಡ ಭಾಷಿಕರೆನು ಹೊರತಲ್ಲ.

ಹತ್ತನೇ ಶತಮಾನದ ಕಾವ್ಯಗಳ ಸೃಷ್ಟಿಯ ಅರುಣೋದಯ ಕಾಲ ಹಾಗೂ ರಾಜ, ಮಹಾರಾಜರು, ಸಾಮ್ರಾಜ್ಯ ಯುಗ, ರಾಜಸತ್ತೆಯ ವೈಭವದ ಕಾಲ. ಇದರೊಂದಿಗೆ ಸಮ್ಮಿಳಿತವಾದ ಕನ್ನಡ ಸಾಹಿತ್ಯವೂ ಸಹ ಸುವರ್ಣಯುಗವನ್ನು ಕಂಡಂತಹ ಕಾಲ. ಇಂತಹ ರಾಜಪ್ರಭುತ್ವದ ನೆರಳಲ್ಲಿ ಕನ್ನಡ ಕಾವ್ಯ

ಜಗತ್ತು ರಾಜಮಹಾರಾಜರ ಸಂತೋಷಕ್ಕಾಗಿ ಪ್ರತೀಷ್ಠೆಗಾಗಿ ಹಾಗೂ ಧರ್ಮ ಪ್ರಸಾರಕ್ಕಾಗಿ, ಪಾಂಡಿತ್ಯ ಪ್ರದರ್ಶನಕ್ಕಾಗಿ ಮೂಡಿ ಬಂದಿತು. ಹೀಗೆ ಯಾವುದೇ ಒಂದು ಕಾರಣಕ್ಕಾಗಿ ಉದಯಿಸಿದ ಕವಿ ಕಾವ್ಯ ಪರಂಪರೆ ಕನ್ನಡ ಸಹಿತ್ಯವನ್ನು ಇನ್ನಿಲ್ಲದಂತೆ ಶ್ರೀಮಂತ ಗೊಳಿಸಿದಂತು ಸತ್ಯ. ಇದರ ಬೆಳವಣಿಗೆ, ಲಕ್ಷಣಗಳನ್ನು ಅನಲಕ್ಷಿಸಿ ಡಾ. ವ್ಹಿ. ಎಸ್. ಮಾಳಿಯವರು ಕನ್ನಡ ಸಾಹಿತ್ಯದ ಬಾಂಧವ್ಯ ಮೂಲ ಭಾರತ ಕಾವ್ಯದ ಪ್ರೇರಣೆಯನ್ನು ಯಾವ ಯಾವ ವಿಭಿನ್ನತೆಯಿಂದ ಬೆಳೆದು ಬಂದಿತೆಂಬುದನ್ನು ಬಹು ವಿದ್ವತ್ಪೂರ್ಣವಾಗಿ ವರ್ಗಿಕರಿಸಿದ್ದಾರೆ. ಅವುಗಳ ವರ್ಗಿಕರಣ ಹೀಗಿದೆ :

**ಮಹಾಭಾರತ ಕಾವ್ಯ ಮತ್ತು ಕನ್ನಡ ಸಾಹಿತ್ಯ :**

೧) ಜೈನ ಕವಿಗಳ ಲೌಕಿಕ ಕಾವ್ಯಗಳಲ್ಲಿ ಭಾರತ

೨) ಜೈನ ಕವಿಗಳ ಆಗಮಿತ ಕಾವ್ಯಗಳಲ್ಲಿ ಭಾರತ

೩) ವೈದಿಕ ಕವಿಗಳ ಪಂಚಮವೇದ ಸ್ವರೂಪದಲ್ಲಿ ಭಾರತ

೪) ಹೊಸಗನ್ನಡ ಸಾಹಿತ್ಯದಲ್ಲಿ ಭಾರತ

**೧. ಜೈನ ಕವಿಗಳ ಲೌಕಿಕ ಕಾವ್ಯಗಳಲ್ಲಿ ಭಾರತ :**

ಜೈನ ಧರ್ಮಿಯರು ಮೂಲತಃ ಅಹಿಂಸಾ ತತ್ವ ಪ್ರತಿಪಾದಕರು. ಅದರೊಳಗೆ ಜೈನ ಕವಿಗಳಿಗೆ ರಾಜರ ಯುದ್ಧೋತ್ಸಾಹದ ಕಾವ್ಯಗಳನ್ನು ರಚಿಸುವುದು, ಧರ್ಮ ಸಂಕಟಕ್ಕೆ ಸಿಲಿಕಿಸಿದಂತೆ ಕಾಣುತ್ತದೆ. ಆದರೆ ರಾಜರ ಆಶ್ರಯವಿಲ್ಲದೆ ಆಗ ಕವಿಗಳಾಗಲಿ ಧರ್ಮಗಳಾಗಲಿ ಬದುಕುವುದು ದುಸ್ಸಾಧ್ಯವಾಗಿತ್ತು. ಇಂತಹ ಸಂಕ್ರಮಣ ಸ್ಥಿತಿಯ ಶಿಶುಗಳಾದ ಜೈನ ಕವಿಗಳು ತಮ್ಮ ಎರಡು ಉದ್ದೇಶಗಳನ್ನು ಸಿದ್ಧಿಸಿಕೊಳ್ಳಲು ಕಾವ್ಯಗಳನ್ನು ಬಳಸಿಕೊಂಡದ್ದು ಸ್ಪಷ್ಟವಾಗಿ ನಮಗೆ ಕಂಡು ಬರುತ್ತದೆ ಎಂದು ಡಾ. ವ್ಹಿ. ಎಸ್. ಮಾಳಿಯವರು ಅಭಿಪ್ರಾಯ ಪಡುತ್ತಾರೆ. ಇದಕ್ಕೆ ಉದಾಹರಣೆ : ಪಂಪನ 'ವಿಕ್ರಮಾರ್ಜುನ ವಿಜಯಂ', ರನ್ನನ 'ಸಾಹಸ ಭೀಮ ವಿಜಯಂ' ಹಾಗೂ ಭೂವನೈಕ್ಯ 'ರಾಮಾಭ್ಯುದಯಂ' ಹೀಗೆ ಮುಂತಾದವುಗಳು ಪಂಪ, ರನ್ನರ ಕಾವ್ಯಗಳು, ಮಹಾಭಾರತ ಕಾವ್ಯವನ್ನೇ ಮೂಲ ಕಥಾ ಹಂದರ ಹೊಂದಿದ್ದರು ಸಹ ಸಾಕಷ್ಟು ಬದಲಾವಣೆಯಿಂದ ಕೂಡಿವೆ. ಪಂಪ ಭಾರತವು, ವ್ಯಾಸ ಭಾರತದ ವಿಮರ್ಶನ ಕೃತಿಯಂತೆ ಕಾಣುತ್ತದೆ. ಹೊಸ ಚಿಂತನೆಯಿಂದ ಕೂಡಿದೆಯೆಂದು ಡಾ. ವ್ಹಿ. ಎಸ್. ಮಾಳಿಯವರ ಅಭಿಮತ, ಇನ್ನೂ ರನ್ನನ ಭಾರತವು ಭಾರತ ಕಾವ್ಯದ ಸಿಂಹವಲೋಕನವಾಗಿದೆ ಎಂದು ಅಭಿಪ್ರಾಯ ವ್ಯಕ್ತ ಪಡಿಸುತ್ತಾರೆ.

ಇವರಿಬ್ಬರ ಕಾವ್ಯಗಳು ವೈದಿಕ ಧರ್ಮದ ವಿರೋಧವನ್ನು ವ್ಯಕ್ತ ಪಡಿಸುವುದಕ್ಕಾಗಿಯೇ ನಿರ್ಮಿತವಾಗಿವೆ ಎಂಬುದು ಡಾ. ವ್ಹಿ. ಎಸ್. ಮಾಳಿಯವರ ಅನಿಸಿಕೆಯಾಗಿದೆ.

## ೨. ಜೈನ ಕವಿಗಳ ಆಗಮಿಕ ಕಾವ್ಯಗಳಲ್ಲಿ ಭಾರತ :

ಸಂಸ್ಕೃತ, ಪ್ರಾಕೃತ ಭಾಷೆಯಲ್ಲಿ ರಚಿಸಲಾದ ವೈದಿಕ ಸಾಹಿತ್ಯವನ್ನು ಜೈನ ಧರ್ಮದ ಕೃತಿಗಳಿಗೆ ಬೇಕಾದಂತೆ ವಿಷಯ ವಸ್ತುಗಳನ್ನು ಮಾರ್ಪಡಿಸಿ ಜೈನ ಧರ್ಮದ ಪುರಾಣಗಳನ್ನು ರಚಿಸುವ ಕಾರ್ಯ ಪ್ರಾರಂಭವಾಯಿತು. ಉದಾಹರಣೆ : ಹರಿವಂಶ, ಮಹಭಾರತ, ಭಾಗವತ ಪುರಾಣಗಳು. ಇವುಗಳನ್ನು ಜೈನ ಧರ್ಮದ ತತ್ವಗಳಿಗೆ ಹೊಂದಾಣಿಕೆ ಮಾಡಿಕೊಂಡು ಪರ್ಯಾಯ ಪಾತ್ರ ಸೃಷ್ಟಿಸಿ ಜೈನ ಆಗಮಿಕ ಕಾವ್ಯ ಪುರಾಣಗಳನ್ನು ರಚಿಸಲು ಪ್ರಾರಂಭಿಸಿದರು.

ಉದಾಹರಣೆ : ನೇಮಿನಾಥ ಪುರಾಣ ರಚನೆ ಇದು ಮಹಾಭಾರತದ ಪಡಿಚ್ಚಿನಂತೆ ಮೂಡಿ ಬಂದಿದೆ ಹಾಗೂ ಜಿನ ಭಾರತವೆಂದೇ ಪ್ರಸಿದ್ಧಿಯನ್ನು ಪಡೆದಿದೆ.

ಇದೇ ತೇರನಾಗಿ ಒಂಬತ್ತು ಜೈನ ಕವಿಗಳು ಆಗಮಿಕ ಭಾರತಗಳಿವೆ.

[೧] ಹರಿವಂಶ (ಕ್ರಿ.ಶ. ೯೦೦), [೨] ಚಾವುಂಡರಾಯ ಪುರಾಣ (ಕ್ರಿ.ಶ. ೯೮೦),
[೩] ನೇಮಿನಾಥ ಪುರಾಣ (ಕ್ರಿ.ಶ. ೧೧೬೫), [೪] ಹರಿವಂಶಾಭ್ಯುದಯಂ (ಕ್ರಿ.ಶ. ೧೨೦೦),
[೫] ಜೀನೇಶ ಸಂಗತಿ (ಕ್ರಿ.ಶ. ೧೫೧೦), [೬] ಸಾಳ್ವಭಾರತ (ಕ್ರಿ.ಶ. ೧೫೫೦) ಮುಂತಾದವುಗಳು.

## ೩. ವೈದಿಕ ಕವಿಗಳ ಪಂಚಮವೇದ ಸ್ವರೂಪದಲ್ಲಿ ಭಾರತ :

ಕನ್ನಡ ಸಾಹಿತ್ಯದ ಅರುಣೋದಯ ಪೂರ್ವದಲ್ಲಿಯೇ ಮಹಾಭಾರತ ಕಾವ್ಯವು ವೈದಿಕದ ಕವಿಗಳ ದೃಷ್ಟಿಯಲ್ಲಿ 'ಪಂಚಮವೇದ'ವೆನಿಸಿತ್ತು. ಭಾರತ ಕಾವ್ಯ ಸಾಗರದಲ್ಲಿ ವೈದಿಕ ಕವಿಗಳು ಭಾಗವತ – ಧರ್ಮ ಹಾಗೂ ಶ್ರೀ ಕೃಷ್ಣ ಭಕ್ತಿ ಪಾರಮ್ಯಕ್ಕೆ ಹೆಚ್ಚು ಆಕರ್ಷಿತರಾದರು. ಆದರೆ ಇಲ್ಲಿ ಉದಾಹರಿಸಬೇಕಾದ ಸಾಂದರ್ಭಿಕ ಸತ್ಯವೊಂದಿದೆ. ಅದುವೇ ರಾಜಕೀಯದ ವಿಪ್ಲವ ಕಾಲ. ಜೊತೆಗೆ ವಚನ ಸಾಹಿತ್ಯ ಉಗಮ. ಇವುಗಳ ವಜ್ರಾಘಾತಕ್ಕೆ ಜೈನಧರ್ಮ ಸಾಹಿತ್ಯ ಮಸಕುಮಸಕಾಯಿತು. ಮುಸ್ಲೀಮರ ಅವ್ಯಾಹಿತ ದಾಳಿಗಳು ಭಾರತವನ್ನು ಜರ್ಜರಿತಗೊಳಿಸಿದವು. ಧರ್ಮ ರಕ್ಷಣೆಗಾಗಿಯೇ ವಿಜಯನಗರ ಸಾಮ್ರಾಜ್ಯದ ಉದಯವಾಯಿತು. ಇಂತಹ ಸಂದಿಗ್ಧ ಕಾಲದಲ್ಲಿಯೇ ವೈದಿಕ ಪರವಾದ ಭಕ್ತಿ ಪಂಥಗಳು ಹುಟ್ಟಿ ಬಂದವು.

ಆ ಕಾಲಘಟ್ಟದಲ್ಲಿಯೇ ಮಹಾಭಾರತ ಕಥಾಂಶವುಳ್ಳ ಕೆಲವು ಕೃತಿಗಳು ಕನ್ನಡದಲ್ಲಿ ಮೂಡಿ ಬಂದಿವೆ.

ರುದ್ರಭಟ್ಟನ 'ಜಗನಾಥ ವಿಜಯ' – (ಕ್ರಿ.ಶ. ೧೧೮೦) ಚಾಂಡರಸನ 'ನಳಚರಿತ್ರೆ' – (ಕ್ರಿ.ಶ. ೧೩೦೦)
ಕುಮಾರ ವ್ಯಾಸನ 'ಕರ್ಣಾಟ ಭಾರತ ಕಥಾ ಮಂಜರಿ' ತಿಮ್ಮಣ್ಣ ಕವಿಯ – ಕೃಷ್ಣ ರಾಜ ಭಾರತ
ಲಕ್ಷ್ಮೀಶನ – ಜೈಮಿನಿ ಭಾರತ.

ಈ ಮೇಲಿನ ಸಂದರ್ಭದಲ್ಲಿ ಮಹಾಭಾರತವು ಭಾಗವತ ಸ್ವರೂಪವನ್ನೇ ತಾಳಿತು ಎನ್ನಬಹುದಾಗಿದೆ. ಲೋಕ ಪ್ರೀಯವ್ರೋ ಆಯಿತು ಹಾಗೂ ಪರಮ ವೇದದ ಸಾರವಾಗಿ ರಾಜ ಮನ್ನಣೆಯನ್ನು ಪಡೆಯಿತು ಎನ್ನಬಹುದು ಎಂದಿದ್ದಾರೆ ಡಾ. ವ್ಹಿ. ಎಸ್. ಮಾಳಿಯವರು. ಅದರಂತೆ ಪಂಚಮ ವೇದದ ಸ್ವರೂಪದಲ್ಲಿ ಕನ್ನಡದ ಭಾರತ ಕಾವ್ಯಗಳು ರಚಿತ ಕೃತಿಗಳನ್ನು ಡಾ. ವ್ಹಿ. ಎಸ್. ಮಾಳಿಯವರು ಹೀಗೆ ಪಟ್ಟಿಯನ್ನು ನೀಡುತ್ತಾರೆ.

- ಕರ್ಣಾಟ ಭಾರತ ಕಥಾ ಮಂಜರಿ
- ಕೃಷ್ಣ ರಾಜ ಭಾರತ
- ಪೌಲೋ ಮಾಸ್ತಿಕ ಪರ್ವ
- ಚಾಯಣ ಭಾರತ
- ನಳ ಚರಿತೆ
- ಜೈಮಿನಿ ಭಾರತ
- ಭಾರತ ತಾತ್ಪರ್ಯ ನಿರ್ಣಯ ಟೀಕೆ
- ಚಿತ್ರ ಭಾರತ
- ಕರ್ಣ ವೃತ್ತಾಂತ ಕಥೆ
- ಭಾರತ ಕಥಾ ಸಂಗ್ರಹ
- ಚಿಕ್ಕ ದೇವರಾಜ ಭಾರತ
- ಭಾರತ (ಸ್ತ್ರೀ ಪರ್ವ)
- ತುರಂಗ ಭಾರತ
- ನಳ ಚರಿತೆ (ನಾಟಕ)
- ಗಯೆ ಚರಿತೆ
- ಚಂದ್ರ ಹಾಸನ ಕಥೆ
- ಇಂದ್ರಕೀಲ ಚೌಪದನ
- ಕೃಷ್ಣರಾಜ ವಾಣೀ ವಿಲಾಸ ಭಾರತ
- ಅಭಿಮನ್ಯು ಕಾಳಗ
- ಚಿತ್ರ ಸೇನ ಕಾಳಗ

ಇಲ್ಲಿ ಇನ್ನೊಂದು ವಿಶೇಷತೆಯನ್ನು ಡಾ. ವ್ಹಿ. ಎಸ್. ಮಾಳಿಯವರು ಸೂಚಿಸುತ್ತಾರೆ. ಅದೇನೆಂದರೆ ವೀರಶೈವ ಸಾಹಿತ್ಯದ ಬಗ್ಗೆ. ಅವರು ಶಿವಪಾರಮ್ಯವನ್ನು ಸಾರುವ ಉದ್ದೇಶದಿಂದ ಭಾರತ ಕಾವ್ಯವನ್ನು ಉಪೇಕ್ಷಿಸಿದ್ದಾರೆ ಎಂದಿದ್ದಾರೆ. ಆದರೆ ವೀರಶೈವ ಕವಿಗಳು ಮಹಾಭಾರತ ಕಾವ್ಯದ ಆಕರ್ಷಣೆಯಿಂದ ಹೊರತಾಗಿಲ್ಲ ಎಂದಿದ್ದಾರೆ.

ಉದಾ : ರಾಘವಾಂಕನ ಹರಿಶ್ಚಂದ್ರ ಕಾವ್ಯ. ಷಡಕ್ಷರನ ಶಬರ ಶಂಕರ ವಿಳಾಸ ಮುಂತಾದವುಗಳು.

## ೪. ಹೊಸಗನ್ನಡ ಸಾಹಿತ್ಯದಲ್ಲಿ ಭಾರತ :

೧೮೪೪ ರ ಕಾಲ ಹೊಸಗನ್ನಡ ಸಾಹಿತ್ಯದ ಅರುಣೋಧಯ ಕಾಲ. ಮುಮ್ಮಡಿ ಕೃಷ್ಣರಾಜ ಒಡೆಯರು 'ಕೃಷ್ಣರಾಜ ವಾಣೀ ವಿಲಾಸ' ಕನ್ನಡು ಟೀಕು ಎಂಬ ಗ್ರಂಥವನ್ನು ರಚಿಸಿದರು.

ಶ್ರೀ ಮಹಾಭಾರತವೂ ಕರ್ಣಾಟಕ ವಚನವೂ ನಂತರ ಗಳಗನಾಥರ ಸಚಿತ್ರ ಮಹಾಭಾರತಾಮೃತ, ಎ. ಆರ್. ಕೃಷ್ಣ ಶಾಸ್ತ್ರೀಯವರ ವಚನ ಭಾರತ ಹೀಗೆ ಕನ್ನಡ ಸಾಹಿತ್ಯದಲ್ಲಿ ವಿಫಲವಾದ ಭಾರತ ಕಾವ್ಯದ ವಿಭಿನ್ನ ರೂಪಗಳ ಸಾಹಿತ್ಯದ ರಾಶಿಯೇ ಬೆಳೆದು ಬಂದಿತೆನ್ನಬಹುದು.

ಉದಾಹರಣೆ : ಬಿ. ಎಂ. ಶ್ರೀಕಂಠಯ್ಯನವರು 'ಅಶ್ವತ್ಥಾಮನ', ಕುವೆಂಪುರವರ 'ಸ್ಮಶಾನ ಕುರುಕ್ಷೇತ್ರ' ಹಾಗೂ 'ಕಾನೀನ', ಶ್ರೀ ರಂಗರ 'ರಂಗಭಾರತ' ಹೀಗೆ ಹಲವಾರು ಕೃತಿಗಳನ್ನು ಇಲ್ಲಿ ಉದಾಹರಿಸಬಹುದಾಗಿದೆ. ಕನ್ನಡ ಲೋಕದ ವಿಶಿಷ್ಟ ಕೊಡುಗೆಯಾದ ಶ್ರೀ ಎಸ್. ಎಲ್. ಭೈರಪ್ಪನವರ 'ಪರ್ವ' ಕಾದಂಬರಿಯನ್ನು ವಂಶಿಯವರ 'ಮಹಾಭಾರತ ಸತ್ಯಕಾಮರ ಆಹುತಿ', ಅಧ್ಯರಾಮಾಚಾರ್ಯರ 'ಧನಂಜಯ', ಮಾಸ್ತಿಯವರ 'ಭಾರತ ತೀರ್ಥ' ಇತ್ಯಾಧಿಗಳನ್ನು ಹೊಸಗನ್ನಡ ಸಾಹಿತ್ಯದಲ್ಲಿ ಭಾರತ ಮಹಾಕಾವ್ಯದ ಬಾಂಧವ್ಯ ಕುರಿತಾಗಿ ವಿಸ್ತೃತವಾಗಿ ಚರ್ಚಿಸಿದ್ದಾರೆ.

**ಕರ್ಣ : ಘಟ್ಟ – ಒಂದು :**

ಡಾ. ವ್ಹಿ. ಎಸ್. ಮಾಳಿಯವರು ಕರ್ಣನ ಪಾತ್ರವನ್ನು ಆಳವಾಗಿ ಅಧ್ಯಯಿನಿಸಿ ಹಲವು ಆಕಾರಗಳಿಂದ ಆಯ್ದು ಸಮಗ್ರ ಕರ್ಣನ ಪಾತ್ರದ ಸ್ಪಷ್ಟ ಚಿತ್ರವನ್ನು ಆಮೂಲಾಗ್ರವಾಗಿ ಸಂಗ್ರಹಿಸಿ ನಮ್ಮ ಮುಂದೆ ಇರಿಸಿದ್ದಾರೆ. ಅವರು ಕಂಡುಕೊಂಡಂತೆ ಕರ್ಣನ ಬದುಕಿನ ಮೂರು ಮಜಲುಗಳನ್ನು ನಮ್ಮ ಮುಂದೆ ಸಾಕ್ಷಿ ಕರಿಸುತ್ತಾರೆ. ಅದರಲ್ಲಿ ನಾನೀಗ ಮೊದಲು ಮಜಲು ಅಥವಾ ಒಂದನೇ ಘಟ್ಟವನ್ನು ಪರಾಮರ್ಶಿಸುತ್ತಾ ಸಂಶೋಧನಾತ್ಮಕವಾಗಿ ವಿಷಯದ ವಿಶ್ಲೇಷಿಸುತ್ತೇನೆ.

ಈ ಅಧ್ಯಾಯದಲ್ಲಿ ಡಾ. ವ್ಹಿ. ಎಸ್. ಮಾಳಿಯವರು ಕರ್ಣನ ಜನನ ವೃತ್ತಾಂತದ ರಹಸ್ಯವನ್ನು ಜಾಗರೂಕತೆಯಿಂದ ವಿಮರ್ಶೆನೆಗೆ ಒಳಪಡಿಸಿದ್ದಾರೆ ಹಾಗೂ ಅವರು ಪಾಂಡಿತ್ಯ ಪೂರ್ಣವಾಗಿ ತಮ್ಮ ವಿಮರ್ಶನಕ್ಕೆ ಸಮರ್ಥನೆ ನೀಡಿದ್ದಾರೆ. ತಮ್ಮ ಸಂಶೋಧನಕ್ಕಾಗಿ ಜೈನ ಲೌಕಿಕ ಭಾರತ, ಕನ್ನಡ ವೈದಿಕ ಭಾರತ, ಸಾಹಿತ್ಯ ವಿಷಯಗಳ ಆಯಾಮಗಳನ್ನಾಗಿ ಬಳಸಿದ್ದಾರೆ. ಇವುಗಳ ಹೊರತಾದೊಂದು ತಮ್ಮ ಹೊಸದಾದ ಸಂಶೋಧನಾತ್ಮಕ ಹೊಳವನ್ನು ಕರ್ಣನ ಪಾತ್ರಕ್ಕೆ ನೀಡಿದ್ದಾರೆ.

ಡಾ. ವ್ಹಿ. ಎಸ್. ಮಾಳಿಯವರು ಮೂಲ ಭಾರತದ ವ್ಯಾಸ ಸೃಷ್ಟಿ ಕರ್ಣನ ಪಾತ್ರವನ್ನು ಹೀಗೆ ವಿಮರ್ಶಿಸುತ್ತಾರೆ. ಕುಂತಿ, ಭೋಜ ರಾಜನ ಸಾಕು ಮಗಳು, ಕುಂತಿ ಮೂಲ ಹೆಸರು ಪೃಥೆ (ಪೃಥೆಯ ಮಗನೇ ಪಾರ್ಥ) ಅವಳಿಗೆ ಮಹರ್ಷಿ ದುರ್ವಾಸರಿಂದ ಮಂತ್ರಗ್ರಾಮ ದೊರೆಯುತ್ತದೆ. ಆ ಮಂತ್ರಗ್ರಾಮದಿಂದ ಕುಂತಿ ತನ್ನಿಷ್ಟವಾದ ದೇವತೆಯನ್ನು ವಶವರ್ತಿ ಮಾಡಿಕೊಳ್ಳಬಹುದಾಗಿತ್ತು.

ಒಂದು ದಿನ ಕನ್ಯೆಯಾದ ಕುಂತಿಯು ಮಂತ್ರಗ್ರಾಮವನ್ನು ಪರೀಕ್ಷಿಸಲು ಕುತೂಹಲಿಯಾದಳು. ತತ್ಫಲವೇ ಕರ್ಣನ ಜನನವಾಯಿತು. ಅದು ಸೂರ್ಯದೇವನಿಂದ ಲೋಕಾಪವಾದಕ್ಕೆ ಹೆದರಿ ಕರ್ಣ ಶಿಶುವನ್ನು ಪೆಟ್ಟಿಗೆಯಲ್ಲಿ ಗಂಗೆಗೆ ಬಿಡುತ್ತಾಳೆ. ದುಃಖದಿಂದ ಗಳಗಳನೆ ಅಳುತ್ತಾಳೆ. ಮಗುವಿಗೆ ಮಂಗಳ ರಕ್ಷಣೆಯನ್ನು ಕಟ್ಟುತ್ತಾಳೆ. ಇದು ವ್ಯಾಸರ ಕರ್ಣನ ಜನನ ವೃತ್ತಾಂತ. ಈ ರೀತಿ ಕರ್ಣನು ದೈವ ದುರಂತನಾಗುತ್ತಾನೆ. ಕಾನಿನ ಎನಿಸಿಕೊಳ್ಳುತ್ತಾನೆ.

ಯೋಗ ಬಲದಿಂದ ಕರ್ಣನು ಇಲ್ಲಿ ಜನಿಸುತ್ತಾನೆ. ಆದರೆ ಮೂಲ ತಾಯಿಯಿಂದ ವಂಚಿತನಾಗುತ್ತಾನೆ. ಹಾಗೂ ಉನ್ನತ ಕುಲದಲ್ಲಿ ಜನಿಸಿದರು ಸಹ ರಾಧೇಯನಾಗುತ್ತಾನೆ.

ಎರಡನೆಯದಾಗಿ ಪಂಪನ ಕರ್ಣನ ಜನನವನ್ನು ಹೀಗೆ ವಿವರಿಸುತ್ತಾರೆ. ಡಾ. ವ್ಹಿ. ಎಸ್. ಮಾಳಿಯವರು ಕುಂತಿ ಭೋಜನ ಮಗಳು ಕುಂತಿಯು ದುರ್ವಾಸ ಮುನಿಗಳಿಂದ ಐದು ಮಂತ್ರಾಕ್ಷರಗಳನ್ನು ಪಡೆಯುತ್ತಾಳೆ. ದುರ್ವಾಸ ಮುನಿಗಳು ಕುಂತಿಗೆ ಐದು ಮಂತ್ರಾಕ್ಷರಗಳನ್ನು ನೀಡುತ್ತಾ ಹೀಗೆ ಹೇಳುತ್ತಾರೆ. “ಮಂತ್ರಾಕ್ಷರಂಗಳ ಸಾಹ್ವಾನಂಗೆಯ್ದು ನಿನ್ನ ಬಗೆಗೆ ಬಂದ ಪೋಲ್ವೆಯ ಮಕ್ಕಳಂ ಪಡೆವೆ”. ಇದು ಪಂ ಭಾರತದಲ್ಲಿ ಪಂಪನ ಮಾತು. ಕುಂತಿ ಇಲ್ಲಿಯೂ ಸಹ ದುರ್ವಾಸರ ಐದು ಮಂತ್ರಾಕ್ಷರಗಳಲ್ಲಿ ಒಂದನ್ನು ಪರೀಕ್ಷಿಸಿ ಸಂಕಟಕ್ಕೆ ಸಿಕ್ಕಿ ಹಾಕಿಕೊಳ್ಳುತ್ತಾಳೆ. ಅನಿವಾರ್ಯವಾಗಿ ಕನ್ಯಾ ಸ್ಥಿತಿಯಲ್ಲಿಯೇ ಕರ್ಣನನ್ನು ಪಡೆಯುತ್ತಾಳೆ.

ಪಂಪನು ಕರ್ಣನನ್ನು ಮೂಲ ಮಹಾಭಾರತದಲ್ಲಿದ್ದಂತೆಯೇ ವರ್ಣಿಸುವ ಪ್ರಯತ್ನ ಮಾಡಿದ್ದಾನೆ. ಮೂಲ ಭಾರತದಲ್ಲಿ ಕರ್ಣನು ಜನಿಸಿದಾಗ ಸಾಕ್ಷಾತ್ ಸೂರ್ಯನಂತೆಯೇ ಕರ್ಣ ಕುಂಡಲ, ಕವಚ ಸಮೇತ ಹುಟ್ಟುತ್ತಾನೆ ಎಂದಿದೆ. ಆದರೆ ಪಂಪನು ಆ ಮಾತುಗಳನ್ನು ಬದಲಿಸಿಲ್ಲ. ಆದರೆ ಪಂಪನ ಕುಂತಿಯ ಕರ್ಣನನ್ನು ಗಂಗೆಗೆ ನಿಧಿಯನ್ನು ಬಿಸಾಡುವಂತೆ ಹಾಕಿದಳು ಎಂದಿದ್ದಾನೆ.

ಮೂರನೆಯದಾಗಿ ಕವಿ ಕುಮಾರ ವ್ಯಾಸನು ಪಂಪನನ್ನೇ ಅನುಕರಿಸಿದ್ದನ್ನು ಗುರುತಿಸುತ್ತಾರೆ. ಕುಮಾರ ವ್ಯಾಸನು ಮೂಲ ಮಹಾಭಾರತದಲ್ಲಿಯಂತೆ ಕುಂತಿಯೂ ದುರ್ವಾಸ ಮುನಿಯನ್ನು ಸೇವೆಗೈದು ಪ್ರೀತಿಯನ್ನು ಗಳಿಸಿ ಐದು ಮಂತ್ರಾಕ್ಷರಗಳನ್ನು ಪಡೆದಳು ಎಂದಿದ್ದಾನೆ. ಈ ಪ್ರಸ್ತಾಪ ಪಂಪನ ಭಾರತದಲ್ಲಿ ಕಂಡು ಬರುವುದಿಲ್ಲ. ಅದರಂತೆ ಕುಮಾರ ವ್ಯಾಸನ ಕುಂತಿಯ ಕರ್ಣನನ್ನು ತ್ಯಜಿಸುವಾಗ ಯಾವುದೇ ವಿಕಾರಕ್ಕೆ ಒಳಗಾಗುವುದಿಲ್ಲ. ಇಲ್ಲಿ ಡಾ. ವ್ಹಿ. ಎಸ್. ಮಾಳಿಯವರು ಕುಮಾರ ವ್ಯಾಸನ ಒಂದು ಲಕ್ಷ್ಯ ಪದ್ಯವನ್ನು ಮುಂದಿಡುತ್ತಾರೆ.

**“ಮಗುವುತನದಲಿ ಬೊಂಬೆಯಾಟಕೆ**
**ಮಗುವನೇ ತಹನೆಂದು ಬಂದಳು**
**ಗಗನ ನದಿಯಲಿ ಮಿಂದಳುಟ್ಟಳು ಲೋಹಿತಾಂಬರವ ।**
**ವಿಗಡ ಮುನಿಪನ ಮಂತ್ರವನು ನಾ**
**ಲಗೆಗೆ ತಂದಳು ರಾಗರಸದಲಿ**
**ಗಗನ ಮಣಿಯ ನೋಡಿ ಕಣ್ಮುಚ್ಚಿದಳು ಯೋಗದಲಿ” ॥**

ಇಲ್ಲಿ ಕುಮಾರ ವ್ಯಾಸನು ಕುಂತಿಯನ್ನು ಬಾಲೆಯಂತೆ ಚಿತ್ರಿಸುತ್ತಾನೆ. ಆದರೆ ವ್ಯಾಸ, ಪಂಪರು ಕುಂತಿಯನ್ನು ಯವ್ವನೆ ಕನ್ಯೆಯಂತೆ ಚಿತ್ರಿಸುತ್ತಾರೆ. ಇವುಗಳಲ್ಲಿಯ ಪಾತ್ರ ಸೃಷ್ಟಿಯ ವ್ಯತ್ಯಾಸವನ್ನು ಡಾ. ವ್ಹಿ. ಎಸ್. ಮಾಳಿಯವರು ಕುಮಾರ ವ್ಯಾಸನ ಕುಂತಿಯನ್ನೇ ಯೋಚಿಸುತ್ತಾರೆ. ಇಲ್ಲಿ ಬಾಲ್ಯಯಾದವಳು ಮಗುವನ್ನು ಪಡೆಯಲು ಅರ್ಹಳೆ ಎಂದು ವ್ಯಾಸ, ಪಂಪರ ಚಿತ್ರಣವನ್ನು ಒಪ್ಪುತ್ತಾರೆ.

ಡಾ. ವ್ಹಿ. ಎಸ್. ಮಾಳಿಯವರು ತಾರ್ಕಿಕವಾಗಿ ಕರ್ಣನ ಬದುಕಿನ ಮೊದಲಾದದ್ದನ್ನು ಪರಾಮರ್ಶಿಸಲು ತೊಡಗುತ್ತಾರೆ. ಗಂಗೆಯಲ್ಲಿ ತೇಲಿ ಬಿಟ್ಟ ವ್ಯಾಸನ ಕರ್ಣ, ಅಧಿರಥನೆಂಬ ಸೂತಕ ಒಡೆಯ ಹಾಗೂ ದೃತರಾಷ್ಟ್ರನ ಸ್ನೇಹಿತನಿಗೆ ದೊರೆಯುತ್ತಾನೆ. ಅದೃಷ್ಟವಶಾತ ಅಧಿರಥನಿಗೆ ಗಂಡು ಸಂತಾನ ಇರುವುದಿಲ್ಲ. ಆದುದರಿಂದ ಅಧಿರಥನು ಹರ್ಷಿತನಾಗುತ್ತಾನೆ. ಈ ಕಾರಣದಿಂದ ಕರ್ಣನು ಸೂತ ಪುತ್ರನಾಗುತ್ತಾನೆ.

ಪಂಪನ ಕರ್ಣನು ನೇರವಾಗಿ ಸೂತನ ಕೈಸೇರಿ ಸೂತ ಪುತ್ರನಾಗುತ್ತಾನೆ. ಸೂತನಿಗೆ ನಿಧಿಯೇ ದೊರಕಿದಂತೆ ಆಗುತ್ತದೆ ಎಂದು ಪಂಪ ಹೇಳಿದ್ದಾನೆ. ವ್ಯಾಸ ಭಾರತದ ಕರ್ಣನ ಜನನಕ್ಕೂ ಸೂತ ಪುತ್ರನಾಗುವುದಕ್ಕೂ ಬಹಳ ವ್ಯತ್ಯಾಸ ಕಂಡುಬರುವುದಿಲ್ಲ. ಇನ್ನು ಕುಮಾರ ವ್ಯಾಸನ 'ಕರ್ಣಾಟ ಭಾರತ ಕಥಾ ಮಂಜರಿ'ಯಲ್ಲಿ ಕರ್ಣನನ್ನು ಶಿಶುಗಳರಸ ಎಂದು ವರ್ಣಿಸಿದ್ದಾನೆ. ಸೂರ್ಯ ಬಿಂಬದಂತಹ ಮಾಯಾ ಶಿಶು ಎಂಬಿತ್ಯಾದಿ ವರ್ಣನೆ ಬರುತ್ತದೆ. ಅದರೊಂದಿಗೆ ಕುಮಾರ ವ್ಯಾಸನು ಕುಂತಿಯನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುತ್ತಾನೆ. ಜೊತೆಗೆ ಕರ್ಣನನ್ನು ತುಂಬಾ ಪ್ರೀತಿಯಿಂದ ಸ್ವೀಕರಿಸುತ್ತಾನೆ. ಪುತ್ರೋತ್ಸವದ ಸಡಗರವನ್ನು ಕುಮಾರ ವ್ಯಾಸನ ಪದ್ಯ ಗಮನಿಸಬಹುದೆಂದು ಡಾ. ವ್ಹಿ. ಎಸ್. ಮಾಳಿಯವರು ಗಮನ ಸೆಳೆಯುತ್ತಾರೆ.

**"ಆದರಿಸಿದನು ರಾಧೆಯೇ ಮಗ**
**ನಾದನೆಂದುತ್ಸವವ ಮಾಡಿ ಮ**
**ಹೀ ದಿವಿಜರನು ದಾನಮಾನಂಗಳಲಿ ಸತ್ಕರಿಸಿ"**

ಮೂಲ ಮಹಾಭಾರತದ ವರ್ಣನೆಗಿಂತ ಸೂತ್ರ ಪುತ್ರನ ಪಾತ್ರವನ್ನು ಪಂಪ, ಕುಮಾರ ವ್ಯಾಸನು ವಿಭಿನ್ನ ರೂಪದಲ್ಲಿ ಚಿತ್ರಿಸಿದ್ದನ್ನು ಡಾ. ವ್ಹಿ. ಎಸ್. ಮಾಳಿಯವರು ಚರ್ಚಿಸಿದ್ದಾರೆ.

ಡಾ. ವ್ಹಿ. ಎಸ್. ಮಾಳಿಯವರು ಜಾತಿ ಸಂಕರದ ಸೂಕ್ಷ್ಮ ಎಳೆಗಳನ್ನು ಬಿಡಿಸಲು ಪ್ರಯತ್ನಿಸಿದ್ದಾರೆ. ಸೂತ ನೆಂದರೆ ಯಾರು? ಎಂಬ ಪ್ರಶ್ನೆಗೆ ಉತ್ತರವನ್ನು ಹುಡುಕಲು ಪ್ರಯತ್ನಿಸಿದ್ದಾರೆ. ಒಟ್ಟಿನಲ್ಲಿ ಕಾನೀನನಾದ ಕರ್ಣನು ದೈವ ದುರಂತದಿಂದ, ಸಮಾಜದ ನಿಯಮಗಳಿಗೆ ಬಲಿ ಪಶುವಾಗುತ್ತಾನೆ. ತನ್ನದಲ್ಲದ ತಪ್ಪಿಗೆ ರಾಧೇಯನಾಗಿ ಬೆಳೆಯುತ್ತಾನೆ. ವಸುಷೇಣನೆಂಬ ನಾಮಕರಣ ಪಡೆಯುತ್ತಾನೆ.

**ವಿದ್ಯಾಭ್ಯಾಸ :**

ಮಹರ್ಷಿ ವ್ಯಾಸರ ಕರ್ಣನು ದ್ರೋಣರಲ್ಲಿ ವಿದ್ಯಾಭ್ಯಾಸ ಮಾಡುತ್ತಾನೆ. ಅಲ್ಲಿ ಸೂಯೋಧನನ ಸಖ್ಯ ದೊರೆಯುತ್ತದೆ. ವ್ಯಾಸನ ಕರ್ಣ ಇಲ್ಲಿ ಮೇಲ್ಜಾತಿಯವನ ಸ್ಥಾನವನ್ನೇ ಪಡೆಯುತ್ತಾನೆ. ಪಂಪನು ಕರ್ಣನನ್ನು ಬೆಸ್ತನ ಮಗನೆಂದು ಹೇಳುತ್ತಾ, ಧನ, ಕನಕ ದಾನ ಮಾಡಿ ಕರ್ಣನಾದನೆಂದು ಹೇಳುತ್ತಾ ವಿರೋಧಾಭಾಸವನ್ನು ಸೃಷ್ಟಿಸುತ್ತಾನೆ.

ಕುಮಾರ ವ್ಯಾಸನು ಇಂತಹ ಗೊಂದಲವನ್ನು ಸೃಷ್ಟಿಸಿಲ್ಲ. ಆದರೆ ಪಂಪ, ಕುಮಾರ ವ್ಯಾಸನು ಮೂಲಭಾರತದಲ್ಲಿರುವಂತೆ ಪರಶುರಾಮನಲ್ಲಿ ವಿದ್ಯಾಭ್ಯಾಸ ಮಾಡಿದ ಕರ್ಣನನ್ನು ಒಪ್ಪಿದ್ದಾರೆ. ಹಾಗೂ ಶಾಪಗ್ರಸ್ತನಾದುದನ್ನು ಒಪ್ಪುತ್ತಾರೆ. ಇದೆ ಸಂದರ್ಭದಲ್ಲಿ ಒಪ್ಪುವಿಕೆಯ ವಿಧಾನದಲ್ಲಿ ಭಿನ್ನತೆಯನ್ನು ಕಾಯ್ದುಕೊಂಡಿದ್ದಾರೆ.

ಕುಮಾರ ವ್ಯಾಸ, ಕರ್ಣನ ತಂದೆಯಾರೆಂದು ತಿಳಿಸಿದ್ದಾರೆ. ಆದರೆ ಪಂಪನ ಕರ್ಣ ತಂದೆಯ ಬಗ್ಗೆ ತಿಳಿಸಿಲ್ಲ. ಇಲ್ಲೊಂದಿಷ್ಟು ವ್ಯತ್ಯಾಸ ಕಂಡುಬರುತ್ತದೆ. ಪಂಪ, ಕುಮಾರ ವ್ಯಾಸರ, ಕರ್ಣರುಗಳಲ್ಲಿ ಗುರಿಮಾತ್ರ ಒಂದೇ ಆಗಿದೆ, ತಾನು ಕೀರ್ತಿವಂತನಾಗಬೇಕೆಂಬುದು, ಜಗದೇಕವೀರ ಅರ್ಜುನನ್ನು ಸೋಲಿಸಬೇಕು ಎನ್ನುವುದು. ಪಂಪನ ಕರ್ಣ ತನ್ನ ಜಾತಿ ಕಳಂಕವನ್ನು ದಾನದಿಂದ, ಶೌರ್ಯದಿಂದ ಮೆಟ್ಟಿ ನಿಲ್ಲಬೇಕೆನ್ನುತ್ತಾನೆ. ಕುಮಾರ ವ್ಯಾಸನ ಕರ್ಣ ಮಾತ್ರ ಕುರುಕ್ಷೇತ್ರ ಯುದ್ಧದ ಸಮಯದವರೆಗೆ, ಕೃಷ್ಣನು ಹೇಳುವವರೆಗೆ ಸೂತ ಪುತ್ರನಾಗಿಯೇ ಉಳಿಯುತ್ತಾನೆ. ಇಲ್ಲಿ ವ್ಯಾಸರ ಕರ್ಣ ಪಾತ್ರಗಳಲ್ಲಿ ಸಾಮ್ಯತೆ ಇದೆ ಎಂದು ಡಾ. ವ್ಹಿ. ಎಸ್. ಮಾಳಿಯವರು ಗುರುತಿಸಿದ್ದಾರೆ. ಮೂಲ ಮಹಾಭಾರತದಲ್ಲಿ ಇರುವಂತೆಯೇ ಕುಮಾರ ವ್ಯಾಸನು ಕರ್ಣನನ್ನು ಅಲ್ಪ ಸ್ವಲ್ಪ ಬದಲಾವಣೆಗಳಿಂದ ಚಿತ್ರಿಸಿದ್ದಾನೆ. ಪಂಪನ ಕರ್ಣ ತೀರಾ ಭಿನ್ನವಾಗಿ ರೂಪಗೊಂಡಿದ್ದನ್ನು ಡಾ. ವ್ಹಿ. ಎಸ್. ಮಾಳಿಯವರು ಎತ್ತಿ ತೋರಿಸಿದ್ದಾರೆ.

ಶಸ್ತ್ರ ವಿದ್ಯಾ ಪ್ರೌಢಿಮೆಯ ಪ್ರದರ್ಶನದ ಕಾಲದಲ್ಲಿ ನಾವು ಕಾಣಬಹುದಾಗಿದೆ. ಕುಮಾರ ವ್ಯಾಸನು ಕರ್ಣನನ್ನು ಇಲ್ಲಿ ಸೂತ ಪುತ್ರನೆಂದು ಹೀನ ಕುಲದವನೆಂದು ಚಿತ್ರಿಸಿದ್ದಾನೆ. ಜೊತೆಗೆ ಕರ್ಣನನ್ನು ಬಾಯ್ಬಡಕನೆಂದು ಕೂಡಾ ಹೇಳಿದ್ದಾನೆ. ಆದರೆ ಪಂಪನ ಕರ್ಣನು ಹೀನಕುಲದವನು ಅಲ್ಲ, ಬಾಯ್ಬಿಡಕನೂ ಅಲ್ಲ, ಅವನೊಬ್ಬ ನಿಜ ಪರಾಕ್ರಮ ಶಾಲಿ, ಅದ್ಭುತ ವ್ಯಕ್ತಿ ಎಂದು ಚಿತ್ರಿಸಿದ್ದಾನೆ. ರಣರಂಗದ ಪ್ರದರ್ಶನ ಕಾಲಕ್ಕೆ ಕರ್ಣನು ನೇರವಾಗಿ ಅರ್ಜುನನ್ನೇ ಕೆಣಕುತ್ತಾನೆ. ಶೌರ್ಯ ಪ್ರದರ್ಶನಕ್ಕೆ ಆಹ್ವಾನಿಸುತ್ತಾನೆ. ಈ ಪ್ರಸಂಗದಲ್ಲಿ ಕುಲದ ಹೀನತೆ ಕರ್ಣನನ್ನು ಪಾರು ಮಾಡುತ್ತಾನೆ. ಕರ್ಣನನ್ನು ಅಂಗರಾಜ್ಯಾಧಿಪತಿ ಮಾಡಿ, ಕ್ಷತ್ರೀಯರ ಸುಲಿಗೆ ಸೇರಿಸುತ್ತಾನೆ. ಇಲ್ಲಿ ಮೂಲ ಭಾರತಕ್ಕೂ ಕನ್ನಡ ಭಾರತಗಳಿಗೂ ಹೆಚ್ಚಿನ ವ್ಯತ್ಯಾಸ ಕಂಡು ಬರುವುದಿಲ್ಲ.

ಕುಮಾರ ವ್ಯಾಸನ ಕರ್ಣನನ್ನು ಮೂಲ ಭಾರತ ಕಾವ್ಯದಲ್ಲಿರುವಂತೆ ಶೋಷಣೆಯ ವಸ್ತುವಾಗಿಸಿದ್ದಾರೆ. ಪಂಪನ ಕರ್ಣನನ್ನು ಜಾತಿ ಶೃಂಖಲೆಗಳಿಂದ ಮೇಲೆತ್ತಲು ಪ್ರಯತ್ನಿಸಿದ್ದಾನೆ ಎಂದಿರುವವರು ಸಂಶೋಧಕರು ಡಾ. ವ್ಹಿ. ಎಸ್. ಮಾಳಿಯವರು.

ಸುಯೋಧನನ ಪಾತ್ರದ ಮೂಲಕ ಡಾ. ವ್ಹಿ. ಎಸ್. ಮಾಳಿಯವರು ಅಂದಿನ ಕಾಲದ ರಾಜನೀತಿಯನ್ನು ಸ್ವಾರ್ಥದ ಹಾವನ್ನು, ಬದುಕಿನ ಹುತ್ತುಗಳಿಂದ ಹೊರತೆಗೆದು ತೋರಿಸಿದ್ದಾರೆ. ಡಾ. ವ್ಹಿ. ಎಸ್. ಮಾಳಿಯವರು ಪ್ರಶಂಸಾ ಸಾಹಿತ್ಯದ ಜೊತೆಗೆ ಶೋಧನೆಗೆ ಬೆಳಕು ಚೆಲ್ಲುತ್ತಾರೆ. ಇದೊಂದು ಮಹತ್ಕಾರ್ಯವೇ ಸರಿ ಎಂದು ಹೇಳಬಹುದು.

**ಕರ್ಣ – ಘಟ್ಟ : ಎರಡು :**

ಸುಯೋಧನನು ದುರ್ಯೋಧನನಾಗಿ ಇಡೀ ಭಾರತದ ಚಕ್ರವರ್ತಿಯಾಗಬೇಕೆಂಬ ಮಹತ್ವಾಕಾಂಕ್ಷೆಯ ಪ್ರಯತ್ನವೇ ಮಹಾಭಾರತದಲ್ಲಿ ಕರ್ಣನೊಂದು ದಾಳ. ಅದು ಧೂರ್ತ ದುರ್ಯೋಧನನ ಕೈಯಲ್ಲಿ ಆಗ ದುರ್ಯೋಧನನ ಹತ್ತಿರ ಮೂರು ದಾಳಗಳಿದ್ದವು. ಅವು –

೧) ದುಶ್ಯಾಸನ ೨) ಶಕುನಿ ೩) ಆಪ್ತ ಮಿತ್ರ ಕರ್ಣ.

ಡಾ. ವ್ಹಿ. ಎಸ್. ಮಾಳಿಯವರು ತಮ್ಮ ಸಂಶೋಧನಾ ಪ್ರಬಂಧದಲ್ಲಿ ಕರ್ಣನು ದುಷ್ಟ ಕೂಟದ ಸದಸ್ಯನೆಂಬ ದೋಷವನ್ನು ಅಳಿಸಿಹಾಕಲು ಪ್ರಯತ್ನಿಸಿದ್ದಾರೆ. ಅದರೊಂದಿಗೆ ಕರ್ಣನನ್ನು ಸಂಪೂರ್ಣವಾಗಿ ಪುರುಷೋತ್ತಮನೆಂದು ಚಿತ್ರಿಸಲು ಪ್ರಯತ್ನಿಸಿದ್ದಾರೆ. ವಿದ್ಯೆ, ಶೌರ್ಯಗಳು ಜಾತಿಯಿಂದ ಬರುವುದಿಲ್ಲ ಎಂಬುದನ್ನು ಸಮಾಜಕ್ಕೆ ತಿಳಿಸುವ ಸಾಹಸ ಮಾಡಿದ್ದಾರೆ. ಕರ್ಣನು ಸ್ನೇಹ ಭಾರವನ್ನು, ಋಣಭಾರವನ್ನು ಸುಯೋಧನ, ಕರ್ಣರ ಪಾತ್ರಗಳ ಮೂಲಕ ವಿಮರ್ಶಿಸಿದ್ದಾರೆ. ಈ ಅಧ್ಯಾಯದಲ್ಲಿ ಹಲವು ವ್ಯಾಸ ಭಾರತದ ಭಾಗಗಳು ಬರುತ್ತವೆ.

೧. **ಪಾರಿಬಾಲ ದೇಶದ ಆಕ್ರಮಣ :**

ಇದು ದ್ರೋಣರಿಗೆ ಗುರು ದಕ್ಷಿಣೆಯನ್ನು ಸಲ್ಲಿಸುವ ಉದ್ಯೋಗ ಪರ್ವ ಇಲ್ಲಿ ಕರ್ಣ ಸೋಲುತ್ತಾನೆ. ಆದರೆ ತಂತ್ರ ಗಾರಿಕೆಯಿಂದ ದುರ್ಯೋಧನ ಪಾಂಡವರನ್ನು ರಾಜ್ಯದಿಂದ ಹೊರಹಾಕುತ್ತಾರೆ. ವ್ಯಾಸ, ಕುಮಾರ ವ್ಯಾಸರು ಲಾಕ್ಷಾಗೃಹದ ಸನ್ನಿವೇಶವನ್ನು ರಚಿಸುತ್ತಾರೆ. ಅದು ದುರ್ಯೋಧನ, ಶಕುನಿಗಳಿಂದ ಇದಕ್ಕೆ ಪಂಪನು ಸ್ವಲ್ಪ ಬದಲಾವಣೆ ತಂದಿದ್ದಾನೆ. ಲಾಕ್ಷಾಗೃಹಕ್ಕೆ ಪಂಪ ಜತುಗೃಹವೆಂದಿದ್ದಾನೆ. ಹಾಗೂ ಇದರ ಸೂತ್ರಧಾರರು ದುರ್ಯೋಧನ ಹಾಗೂ ಪುರೋಚನ. ಇವರಿರ್ವರು ಈ ಲಾಕ್ಷಾಗೃಹ ವಂಚನೆಯ ನಾಟಕದಿಂದ ಕರ್ಣನನ್ನು ಮುಕ್ತವಿಟ್ಟಿದ್ದಾರೆ. ವ್ಯಾಸನ ಭಾರತದಲ್ಲಿ ಸ್ಪಷ್ಟತೆ ಇಲ್ಲ.

**೨. ಕಲಿಂಗ ರಾಜಕುಮಾರಿಯ ಗೆಲವು :**

ಕರ್ಣನು ಕಲಿಂಗ ದೇಶದ ರಾಜಕುಮಾರಿಯನ್ನು ಗೆದ್ದು ದುರ್ಯೋಧನನಿಗೆ ಕೊಡುತ್ತಾನೆ. ಜರಾಸಂಧನನ್ನು ಸಹ ಕರ್ಣ ಗೆಲ್ಲುತ್ತಾನೆ.

**೩. ದ್ರೌಪದಿ ಸ್ವಯಂವರ ಪ್ರಸಂಗ :**

ಇಲ್ಲಿ ಕರ್ಣನು ದ್ರೌಪದಿಯಿಂದಲೇ ಜಾತಿಹೀನತೆಗಾಗಿ ಅಪಮಾನಿತನಾಗುತ್ತಾನೆ. ಸೆಡಿಗಾಗಿ ನಿರ್ಧರಿಸುತ್ತಾನೆ. ಮೂಲ ಭಾರತದಲ್ಲಿ ಈ ಸನ್ನಿವೇಶವನ್ನು ಪಂಪನು, ಸರಳೀಕರಿಸಿದ್ದಾನೆ. 'ಸೂತ ಪುತ್ರನನ್ನು ವರಿಸಲಾರೆ' ಎಂದು ದ್ರೌಪದಿಯಿಂದ ಹೇಳಿಸಿ ಬಿಟ್ಟಿದ್ದಾನೆ. ಕುಮಾರ ವ್ಯಾಸನು ಕರ್ಣನನ್ನು ಸ್ವಯಂ ವರ ಸ್ಪರ್ಧೆಯಲ್ಲಿ ಸೋಲಿಸುತ್ತಾನೆ ಎಂಬುದನ್ನು ಹೇಳುವ ವಿಶೇಷತೆ ತುಂಬಿದ್ದಾನೆ.

**ಕರ್ಣಾರ್ಜುನರ ಪ್ರಥಮ ದ್ವಂದ್ವ ಯುದ್ಧ :**

ಇಲ್ಲಿ ದ್ರೌಪದಿಯ ಸ್ವಯಂ ವರದ ಸಂದರ್ಭದಲ್ಲಿಯ ಉಂಟಾದ ಯುದ್ಧದ ಚಿತ್ರಣವಿದೆ. ಇಲ್ಲಿಯೂ ಕರ್ಣ ಸೋಲುತ್ತಾನೆ. ಅದು ಕನ್ನಡ ಭಾರತದ ಚಿತ್ರಣ ಮೂಲ ಭಾರತದಲ್ಲಿ ಗೆಲ್ಲುತ್ತಾನೆ. ಇಲ್ಲೊಂದು ವಿಶೇಷತೆಯನ್ನು ಡಾ. ವ್ಹಿ. ಎಸ್. ಮಾಳಿಯವರು ಗುರುತಿಸಿದ್ದಾರೆ. ಧರ್ಮ ಸೂಕ್ಷ್ಮತೆಯಿಂದ ಅರ್ಜುನ ಬ್ರಾಹ್ಮಣ ವೇಷದಲ್ಲಿದ್ದ, ಹಾಗಾಗಿ ಅವನು ಬ್ರಾಹ್ಮಣನೆಂಬ ಕಾರಣಕ್ಕಾಗಿ ಕರ್ಣನು ಬಿಟ್ಟು ಕೊಟ್ಟಿದ್ದಾಗಿ ಹೇಳಿದ್ದಾರೆ. ಗೆಳೆಯನ ಹಿತಕ್ಕಾಗಿ ಕರ್ಣ ಇಲ್ಲಿ ಯುದ್ಧಕ್ಕೆ ತೊಡಗುತ್ತಾನೆ. ಸ್ವಾರ್ಥಕ್ಕಾಗಿಯಲ್ಲಾ ಎಂಬುದನ್ನು ಡಾ. ವ್ಹಿ. ಎಸ್. ಮಾಳಿಯವರು ಸ್ಪಷ್ಟವಾಗಿ ಕರ್ಣನ ಹೆಚ್ಚುಗಾರಿಕೆಯನ್ನು ಗುರುತಿಸಿದ್ದಾರೆ.

**ರಾಜಸೂಯ ಯಾಗ :**

ಮೂಲ ಭಾರತ ಕಾವ್ಯದಲ್ಲಿ ಈ ಪ್ರಸಂಗದಲ್ಲಿ ಕರ್ಣನ ಪಾತ್ರ ವಿಶೇಷವೇನು ಇಲ್ಲ. ಆದರೆ ಕುಮಾರ ವ್ಯಾಸನ ಭಾರತದಲ್ಲಿ ಸಣ್ಣದೊಂದು ಪಾತ್ರವಿದೆ.

**ದ್ಯೂತ ಪರ್ವ :**

ಈ ಅಧ್ಯಾಯವೇ ಮಹಾಭಾರತ ಕಾವ್ಯದ ಕೇಂದ್ರಬಿಂದು ಮೂಲ ಭಾರತದಲ್ಲಿ ಶಕುನಿಯ ದುಷ್ಟ ಮಂತ್ರಾಲೋಚನೆ ಕುಟಿಲ ನೀತಿ ಚಿತ್ರಿತವಾಗಿದೆ. ಕುಮಾರ ವ್ಯಾಸನು ಅದನ್ನೆ ಯಥಾವತ್ತಾಗಿ ಅನುಕರಿಸಿದ್ದಾನೆ. ಇವರುಗಳಂತೆಯೇ ಪಂಪನು ಸಹ ಕರ್ಣನನ್ನು ದುಷ್ಟ ಚತುಷ್ಟಯರಲ್ಲಿ ಸೇರಿಸಿ ಬಿಟ್ಟಿದ್ದಾನೆ. ದ್ಯೂತದಿಂದ ದುರ್ಯೋಧನ ಗೆಲ್ಲುತ್ತಾನೆ. ವ್ಯಾಸ ಭಾರತದ ಈ ಪ್ರಸಂಗದಲ್ಲಿ ಕರ್ಣನು ದುಃಶ್ಯಾಸನ ದುರ್ಯೋಧನನೊಂದಿಗೆ ಸೇರಿ ಕುಹಕವಾಗಿ ನಗುತ್ತಾರೆ. ಅನಾರ್ಯವರ್ತನೆಯ ದುಃಶ್ಯಾಸನನ ಕ್ರಿಯೆಗೆ ಕರ್ಣನು ಮಹದಾನಂದವನ್ನು ಪ್ರದರ್ಶಿಸುತ್ತಾನೆ. ಕುಮಾರ ವ್ಯಾಸನ ಕರ್ಣ ದ್ರೌಪದಿಯನ್ನು ವಿವಸ್ತ್ರಳಾಗಿಸುವೆನ್ನುವದಿಲ್ಲ. ಪಂಪನ ಭಾರತದಲ್ಲಿ ದ್ರೌಪದಿ ವಸ್ತ್ರಾಪಹರಣದ ಸನ್ನಿವೇಶವೇ ಇಲ್ಲ. ಕನ್ನಡ ಭಾರತಗಳಲ್ಲಿ ಕರ್ಣನು ಈ ವಸ್ತ್ರಾಪಹರಣದ ಹೇಯ ಕೃತ್ಯದಿಂದ ದೂರಿದ್ದಾನೆ. ಆದರೂ

ಕಠಿಣ ಮಾತುಗಳನ್ನು ದುರ್ಯೋಧನನ ಸಂತೃಪ್ತಿಗಾಗಿ ಆಡುತ್ತಾನೆ. ಅದಕ್ಕಾಗಿ ಅರ್ಜುನನು ಕರ್ಣವಧೆಯ ಪ್ರತಿಜ್ಞೆಯನ್ನು ಮಾಡುತ್ತಾನೆ.

**ಕರ್ಣ ಮತ್ತು ಪುನದ್ರ್ಯೂತ** :

ಮೊದಲಿಗೆ ಹೂಡಿದ ದುರ್ಯೋಧನ ಕುಟಿಲ ಧ್ಯೂತೋಪಾಯ ಯಶಸ್ವಿಯಾಗಲಿಲ್ಲ. ಅದಕ್ಕಾಗಿ ಮತ್ತೊಂದು ದ್ಯೂತ ಸಜ್ಜಾಗುತ್ತದೆ. ಮೂಲ ಭಾರತದಲ್ಲಿ ಇದರ ಸೂತ್ರಧಾರ ದುಃಶ್ಯಾಸನ, ಕುಮಾರ ವ್ಯಾಸನ ಭಾರತದಲ್ಲಿ ಕರ್ಣ – ಶಕುನಿಯರು ಸೂತ್ರಧಾರರು. ಪಂಪ ಭಾರತದಲ್ಲಿ ಈ ಸನ್ನಿವೇಶವನ್ನು ಆತ ರಚಿಸಿಯೇ ಇಲ್ಲ.

**ಕಾವ್ಯ ಕವನ** :

ಈ ಸನ್ನಿವೇಶವು ಮೂಲ ಭಾರತ ಕಾವ್ಯದ್ದು, ಕನ್ನಡ ಭಾರತಗಳಲ್ಲಿ ಈ ಸನ್ನಿವೇಶವೇ ಇಲ್ಲ.

**ಘೋಷ ಯಾತ್ರೆ** :

ಈ ಅಧ್ಯಾಯಕ್ಕೆ ಪಂಪ, ಕುಮಾರ ವ್ಯಾಸರು ತಮ್ಮದೇ ಆದ ವಿಶೇಷತೆ ಕವಿತ್ವದಲ್ಲಿ ತೋರಿಸಿದ್ದಾರೆ. ಕುಮಾರ ವ್ಯಾಸನು ೫ ಸಂದಿಗಳಷ್ಟು ದೀರ್ಘ ಕಾವ್ಯ ರಚಿಸಿದ್ದಾರೆ. ಪಂಪನು ಕೇವಲ ೭ (ಏಳು) ಪದ್ಯಗಳನ್ನು ಮೀಸಲಿಟ್ಟಿದ್ದಾನೆ. ಮೂಲ ಭಾರತದಲ್ಲಿ ೭೭ (ಏಪ್ಪತ್ತೇಳು) ಅಧ್ಯಾಯಗಳಿವೆ. ಇಲ್ಲಿ ಕರ್ಣನನ್ನು ಧೂರ್ತನನ್ನಾಗಿ ಚಿತ್ರಿಸಲಾಗಿದೆ. ದ್ವೈತ–ವನದ ವರ್ಣನೆ ಗಂದರ್ವರೊಂದಿಗೆ ಯುದ್ಧ ಇತ್ಯಾಧಿ ಸನ್ನಿವೇಶಗಳಿವೆ. ಇಲ್ಲಿ ಕರ್ಣನ ನಿಜ ಶೌರ್ಯವನ್ನು ಚಿತ್ರಿಸಲಾಗಿದೆ. ಆದರೆ ಕರ್ಣನು ಗಂಧರ್ವರೊಂದಿಗೆ ಹೋರಾಡಲು ಸಾಧ್ಯವಾಗದೆ, ಓಡಿ ಹೋಗುತ್ತಾನೆ. ಇದು ಮೂಲ ಭಾರತ, ಕುಮಾರ ವ್ಯಾಸನ ಭಾರತದ ತಾತ್ಪರ್ಯ – ಪಂಪನ ಭಾರತದಲ್ಲಿ ಇದು ಇಲ್ಲವೇ ಇಲ್ಲ ಎಂದು ಶೋಧಾಹರಣವಾಗಿ ಡಾ. ವ್ಹಿ. ಎಸ್. ಮಾಳಿಯವರು ಸಂಶೋಧನೆ ಗುರುತಿಸಬಹುದು.

**ಕುಂಡಲಾಹರಣ ಪ್ರಕರಣ** :

ವ್ಯಾಸರ ಪಾತ್ರ ನಿರ್ಮಾಣ ಅತ್ಯದ್ಭುತ. ಈ ಪ್ರಕರಣವು ಅತಿಮಾನವ ಶಕ್ತಿ ಆಶಯವನ್ನು ಹೊಂದಿದೆ. ಅರ್ಜುನನ ಹಿತಕ್ಕಾಗಿ ಇದೆ. ಕರ್ಣ ಪಾತ್ರ ಗರಿಮೆಯ ಮಹತ್ವವನ್ನು ಸಾರುತ್ತದೆ. ಆದರೆ ಈ ಕಥೆಯು ಮಹಾಭಾರತದಲ್ಲಿ ವ್ಯಾಸರು, ಕುಮಾರ ವ್ಯಾಸನು ಕಾವ್ಯದ ಮುಕ್ತಾಯದ ಹಂತದಲ್ಲಿ ನಿರೂಪಿಸಿದ್ದಾರೆ. ಆದರೆ ಪಂಪ ಭಾರತದಲ್ಲಿ ಮೊದಲಿಗೆ ಬಂದು ಹೋಗುತ್ತದೆ.

**ಶ್ರೀ ಕೃಷ್ಣ ಸಂಧಾನದ ಸನ್ನಿವೇಶ** :

ಕರ್ಣನು ಪಾಂಡವರೊಂದಿಗಿನ ಸಂಧಾನವನ್ನು ಒಪ್ಪುವುದಿಲ್ಲ. ದುರ್ಯೋಧನನ ಮನದ ಇಂಗಿತದಂತೆ ನಡೆಯುತ್ತಾನೆ. ಅದನ್ನೇ ನಾರಾಯಣಪ್ಪನು ಹೀಗೆ ಉದ್ಗರಿಸಿದ್ದಾನೆ :

"ಕೃಪಣಕನದಲಿ ಕೌರವನು ಗುರು
ಕೃಪನ ಭೀಷ್ಮನ ಮತವನೊಲ್ಲದೆ
ಚಪಳ ಕರ್ಣನ ಕೊಡಿ ನಿಶ್ಚಯಿಸಿದನು ಕಾಳಗವ"

ಇಲ್ಲಿ ಡಾ. ವ್ಹಿ. ಎಸ್. ಮಾಳಿಯವರು ಅತಿ ಕುತೂಹಲ ಭರಿತವಾದ ವಿಷಯವೊಂದನ್ನು ಪ್ರಸ್ತಾಪಿಸಿದ್ದಾರೆ. ನಾರಾಯಣಪ್ಪನ ಕರ್ಣ – ಕೃಷ್ಣನ ಪರಮ ಭಕ್ತಿ. ಜೊತೆಗೆ ಸುಯೋಧನನ ಆಪ್ತ ಗೆಳೆಯನು ಸಹ. ಹೀಗಿರುವಾಗ ಸಂಧಾನವನ್ನೆಕೆ ಒಪ್ಪಲಿಲ್ಲಾ ಎಂದು ಪ್ರಶ್ನಿಸಿರುವುದು ಅವರ ಚಿಂತನೆಗೆ ನಿದರ್ಶನವಾಗಿದೆ.

**ಅಂತಿಮ ತಿರುವು : ಕರ್ಣ – ಕೃಷ್ಣರ ಸಂದರ್ಶನ :**

ಮೂಲ ಭಾರತ ಉದ್ಯೋಗ ಪರ್ವದಲ್ಲಿ ಈ ಕಥೆ ಮೂಡಿ ಬಂದಿದೆ. ಕುಮಾರ ವ್ಯಾಸನು ೨೫ ಪದ್ಯಗಳಲ್ಲಿ ಪಂಪನು ಕೇವಲ ೬ ಪದ್ಯದಲ್ಲಿ ಈ ಸನ್ನಿವೇಶಗಳನ್ನು ಚಿತ್ರಿಸಿದ್ದಾನೆ. ಜನ್ಮ ರಹಸ್ಯ ಕೃಷ್ಣನಿಂದ ಬಯಲಾಗುತ್ತದೆ. ಒಂದು ಕಡೆ ಆತ್ಮೀಯ ಸ್ನೇಹಿತ ಸುಯೋಧನ ಇನ್ನೊಂದು ಕಡೆ ಸಹೋದರರಾದ ಪಾಂಡವರು. ಉಭಯ ಸಂಕಟದಲ್ಲಿ ಸಿಕ್ಕಿಕೊಂಡ ಕರ್ಣ ಯಾರಿಗೂ ಅನ್ಯಾಯ ವೆಸಗದ ಮೂರನೆಯ ಮಾರ್ಗವನ್ನು ಹುಡುಕಿಕೊಳ್ಳುತ್ತಾನೆ. ತಾನೇ ತನ್ನನ್ನು ಯುದ್ಧದಲ್ಲಿ ಅರ್ಪಿಸಿಕೊಳ್ಳುತ್ತಾನೆ. ಕೊನೆಗೂ ಕರ್ಣ ದುರಂತ ನಾಯಕನಾಗುತ್ತಾನೆ. ಪಂಪ, ಕುಮಾರ ವ್ಯಾಸರ ಕಾವ್ಯಗಳಿಂದ ಡಾ. ವ್ಹಿ. ಎಸ್. ಮಾಳಿಯವರು ಮಾರ್ಮಿಕವಾಗಿ ವಿಮರ್ಶಿಸಿದ್ದಾರೆ. 'ಜೋಳವಾಳಿಗೆ ಅನುಚಿತವಾಗಿ ನಡೆಯದವ ಕರ್ಣ'.

**ಕರ್ಣ – ಕುಂತಿಯರ ಸಂದರ್ಶನ :**

ಕುಂತಿಗೆ ಮಗನೆಂಬ ಮಮಕಾರ ಸಹಜವಾಗಿ ಇಲ್ಲಿ ವ್ಯಕ್ತವಾಗುತ್ತದೆ. ಆದರೂ ಅವಳು ಕುರುಕ್ಷೇತ್ರ ಯುದ್ಧದ ಅವಘಡಗಳನ್ನು ನೆನೆದು ತನ್ನ ಐವರು ಮಕ್ಕಳ ಒಳತಾಗಿ ಚಿಂತಿಸಿ ಕರ್ಣನನ್ನು ಸಂಧಿಸುತ್ತಾಳೆ. ಕರ್ಣನನ್ನು ಒಲಿಸಿಕೊಳ್ಳಲು ಪ್ರಯತ್ನಿಸುತ್ತಾಳೆ. ಅವಳ ಪ್ರಯತ್ನ ಅರೆ ಹುಸಿಯಾಗುತ್ತದೆ. ಅವಳಲ್ಲಿ ಕರ್ಣನೆ ಭಯ ಹುಟ್ಟಿಸುತ್ತಾನೆ. ಅವನೊಬ್ಬನೇ ಕುರು ಪಾಂಡವರಲ್ಲಿ ಅಸಹಾಯ ಶೂರನೆಂಬುದು ಗೊತ್ತು. ಕರ್ಣನು ತಾಯಿಯ ಮಾತನ್ನು ನಿರ್ದಾಕ್ಷಿಣವಾಗಿ ತಿರಸಕ್ರಿಸುತ್ತಾನೆ. ತನ್ನನ್ನು ನಂಬಿದ ಸುಯೋಧನನಿಗೆ ಎರಡು ಬಗೆಯಲಾರೆ ಎಂದು ಹೇಳುತ್ತಾನೆ. ಆದರೆ ತಾಯಿಗೆ ಗೌರವ ಕೊಡುತ್ತಾನೆ. ನಾಲ್ವರು ಪಾಂಡವರಿಗೆ ಜೀವದಾನ ಗೈಯುವ ಭಾಷೆ ನೀಡುತ್ತಾನೆ. ಹಾಗೂ ತೊಟ್ಟ ಬಾಣವನ್ನು ತೊಡುವುದಿಲ್ಲ ಎಂಬ ಭಾಷೆಯನ್ನು ಸಹ ನೀಡುತ್ತಾನೆ. ತ್ಯಾಗದ ಮೇರು ವ್ಯಕ್ತಿಯಾಗಿಯೇ ಕರ್ಣ ಉಳಿಯುತ್ತಾನೆ.

## ಕರ್ಣ : ಘಟ್ಟ ಮೂರು

ಈ ಅಧ್ಯಾಯದಲ್ಲಿ ಕೌಂತೇಯ ಕರ್ಣನ. ಸಂದಿಗ್ಧ ಬದುಕಿನ ಸಂಕೀರ್ಣ ಚಿತ್ರಣವಿದೆ. ಮೂಲ ಭಾರತ ಕನ್ನಡ ಭಾರತಗಳ ತುಲನಾತ್ಮಕ ಅಧ್ಯಯನ ಇಲ್ಲಿದೆ. ಕರ್ಣನ ಕುಲ ರಹಸ್ಯವಾಗಿಯೇ ಉಳಿದು ಆತನಿಗೆ ಉರುಳಾಗುತ್ತದೆ. ಕಥೆಯ ವಿಶೇಷ ಘಟ್ಟದವರೆಗೆ ಮುಂದುವರಿಯುತ್ತದೆ. ಕರ್ಣನ ಕುಲರಹಸ್ಯ ದುರ್ಯೋಧನನಿಗೆ ಗೊತ್ತಿದ್ದರೂ ಸ್ವಾರ್ಥಕ್ಕಾಗಿ ಮೌನವಹಿಸುತ್ತಾನೆ. ಆದರೆ ಜನ್ಮತಃ ಕ್ಷತ್ರೀಯನಾದ ಕರ್ಣ ಕ್ಷತ್ರೀಯ ಸಹಜ ಗುಣದಿಂದ ಬದುಕಲು ಪ್ರಯತ್ನಿಸುತ್ತಾನೆ. ನೂರೆಂಟು ಅಡೆತಡೆಗಳು ಆತನನ್ನು ಘಾಸಿಗೊಳಿಸುತ್ತವೆ.

ಆಕಸ್ಮಿಕವಾಗಿ ಕರ್ಣ ಅಂಗರಾಜ್ಯದ ರಾಜನಾಗುತ್ತಾನೆ. ಇವುಗಳ ಮಧ್ಯದಲ್ಲಿ ವಿದ್ಯಾರ್ಜನೆ ದೆಸೆಯಿಂದ ಅಪಮಾನಿತನಾಗುತ್ತಾನೆ. ತನ್ನಿಂದಾದ ತಪ್ಪಿಗಾಗಿ ಅಮಾಯಕನಾದ ಕರ್ಣ ಪರಶುರಾಮರಿಂದ ಶಾಪಗ್ರಸ್ತನಾಗುತ್ತಾನೆ. ಮೇಲ್ದರ್ಜೆಯ ವ್ಯಕ್ತಿಯಾಗಲು ಕೀರ್ತಿಗಳಿಸಲು ಮಹಾದಾನಿಯಾಗುತ್ತಾನೆ. ಆದರೂ ಜಾತಿಯ ಸೂತಕ ಬಿಡುವುದೇ ಇಲ್ಲ.

ಈ ಸಂದರ್ಭವನ್ನು ಡಾ. ವ್ಹಿ. ಎಸ್. ಮಾಳಿಯವರು ಔಚಿತ್ಯ ಪೂರ್ಣವಾಗಿ ವಿವೇಚಿಸಿದ್ದಾರೆ. ಪಂಪ, ನಾರಾಯಣಪ್ಪರ, ಕನ್ನಡ ಭಾರತಗಳನ್ನು ಮೂಲ ಭಾರತದ ಸೂಕ್ತ ಸಂದರ್ಭಗಳನ್ನು ಆಯ್ದು ಡಾ. ವ್ಹಿ. ಎಸ್. ಮಾಳಿಯವರು ವಿಶ್ಲೇಸಿದ್ದಾರೆ. ಕರ್ಣನಿಗೆ ಜನ್ಮ ರಹಸ್ಯ ತಿಳಿದಾಗ ಸಂತೋಷವಾಗುತ್ತದೆ. ಮಹಾಕವಿ ಪಂಪ ನಿರೂಪಿಸಿದ್ದು ಹೀಗೆ :

> **"ಚಲಮುಂ ಚಾಗಮುಮಳೆವುಂ**
> **ಕಲಿತನಮುಂ ಕುಲಮುಮೀಗಳೆನ್ನಯೆ ಮೆಯ್ಯೊಳ್**
> **ನೆಲಸಿದವು ನಿಮ್ಮ ಕರುಣಾ**
> **ಬಲದಿಂ ನೇವೆನ್ನನಿಂದು ಮಗನೆಂದುದಱಿಂ"**

ಕವಿಯ ಕಲ್ಪನಾ ವಿಲಾಸವನ್ನು ಡಾ. ವ್ಹಿ. ಎಸ್. ಮಾಳಿಯವರು ಮಾರ್ಮಿಕವಾಗಿ ಚರ್ಚಿಸಿದ್ದಾರೆ. ವ್ಯಾಸ – ಕರ್ಣನನ್ನು ಮೂರು ಪರಸ್ಪರ ವಿರುದ್ಧ ಸೆಳುವಿನ ಶಕ್ತಿಗೆ ಸಿಲುಕಿಸುತ್ತಾರೆ. ಹಾಗೆ ಸುಲಭವಾಗಿ ಪಾರು ಮಾಡುತ್ತಾರೆ. ಆದರೆ ಕನ್ನಡದ ಪಂಪ, ನಾರಾಯಣಪ್ಪರ ಕರ್ಣನನ್ನು ದ್ವಂದ್ವದಲ್ಲಿ ಮುಳಗಿಸುತ್ತಾರೆ.

ಕರ್ಣನು ಮೊದಲು, ಕನ್ನಡದ ಕಾವ್ಯ ಸಂದರ್ಭದಲ್ಲಿ ರಾಧೇಯ. ಎರಡನೆಯದು ಅಂಗಾಧಿಪತಿ ರಾಧೇಯ. ಮೂರನೆಯ ಘಟ್ಟದಲ್ಲಿ ಕೌಂತೇಯ ತೀರ ಮಾನಸಿದ ಸಂಘರ್ಷದಲ್ಲಿ ಸಿಲುಕಿಕೊಳ್ಳುವ ಪಾತ್ರ ಇತ್ತ ಕೌಂತೇಯನೋ ಅಲ್ಲ. ಅತ್ತ ಅಂಗಾಧಿಪತಿ ಕರ್ಣನು ಅಲ್ಲ, ರಾಧೇಯನು ಅಲ್ಲ. ಅಥವಾ

ಎಲ್ಲವೂ ಒಂದೇ ವ್ಯಕ್ತಿತ್ವದಲ್ಲಿ ಮೂರು ವ್ಯಕ್ತಿತ್ವಗಳ ಪ್ರವೇಶ. ಕರ್ಣನು ಗೊಂದಲದ ಗೂಡಾದ ವಿಚಿತ್ರ ಸಂಘರ್ಷದ ಸನ್ನಿವೇಶ. ಶಾಂತವಾಗಿ ನಿಂತ ಮಾನಸ ಸರೋವರಕ್ಕೆ ದುರ್ಯೋಧನ, ಕುಂತಿ, ಕೃಷ್ಣ ಕಲ್ಲೆಸೆಯುತ್ತಾರೆ. ಜೊತೆಗೆ ಇಂದ್ರನು ಸಹ ಆತನನ್ನು ದುರ್ಬಲನನಾಗಿಸುತ್ತಾನೆ. ಕರ್ಣನ ಕ್ಷಾತ್ರತೆ, ನನ್ನಿತನ, ಸ್ನೇಹ, ನಿಷ್ಠೆಗಳೆಲ್ಲವು ಕಷ್ಟಗಳ ಕುಲಮೆಗಳಲ್ಲಿ ಬೆಂದು ಪರಿಶುದ್ಧವಾಗಿ ಹೊರಹೊಮ್ಮುವುದೇ ಈ ಘಟ್ಟದಲ್ಲಿ ಕರ್ಣನು ಪರಿಶುದ್ಧ ಅಪರಂಜಿ ಚಿನ್ನ ಎಂಬುದನ್ನು ಡಾ. ವ್ಹಿ. ಎಸ್. ಮಾಳಿಯವರು ಅಧ್ಯಾಯದಲ್ಲಿ ಸಾಧಾರವಾಗಿ ನಿರೂಪಿಸಿದ್ದಾರೆ. ಮಹಾಭಾರತಗಳು ಪಾಂಡವರ ಪರವಾಗಿವೆ ನಿರ್ಭಾಗ್ಯ ಕೌಂತೇಯ ಕರ್ಣನ ದುರಂತ ಚಿತ್ರಣವೇ ಬರೆಯಲ್ಪಟ್ಟಿವೆ.

ಮಹಾಭಾರತದ ಕಥಾ ನಾಯಕರಾದ ಕೃಷ್ಣ – ಪಾಂಡವರು ಇಲ್ಲಿ ಗೆಲ್ಲುವುದು ಸಹಜ. ಕಥೆಗಾರನ ಉದ್ದೇಶವೇ ಅದಾಗಿರುವಾಗ ಕರ್ಣನ ಪಾತ್ರವನ್ನು ಕೆಳಗೆ ನೂಕದೆ ಪ್ರತಿನಾಯಕನಂತೆ ಚಿತ್ರಸಲಾಗಿದೆ. ವ್ಯಾಸ ಭಾರತದ ಕರ್ಣ ದುಷ್ಟ ಚತುಷ್ಟಯರಲ್ಲಿ ಒಬ್ಬ. ಆದರೆ ಕನ್ನಡದ ಮಹಾಭಾರತಗಳಲ್ಲಿ ಕರ್ಣ ಧೀರೋದಾತ್ತನಾಗಿ, ದುರಂತ ನಾಯಕನಾಗಿ, ಕೊಡುಗೈ ದಾನಿಯಾಗಿ, ದೈವ ದುರಂತವಾಗಿ ಚಿತ್ರಿತನಾಗಿರುವುದು ವಿಶೇಷವಾಗಿದೆ. ಆಶ್ರಯದಾತನಾದ ಅರಿಕೇಸರಿ ಅರ್ಜುನನೊಡನೆ ಹೋಲಿಸಿದ್ದಾರೆ. ಪ್ರತಿನಾಯಕ ಕರ್ಣನನ್ನು ಪಂಪ ಮನಸಾರಿ ಕೊಂಡಾಡಿದ್ದಾರೆ. ಆತನ ಘನತೆಯನ್ನು ಚಿತ್ರಿಸುತ್ತ 'ಕರ್ಣ ರಸಾಯನಮಾಯ್ತು ಭಾರತಂ' ಎಂದಿದ್ದು ಗಮನಾರ್ಹ. ಡಾ. ವ್ಹಿ. ಎಸ್. ಮಾಳಿಯವರು ಕನ್ನಡದಲ್ಲಿ ಮೂಡಿ ಬಂದ ಕರ್ಣನ ಪಾತ್ರ ಚಿತ್ರಣವನ್ನು ತೌಲನಿಕವಾಗಿ ನಿರೂಪಿಸಿದ್ದಾರೆ.

**ಕನ್ನಡ ಆಗಮಿಕ ಜೈನ ಸಾಹಿತ್ಯದಲ್ಲಿ ಕರ್ಣ :**

ಜೈನ ಆಗಮಿಕ ಸಾಹಿತ್ಯದಲ್ಲಿ ನೇಮಿನಾಥ ಪುರಾಣ ಸಾಹಿತ್ಯ ಪ್ರಮುಖವಾದದ್ದು. ನೇಮಿನಾಥನ ಪುರಾಣಗಳು ಒಟ್ಟು ಒಂಭತ್ತು ಇವೆ. ಇವುಗಳಲ್ಲಿ 'ಹರಿವಂಶ' ವೈದಿಕ ಸಾಹಿತ್ಯದ ಪ್ರತಿರೂಪವಾಗಿದೆ. ಅದರಂತೆ ಹರಿವಂಶದ ಕಥೆಯು ಜೈನ ಧರ್ಮ ಸಾಹಿತ್ಯಕ್ಕೆ ಅನ್ವಯಿಕವಾಗಿ ಪರಿವರ್ತನೆಗೊಂಡು ಹೊಸ ರುಪ ಪಡೆದುಕೊಂಡಿದೆ. ಹರಿವಂಶದ ಪುರಾಣ ಕಥೆಗೆ ಜೈನ ದೀಕ್ಷೆಯನ್ನು ನೀಡಲಾಗಿದೆ. ಇದರಲ್ಲಿ ಜೈನ ಕವಿಗಳು ಎರಡು ಉದ್ದೇಶಗಳನ್ನು ಕಾವ್ಯ ರೂಪದಲ್ಲಿ ಹೆಣೆದಿದ್ದಾರೆ. ಒಂದು ಮೂಲ ಮಹಾಭಾರತದ ಜೈನ ಧಾರ್ಮಿಕ ರೂಪ. ಇನ್ನೊಂದು ಜೈನ ಪುರಾಣ. ಧಾರ್ಮಿಕ ಪ್ರಚಾರಕ್ಕಾಗಿಯೇ ನಿರ್ಮಾಣ ಈ ಹೊಸ ರೂಪಕ್ಕೆ ಜೈನ ಭಾರತ. ಸಾಳ್ವಭಾರತ ನೇಮಿನಾಥ ಪುರಾಣವೆಂದು ನಾಮಕರಣ ಮಾಡಲಾಗಿದೆ.

ಇಂತಹ ನೇಮಿನಾಥ ಪುರಾಣದಲ್ಲಿ ಕರ್ಣನ ಜೀವನ ವೃತ್ತಾಂತವನ್ನು ಜೈನ ಆಗಮಿಕ ಶೈಲಿಯಲ್ಲಿ ಚಿತ್ರಿಸಲಾಗಿದೆ. ಕರ್ಣ ಪಾತ್ರದ ಚಿತ್ರಣ ಬರುವ ಜೈನ ಆಗಮಿಕ ಸಾಹಿತ್ಯ ಹೀಗಿದೆ :

೧) ಉತ್ತರ ಪುರಾಣಂ – ನೇಮಿತೀರ್ಥಂಕರ ಪುರಾಣಂ – ಚಾವುಂಡರಾಯ ಪುರಾಣಂ

೨) ಹರಿವಂಶಾಭ್ಯುದಯಂ

೩) ಕರ್ಣಪಾಯನ – ನೇಮಿನಾಥ ಪುರಾಣಂ

* ನೇಮಿ ಜಿನೇಶನ ಸಂಗತಿ

೪) ನೇಮಿಚಂದ್ರನ ನೇಮಿನಾಥನ ಪುರಾಣಂ, ಸಾಳ್ವನ ಸಾಳ್ವಭಾರತ

೫) ಬ್ರಹ್ಮಣಾಂಕನ ಜನಭಾರತ

ಜೈನರ ಆಗಮಿಕ ಸಾಹಿತ್ಯದಲ್ಲಿ ಕರ್ಣನು ಪಾಂಡುರಾಜ, ಕೊಂತಿಯರ, ಗಾಂಧರ್ವ ವಿವಾಹದಿಂದಲೇ ಜನಿಸುತ್ತಾನೆ. ಆತನಲ್ಲಿ ಕಾನೀನನಲ್ಲಿ ಮೂಲ ಭಾರತದಂತೆ ತಾಯಿಯಿಂದ ತ್ಯಜಿಸಲ್ಪಟ್ಟು ಸೂತ ಪುತ್ರನಾಗಿಯೇ ಬೆಳಗುತ್ತಾನೆ. ನಂತರದಲ್ಲಿ ಕರ್ಣನು ಇಲ್ಲಿ ಸೂರ್ಯನ ಸಾಕು ಮಗನಾಗುತ್ತಾನೆ. ಇದು ಕವಿ ಮಂಗರಸನು ವಿಶೇಷ ಚಿತ್ರಣ. ಕರ್ಣನು ಇಲ್ಲಿ ಸೂರ್ಯ ರಾಧೆಯೆಂಬ ಅಂಗದೇಶದ ರಾಜರಾಣಿಯರ ಪ್ರೀತಿಯ ಸಾಕುಮಗ. ಕರ್ಣನು ಅವರ ಮನೆಗೆ ಬಂದ ಮೇಲೆ ಆ ರಾಜ–ರಾಣಿಯರಿಗೆ 'ವಿಕರ್ಣ'ನೆಂಬ ಇನ್ನೊಬ್ಬ ಮಗನು ಹುಟ್ಟುತ್ತಾನೆ. ಕರ್ಣನು ಚಂಪಾಪುರ ರಾಜನಾಗುತ್ತಾನೆ. ಸಹಜವಾಗಿ ಸುಯೋಧನನ ಗೆಳೆತನ ಪಡೆಯುತ್ತಾನೆ. ಜ್ವಾಲಾ ಮಾಲಿನಿ ಎಂಬ ದೇವತೆಯಿಂದ ತಾಯಿಯಾರೆಂಬುದನ್ನು ತಿಳಿಯುತ್ತಾನೆ. ಕರ್ಣನಿಗೆ ಶೂದ್ರತೆಯ ಶಾಪವಿರುವುದೇ ಇಲ್ಲ. ದ್ರೋಣರಿಂದ ಸಹಜವಾಗಿ ವಿದ್ಯೆಯನ್ನು ಪಡೆಯುತ್ತಾನೆ.

ದ್ರೌಪದಿಯ ಸ್ವಯಂವರ ಪ್ರಸಂಗ ಮೂಲ ಭಾರತದಂತೆಯೇ ಇದೆ. ಬದಲಾವಣೆಯಿಲ್ಲ. ಕೌರವನ ದುಷ್ಟ ಆಲೋಚನೆಗಳಿಗೆ ಕರ್ಣನು ಇಲ್ಲಿ ವಿರೋಧಿಸುತ್ತಾನೆ. ಕರ್ಣನ ವ್ಯಕ್ತಿತ್ವ ಸಂಕೀರ್ಣತೆಯನ್ನು ಕಳೆದುಕೊಂಡು ವಿವಾದತೀತವಾಗಿದೆ.

ಆಗಮಿಕ ಜೈನ ಪುರಾಣದ ಕರ್ಣನು ಕುರುಕ್ಷೇತ್ರದ ಮೊದಲ ದಿನವೇ ಕುರುಸೇನೆಯ ಸೇನಾಧಿ ಪತಿಯಾಗುತ್ತಾನೆ. ಮೂಲ ಭಾರತ ಕಾವ್ಯದಲ್ಲಿಯಂತೆ ದೈವದುರಂತ ಕರ್ಣನಾಗಿ ರಣಾಂಗಣದಲ್ಲಿ ವೀರಮರಣವನ್ನು ಅಪ್ಪುವುದಿಲ್ಲ. ಅರ್ಜುನನೊಂದಿಗೆ ಸೋತು ಬೆಸರಗೊಂಡು ಸುದರ್ಶನ ವನಕ್ಕೆ ಹೋಗಿ ಸನ್ಯಾಸನ ದೀಕ್ಷೆ ಪಡೆದುಕೊಂಡು ನಿರ್ವಾಣ ಹೊಂದುತ್ತಾನೆ. ಕರ್ಣ ಆರು ಸುಗುಣಗಳಿಂದ ನೆಲೆಯಾದವನು. ಇದೆ ಆಗಮಿಕ ಜೈನ ಕಾವ್ಯದ ಕರ್ಣನ ಚಿತ್ರಣವೆಂದು ಡಾ. ವ್ಹಿ. ಎಸ್. ಮಾಳಿಯವರು ಅಭಿಪ್ರಾಯ ಮಂಡಿಸುತ್ತಾರೆ. ಹಾಗೂ ಕನ್ನಡ ಆಗಮಿಕ ಜೈನ ಸಾಹಿತ್ಯದಲ್ಲಿ ಕರ್ಣನ ಮೇಲಿರುವ ದೋಷಾರೋಪಣೆಗಳನ್ನು ತೊಳೆದು ಹಾಕುವ ಕವಿಯ ಆಶಯವಾಗಿದೆ ಎಂದು ವ್ಯಾಖ್ಯಾನಿಸಿದ್ದು ಗಮನಾರ್ಹವಾಗಿದೆ.

**ಹೊಸಗನ್ನಡ ಸಾಹಿತ್ಯದಲ್ಲಿ ಕರ್ಣ :**

ಹೊಸಗನ್ನಡ ಮಹಾಭಾರತದ ಹಲವು ಪಾತ್ರಗಳು ಹೊಸಗನ್ನಡ ಸಾಹಿತ್ಯದಲ್ಲಿ ಮರುಹುಟ್ಟು

ಪಡೆದವು. ನವೋದಯ, ಪ್ರತಿಶೀಲ, ದಲಿತ ಬಂಡಾಯ ಮುಂತಾದ ಸಾಹಿತ್ಯದ ಹೊಸತನದ ಕೃತಿಗಳು ಮೂಡಿಬಂದವು. ಕರ್ಣ ದಲಿತ – ಬಂಡಾಯ ಸಾಹಿತಿಗಳಿಗೆ ಸ್ಫೂರ್ತಿ ಸೆಲೆಯಾಗಿದ್ದಾನೆ. ನಾಟಕ, ಗೀತರೂಪಕ, ಕಾದಂಬರಿ, ಕಥೆ, ಕವನ ಹೀಗೆ ಮುಂತಾದ ಸಾಹಿತ್ಯ ರೂಪಗಳಲಿ ಕರ್ಣನು ಹೊಸಹುಟ್ಟು ಪಡೆದಿದ್ದಾನೆ. ಕರ್ಣನನ್ನು ಕುರಿತು ಹದಿನಾರು ನಾಟಕಗಳು, ಮೂರು ಕಾದಂಬರಿಗಳು ಪ್ರಕಟವಾಗಿವೆ. ಅವುಗಳಲ್ಲಿ ಉದಾಹರಣೆ ಈ ಕೆಳಗಿನಂತಿವೆ.

೧) **ನಾಟಕಗಳು :**

| | | |
|---|---|---|
| ರಾಧೇಯ | – | ಕೃಷ್ಣಮರ್ತಿ ಪುರಾಣಿಕರ |
| ಕರ್ಣಾರ್ಜುನ | – | ಶಿವರಾಮ ಕಾರಂತ |
| ಕುರುಕ್ಷೇತ್ರ | – | ಬಿ. ಪುಟ್ಟ ಸ್ವಾಮಯ್ಯನವರ |
| ತಾಯಿ ಮಕ್ಕಳು | – | ಎನ್. ಎಸ್. ವೆಂಕಟ ಸುಬ್ಬರಾವ |
| ಕುರುಕ್ಷೇತ್ರ | – | ಕಂದಗಲ್ ಹಣಮಂತರಾಯರು |
| ದೈವ ದುರಂತಕರ್ಣ | – | ಕಂದಗಲ್ ಹಣಮಂತರಾಯರು |
| ರಕ್ತ ರಾತ್ರಿ | – | ಕಂದಗಲ್ ಹಣಮಂತರಾಯರು |
| ಹೆತ್ತೊಡಲು | – | ಗಂ. ವೆಂ. ಗುಮ್ಮಕೇರಿಯವರು |

೨) **ಗೀತರೂಪಕ :**

| | | |
|---|---|---|
| ಗದಾಯುದ್ಧ | – | ಬಿ. ಎಂ. ಶ್ರೀಕಂಠಯ್ಯ |
| ಅಶ್ವತ್ಥಾಮನ್ | – | ಬಿ. ಎಂ. ಶ್ರೀಕಂಠಯ್ಯ |
| ಕಾನೀನ | – | ಕುವೆಂಪು |
| ಸ್ಮಶಾನ ಕುರುಕ್ಷೇತ್ರ | – | ಕುವೆಂಪು |
| ಶ್ರೀ ಕೃಷ್ಣ & ಕರ್ಣ | – | ಕುವೆಂಪು |

೩) **ಕಾದಂಬರಿ :**

| | | |
|---|---|---|
| ಕರ್ಣನ ದುರಂತ ಕಥೆ | – | ಗೋವಿಂದಾಚಾರ್ಯರು |
| ಸತ್ಯ ಕಾಮರ ಸಾಹಿತ್ಯ | – | ವಂಶಿಯವರು |
| ಪರ್ವ | – | ಎಸ್. ಎಲ್. ಭೈರಪ್ಪ |

೪) **ಕಾವ್ಯಗಳು :**

| | | |
|---|---|---|
| ವ್ಯಾಸ | – | ಮಹಾಭಾರತ (ಸಂಸ್ಕೃತ) |
| ಪಂಪ | – | ವಿಕ್ರಮಾರ್ಜುನ |
| ರನ್ನ | – | ಗದಾಯುದ್ಧ |
| ಕುಮಾರವ್ಯಾಸ | – | ಕರ್ಣಾಟ ಭಾರತ ಕಥಾಮಂಜರಿ |

ಹೀಗೆ ಹಲವಾರು ಕರ್ಣನನ್ನು ಕುರಿತು ಹೊಸಗನ್ನಡ ಸಾಹಿತ್ಯ ರಚನೆ ಬನ್ನಂಜೆ ಗೋವಿಂದಾಚಾರ್ಯರ 'ಕರ್ಣನ ದುರಂತ ಕಥೆ', ವಂಶಿಯವರ ಗ್ರಂಥ 'ಸತ್ಯಕಾಮರ ಸಾಹಿತ್ಯ', ಎಸ್. ಎಲ್. ಭೈರಪ್ಪನವರ 'ಪರ್ವ' ಕಾದಂಬರಿ ಹೀಗೆ ಸಾಕಷ್ಟು ಸಾಕಷ್ಟು ಸೃಷ್ಟಿಯಾಗಿದೆ. ಕರ್ಣನ ಪಾತ್ರ ಇಲ್ಲಿ ಹಲವಾರು ಮುಖಗಳಿಂದ ಚಿಂತನೆಗೆ ಹೆಚ್ಚುತ್ತವೆಯೆಂದು ವಿವರಿಸಿದ್ದಾರೆ. ನಮ್ಮ ನವೋದಯದ ಕೆಲವು ಲೇಖಕರಲ್ಲಿ ಪುರಾಣಗಳಲ್ಲಿಯ ಖಳನಾಯಕರನ್ನು ಹಿಡಿದು ತಂದು ಉದಾತ್ತರನ್ನಾಗಿ ನಿರೂಪಿಸುವ ಚಟವಿತ್ತು. ಕೀಚಕ, ದುರ್ಯೋಧನ, ಕೈಕೇಯಿ, ಮಂಥರೆ, ಗಾಂಧಾರಿ ಮುಂತಾದವರನ್ನು ಉದಾತ್ತ ಚರಿತರನ್ನಾಗಿಸಿದ್ದಾರೆ. ಆಧುನಿಕ ಕವಿ ಲೇಖಕರು.

ಅದೇನೆ ಆದರೂ ಹೊಸಗನ್ನಡ ಸಾಹಿತ್ಯದಲ್ಲಿ ಮೂಡಿ ಬಂದ ಕರ್ಣನು ಸಾಂಪ್ರದಾಯಿಕ ಕಾವ್ಯಗಳಲ್ಲಿ ಚಿತ್ರಿತಗೊಂಡ ಕರ್ಣನಿಂದ ಸಂಪೂರ್ಣ ಭಿನ್ನವಾಗಿಲ್ಲ. ಕನ್ನಡ ಕಥಾ ಪ್ರಪಂಚದಲ್ಲಿಯೂ ಸಹ ಅವನ ಬದುಕಿನಲ್ಲಿಯ ದುರಂತವನ್ನು ಚಿತ್ರಿಸಲು ಹೆಚ್ಚು ಒತ್ತು ನೀಡಲಾಗಿದೆ. ಕರ್ಣನ ಪಾತ್ರದ ಆಳಕ್ಕೆ ಇಳಿದು ಮನೋ ವಿಶ್ಲೇಷಣಾತ್ಮಕ ದೃಷ್ಟಿಕೋನದಿಂದ ಅವನ ವ್ಯಕ್ತಿತ್ವವನ್ನು ಅರ್ಥೈಸಿಕೊಳ್ಳು ಯತ್ನಿಸಲಾಗಿದೆ.

**ಸಮಾರೋಪ** :

ಕರ್ಣನನ್ನು ಕುರಿತು ಅಧ್ಯಯನ, ಸಂಶೋಧನಾ ಪ್ರಬಂಧ ಇದಾಗಿದೆ. ಈ ಗ್ರಂಥದಲ್ಲಿ ಕರ್ಣ ಪಾತ್ರ ಸಂಪೂರ್ಣ ಚಿತ್ರಣ ಮೂಡಿ ಬಂದಿದೆ. ಅಧ್ಯಯನಕ್ಕೆ ಆರಿಸಿಕೊಂಡ ವಿಷಯ ವಸ್ತು ಬಹು ಮೌಲ್ವಿಕವಾಗಿದೆ. ಡಾ. ವ್ಹಿ. ಎಸ್. ಮಾಳಿಯವರು ಮಹತ್ವಪೂರ್ಣ ವಿಷಯವನ್ನೇ ಆಯ್ಕೆ ಮಾಡಿಕೊಂಡಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಕರ್ಣನ ಪಾತ್ರದ ಮೂಲಕ ಮಹಾಭಾರತ ಕಾವ್ಯದ ವಿಭಿನ್ನ ಶೋಧನೆಯ ಕೊರತೆಯಿತ್ತು. ಆ ಕೊರತೆಯನ್ನು ಬಹು ಯಶಸ್ವಿಯಾಗಿ ಡಾ. ವ್ಹಿ. ಎಸ್. ಮಾಳಿಯವರು ತಮ್ಮ ಈ ಪ್ರಬಂಧದ ಮೂಲಕ ತುಂಬಿಕೊಟ್ಟಿದ್ದಾರೆ. ಕನ್ನಡ ಸಾಹಿತ್ಯದ ಸಾರಸ್ವತ ಲೋಕಕ್ಕೆ ತುಂಬಾ ಉಪಕಾರವನ್ನೇ ಮಾಡಿದ್ದಾರೆ. ಅವರ ಈ ಕಾಯಕ ಪ್ರಶಂಸನೀಯ. ಮೂಲ ಭಾರತವನ್ನು ಆಧಾರವಾಗಿರಿಸಿಕೊಂಡು ಕನ್ನಡ ಪ್ರಾಚೀನ ಕವಿಗಳ ಕನ್ನಡ ಭಾರತ ಕಾವ್ಯಗಳ ತೌಲನೀಕ ಅಧ್ಯಯನ ಮಾಡಿದ್ದಾರೆ. ಅಧ್ಯಯನವು ಚಿಂತನಾಶೀಲವಾಗಿದೆ. ವಿದ್ವತ್ ಪೂರ್ಣವಾಗಿದೆ. ಹೊಸ ಹೊಸ ಸಂಶೋಧಕರ ಮಾರ್ಗದರ್ಶಿಯಾಗಿದೆ.

ಮಹರ್ಷಿ ವ್ಯಾಸ, ಪಂಪ, ರನ್ನ, ಕುಮಾರ ವ್ಯಾಸ, ಕವಿಗಳ ಭಾರತ ಕಾವ್ಯವನ್ನು ಸಮಗ್ರವಾಗಿ ಅಧ್ಯಯನವನ್ನು ಡಾ. ವ್ಹಿ. ಎಸ್. ಮಾಳಿಯವರು ಮಾಡಿದ್ದಾರೆ. ಹಲವು ದೃಷ್ಟಿ ಕೋನಗಳಿಂದ ಮಾಡಿದ್ದಾರೆ. ಮೂಲಕವಿಗಳ ಸಾಹಿತ್ಯದಲ್ಲಿಯ ಪಾಂಡಿತ್ಯವನ್ನು ಕವಿತ್ವವನ್ನು ಹೊಗಳಿದ್ದಾರೆ. ನ್ಯೂನ್ಯತೆ ಕಂಡಲ್ಲಿ ನಿರ್ದಾಕ್ಷಣ್ಯವಾಗಿ ಟೀಕಿಸಿದ್ದಾರೆ. ಭಾಷೆಯ ಸ್ವರೂಪ, ವ್ಯಾಕರಣ ಸ್ವರೂಪಗಳನ್ನು ಅಂದಿನ ಕಾಲದ ಕವಿಗಳ ಮನೋಭೂಮಿಕೆಗಳನ್ನು, ಸಾಮಾಜಿಕ ಸ್ಥಿತಿಗಳನ್ನು ಸೂಕ್ಷ್ಮವಾಗಿ ಗುರುತಿಸಿದ್ದಾರೆ.

ಕಾವ್ಯ ಕಾರಣಗಳನ್ನು ಆಯಾ ಕವಿಗಳ ಬದುಕಿನ ಇತಿಮಿತಿಗಳನ್ನು ಪತ್ತೆ ಹಚ್ಚಿದ್ದಾರೆ. ಉದಾಹರಣೆಗೆ ಪಂಪನ ಆಗಾಧ ಪ್ರೌಢಿಮೆ, ಹೊಸತನ ಹುಡುಕಾಟ, ಸೃಜನತೆಯ ಕೌಶಲ್ಯಗಳನ್ನು ಡಾ. ವ್ಹಿ. ಎಸ್. ಮಾಳಿಯವರು ಪ್ರಬಂಧದ ಉದ್ದಕ್ಕೂ ವಿಶ್ಲೇಷಿಸಿದ್ದಾರೆ. ಕುಮಾರ ವ್ಯಾಸನ ಆಗಾಧ ಪಾಂಡಿತ್ಯ, ರಚನಾ ಶೈಲಿ, ಆತನ ಪಾರಮಾರ್ಥಿಕ ಒಲವು ಶ್ರೀ ಕೃಷ್ಣನ ಭಕ್ತಿಗಳನ್ನು ಕೊಂಡಾದಿದ್ದಾರೆ. ರನ್ನನ – ಗಧಾಯುದ್ಧದ ಸಿಂಹಾವಲೋಕನ, ಪಂಪನ ಪ್ರಭಾವಗಳನ್ನು ಗ್ರಹಿಸಿದ್ದಾರೆ.

ಉಳಿದಂತೆ ಅಂದಿನ ಪ್ರಾಚೀನರ ಸಾಹಿತ್ಯವನ್ನು ಸಹ ಪರಿಶೀಲಿಸಿದ್ದಾರೆ. ಆಧುನಿಕ ಹೊಸಗನ್ನಡ ಸಾಹಿತ್ಯದ ದಿಗ್ಗಜರ ಕೃತಿಗಳನ್ನು ಸಹ ಬಹು ಜಾಗರೂಕತೆಯಿಂದ ಅಧ್ಯಯನ ಮಾಡಿದ್ದಾರೆ. ನವ್ಪೋದಯ, ನವ್ಯ, ಬಂಡಾಯ ದಲಿತ ಇತ್ಯಾಧಿ ಸ್ತರಗಳಲ್ಲಿ ಮಹಾಭಾರತ ಕಾವ್ಯವು ಭಿನ್ನ ಆಯಾಮಗಳಲ್ಲಿ ರೂಪಗೊಂಡಿದ್ದನ್ನು ಗುರುತಿಸಿ ವಿನೂತನವಾಗಿ ವ್ಯಾಖ್ಯಾನಿಸಿದ್ದಾರೆ. ಕೊನೆಯದಾಗಿ ಕನ್ನಡ ಭಾರತ ಲೋಕಕ್ಕೆ ಸಂಬಂಧಪಟ್ಟಂತೆ ಗಮನ ಸೆಳೆಯಲು ಕಾಯ್ದು ನಿಂತಿರುವ ವಿಷಯಗಳನ್ನು ಸಂಶೋಧಕರಿಗಾಗಿಯೇ ಆಯ್ಕೆಗಾಗಿ ಸೂಚಿಸಿದ್ದಾರೆ. ಈ ಕ್ಷೇತ್ರದಲ್ಲಿ ಇನ್ನೂ ಆಗಬೇಕಾದ ಕಾರ್ಯಗಳನ್ನು ಚರ್ಚಿಸಿದ್ದಾರೆ. ಡಾ. ವ್ಹಿ. ಎಸ್. ಮಾಳಿಯವರು ತಾವೊಬ್ಬ ಪ್ರತಿಭಾವಂತ ಸಂಶೋಧಕರೆಂಬುದನ್ನು ಸಾಬೀತುಪಡಿಸಿದ್ದಾರೆ.

ಡಾ. ವ್ಹಿ. ಎಸ್. ಮಾಳಿಯವರು ಕಟ್ಟಿಕೊಟ್ಟಿರುವ 'ಕನ್ನಡ ಸಾಹಿತ್ಯದಲ್ಲಿ ಕರ್ಣ' ಸಂಶೋಧನಾ ಪ್ರಬಂಧವು ಅಧ್ಯಯನದ ಶಿಸ್ತಿನಿಂದ ಕೂಡಿದೆ. ಪಾತ್ರ ಕೇಂದ್ರಿತ ಅಧ್ಯಯನಕ್ಕೆ ಮಾದರಿಯಾಗಿದೆ. ವಿಮರ್ಶೆಗೆ ವಿಮರ್ಶೆಯಾಗಿ, ಸಂಶೋಧನೆಗೆ ಸಂಶೋಧನೆಯಾಗಿ ನಿಂತುಕೊಳ್ಳುವ ತೌಲನಿಕ ಗ್ರಂಥವಾಗಿದೆ. ಸಂಶೋಧನೆಯ ಶಿಸ್ತು, ನಿರ್ಣಯಗಳನ್ನು ಮಂಡಿಸುವಾಗ ನೀಡುವ ಆಧಾರಗಳು, ಪರಸ್ಪರ ತೌಲನಿಕವಾಗಿ ಚರ್ಚಿಸುವಾಗ ಒದಗಿಸುವ ಆಕರ ಸಾಮಗ್ರಿ, ಅಪಾರ ವ್ಯಾಪಕ ಅಧ್ಯಯನಕ್ಕೆ ನಿದರ್ಶನ ಒದಗಿಸುತ್ತವೆ. ಪಂಪ, ರನ್ನ, ಕುಮಾರವ್ಯಾಸನ ಕರ್ಣ ಹೇಗೆ ಮೂಡಿ ಬಂದಿದ್ದಾನೆ. ಪರಸ್ಪರ ಸಾಮ್ಯ–ವೈಷಮ್ಯ ಮತ್ತು ವೈಶಿಷ್ಟ್ಯತೆಗಳನ್ನು ಸೊಗಸಾಗಿ ನಿರೂಪಿಸಿದ್ದಾರೆ. ಪಿ.ಎಚ್.ಡಿ. ಸಂಶೋಧನಾ ಗ್ರಂಥಗಳಲ್ಲಿ ಪ್ರಸ್ತುತ 'ಕನ್ನಡ ಸಾಹಿತ್ಯದಲ್ಲಿ ಕರ್ಣ' ಕೃತಿಗೆ ವಿಶೇಷ ಪ್ರಾಶಸ್ತ್ಯ ಲಭಿಸಿದೆ.

## ಸಂಶೋಧನಾ ಗ್ರಂಥ :

**ತಾಣದೀವಿಗೆ :**

ತಾಣದೀವಿಗೆ ಸಂಶೋಧನ ಲೇಖನಗಳ ಸಂಕಲನ ಸಂಶೋಧನೆಯ ವಿವಿಧ ಆಯಾಮಗಳಿಗೆ ಒಳಪಡುವ ಹನ್ನೆರಡು ಲೇಖನಗಳಿವೆ. ಅವುಗಳನ್ನು ಪರಿಶೀಲನೆ, ಪರಿಶೋಧನೆ, ಮತ್ತು ಪರಿವರ್ಧನ ಎಂಬ ಮೂರು ವಿಭಾಗಗಳಲ್ಲಿ ವರ್ಗೀಕರಿಸಲಾಗಿದೆ.

೧) ಡಾ. ಜಿ. ಆಯ್. ನಂದಿಕೋಲಮಠರ 'ಕರಸ್ಥಲ ಪರಂಪರೆ'
೨) ಡಾ. ಯಾಕೊಳ್ಳಿಯವರ 'ಪ್ರಾಚೀನ ಕನ್ನಡ ಕಾವ್ಯ ಸಂಕಲನಗಳು'
೩) ಡಾ. ಸಂಗಮೇಶ ಬಿರಾದಾರರ 'ವೈಯಾಕರಣ ಎರಡನೆಯ ನಾಗವರ್ಮ'
೪) ಡಾ. ಬಸುಪಟ್ಟದ ಅವರ 'ನಿಜಗುಣ ಶಿವಯೋಗಿಗಳು'
೫) ಸಂಶೋಧನಾ ಮಹಾಪ್ರಬಂಧಗಳು.

ಐದು ಲೇಖನಗಳು ಮೊದಲ ಭಾಗವಾದ ಪರಿಶೀಲನದಲ್ಲಿವೆ. ಎರಡನೆಯ ಭಾಗ ಪರಿಶೋಧನೆಯಾಗಿದ್ದು, ಇದರಲ್ಲಿ ಐದು ಬರಹಗಳಿವೆ.

೧) ಜ್ಞಾನೇಶ್ವರಿ ಕಾವ್ಯದ ಕನ್ನಡ ಅನುವಾದಗಳು
   * ಸಮಾಜೋ – ಧಾರ್ಮಿಕ ಸ್ವರೂಪ
೨) ಕನ್ನಡದಲ್ಲಿ ಮರಾಠಿ ಕಾವ್ಯ
೩) ಹಳಕಟ್ಟಿ ಸಂಪಾದಿತ ಕಾವ್ಯಗಳು
೪) ಶಿಷ್ಟಪದ ಸಾಹಿತ್ಯದಲ್ಲಿ ಜನಪದ ಉಗ್ರ ಆಚರಣೆಗಳು
೫) ಕೊಕಟನೂರು : ಐತಿಹಾಸಿಕ ಸಮೀಕ್ಷೆ

ಮೂರನೆಯ ವಿಭಾಗವು ಕನ್ನಡ ಸುವಿಖ್ಯಾತ ಸಂಶೋಧಕರ ಜೀವನ, ಸಾಹಿತ್ಯ, ಸಾಧನೆಗಳನ್ನು ಸ್ಥೂಲವಾಗಿ ಪರಿಚಯಿಸುವ ಎರಡು ಮಹತ್ವದ ರಚನೆಗಳಿವೆ.

೧) ಮಹಾಮಾರ್ಗದ ಮಹಾನ್ವೇಷಕ : ಡಾ. ಎಂ. ಎಂ. ಕಲಬುರ್ಗಿ
೨) ಸಮಾಜವಾದಿ ಸಂಸ್ಕೃತಿ ಸಂಶೋಧಕ : ಡಾ. ಬಿ. ಆರ್. ಹಿರೇಮಠ

ಹೀಗೆ ತಾಣದೀವಿಗೆಯು ಮುಖ್ಯವಾಗಿ ಮೂರು ಭಾಗಗಳಲ್ಲಿ ಸಂಯೋಜಿಸಲಾಗಿದೆ. ಆಯಾ ವಿಭಾಗಕ್ಕೆ ನೀಡಿದ ಉಪಶೀರ್ಷಿಕೆಗಳು ಸಂಶೋಧನಾ ಶಿಸ್ತಿಗೆ ನಿದರ್ಶನ ನೀಡುತ್ತವೆ.

## ಡಾ. ಜಿ. ಆಯ್. ನಂದಿಕೋಲಮಠರವರ 'ಕರಸ್ಥಲ ಪರಂಪರೆ' ಅಧ್ಯಯನ :

ಶಿವಾರಾಧನೆಯ ಶೈವ ಪರಂಪರೆ ಬಹು ಪುರಾತನವಾದುದು. ಬಸವ ಪೂರ್ವ ಯುಗದಲ್ಲಿಯೇ ಶೈವಧರ್ಮ ಕರ್ನಾಟಕದಲ್ಲಿ ಪಾಶುಪತ, ಲಕೌಲೀಶ, ಕಾಳಾಮುಖ, ಕಾಪಾಲಿಕ ಶಾಕೆಗಳಲ್ಲಿ ವಿಸ್ತರಿಸಿಕೊಂಡಿತ್ತು. ಆದಿಶೈವ, ಅನುಶೈವ, ಮಹಾಶೈವ, ಮಿಶ್ರಶೈವ, ಪ್ರವಶೈವ, ವೀರಶೈವ, ಅದರ, ಉಪಶಾಖೆಗಳು ಉಪಶಾಖೆಗಳಿಗೆ ಮತ್ತೆ ಕವಲುಗಳು. ಡಾ. ಬಿ. ಕೆ. ಹಿರೇಮಠ, ಡಾ. ಜಿ. ಆಯ್. ನಂದಿಕೋಲಮಠರವರಿಗೆ ಕಂಡದ್ದು ಶೈವಧರ್ಮದ ಮತ್ತೊಂದು ಹೊಸ ಕವಲು ಕರಶೈವ. ಶಿವಾಗಮಗಳಲ್ಲಿ ಉಲ್ಲೇಖಗೊಳ್ಳುವ ಬಸವಾದಿ ಪ್ರಮಥರ ಕಾಲದಲ್ಲಿ ವೀರಶೈವದೊಂದಿಗೆ ಬೆಸೆದುಕೊಂಡು, ಬಸವೋತ್ತರ ಕಾಲದಲ್ಲಿ ಕರಸ್ಥಲ ಸಮುದಾಯವಾಗಿ ಬೆಳೆಯುವ ಈ ಶೈವ ಪರಂಪರೆಯ ನಿಖರವಾಗಿ ಅಳೆಯುವ ಸಂಶೋಧನ ಡಾ. ನಂದಿಕೋಲಮಠರವರ 'ಕರಸ್ಥಲ ಪರಂಪರೆ' ವೀರಶೈವ ಪರಂಪರೆಯ ಒಂದು ಕೊಂಡಿಯನ್ನು ಹುಡುಕಿಕೊಡುವ ಅಪರೂಪದ ಪ್ರಬಂಧವಿದಾಗಿದೆ.

ವಚನಗಳಿಗೆ ಮಾತ್ರವಲ್ಲ, ಶೈವಧರ್ಮದ ಅಧ್ಯಯನಕ್ಕೂ ಬಸವಣ್ಣನೇ ಪ್ರಮಾಣು. ಬಸವ ಪೂರ್ವಯುಗ, ಬಸವಯುಗ, ಬಸವೋತ್ತರಯುಗ, ಆಧುನಿಕಯುಗವೆಂದು ಶೈವಧರ್ಮದ ಇತಿಹಾಸ ಪದ್ಧತಿಯಾಗಿ ಬೆಳೆದಿದೆ. ಬಸವೋತ್ತರ ಯುಗದಲ್ಲಿ ೧೩-೧೪ ನೇ ಶತಮಾನದ ನೂರೊಂದು ವೀರಕ್ತರ ಕಾಲ. ಜೊತೆ ಜೊತೆಯಲ್ಲಿಯೇ ಗುರುತಿಸಿಕೊಂಡ ಒಳಸಮುದಾಯ ಅದು 'ಕರಸ್ಥಲ ಪರಂಪರೆ'. ಕರಸ್ಥಲದ ಶಾಂತೇಶ, ಕರಸ್ಥಲದ ವೀರಣ್ಣಾ, ಕರಸ್ಥಲದ ನಾಗದೇವ, ಕರಸ್ಥಲದ ಮಲ್ಲಿಕಾರ್ಜುನೊಡೆಯ ಈ ಪರಂಪರೆಯ ಇತಿಹಾಸದಲ್ಲಿ ಕಳೆದು ಹೋಯಿತು. ಒಂದೆರಡು ಎಳೆಗಳು ಆಕರ ಸಾಮಗ್ರಿ ಕೊರತೆಯಿಂದ ದೂರ ಉಳಿದುಕೊಂಡಿತ್ತು. ಆ ಮೂಲಾಗ್ರವಾಗಿ ಅಗೆದು ಒಟ್ಟು ಬೇರುಗಳನ್ನು ಹೆಕ್ಕಿ, ಸ್ವರೂಪವನ್ನು ಸರಿಯಾಗಿ ಗ್ರಹಿಸಿದ ಶ್ರೇಯಸ್ಸು ಈ ಮಹಾಪ್ರಬಂಧಕ್ಕೆ ಸಲ್ಲಬೇಕು. ಕರಸ್ಥಲ ಪರಂಪರೆಯ ಬೇರುಗಳು ೧೨ನೇ ಶತಮಾನದ ಮಹೇಶ್ವರ ಮತದಲ್ಲಿದೆ. ಮಹೇಶ್ವರ ಮತದ ಬೇರುಗಳು ಪಾಶುಪತದಲ್ಲಿವೆ. ಪಾಶುಪತದ ಬೇರುಗಳು ಶೃತ ಶೈವದಲ್ಲಿವೆ. ಶೈವದ ಕುರುಹುಗಳು ಮೊಹಂಜೋದಾರೋ – ಹರಪ್ಪ ನಾಗರಿಕತೆಯಲ್ಲಿ ಗೋಚರಿಸುತ್ತವೆ. ಲೇಖಕರ ಉದ್ದೇಶ ಸಫಲಗೊಂಡಿದೆ. ತುಂಬಾ ಕಷ್ಟ ಸಂಶೋಧನೆ, ಸಮರ್ಥ ಮಾರ್ಗದರ್ಶಕರಿರಬೇಕು. ದಣಿವರಿಯದೆ ತಾನೂ ಸಂಪೂರ್ಣ ತೊಡಗಿಸಿಕೊಳ್ಳುವ ಸಂಶೋಧಕನಿರಬೇಕು. ಸಂಶೋಧನೆಯಲ್ಲಿ ಎರಡು ವಿಧಗಳು ಇವೆ.

೧) ವಿಸ್ತಾರ ಕೇಂದ್ರಿತ ಸಂಶೋಧನೆ

೨) ಆಳಕೇಂದ್ರಿತ ಸಂಶೋಧನೆ

ಒಂದರಲ್ಲಿ ಆಳ ಕಡಿಮೆ, ವಿಸ್ತಾರ ಹೆಚ್ಚು. ಇನ್ನೊಂದರಲ್ಲಿ ವಿಸ್ತಾರ ಕಡಿಮೆ, ಆಳ ಹೆಚ್ಚು. ಒಂದು ಅಹವಾಲು. ಇನ್ನೊಂದು ಸವಾಲು. ಡಾ. ಜಿ. ಆಯ್. ನಂದಿಕೋಲಮಠರವರು 'ಕರಸ್ಥಲ ಪರಂಪರೆ' ವೀರಶೈವ ಸಾಹಿತ್ಯದ ಅಲಕ್ಷಿತ ಪರಂಪರೆಯೊಂದರ ತಲಸ್ಪರ್ಶಿ ಅಧ್ಯಯನ ಮಾಡಿದ್ದಾರೆ.

ಸ್ಥಲ – ಕರಸ್ಥಲವು ರೋಚಕವಾದ ಅಧ್ಯಾಯ. 'ಸ್ಥಲ' ಪದದ ಅರ್ಥ – ಸ್ಥಳ ಅಥವಾ ಸ್ಥಾನ. ಲಿಂಗಾಧಾರಣಾ ಸ್ಥಳ ; ಶೈವ ಪ್ರಭೇದ ಸೂಚಕ, ಡಾ. ಎಂ. ಎಂ. ಕಲಬುರ್ಗಿಯವರ ಊಹೆಯನ್ನು ನಯವಾಗಿ ನಿರಾಕರಿಸಿ, ಕೈಯಲ್ಲಿ ಲಿಂಗಧರಿಸುವ ಒಂದು ಜಂಗಮ ಸಮೂಹ, ಕಿಟೆಲ್‌ರ ಅಭಿಪ್ರಾಯವನ್ನು ಅನುಮೋದಿಸುತ್ತಾರೆ. ಕರಸ್ಥಲದವರು ಸತಿ–ಸುತ–ಮನೆ ಸಂಬಂಧ ಹೊಂದಿದುದನ್ನು ಪ್ರಸ್ತಾಪಿಸಲಾಗಿದೆ. ಅಧ್ಯಾಯವು ಅಷ್ಟೇ ಕರಸ್ಥಲ ಪರಂಪರೆಯ ಸ್ಥೂಲ ನೋಟವನ್ನು ನೀಡುತ್ತದೆಯೇ ನಾಗದೇವನೊಬ್ಬನ ಬದುಕಿನ ಮೂಲಕ ವೀರಶೈವ ಶೈವತತ್ವ – ಆಚಾರಗಳ ಸಮ್ಮಿಶ್ರ ಪ್ರಭೇದ ಶಾಂತೇಶ ವೀರಣ್ಣೊಡೆಯ, ನಾಗದೇವ, ಮಲ್ಲಿಕಾರ್ಜುನೊಡೆಯರ ಕಾಲ–ದೇಶ–ಜೀವನ–ಸಾಧನೆಗಳನ್ನು ೬ನೇ ಅಧ್ಯಾಯದಲ್ಲಿ ವಿವರಿಸಿದರೆ ೭ನೇ ಅಧ್ಯಾಯ ಅವರ ಸಾಹಿತ್ಯವನ್ನು ಪರಿಚಯಿಸುವುದು. ಹಲವು ಪವಾಡಗಳನ್ನು ಪರಿಶೀಲಿಸುತ್ತ ವೀರಕ್ತರಲ್ಲಿಯೇ ಉಪಾಸನಾ ವೈಶಿಷ್ಟ್ಯದ ಪ್ರೌಡದೇವರಾಯನ ಕಾಲದ ನೂರೊಂದು ವೀರಕ್ತರ ಪಟ್ಟಿಯನ್ನು ಪ್ರಸ್ತೂತಪಡಿಸುತ್ತದೆ.

ಶಾಂತರು ಕರಸ್ಥಲ ಪರಂಪರೆಯ ಮೂಲ ಪುರುಷ ಶಾಂತಲೋಲ ವೀರಯ್ಯ, ಶಾಂತರೆಲ್ಲರೂ ವೀರಕ್ತರೆನ್ನುವುದು ಗಮನಾರ್ಹ. ಮಹಾಪ್ರಬಂಧಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ರೂಪದಲ್ಲಿಯೇ ಪ್ರಕಟಿಸುವುದಕ್ಕಿಂತ Update ಗೊಳಿಸಿ ಪ್ರಕಟಿಸಬೇಕು. ಇದು ವಚನವಾಗಿರದೇ ಷಟ್ಪದಿ, ಸ್ವರ ವಚನವಾಗಿರಬಹುದೆಂದು ಹೇಳಿರುವರು. ಡಾ. ಜಿ. ಆಯ್. ನಂದಿಕೋಲಮಠರವರು ಅದನ್ನು ವಚನವೆಂದು ಒಪ್ಪಿಕೊಂಡು ಮಲ್ಲಿಕಾರ್ಜುನೊಡೆಯರ ಬ್ರಹ್ಮಾದ್ವೈತ ಸಿದ್ಧಾಂತ ಷಟಸ್ಥಲಾಭರಣ, ಕರಸ್ಥಲದವರನ್ನು ಕುರಿತು ಸಾಹಿತ್ಯ ನಂದಿಕೋಲಮಠರವರ ಅಧ್ಯಯನದ ದಿಕ್ಸೂಚಿ ಲಕ್ಷಣ ದಂಡೇಶನ ಶಿವತತ್ವ ಚಿಂತಾಮಣಿ, ಚನ್ನವೀರ ಜಂಗಮನ ಷಟಸ್ಥಲ ವಲ್ಲಭ, ಮಲ್ಲಿಣಾರ್ಯನ ವೀರಶೈವಾಮೃತ ಪುರಾಣ, ಸಿದ್ಧಾನಂಜೇಶನ ರಾಘವಾಂಕ ಚರಿತೆ, ಚನ್ನಬಸವಾಂಕನ ಮಹಾದೇವಿಯಕ್ಕನ ಪುರಾಣ, ರುದ್ರಕವಿಯೇ ಕರಸ್ಥಲ ನಾಗಲಿಂಗನ ಚರಿತೆ ಹೀಗೆ ಮೊದಲಾದವು. ಈ ಮಹಾಪ್ರಬಂಧದ ಆಕರ ಸಾಮಗರಿಗಳು ೯ನೇ (ಒಂಬತ್ತನೆ) ಅಧ್ಯಾಯ ಸಾಕ್ಷೀಕರಿಸುತ್ತದೆ. ಮಹಾಪ್ರಬಂಧಗಳಿಗೆ, ನಿರ್ಧಿಷ್ಟ ವಿಷಯ ವಿನ್ಯಾಸವಿರುತ್ತದೆ. ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆಗಳು, ಪೀಠಿಕೆಯಿಂದ ಆರಂಭಗೊಳ್ಳುವ ಸಂಪ್ರಬಂಧಗಳು ಫಲಶೃತಿಯೊಂದಿಗೆ ಮುಕ್ತಾಯಗೊಳ್ಳುವುದು. ಸಂಪ್ರದಾಯ 'ಕರಸ್ಥಲ ಪರಂಪರೆ' ಎರಡುವರೆ ಪುಟಗಳ ಸಮಾರೋಪ ಸಂವಿಧಾನ ನಾವೀಣ್ಯತೆಗೆ ನಿದರ್ಶನ. ಡಾ. ಜಿ. ಆಯ್. ನಂದಿಕೋಲಮಠರವರ 'ಕರಸ್ಥಲ ಪರಂಪರೆ' ಗುಣಮಟ್ಟದ ಹೊಸ ಭವರಮಸೆ ಮೂಡಿಸಿರುವುದು ಸಂತೋಷವೆಂದು ಡಾ. ವ್ಹಿ. ಎಸ್. ಮಾಳಿಯವರು ಪಿ.ಎಚ್.ಡಿ. ಮಹಾಪ್ರಬಂಧದ ಆಳ ವಿಸ್ತಾರಗಳನ್ನು ಪರಿಣಾಮಕಾರಿಯಾಗಿ ಪರಿಚಯಿಸಿದ್ದಾರೆ. ಸಂಶೋಧಕರ ಶ್ರಮ, ಆಕರಶೋಧ, ಸಾಮಗ್ರಿಮೂಲ ಸಂಶೋಧನೆ. ವಿಭಜನಾಕ್ರಮ, ವಿಶ್ಲೇಷಣಾ ರೀತಿ, ಪ್ರತಿಯೊಂದನ್ನು ಡಾ. ವ್ಹಿ. ಎಸ್. ಮಾಳಿಯವರು ಪ್ರಸ್ತುತ ಲೇಖನದಲ್ಲಿ ಚರ್ಚಿಸಿದ್ದಾರೆ. ಡಾ. ಜಿ. ಆಯ್. ನಂದಿಕೋಲಮಠರವರ 'ಕರಸ್ಥಲ ಪರಂಪರೆ'ಯನ್ನು ಓದುಗರಿಗೆ ಡಾ. ವ್ಹಿ. ಎಸ್. ಮಾಳಿಯವರು ಲೇಖನ ಪ್ರಶಸ್ತವಾದ ಪ್ರವೇಶವನ್ನು ಒದಗಿಸುತ್ತದೆ.

## ಡಾ. ಯಾಕೋಳ್ಳಿಯವರ 'ಪ್ರಾಚೀನ ಕನ್ನಡ ಕಾವ್ಯ ಸಂಕಲನ' :

ಅಪರೂಪದ ಮೂರು ಕಾವ್ಯ ಸಂಕಲನಗಳ ಪ್ರೌಢ ಅಧ್ಯಯನ ಡಾ. ಬಿ. ಆರ್. ಹಿರೇಮಠರ ಮಾರ್ಗದರ್ಶನದಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಾಧರಪಡಿಸಿದ ಮಹಾಪ್ರಬಂಧವಾಗಿದೆ. ಪ್ರಾಚೀನ ಕನ್ನಡ ಕಾವ್ಯ ಸಂಕಲನಗಳ ಅಧ್ಯಯನವೆಂದರೆ ಪ್ರಾಚೀನ ಕನ್ನಡ ಚಂಪೂ ಸಾಹಿತ್ಯದ ಸ್ಥೂಲ ಸಮೀಕ್ಷೆ, ಸಾಹಿತ್ಯ ಚರಿತ್ರೆಯ ಪ್ರಮುಖ ಆಕರಗಳು, ಕವಿ, ಕಾವ್ಯ, ಕಾಲ–ದೇಶಗಳ ಶೋಧಕ್ಕೆ ದಿಕ್ಸೂಚಿಗಳು ಕನ್ನಡ ಕಾವ್ಯದ ಪದ್ಧತಿ, ವಿವರಿಸುವದರೊಂದಿಗೆ ನಿರ್ಣಯಕ್ಕೂ ಸಹಾಯ ಮಾಡುತ್ತದೆ. ಐವತ್ತಕ್ಕೂ ಹೆಚ್ಚು ಕವಿಗಳ ಚಂಪೂ ಕಾವ್ಯಗಳಿಂದ ಆಯ್ದ ಏಳುಸಾವಿರ ಎಂಬತ್ತೊಂಬತ್ತು ಪದ್ಯಗಳು ಈ ಮೂರು ಸಂಕಲನಗಳಲ್ಲಿ ಅಡಕಗೊಂಡಿವೆ. ಮಲ್ಲಿಕಾರ್ಜುನನ ಸೂಕ್ತಿ ಸುಧಾರ್ಣವ, ವಿದ್ಯಾನಂದನ 'ಕಾವ್ಯಸಾರ' ಮಲ್ಲಕವಿಯ 'ಕಾವ್ಯಸಾರ' ಪ್ರಾಚೀನ ಕನ್ನಡ ಕಾವ್ಯದ ಮೂರು ಕಣಜಗಳು. ಈ ಕಣಜಗಳಲ್ಲಿ ತುಂಬಿರುವ ಕನ್ನಡ ಸಾರಸ್ವತದ ತೂಗಿದವರು ಡಾ. ಯಾಕೋಳ್ಳಿಯವರೆಂದು ಡಾ. ವ್ಹಿ. ಎಸ್. ಮಾಳಿಯವರು ವ್ಯಾಖ್ಯಾನಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವು ಒಟ್ಟು ಆರು ಅಧ್ಯಾಯಗಳಲ್ಲಿ ಹರವಿಕೊಂಡಿದ್ದು, ಐದನೂರು ಪುಟಗಳ ವ್ಯಾಪ್ತಿ ಪಡೆದುಕೊಂಡಿದೆ. ಪೀಠಿಕೆ, ಅಧ್ಯಾಯ ಹಾಗೂ ಕೊನೆಯ ಸಮಾರೋಪ ಸಂಕ್ಷಿಪ್ತ, ನಾಲ್ಕು ಅಧ್ಯಾಯಗಳು ವಿವರಗಳಿಂದ ಪುಷ್ಟವಾಗಿದೆ. ನಾಗವರ್ಮ ತನ್ನ ಸಂಕಲನ ಕಾವ್ಯ 'ಇಡುಕುಂಗಬ್ಬ' ಎಂದು ಕರೆದಿದ್ದಾನೆ.

೨ನೇ ಅಧ್ಯಾಯದಲ್ಲಿ ಕೆಲವರ ಹವ್ಯಾಸ, ಸಂಸ್ಕೃತ ಸುಭಾಷಿತ ಸಂಗ್ರಹಗಳು 'ಕರ್ನಾಟಕ ಸುಭಾಷಿತ' ಸಂಗ್ರಹಗಳು, 'ನೀತಿ ಸಾರೋದಯ' ಕೇವಲ ನೀತಿಗೆ ಸಂಬಂಧಿಸಿದೆ. ಈ ಕಾವ್ಯ ಸಂಕಲನಗಳು ಅಷ್ಟಾದಶ ವರ್ಣನೆಗಳ ವರ್ಣನೆಯೇ ಕಾವ್ಯದ ಜೀವಾಳವೆಂದು ಹದಿನೆಂಟು ವರ್ಣನೆಗಳನ್ನು ಕಾವ್ಯದ ಹದಿನೆಂಟು ಅಂಗಗಳೆಂದು ಭಾವಿಸಿ, ಕಾಲಾಂತರದಲ್ಲಿ ಮಹಾಕಾವ್ಯದ ಮೌಲ್ಯಮಾಪನದ ಮಾನದಂಡಗಳಾದ, ಭಾರತೀಯ ಕಾವ್ಯ ಮೀಮಾಂಸೆಯ ನೆಲೆಯಲ್ಲಿ ಡಾ. ಯಾಕೋಳ್ಳಿಯವರು ಚೆನ್ನಾಗಿ ಬೆಳೆಸಿದ್ದಾರೆ.

ಮಲ್ಲಿಕಾರ್ಜುನ ಹಾಗೂ ಮಲ್ಲಕವಿಯ ಪೀಠಿಕಾ ಪ್ರಕರಣ ೧೯ ಅಧ್ಯಾಯಗಳಿರಬೇಕೆಂದು ಸಂಶೋಧಕರು ಊಹಿಸಿರುವರು. ದಂಡಿಯ ಹದಿನೆಂಟು ವರ್ಣನೆಗಳು ಉಲ್ಲಂಘಿಸುವುದು ಕನ್ನಡ ಕಾವ್ಯ ಸಂಕಲನಗಳ ವೈಶಿಷ್ಟ್ಯ ಮಹಾಸಾಗರ ಪರ್ವತ, ಋತುಗಳು, ಸೂರ್ಯೋದಯ, ಚಂದ್ರೋದಯ, ಉದ್ಯಾನ, ಜಲಕ್ರಿಡೆ, ಸುರಾಪಾನ, ಸಂಭೋಗ, ವಿಪ್ರಲಂಭ, ಶೃಂಗಾರ, ವಿವಾಹ, ಪುತ್ರೋತ್ಸವ, ರಾಜಕುಮಾರರ ಬೆಳವಣಿಗೆ, ಮಂತ್ರಾಲೋಚನೆ, ಯುದ್ಧ ದೂತ, ಪ್ರಯಾಣಗಳಿಂದ ಬೆಳೆದು, ನಾಯಕನ ಅಭ್ಯುದಯ ವರ್ಣನೆಯಲ್ಲಿ ಕೊನೆಗೊಳ್ಳುತ್ತದೆ. ಕಾವ್ಯಗಳು ಸಮುದ್ರ ವರ್ಣನೆಯಿಂದ ಪ್ರಾರಂಭವಾಗುವುದು ಸಹಜವೆನಿಸುತ್ತದೆ. ದಂಡಿಯ ಕಾವ್ಯದರ್ಶದ ಅಷ್ಟಾದಶ ವರ್ಣನೆಗಳಿಗೆ ನಮ್ಮ ಸಂಕಲನಗಳ ಸಾಹಿತ್ಯವನ್ನು ಗದ್ಯ ಮತ್ತು ಪದ್ಯವೆಂದು ವಿಂಗಡಿಸುತ್ತೇವೆ. ನಮ್ಮ ಸಂಕಲನ ಕಾವ್ಯಗಳು ಗದ್ಯ–ಪದ್ಯಗಳಿಂದ

ಸಮೂಹಿತವಾದ ಚಂಪೂ ಕಾವ್ಯಗಳಿಂದ ಪದ್ಯಗಳನ್ನು ಚಂಪೂವಿಗಿಂತ ಭಿನ್ನವಾದ ರೀತಿಯಲ್ಲಿ ಸರ್ಗಬಂಧ, ಕೃತಿಗಳಾಗಿವೆ.

ಸಂಶೋಧಕರು ಅಭಿಮತ 'ದೊರೆವೆತ್ತ ಪದ್ಯದಿಂದ ವಿರಚಿಸಿದುದು ಸರ್ಗಬಂಧಮಕ್ಕುಂ' ಎನ್ನುತ್ತಾರೆ. ನಾಗವರ್ಮ ಡಾ. ಯಾಕೋಳ್ಳಿಯವರು ಚತ್ತಾಣ, ಬೆದಂಡೆ, ಕಾವ್ಯಗಳನ್ನು ಅವರ ತೀಕ್ಷ್ಣ ಆಲೋಚನಾ ಕ್ರಮಕ್ಕೆ ನಿದರ್ಶನ ಅಮಿತಗತಿ (ಕ್ರಿ.ಶ. ೯೨೦ – ೧೦೨೦) ಯ ಸುಭಾಷಿತರತ್ನ ಸಂದೇಹ 'ಸಂಸ್ಕೃತ ಮತ್ತು ಪ್ರಾಕೃತ ಕಾವ್ಯ ಸಂಕಲನಗಳನ್ನು ಪರಿಚಯಿಸುವ ಮಹಾಪ್ರಬಂಧವು 'ಗಾಥಾಸಪ್ತಸತಿ'ಯಲ್ಲಿ ಶೋಧಿಸುತ್ತದೆ. ಡಾ. ಯಾಕೋಳ್ಳಿಯವರ ಅಧ್ಯಯನದ ನಿವೇದಿಸುವ ಚರ್ಚೆ ಅಡಿ ಟಿಪ್ಪಣಿಗಳಲ್ಲಿ ಗಮನ ಸೆಳೆಯುತ್ತದೆ. ಮೂರನೇ ಅಧ್ಯಾಯ ಸಂಕಲನ ಚಾರಿತ್ರಿಕ ವಿವರಗಳ ಮಲ್ಲಿಕಾರ್ಜುನ ವಿದ್ಯಾನಂದರ ವ್ಯಕ್ತಿತ್ವಗಳ ಮೇಲೆ ಬೆಳಕು ಚಲ್ಲುತ್ತದೆ. ಕಾವ್ಯಸಾರದಲ್ಲಿ ೧೫ ಅಶ್ವಾಸನಗಳಲ್ಲಿ ನಾಲ್ಕೇ ಅಧ್ಯಾಯ ಮಹಾಪ್ರಬಂಧದ ಹೃದಯ. ವಿದ್ಯಾನಂದ ಮಲ್ಲಕವಿಗಳು ಕಾವ್ಯಸಂಕಲನಗಳ ಸಂಯೋಜನೆಯನ್ನು ಸೂಕ್ಷ್ಮವಾಗಿ ಪರಿಶೀಲಿಸುವುದು. ಕಾವ್ಯ ಪರಂಪರೆಯ ನಿರ್ಮಾಪಕ ಎನ್. ಅನಂತ ರಂಗಾಚಾರ್ ೧೯೭೨ ರಲ್ಲಿ ಇದನ್ನು ಸಂಪಾದಿಸಿದ್ದು, ಪ್ರಕಟಿತ ಕೃತಿ, ೧೮ ಅಧ್ಯಾಯಗಳ ಪದ್ಯಗಳ ೨೧೯೧ ಸಾಲು.

ಸಮಕಾಲೀನರಾದ ಜನ್ನ, ರುದ್ರಭಟ್ಟ, ನೇಮಿಚಂದ್ರ ಮುಂತಾದವರು ಹೆಚ್ಚಿನ ಅವಕಾಶ ನೀಡಿದ್ದಾರೆ. ಕವಿಗಳ ಆಯ್ಕೆಯ ಬಗ್ಗೆಯಾಗಲಿ, ಪದ್ಯ ಆಯ್ಕೆಯ ಬಗ್ಗೆಯಾಗಲಿ, ೧೮ ವರ್ಣಗಳಲ್ಲಿ ಈ ವರ್ಣನೆಗೆ ಇಷ್ಟೇ ನಿರ್ಬಂಧಗಳಿರಲಿಲ್ಲ. ೮ನೇ ಆಶ್ವಾಸದ ಚಂದ್ರೋದಯ ಪ್ರತಿಯೊಂದು ವರ್ಣನೆಯ ಅಶ್ವಾಸದ ಆರಂಭದಲ್ಲಿ ಒಂದು. ಅವು ಆ ವರ್ಣನೆ ಒಳಗೊಳ್ಳುವ ವಿವರಣಗಳನ್ನು ಸೂಚಿಸುತ್ತದೆ. ಮಲ್ಲಿಕಾರ್ಜುನ ಕನ್ನಡದ ಪ್ರಥಮ ಸಂಕಲನ, ಸೂಕ್ತಿಸುಧಾರಣವ ಕನ್ನಡದ ಪ್ರಥಮ ಸಂಕಲನ ಕಾವ್ಯ. ಪ್ರಾಚೀನ ಕನ್ನಡದ ಬೃಹತ್ ಕಾವ್ಯ ಸಂಕಲನ. ಈ ಒಟ್ಟಿನಲ್ಲಿ ಡಾ. ಯಕ್ಕೋಳ್ಳಿಯವರ ಪ್ರಾಚೀನ ಕನ್ನಡ ಕಾವ್ಯ ಸಂಕಲನಗಳು ಅಧ್ಯಯನ ಹಳಗನ್ನಡ ಕಾವ್ಯಗಳ ಅಭ್ಯಾಸ ಗರಿಗೊಂದು ಕೈದಿವಿಗೆಯೆಂದು ಡಾ. ವ್ಹಿ. ಎಸ್. ಮಾಳಿಯವರು ಹೇಳಿದ್ದು ಯಥೋಚಿತ್ತವಾಗಿದೆ. ಡಾ. ವಾಯ್. ಎಂ. ಯಕ್ಕೋಳ್ಳಿಯವರ ಮಹಾಪ್ರಬಂಧ ಮೌಲ್ಯಮಾಪನವನ್ನು ಡಾ. ವ್ಹಿ. ಎಸ್. ಮಾಳಿಯವರು ಸಮರ್ಪಕವಾಗಿ ನಿರ್ವಹಿಸಿದ್ದಾರೆ.

**ಡಾ. ಸಂಗಮೇಶ ಬಿರಾದಾರ 'ವೈಯಾಕರಣ ಎರಡನೆಯ ನಾಗವರ್ಮ' :**

'ವೈಯಾಕರಣ ಎರಡನೆಯ ನಾಗವರ್ಮ'ವು ಸಂಗಮೇಶ ಬಿರಾದಾರರವರ ಪಿ.ಎಚ್.ಡಿ. ಮಹಾಪ್ರಬಂಧವಾಗಿದೆ. ಇದನ್ನು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ ಮಸ್ತಕ ರೂಪದಲ್ಲಿ ಪ್ರಕಟವಾಗಿದೆ. ನರಸಿಂಹಾಚಾರ್ಯರು ಕವಿಚರಿತೆ, ಕಟ್ಟದ ಮೇಲೆ, ಬಹುಕಾಲ ಕನ್ನಡ ಸಾಹಿತ್ಯ ಚರಿತ್ರೆಯನ್ನು ಕಾಡಿದ ಸಮಸ್ಯೆಯೆಂದರೆ ನಾಗವರ್ಮರ ಸಂಖ್ಯೆ ನಾಗವರ್ಮ ಎಂಬ ಹೆಸರಿನ ಹಲವು ಕವಿಗಳು ಕನ್ನಡದಲ್ಲಿ ಕೃತಿಗಳನ್ನು ರಚಿಸಿದ್ದಾರೆ. ವಸ್ತುಕೋಶ, ಕರ್ನಾಟಕ ಭಾಷಾಭೂಷಣ,

ವರ್ಧಮಾನ ಪುರಾಣ, ವತ್ಸರಾಜ ಚರಿತಾಗಮ, ಚಂದ್ರಚೂಡಾಮಣಿ ಶತಕ ಇತ್ಯಾಧಿ ನಾಗವರ್ಮರೆಂಬುವರು ಎಷ್ಟು ಜನ? ಮೊದಲಿಗೆ ಡಾ. ಸಂಗಮೇಶ ಬಿರಾದಾರ ಅವರು ಆಧಾರಗಳನ್ನು ಕಲೆ ಹಾಕಿ ಮೂವರು ನಾಗವರ್ಮರನ್ನು ಗುರುತಿಸಿದ್ದಾರೆ.

ಮಹಾಪ್ರಬಂಧವು ಮೂರು ಭಾಗಗಳಲ್ಲಿ ಮೈದಳೆದರಿದೆ. ಮೊದಲ ಭಾಗ 'ನಾಗವರ್ಮ'ರ ಸಂಖ್ಯಾ ಸಮಸ್ಯೆಯನ್ನು ಬಿಡಿಸಿದರೆ ಎರಡನೇ ಭಾಗ ೨ನೇ ನಾಗವರ್ಮನ ವ್ಯಾಕರಣದ ಹಿನ್ನಲೆಯನ್ನು ಶೋಧಿಸುತ್ತದೆ. ೩ನೇ ಭಾಗ ಕನ್ನಡ ವ್ಯಾಕರಣ, ಸಮೀಕ್ಷೆಗೆ ಮೀಸಲು ತುಂಬಾ ಶ್ರಮ ಮತ್ತು ಶ್ರದ್ಧೆಯಿಂದ ಮಹಾಪ್ರಬಂಧ ಕಟ್ಟಿರುವುದನ್ನು ಡಾ. ವ್ಹಿ. ಎಸ್. ಮಾಳಿಯವರು ವಿವರಿಸಿದ್ದಾರೆ. ಮೂರನೇ ಭಾಗ ಸಮಾಲೋಚನೆ, ಈ ಪ್ರಬಂಧದ ಜೀವ–ಜೀವಾಳವಾಗಿದೆ.

ವ್ಯಾಕರಣ, ಛಂದಸ್ಸು ಅಲಂಕಾರಗಳ ಅಧ್ಯಯನ ಸುಲಭವಲ್ಲ. ವ್ಯಾಕರಣ, ಭಾಷಾವಿಜ್ಞಾನದಲ್ಲಿ ಪ್ರಯೋಗಗಳೇ ಸಂಶೋಧನೆಯ ಕೇಂದ್ರ ಬಿಂದುಗಳ ಶಿಸ್ತು ಮತ್ತು ಸಮಾಧಾನದಿಂದ ಎರಡನೆಯ ನಾಗವರ್ಮನ ವ್ಯಾಕರಣವನ್ನು ಅಧ್ಯಯನಿಸಿದ ಬಿರಾದಾರ ಕನ್ನಡ ವ್ಯಾಕರಣ ಅಧ್ಯಯನಕ್ಕೊಂದು ಆಕರ ಗ್ರಂಥವಾಗಿ ಮಹಾಪ್ರಬಂಧವನ್ನು ರೂಪಿಸಿದುದು ಪ್ರಶಂಸಿನೀಯವಾಗಿದೆ.

ಮಹಾಪ್ರಬಂಧದ ಆಶಯವನ್ನು ಸಫಲಗೊಳಿಸುವ ಸಮಾಲೋಚನೆ, ಸಂಜ್ಞೆಯಿಂದ ಮೊದಲುಗೊಂಡು ಕನ್ನಡ ವ್ಯಾಕರಣಗಳ ಬೆಳಕಿನಲ್ಲಿ ಸಮೀಕ್ಷಿಸಲಾಗಿದೆ. ಕನ್ನಡ ಶುದ್ಧಗೆಯ ನಿರೂಪಣೆ ಎರಡನೇ ನಾಗವರ್ಮನ ಕೊಡುಗೆ. ನಾಗವರ್ಮನಲ್ಲಿರುವ ಸ್ಪಷ್ಟತೆ ಕೇಶಿರಾಜನಲ್ಲಿಲ್ಲ. ಈ ಕನ್ನಡ ಅಕ್ಷರಗಳ ಶೋಧ ನಾಗವರ್ಮನ ಸ್ವಂತಿಕೆ ಎಂಬುದು ಡಾ. ಸಂಗಮೇಶ ಬಿರಾದಾರರ ಅಭಿಪ್ರಾಯವಾಗಿದೆ. ಸಾಹಿತ್ಯಭ್ಯಾಸಿಗಳಿಗೆ ವ್ಯಾಕರಣ ಬಿಸಿ ತುಪ್ಪ. ನುಂಗಲುಬಾರದು ಹಾಗೂ ಉಗಳಬಾರದು. ಸ್ನಾತಕ ಹಂತದಲ್ಲಿ ಅದೆಷ್ಟೋ ವಿದ್ಯಾರ್ಥಿಗಳು ವ್ಯಾಕರಣಕ್ಕೆ ಮುನಿಸಿಕೊಂಡು ಐಚ್ಛಿಕ ಕನ್ನಡಕ್ಕೆ ಬರುವುದಿಲ್ಲ.

ಸಂಜ್ಞಾ, ಸಂಧಿ, ವಿಭಕ್ತಿ, ಶಬ್ಧರೀತಿ, ಸಮಾಸ, ತದ್ಧಿತ ಆಖ್ಯಾತ, ಅವ್ಯಯ, ನಿಪಾತ, ನಿರೂಪಣ ವಿಧಾನಗಳಲ್ಲಿ ನಾಗವರ್ಮನ ಹೊಸ ಪ್ರತಿಪಾದನೆ. 'ನಾಗವರ್ಮನ ಪ್ರಭಾವ ಮುಂದಿನ ವೈಯಾಕರಣರ ಮೇಲೆ ಎಷ್ಟರ ಮಟ್ಟಿಗೆ ಬಿದ್ದಿದೆಯೆಂದರೆ ಅವನು ನಡೆದಲ್ಲಿಯೇ ನಡೆದಿದ್ದಾರೆ. ಕುಳಿತಲ್ಲಿಯೇ ಕುಳಿತಿದ್ದಾರೆ. ಒಮ್ಮೊಮ್ಮೆ ವ್ಯಾಕರಣದಲ್ಲಿ ಅನುಕರಿಸುವುದು ಏನಿದೆ? 'ವೈಯಾಕರಣ ಎರಡನೆಯ ನಾಗವರ್ಮ' ಕನ್ನಡದ ಪ್ರೌಢ ಪ್ರಬಂಧಗಳಲ್ಲೊಂದು ಎಂಬುದರಲ್ಲಿ ಎರಡು ಮಾತಿಲ್ಲ. ವ್ಯಾಕರಣ ಅಧ್ಯಯನದ ಆಸಕ್ತಿ ಕ್ಷೀಣಿಸುತ್ತಿರುವ ಇಂದಿನ ಸಂದರ್ಭದಲ್ಲಿ ಮಹಾಪ್ರಬಂಧಗಳು ಮತ್ತೇ ಮತ್ತೇ ಪ್ರಕಟಗೊಳ್ಳಬೇಕು ಎಂದಿರುವುದು ಸಮಂಜಸವಾಗಿದೆ.

'ವೈಯಾಕರಣ ಎರಡನೆಯ ನಾಗವರ್ಮ' ಕನ್ನಡದ ಪ್ರೌಢ ಪ್ರಬಂಧಗಳಲ್ಲೊಂದು ಎಂಬುದರಲ್ಲಿ ಎರಡು ಮಾತಿಲ್ಲ. ಇದು ಕನ್ನಡ ಸಾಂಪ್ರದಾಯಿಕ ವ್ಯಾಕರಣ ಪರಂಪರೆಯ ಚರಿತ್ರೆಯನ್ನೇ ತೆರೆದಿಡುತ್ತದೆ. ಕಾತಂತ್ರದ ನೆಲೆಗಟ್ಟಿನ ಮೇಲೆ ನಾಗವರ್ಮ ಕನ್ನಡ ವ್ಯಾಕರಣ ಸೌಧ ನಿರ್ಮಿಸಲು ಯೋಚಿಸಿದರೂ ದೇಶಿ ರಚನಾ ವಿಧಾನ ಅಳವಡಿಸಿಕೊಳ್ಳುವುದು ಅವನಿಗೆ ಹೇಗೆ ಅನಿವಾರ್ಯವಾಯಿತೆಂದು ಡಾ. ಸಂಗಮೇಶ ಬಿರಾದಾರ ಕುತೂಹಲದಿಂದ ದರ್ಶಿಸಿದ್ದಾರೆ. ಇದಕ್ಕಾಗಿ ಅವರು ಕನ್ನಡದೊಂದಿಗೆ ಸಂಸ್ಕೃತ, ಮಲಯಾಳಂ ಭಾಷೆಗಳನ್ನು ಅವಲೋಕಿಸಿದ್ದಾರೆ. ಅಧ್ಯಯನ ವಿಧಾನ, ಪ್ರವೇಶ ಪರಿವಿಡಿಗಳು ಅಧ್ಯಯನದ ಸೋಪಾನಗಳು ಈ ಮಹಾಪ್ರಬಂಧದ ಯಶಸ್ಸಿಗೆ ಅಧ್ಯಯನ ವಿಧಾನವೇ ಏಣಿ, ವಿಷಯ ನಿರೂಪಣಾ ವಿಧಾನ. ಅವಶರವಿಲ್ಲದ ಸಮಾಧಾನದ ಸ್ಪಷ್ಟ ಪ್ರತಿಪಾದನೆ. ಪೂರ್ವಗ್ರಹಪೀಡಿತವಲ್ಲದ ದೃಷ್ಟಿ, ಸರಳ ವಿವರಣೆ ಇದರ ಧನಾತ್ಮಕ ಅಂಶಗಳು.

ವೈಯಾಕರಣ ನಾಗವರ್ಮನ ಸಾಂಸ್ಕೃತಿಕ ವ್ಯಕ್ತಿತ್ವದ ಬೆಲೆಗಟ್ಟುವಲ್ಲ ಹಾಗೂ ಕನ್ನಡ ವ್ಯಾಕರಣ ಪರಂಪರೆಯಲ್ಲಿ ಅವನ ವ್ಯಾಕರಣ ಗ್ರಂಥಗಳ ಸ್ಥಾನ ನಿರ್ದೇಶಿಸುವಲ್ಲಿ ಇದು ಸಫಲಗೊಂಡಿದೆ. ಮಹಾಪ್ರಬಂಧದ ಮೂರನೇ ಭಾಗ ಮೊದಲೆರಡು ಭಾಗಗಳಿಗಿಂತ ಹೆಚ್ಚು ಮೌಲಿಕವೆನಿಸುತ್ತದೆ.

ಮೊದಲ ಭಾಗ ಮಾತ್ರ ಚರ್ಚಿತ ಚರ್ವಣದಂತಿದೆ. ಪ್ರಬಂಧದುದ್ದಕ್ಕೂ ವಿಶ್ಲೇಷಣೆಗಿಂತ ವಿವರಣೆ ಅಧಿಕವಾಗಿದೆ. ಮುದ್ರಣ ದೋಷಗಳು ಬೇಸರವನ್ನುಂಟು ಮಾಡುತ್ತವೆ. ಡಾ. ಆರ್. ಸಿ. ಹಿರೇಮಠರು, ಮುನ್ನಡಿಯಲ್ಲಿ ಹೇಳಿದಂತೆ 'ವ್ಯಾಕರಣ ಗ್ರಂಥಗಳಲ್ಲಿ ಅಚ್ಚಿನ ದೋಷಗಳುಳಿದರೆ ಮೂಲ ನಿರ್ಣಯಕ್ಕೆ ಅಭಾಸವುಂಟಾಗುತ್ತದೆ. ಮರು ಮುದ್ರಣದಲ್ಲಿ ಇಂತಹ ದೋಷಗಳಿರಬಾರದೆಂಬುದು ಆಶಯ. ಜೊತೆಗೆ ಇಂತಹ ಗ್ರಂಥಗಳು ಪರಿಷ್ಕೃತ ಆವೃತ್ತಗಳನ್ನು ಕಾಣಬೇಕು. ಕನ್ನಡ ವಿದ್ಯಾರ್ಥಿಗಳಲ್ಲಿ ವ್ಯಾಕರಣ ಅಧ್ಯಯನದ ಆಸಕ್ತಿ ಕ್ಷೀಣಿಸುತ್ತಿರುವ ಇಂದಿನ ಸಂದರ್ಭದಲ್ಲಿ ಇಂತಹ ಮಹಾಪ್ರಬಂಧಗಳು ಮತ್ತೇ ಮತ್ತೇ ಪ್ರಕಟಗೊಳ್ಳಬೇಕು.

ಹೀಗೆ ಪ್ರಬಂಧದ ಹೆಚ್ಚುಗಾರಿಕೆಯನ್ನು ಸೂಚಿಸಿ, ಕೊನೆಯಲ್ಲಿ ಕೊರತೆ ಮತ್ತು ಮಿತಿಯನ್ನು ಸ್ಪಷ್ಟಪಡಿಸಿರುವುದು ಡಾ. ವ್ಹಿ. ಎಸ್. ಮಾಳಿಯವರು ಸಮತೋಲನ ನಿಲುವಿಗೆ ಪುರಾವೆಯನ್ನು ಒದಗಿಸುತ್ತದೆ.

**ಡಾ. ಬಸು ಪಟ್ಟದರವರ 'ನಿಜಗುಣ ಶಿವಯೋಗಿಗಳು' :**

ಡಾ. ಬಸು ಪಟ್ಟದ ಅವರು 'ನಿಜಗುಣ ಶಿವಯೋಗಿಗಳು' ಜೀವನ ಸಾಧನೆ ಕನ್ನಡದ ಪ್ರಥಮ ದರ್ಜೆಯ ಮಹಾಪ್ರಬಂಧಗಳಲ್ಲೊಂದು. ೪೫ ವರ್ಷಗಳ ಸುದೀರ್ಘ ಅಜ್ಞಾತವಾಸದ ಕರ್ನಾಟಕದ ಸುವರ್ಣ ಸಂದರ್ಭದಲ್ಲಿ ಇದು ಪ್ರಕಟಗೊಂಡಿರುವುದು ಸಾರಸ್ವತದ ಸುದೈವ. ನಿಜಗುಣ

ಶಿವಯೋಗಿ ವೇದಾಂತಿಗಳು, ಪರಂಜ್ಯೋತಿಯ ದಾರ್ಶನಿಕ ಕವಿ. 'ಭಾಷೆ-ಕಾವ್ಯ-ಯೋಗ-ಜ್ಞಾನ-ದರ್ಶನ-ಭಕ್ತಿ-ಅನುಭವ ಪ್ರಾಪಂಚಿಕ ಜ್ಞಾನ-ಪ್ರತಿಭೆ-ಪಾಂಡಿತ್ಯ. ಅವರಷ್ಟು ಸಮತೂಕದ ವ್ಯಕ್ತಿ ಅಪರೂಪವೇ ಸರಿ'. ಪಾರಮಾರ್ಥಿಕ ಚಿಂತನೆ, ನಿಗೂಡವಾದುದು ಸಮುದ್ರವನ್ನು ಬಿಂದಿಗೆಗೆ ತುಂಬಿದಂತೆ.

ಡಾ. ಬಸು ಪಟ್ಟದ ನಿಜಗುಣದ ತತ್ವವಾರಿಧಿಯನ್ನು ಅತ್ಯಂತ ಸೂಕ್ಷ್ಮವಾಗಿ ಅವಲೋಕಿಸಿ 'ನಿಜಗುಣರೇ ತತ್ವಜ್ಞಾನ, ತತ್ವಜ್ಞಾನದ ಸಾಕಾರವೆ ನಿಜಗುಣರು'. ಮೂರು ಭಾಗಗಳಲ್ಲಿ ಮೈದಳೆದ ಸಂಪ್ರಬಂಧದಲ್ಲಿ ಒಟ್ಟು ೧೨ ಅಧ್ಯಾಯಗಳಿವೆ. ವಿಜ್ಞಾನ ತತ್ವಜ್ಞಾನಗಳ ರೋಚಕ ಜಿಜ್ಞಾಸೆಯಿದೆ. ವೈಧಾನಿಕ ಶಿಸ್ತು ಮತ್ತಷ್ಟು ಕಾಣುತ್ತಿತ್ತು. ಒಂದು ಟನ್ನದಷ್ಟು ಅದಿರು ಸೊಸಿ ಒಂದು ತೊವಾ ಚಿನ್ನ ಶೋಧಿಸುವ ಕೆಲಸವಿದು. 'ಶಂಬುಲಿಂಗವೇ ತಾನಾದ ನಿಜಗುಣ ಶಿವಯೋಗಿ'. ಶಂಭುಲಿಂಗವೆಂಬ ಮುದ್ರಿಕೆಯು ನಿಜಗುಣರ ಇಷ್ಟಲಿಂಗದ ಹೆಸರು. ಅವರ ಗುರುಗಳ ಹೆಸರಲ್ಲ. ಪರಮ-ವೀರಶೈವರು ಕಾಲ, ಕ್ರಿ.ಶ. ಸುಮಾರು ೧೪೦೦ ಸಂಶೋಧನೆಯ ಹೆಜ್ಜೆಗಳು ಅರವತ್ತೂರು ಪುರಾತನರ ತ್ರಿವಿಧಿ. 'ಅರಿದೊಡೆ ಮೋಕ್ಷ' ಮರೆದೊಡೆ ಬಂಧ, ಜೀವನ ಮೇಲೆ ಅಚ್ಚಾದಿತವಾದ ಮಾಯೆಯ, ಮೋಹದ ಮುಸುಕನ್ನು ಸರಿಸಿ ಜೀವನಿಗೆ ತನ್ನ ನಿಜವಾದ ಅರಿವು ಉಂಟಾಗುವುದಾದರೆ ಅದೇ ಮೋಕ್ಷವಾಗುತ್ತದೆ.

ಆದ್ದರಿಂದ 'ಹಾರುಗದ್ದೆ, ಮಾನಪ್ಪ ನಾಯಕ ಅವರನ್ನು ಮುಳ್ಳು ಮಂಚವನೇರಿದ ಭೀಷ್ಮನೆಂದು ಕರೆದದ್ದು. ಕರ್ಮ-ಭಕ್ತಿ-ಜ್ಞಾನಯೋಗ ಕೈವಲ್ಯದ ಮಾರ್ಗಗಳು. ನಿಜಗುಣರು ಕನ್ನಡಕ್ಕೆ ಮೊದಲು ಯೋಗಗ್ರಂಥ, ಮೊದಲು ಹಾಡು ಕೊಟ್ಟವರು. 'ವಿವೇಕ ಚಿಂತಾಮಣಿ' ನಿಜಗುಣರ ಅನುಭವ ಸಾರ. ಪರಮಾರ್ಥ ಗೀತೆ ಮತ್ತು ಪರಾನುಭವ ಭೋಧೆ ನಿಜಗುಣರ ನಿಜತಿರಳು ಅಭಿವ್ಯಕ್ತಗೊಂಡಿರುವುದು ಕೈವಲ್ಯ ಪದ್ಧತಿ ಮತ್ತು ವಿವೇಕ ಚಿಂತಾಮಣಿಗಳಲ್ಲ. ಡಾ. ಬಸು ಪಟ್ಟದ ಅವರ ಶೈಲಿ ಸರಳ, ಭಾಷೆ ಸುಲಭ, ಸಾಮಾನ್ಯ ಓದುಗರಿಗೂ ಕ್ಲಿಷ್ಟವೆನಿಸುವುದಿಲ್ಲ. ಚಿಕ್ಕ ಚಿಕ್ಕ ವ್ಯಾಖ್ಯಗಳು. ಸುಲಲಿತ ಓಘ, ವಿಷಯವನ್ನು ಮರೆಮಾಚಲು ಸುತ್ತು ಬಳಸಿದ ಸರ್ಕಸ್ಸು ಅವರ ವ್ಯಕ್ತಿತ್ವಕ್ಕೆ ಒಗ್ಗದು. ನೇರದಾರಿ, ಸ್ಪಷ್ಟಮಾತು, ದಿಟ್ಟ ನಡಿಗೆ, ಅವರು ಶಿಸ್ತಿನ ಸಂಶೋಧಕರು. ಅಲ್ಲಲ್ಲಿ ವಿಷಯ ಪುನರಾವರ್ತನೆಗೊಂಡರೂ ದೋಷವೆನಿಸುವುದಿಲ್ಲ.

ಅವರ ಓದಿನ ವ್ಯಾಪ್ತಿ ಹಿರಿದು, ಜೀವನಾನುಭವ ದೊಡ್ಡದು. ಪೌರ್ವಾತ್ಯ-ಪಾಶ್ಚಾತ್ಯ ತತ್ವ ಪರಂಪರೆಯನ್ನು ಚೆನ್ನಾಗಿ ಮಂಡಿಸಿದ್ದಾರೆ. ಡಾ. ಬಸು ಪಟ್ಟದದವರು ಕೆಲಸ ಒಂದಾರ್ಥದಲ್ಲಿ ನಿಜಗುಣರ ಮೂಲಕ ಭಾರತೀಯ ತತ್ವ ಪರಂಪರೆಯ ಸಮುದ್ರ ಮಂಥನ, ಮಹಾಪ್ರಬಂಧವನ್ನು ಓದಿ ಮುಗಿಸಿದಾಗ ಅವರ ಮೇಲಿನ ಅಭಿಮಾನ, ಗೌರವಾದರಗಳು ಹೆಚ್ಚುತ್ತವೆ. ಪ್ರಬಂಧ ವಿವರಣಾತ್ಮಕವೆನಿಸಿದರೂ ಕಿಂಚಿತ್ತು ಬೆಲೆ ಕುಗ್ಗುವುದಿಲ್ಲ. ಆಕರ ಸಾಮಗ್ರಿ ಕಲೆ ಹಾಕುವ ಸಾಹಸ, ವರ್ಗೀಕರಿಸುವ ಪರಿಶ್ರಮ.

ತಾಳೆ ನೋಡುವ ಸಂಯಮ ಅನುಕರಣೀಯ, ಅಧ್ಯಯನ-ಅಧ್ಯಾಪನ-ಸಂಶೋಧನಗಳ ನಡುವೆ ಸೃಜನಶೀಲತೆಯನ್ನು ಕಳೆದುಕೊಳ್ಳದ ಡಾ. ಬಸು ಪಟ್ಟದವರವ ಸಾಹಿತ್ಯವೇ ಒಂದು ಮಹಾಪ್ರಬಂಧದ ವಸ್ತು.

ಡಾ. ಬಸು ಪಟ್ಟದ ಅವರ ಶೈಲಿ ಸರಳ, ಸುಲಭ, ನೇರ ಧಾರಿ, ಸ್ಪಷ್ಟ ಮಾತು, ದಿಟ್ಟ ನಡಿಗೆ, ಶಿಸ್ತಿನ ಸಂಶೋಧಕರು ಜೀವನಾನುಭವ ದೊಡ್ಡದು. ಪೌರ್ವಾತ್ಯ-ಪಾಶ್ಚಾತ್ಯ ತತ್ವ ಪರಂಪರೆಯನ್ನು ನಿಜಗುಣರ ಮೂಲ ಭಾರತೀಯ ತತ್ವ ಪರಂಪರೆಯ ಸಮುದ್ರ ಮಂಥನ. ಡಾ. ಬಸು ಪಟ್ಟದರವರ ಸಾಹಿತ್ಯವೇ ಒಂದು ಮಹಾಪ್ರಬಂಧದ ವಸ್ತುವಾಗಿದೆ. ಈ ಮಾತುಗಳು ಡಾ. ವ್ಹಿ. ಎಸ್. ಮಾಳಿಯವರ ಸಾಹಿತ್ಯ ಮತ್ತು ಸಾಂಸ್ಕೃತಿಕ ವ್ಯಕ್ತಿತ್ವಕ್ಕೆ ಸಲ್ಲಿಸುವ ಗೌರವ ಎಂಥಹದು ಎಂಬುದನ್ನು ಪರಿಚಯಿಸುತ್ತವೆ. ಅಂದಿನಿಂದ ಕೃತಿಗಳನ್ನು ಆಯಾ ಕಾಲಮಾನದ ಪರಿಸರದಲ್ಲಿರಿಸಿ ಬೆಲೆಗಟ್ಟಿರುವುದು ಅವರ ಸಹೃದಯತೆಗೆ ಸಾಕ್ಷಿಯಾಗಿದೆ. ಸಾಂಸ್ಕೃತಿಕ ಪ್ರೀತಿಗೆ ದ್ಯೋತಕವಾಗಿದೆ.

**ಸಂಶೋಧನ ಮಹಾಪ್ರಬಂಧಗಳು :**

ಸಂಶೋಧನಾ ಮಹಾಪ್ರಬಂಧಗಳು ವಿಶ್ವವಿದ್ಯಾಲಯಗಳ ಉನ್ನತ ವ್ಯಾಸಂಗದ ದೀರ್ಘ ತಪಸ್ಸಿನ ಫಲಗಳು. ವಿಶ್ವವಿದ್ಯಾಲಯದ ಅಕಾಡೆಮಿಕ್ ಶಿಸ್ತು, ಘನತೆ, ಗೌರವ ಸಾಧನಗಳ ಮಾನದಂಡಗಳು. ಉನ್ನತ ಅಧ್ಯಯನದ ಕಮ್ಮಟಗಳಲ್ಲಿ ವಿದ್ಯೆಯನ್ನು ಬೀದಿ ಬೀದಿಗೂ ಹಂಚುವ ಸಾಲುದೀಪಗಳು. ಒಂದು ಸಂಶೋಧನ ವ್ಯವಸ್ಥೆ. ಸಂಶೋಧಕರಿಗೆ ಮಹಾಪ್ರಬಂಧಗಳು ಮೂರು ವಿದ್ವಾಂಸರಿಂದ ಮೌಲ್ಯಮಾಪನ ಮನ್ನಣೆ ಪಡೆದಿರುತ್ತದೆ. ಗ್ರಂಥ ರೂಪದಲ್ಲಿ ಪ್ರಕಟಗೊಳ್ಳುವಾಗ ಹಲವು ಮಾರ್ಪಾಟುಗಳಿಗೆ ೨೦೦೦ದ ವರ್ಷದಲ್ಲಿ ಪ್ರಕಟಗೊಂಡಿರುವ ೧೭ ಸಂಶೋಧನಾ ಮಹಾಪ್ರಬಂಧಗಳ ಸಮೀಕ್ಷೆ ಇಲ್ಲಿದೆ. ಪ್ರಾಚೀನ ಸಾಹಿತ್ಯ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಅಧ್ಯಯನದ ಹಾಗೂಐದು ವ್ಯಕ್ತಿ ಕೇಂದ್ರಿತ ಸಂಶೋಧನೆಗಳನ್ನು ಒಳಗೊಂಡಿವೆ.

೧) **ಪ್ರಾಚೀನ ಸಾಹಿತ್ಯ ಮತ್ತು ಸಂಸ್ಕೃತಿ ಕುರಿತ ಮಹಾಪ್ರಬಂಧಗಳು :**

೧. ಕನ್ನಡದಲ್ಲಿ ವರ್ಧಮಾನ ಸಾಹಿತ್ಯ : ಡಾ. ವೈ. ಸಿ. ಭಾನುಮತಿ

೨. ಪಾರ್ಶ್ವನಾಥ ಪುರಾಣ : ಒಂದು ತೌಲನಿಕ ಅಧ್ಯಯನ : ಡಾ. ರಾ. ಇಚ್ಚಂಗಿ

೩. ಅದೃಶ್ಯ ಕವಿ : ಜೀವನ ಮತ್ತು ಕೃತಿಗಳು : ಡಾ. ರಾಜೇಂದ್ರ ಅಣ್ಣಾನವರ

೪. ಮೋಳಿಗೆ ಮಾರಯ್ಯ ಮತ್ತು ಮಹಾದೇವಿಯಮ್ಮ : ಡಾ. ಸುಶೀಲಾ ನರಕೆ

೫. ಶರಣ ಬಸವೇಶ್ವರರು ಹಾಗೂ ಅವರ ಪರಿಸರದ ಸಾಹಿತ್ಯ :
ಡಾ. ಎಸ್. ಎಂ. ಹಿರೇಮಠ

೬. ಬದಾಮಿಯ ಸಾಂಸ್ಕೃತಿಕ ಅಧ್ಯಯನ : ಡಾ. ಶೀಲಾಕಾಂತ ಪತ್ತಾರ

**೨) ಆಧುನಿಕ ಕವಿ – ಕೃತಿ – ಕುರಿತ ಮಹಾಪ್ರಬಂಧಗಳು :**

೧. ಬಸವರಾಜ ಕಟ್ಟೀಮನಿಯ ಕಾದಂಬರಿಗಳು : ಡಾ. ಬಸವರಾಜ ಸಬರದ

೨. ಪ್ರೋ. ಕೆ. ಜಿ. ಕುಂದಣಗಾರ : ಒಂದು ಅಧ್ಯಯನ : ಡಾ. ಸದಾನಂದ ಬಳ್ಳೂರ

೩. ಕಣವಿ ಮತ್ತು ಆಧುನಿಕ ಕಾವ್ಯ ಪರಂಪರೆ : ಡಾ. ಗುಂಡಣ್ಣ ಕಲಬುರ್ಗಿ

**೩) ಜಾನಪದ ಅಧ್ಯಯನದ ಮಹಾಪ್ರಬಂಧಗಳು :**

೧. ವಚನ ಸಾಹಿತ್ಯದಲ್ಲಿ ಜನಪದ ಅಂಶಗಳು : ಒಂದು ಅಧ್ಯಯನ : ಡಾ. ಸಿ. ಕೆ. ನಾವಲಗಿ

೨. ಪ್ರಸಾದನ ಕಲೆ : ಜಾನಪದೀಯ ಅಧ್ಯಯನ : ಡಾ. ಸವಿತಾ ನಾಯಕ

೩. ದಲಿತರ ಬದುಕು ಮತ್ತು ಸಂಸ್ಕೃತಿ : ಜಾನಪದೀಯ ಅಧ್ಯಯನ : ಡಾ. ಅರ್ಜುನ ಗೊಳಸಂಗಿ

೪. ಲಂಬಾಣಿ ಜನಪದ ಸಾಹಿತ್ಯ : ಡಾ. ಡಿ. ಬಿ. ನಾಯಕ

**೪) ಆಧುನಿಕ ಕಥಾ ಸಾಹಿತ್ಯದ ಅಧ್ಯಯನ :**

೧. ಕಥಾ ಮಾನಸಿ : ಡಾ. ಗಿರಿಜಾ ಶಾಸ್ತ್ರೀ



**೫) ನಾಡು – ನುಡಿ ಚಿಂತನೆ :**

೧. ಕನ್ನಡಪರ ಚಿಂತನೆ ಹಾಗೂ ಪರಂಪರೆ : ಡಾ. ಕಾ. ವೆಂ. ಶ್ರೀನಿವಾಸಮೂರ್ತಿ

ಒಟ್ಟಾರೆಯಾಗಿ ಡಾ. ವ್ಹಿ. ಎಸ್. ಮಾಳಿಯವರು ಸಂಶೋಧನ ಪ್ರಬಂಧಗಳು ಹೇಗೆ ಪರಿಚಯಿಸುತ್ತಾರೆ ಎಂಬುದಕ್ಕೆ ಒಂದು ಮಾದರಿ.

ಡಾ. ರಾಜಶೇಖರ ಇಚ್ಚಂಗಿಯವರು ೨೩ನೇ ತೀರ್ಥಂಕನಾದ ಪಾರ್ಶ್ವನಾಥನನ್ನು ಕುರಿತು ಕವಿ ಪಾರ್ಶ್ವ ಪಂಡಿತನು ರಚಿಸಿದ 'ಪಾರ್ಶ್ವನಾಥ ಪುರಾಣ'ವನ್ನು ತೌಲನಿಕ ಅಧ್ಯಯನಕ್ಕೊಳಪಡಿಸಿದ್ದರೆ ಡಾ. ವೈ. ಸಿ. ಭಾನುಮತಿಯವರು ೨೪ನೇ ತೀರ್ಥಂಕರನಾದ ಮಹಾವೀರನನ್ನು ಕೇಂದ್ರವಾಗಿರಿಸಿಕೊಂಡು ಕನ್ನಡದ ವರ್ಧಮಾನ ಸಾಹಿತ್ಯವನ್ನು ಸಮೀಕ್ಷಿಸುತ್ತಾರೆ. ಡಾ. ಭಾನುಮತಿಯವರು ಭಾರತೀಯ ಇತರ ಭಾಷೆಗಳಲ್ಲಿಯ ವರ್ಧಮಾನ ಸಾಹಿತ್ಯದ ಹಿನ್ನಲೆಯಲ್ಲಿ ಕನ್ನಡ ವರ್ಧಮಾನ ಸಾಹಿತ್ಯದಲ್ಲಿಯ ಸಾಂಸ್ಕೃತಿಕ ಸಂಗತಿಗಳನ್ನು ದಾಖಲಿಸಿದ್ದಾರೆ. ಅವರು ಮೈಸೂರು ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ 'ಕನ್ನಡದಲ್ಲಿ ವರ್ಧಮಾನ ಚರಿತೆಗಳು : ತೌಲನಿಕ ಅಧ್ಯಯನ' ಎಂಬ ಮಹಾಪ್ರಬಂಧ 'ಕನ್ನಡದಲ್ಲಿ ವರ್ಧಮಾನ ಸಾಹಿತ್ಯ' ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟಗೊಂಡಿದೆ.

ಪಾರ್ಶ್ವ ಪಂಡಿತನ 'ಪಾರ್ಶ್ವನಾಥ ಪುರಾಣ' ಜೈನ ಧರ್ಮದ ೨೩ನೇ ತೀರ್ಥಂಕರನ ಕುರಿತು ಕನ್ನಡದಲ್ಲಿ ಬಂದ ಏಕೈಕ ಸಮಗ್ರ ಕಾವ್ಯ ಇದಾಗಿದೆ.

ರಟ್ಟರಾಜ ೪ನೇ ಕಾರ್ತವೀರ್ಯನ ಆಸ್ಥಾನದಲ್ಲಿದ್ದ ಪಾರ್ಶ್ವಪಂಡಿತ ಹದಿಮೂರನೇ ಶತಮಾನದ ಚಂಪೂ ಕವಿ. ಗೋಕಾಕ ತಾಲೂಕಿನ ಕಲ್ಲುಹೊಳೆ ಶಾಸನದ ಕವಿಯೂ ಹೌದು. ಈತನ 'ಪಾರ್ಶ್ವನಾಥ ಪುರಾಣ' ಕಲಾತ್ಮಕತೆಯಿಂದಾಗಲಿ, ವಸ್ತು ವಿಶಿಷ್ಟ್ಯತೆಯಿಂದಾಗಲಿ, ವಿನೂತನ ಜೀವನ ದೃಷ್ಟಿಯಿಂದಾಲಿ ತುಂಬಾ ಮಹತ್ವದ ಕೃತಿಯಲ್ಲಿದಿದ್ದರೂ ಪರಂಪರೆಯಿಂದ ಭಿನ್ನವಾದ, ಧರ್ಮನಿಷ್ಠ, ಪುರಾಣಕಾವ್ಯ, ಡಾ. ರಾಜಶೇಖರ ಅವರು ಈ ಕಾವ್ಯವನ್ನು ಸಂಸ್ಕೃತಿ ಹಾಗೂ ಪ್ರಾಕೃತ ಪಾರ್ಶ್ವನಾತ ಸಾಹಿತ್ಯದೊಂದಿಗೆ ತೂಗಿ ಪಾರ್ಶ್ವಪಂಡಿತನ ಸ್ವಂತಿಕೆ, ಚಾರಿತ್ರಿಕ ಪ್ರಜ್ಞೆ, ಸೋಪಜ್ಞತೆಗಳನ್ನು ಸಮಗ್ರವಾಗಿ ಪರಿಶೀಲಿಸಿದ್ದಾರೆ.

ಒಂದು ಕೃತಿಯನ್ನು ಮೂಲವಾಗಿಟ್ಟುಕೊಂಡು ಅದಕ್ಕೆ ಸಂಬಂಧಿಸಿದ ಸಮಸ್ತ ಸಾಹಿತ್ಯವನ್ನು ಶೋಧಿಸಿ, ಅಭ್ಯಸಿಸಿ, ಮೂಲಕೃತಿಯ ಸತ್ವಮೊತ್ತಗಳನ್ನು ಪರೀಕ್ಷಿಸಿರುವುದು ಪ್ರಸ್ತುತ ಮಹಾಪ್ರಬಂಧದ ವಿಶೇಷತೆಯಾಗಿದೆ. ತೌಲನಿಕ ಅಧ್ಯಯನದಲ್ಲಿರಬೇಕಾದ ಶಿಸ್ತು, ಪರಿಶ್ರಮ, ಸಾಮಗ್ರಿ ಸಂಕಲನ, ಆಲೋಚನಾಕ್ರಮ, ವಿಶ್ಲೇಷಣಾ ವಿಧಾನಗಳಿಗೆ ಈ ಕೃತಿ ನಿದರ್ಶನವಾಗಿದೆ.

ಕನ್ನಡ ಸಾಹಿತ್ಯದ ಆರಂಭದ ಘಟ್ಟದ ಮಹತ್ತರ ವಿವರಗಳನ್ನು ನೀಡುವ ಶ್ರೀ ವಿಜಯ ಕನ್ನಡಾಭಿಮಾನವನ್ನು ಸಾಮಾಜಿಕ ಮೌಲ್ಯವನ್ನಾಗಿಸಿದ ಮಹಾಕವಿ ಪಂಪ, ದೇಶಿ ನೆಲೆಗಳನ್ನು ಶೋಧಿಸಿದ ನಯಸೇನ. ಅಚ್ಚಗನ್ನಡದಲ್ಲಿ ಕಾವ್ಯ ಕೃಷಿ ಸಾದಕಪಡಿಸಿದ ಅಂಡಯ್ಯ, ಕನ್ನಡವನ್ನು ಶಿಕ್ಷಣ ಮಾಧ್ಯಮವನ್ನಾಗಿ ಮಾಡಿರುವುದು ವಚನಕಾರರು ಹರಿಹರ ಮುಂತಾದವರು ಕನ್ನಡ ಸಂಸ್ಕೃತಿಯನ್ನು ಸೂಕ್ಷ್ಮವಾಗಿ ತೆರೆದಿಟ್ಟಿದ್ದಾರೆ. ಇಚ್ಚಂಗಿಯವರು "ಕನ್ನಡ ಸಂಶೋಧನಾ ಕ್ಷೇತ್ರದ ಭವಿಷ್ಯ ಉಜ್ವಲವಾಗಿದೆ" ಎಂದು ವ್ಯಾಖ್ಯಾನಿಸಿದ್ದು ಅವರ ಸಂಶೋಧನ ಪ್ರೀತಿ ಮತ್ತು ಆಶಾವಾದವನ್ನು ಎತ್ತಿ ತೋರಿಸುತ್ತದೆ.

೨೦೦೦ ನೆಯ ವರ್ಷದ ಸಂಶೋಧನ ಬಲು ಹುಲುಸಾಗಿದೆ. ಅಧ್ಯಯನದ ಹಲವು ಸಾಧ್ಯತೆಗಳೆಲ್ಲ ಹೊಸ ಆಸೆ ಭರವಸೆಗಳನ್ನು ಮೂಡಿಸುವ, ಸಾಮಾನ್ಯ ಓದುಗ, ಸ್ಪಂಧಿಸುವ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾದರಿಯಾಗುವ ಮಹಾಪ್ರಬಂಧಗಳು ಪ್ರಕಟಗೊಂಡಿದ್ದು ಮತ್ತೊಂದು ವಿಶೇಷ. ಗಟ್ಟಿಕಾಳುಗಳಿವೆ. ಬೆಳೆದ ತೆನೆಗಳಿಗಿಂತ ಬೀಜದ ತೆನೆಗಳೇ ಅಧಿಕವಾಗಿದೆ. ಕನ್ನಡ ಸಂಶೋಧನಾ ಕ್ಷೇತ್ರದ ಭವಿಷ್ಯ ಉಜ್ವಲವಾಗಿದೆ ಎಂದು ವ್ಯಾಖ್ಯಾನಿಸಿದ್ದು ಅವರ ಸಂಶೋಧನ ಪ್ರೀತಿ ಮತ್ತು ಆಶಾವಾದವನ್ನು ಎತ್ತಿ ತೋರಿಸುತ್ತದೆ.

**ಪರಿಶೋಧನೆ :**

೧) **ಜ್ಞಾನೇಶ್ವರಿ ಕಾವ್ಯ :**

ಕನ್ನಡ ಅನುವಾದಗಳು ಸಮಾಜೋ-ಧಾರ್ಮಿಕ ಸ್ವರೂಪ ಜ್ಞಾನದೇವರು ಆತ್ಮಜ್ಞಾನದ ಘನ 'ಅವರ ಜ್ಞಾನೇಶ್ವರಿ ಮಹಾರಾಷ್ಟ್ರದ ಅಂತಃಕರಣವನ್ನು ತೊಳೆಯುವ ಮರಾಠಿಯ ಜ್ಞಾನಗಂಗೆ' ಸಂತ ಪರಂಪರೆಯ ಅಶಾಂತ ಮಹಾಸಮನ್ವಯದ ಸಾಗರ. ಮೈತ್ರಿಭಾವ ಬೆಳೆಸಿ ಸತ್ಪುರುಷದ ಮೇಳಗಳು ಚಲಿಸುವ ಕಲ್ಪವೃಕ್ಷಗಳು, ಉಧ್ಯಾನಗಳು, ಚೈತನ್ಯದ ಚಿಂತಾಮಣಿ ರತ್ನ, ಸಂಪದ ಮಾತನಾಡುವ ಅಮೃತದ ಜ್ಞಾನೇಶ್ವರಿ ಹುಟ್ಟು ಹಾಕಿದ ಸಾಮಾಜಿಕ, ಧಾರ್ಮಿಕ ಸಂಚಲನಗಳನ್ನು ಸುಲಭವಾಗಿ ಅಳೆಯಲಾಗದು.

ಅನುವಾದ ಓದಿದರೆ ಮಹಾತ್ಮರ ಭಾವ ಅರ್ಥಕ್ಕೆ ಊನಾಧೀತೆಂಬ ಭಯ ಪರಂಪರಾಗತ ಪ್ರಭಾವವೂ ಪಂಡರಪುರ ಕೇಂದ್ರ ಸಂತ ಸಾಹಿತ್ಯದ ಗುರು ಪರಂಪರೆಯ ಭಾಷೆ ಮರಾಠಿ ವರ್ಣಕ ಕಾವ್ಯ ಹಾಡುವಂತೆ ಓದಬಹುದು. ಓದಿದಂತೆ ಹಾಡುಬಹುದು ಶ್ರವಣ, ಮನನ ಅದರ ಅನುಸಂಧಾನ ಪ್ರವೇಶಗಳು ತತ್ವಜ್ಞಾನವನ್ನು ಕಾವ್ಯವಾಗಿಸಿದ ಶ್ರೇಯಸ್ಸು ಜ್ಞಾನೇಶ್ವರರದು.

ಜ್ಞಾನೇಶ್ವರಿ ಕಾವ್ಯದ ಕನ್ನಡ ಅನುವಾದಗಳನ್ನು ಸ್ಥೂಲವಾಗಿ ಎರಡು ವಿಭಾಗಗಳಲ್ಲಿ ವರ್ಗೀಕರಿಸಬಹುದು.

೧) ಧಾರ್ಮಿಕ ಶ್ರದ್ಧೆಯ ಅನುವಾದಗಳು
೨) ಸಾಮಾಜಿಕ ಕಾಳಜಿ ಅನುವಾದಗಳು

ಬಸವಣ್ಣನವರು ವೇದಗಳಿಗೆ ಒರೆಯ ಕಟ್ಟಿದರೆ ಜ್ಞಾನೇಶ್ವರರು ವೇದಗಳ ಒರೆಗಲ್ಲುಗಳನ್ನು ಜನಸಾಮಾನ್ಯರ ಕೈಗೆ ಇತ್ತರು. ೧೨ ನೇ ಶತಮಾನದ ಶರಣರ ಆಂದೋಲನದ ಸಮಾಜೋ-ಧಾರ್ಮಿಕ ಶರಣ ಸಾಹಿತ್ಯ ಮತ್ತು ಸಂತ ಸಾಹಿತ್ಯಗಳನ್ನು ತೂಗುವ ಸಂದರ್ಭ. ಇಬ್ಬರೂ ಪೂಜ್ಯನೀಯರು, ಪರಮಭಕ್ತರು, ವಚನ ಅವೈದಿಕ ಸಾಹಿತ್ಯ, ಜ್ಞಾನೇಶ್ವರಿ ವೈದಿಕ ಸಾಹಿತ್ಯ, ಸಾಮಾಜಿಕ ಬದಲಾವಣೆಗಳು ಕಾಣದಿದ್ದರೂ ಆಧ್ಯಾತ್ಮಿಕ ಸಮಾನತೆಯ ಹೆಚ್ಚಿದೆ.

ಈ ನೆಲೆಗಳಲ್ಲಿ ಗುರುತಿಸಬಹುದು :

೧) ನೈತಿಕ ಸಂಹಿತೆ
೨) ಜ್ಯಾತ್ಯಾತೀತ ನಿಲುವು
೩) ವ್ಯಸನ ಮೂಕ್ತ ಸಮಾಜ
೪) ಹರಿಹರ ಅಭೇದ ದೃಷ್ಟಿ
೫) ಸ್ತ್ರೀ ಸ್ವಾತಂತ್ರ್ಯ ಮತ್ತು ಅಸಮಾನತೆ
೬) ಪ್ರಪಂಚ ಪರಮಾರ್ಥಗಳ ಸಮನ್ವಯ
೭) ಸಖ್ಯ ಭಕ್ತಿಯ ಸಹಜಯೋಗ
೮) ಭಾವ ಸಮಾರಾಧನೆ
೯) ಸಮುದಾಯಿಕ ಸಾಮರಸ್ಯ

ಶರಣರಂತೆ ವೇದ ವ್ಯವಸ್ಥೆಯನ್ನು ಅದರೊಳಗಡೆಯೇ ಸಮಾನತೆಯ ಒಂದು ಹೊಸ ಸಂಪ್ರದಾಯವನ್ನು ನಿರ್ಮಿಸಿತು. 'ದೇಹವೇ ಪಂಢರಿ, ಆತ್ಮನೇ ಪುಂಡಲಿಕ' ಎಂದು ಸಂತರು ಅಭಂಗಿಸಿದರೂ ವಿಠ್ಠಲ ದೇವಾಲಯದ ಅವರ ವ್ಯಾಮೋಹ ಕಡಿಮೆಯಾಗಲಿಲ್ಲ.

ಜ್ಞಾನೇಶ್ವರಿಯಲ್ಲಿ ಗೋಚರಿಸುವ ಅಲಂಕಾರಗಳಲ್ಲಿ ಜ್ಞಾನೇಶ್ವರರ ಸಾಮಾಜಿಕ ದರ್ಶನವಿದೆ. ಸಮಾಜದೊಂದಿಗೆ ನಡೆಸಿದ ಸಂವಾದವಿದೆಯೆಂದು ಕೆಲವು ವಿದ್ವಾಂಸರು ಗುರುತಿಸಿದ್ದರೂ ಅದು ಪಾರಾಯಣಕಾರರ ಅನುಭವಕ್ಕೆ ಬರಲಿಲ್ಲ. ಅದು ಅವರಿಗೆ ಬೇಕಾಗಿಯೂ ಇರಲಿಲ್ಲ.

ಅದನ್ನು ಮುಖೋದ್ಗತಗೊಳಿಸಿಕೊಂಡು ಅದರ ಮೌಖಿಕ ಪಠ್ಯ ಸೃಷ್ಟಿಸುವುದು ಅವರ ಉದ್ದೇಶವಾಗಿದೆ. ಆದ್ದರಿಂದ ಡಾ. ವ್ಹಿ. ಎಸ್. ಮಾಳಿಯವರ ಸಂಶೋಧನೆಯ ನೆಲೆಗಳು ಎರಡು ಭಾಷೆಯ, ಸಮಾಜೋ-ಧಾರ್ಮಿಕ ಸಂಸ್ಕೃತಿಯ ವಿನಿಮಯ ಸ್ಪಷ್ಟವಾಗಿ ಗೋಚರಿಸುತ್ತದೆ.

ಸಾಮಾಜಿಕ ದರ್ಶನವಿದೆ ಎಂಬುದು ಪರಂಪರೆಯ ಬಗ್ಗೆ ಡಾ. ವ್ಹಿ. ಎಸ್. ಮಾಳಿಯವರ ಅಭಿಪ್ರಾಯ. 'ಜ್ಞಾನೇಶ್ವರಿ' ಕಾವ್ಯದ ಕನ್ನಡ ಅನುವಾದಗಳ ಸಾಮಾಜೋ-ಧಾರ್ಮಿಕ ಸ್ವರೂಪವು ಹೊಸ ಬೆಳಕು ಚೆಲ್ಲುತ್ತದೆ.

## ೨) ಕನ್ನಡದಲ್ಲಿ ಮರಾಠಿ ಕಾವ್ಯ :

ಅನುವಾದ ಭಾವೈಕ್ಯದ ಹೆಬ್ಬಾಗಿಲು, ಸಂಸ್ಕೃತಿಯ ಸ್ವಾಗತಕಾರರು ಅನುವಾದಕರು ಇಲ್ಲದಿದ್ದಲ್ಲಿ ಅನುವಾದಗಳು ಬಾರದಿದ್ದಲ್ಲಿ ನಾವು ಇಪ್ಪತ್ತೊಂದನೇ ಶತಮಾನ ತಲುಪುವುದು ಕಷ್ಟವಾಗುತ್ತಿತ್ತು. ಭಾಷೆಗಳ ಸಾರ-ಸತ್ವವನ್ನು ನಮ್ಮ ಕನ್ನಡ ಭಾಷೆ ಒಳಗೊಂಡಷ್ಟು ಬೇರ ಯಾವ ಭಾಷೆ ಒಳಗೊಳ್ಳುವುದಿಲ್ಲ. ಮರಾಠಿ ದಲಿತ ಸಾಹಿತಿಗಳ ಆತ್ಮಚರಿತ್ರೆಗಳು ಕನ್ನಡಕ್ಕೆ ನುಗ್ಗಿ ಹೊಸ ಸಂಚಲನವನ್ನುಂಟು ಮಾಡಿರುವುದು ಹರಿಯುವ ನದಿ (ಹೊಳೆ)ಯಂತೆ. ವಿವಿಧ ಭಾಷೆಗಳಿಂದ ಕೃತಿಗಳು ಹರಿದು ಬರುತ್ತವೆ.

ಯಾವ ನದಿಗೆ, ಯಾವಾಗ, ಎಂತಹ ಪ್ರವಾಹ ಬರುವುದೆಂಬುದನ್ನು ಮಹಾರಾಷ್ಟ್ರ ನಮ್ಮ ರಾಜ್ಯದ ಉತ್ತರದ ಗಡಿಗಂಟಿದ ರಾಜ್ಯ ಗಡಿ ಜಿಲ್ಲೆಗಳಲ್ಲಿ ಮರಾಠಿ ಇಂದಿಗೂ ಜೀವಂತ. ನಮ್ಮ ಕುಮಾರವ್ಯಾಸ, ಚಾಮರಸ, ಬಹಳ ಹಿಂದೆಯೇ ಮರಾಠಿಗೆ ಹೋಗಿದ್ದಾರೆ.

ಮರಾಠಿಯ ಕಾವ್ಯಗಳು ಕನ್ನಡಕ್ಕೆ ಏಕೆ ಬರಲಿಲ್ಲವೆಂಬುದನ್ನು ಯೋಚಿಸಬೇಕು. ಮುಟ್ಟಿದರೂ ಮಾಸುವ ಜಾಜಿಮಲ್ಲಿಗೆ ಕಾವ್ಯವನ್ನು ಅನುವಾದಿಸುವುದು ಅನುವಾದಕರ ಸೃಜನಶೀಲತೆಗೊಂದು ಸವಾಲು.

[illegible]

ಭಾಷೆಗೆ ಅನುರೂಪವಾದ ಭಾವ ಕಾವ್ಯಾಲಯ, ಮೊನಚು, ಧ್ವನಿ, ನುಡಿಗಟ್ಟು, ಸ್ವರಾಘಾತಗಳನ್ನು ಭಾಷಾಂತರಿಸುವುದು ಹಾರುಗುದುರೆಯ ಸವಾರಿಯಂತೆ ಕಾರಂತರ ಕಿವಿಮಾತು. ಬೇಂದ್ರೆಯವರ 'ಮೇಘದೂತ', ಬಿ. ಎಂ. ಶ್ರೀಯವರ ಇಂಗ್ಲೀಷ ಗೀತೆಗಳು ಕನ್ನಡದಲ್ಲಿ ಮರಾಠಿ ಕಾವ್ಯಗಳು ಬೆರೆಳೆಣಿಕೆಯಷ್ಟು ವಿದ್ವತ್ ಪಾತಳಿಗೆ ಬರಲಿ, ಜ್ಞಾನೇಶ್ವರ, ರಾಮದಾಸ, ತುಕಾರಾಮ, ನಾಮದೇವ, ಏಕನಾಥ ಮುಂತಾದವರು ಎಂದೋ ಕನ್ನಡಕ್ಕೆ ಬರಬೇಕಿತ್ತು.

ಸಂತ ಜ್ಞಾನೇಶ್ವರರ 'ಜ್ಞಾನೇಶ್ವರ' ರಾಮದಾಸರ ದಾಸಭೋದ ಮರಾಠಿಯ ಸರ್ವೋತ್ಕೃಷ್ಟ ಸರ್ವಶ್ರೇಷ್ಟ ಗ್ರಂಥ ಭಗವದ್ಗೀತೆಯ ೧೮ ನೇ ಅಧ್ಯಾಯ ೯೦೦೦ ಓವಿಗಳಿವೆ ರಾನಡೆಯವರ ಜ್ಞಾನೇಶ್ವರ ಭಾರತೀಯ ಸಾಹಿತ್ಯ ಪರಂಪರೆಯಲ್ಲಿಯ ಗೀತೆಯ ಸರ್ವೋತ್ಕೃಷ್ಟ ಜ್ಞಾನೇಶ್ವರಿಯ ಕನ್ನಡ ಶಬ್ದಗಳನ್ನು ಮರಾಠಿಗರಿಗೆ ತೋರಿಸಿ ಲೋಕಾಪುರದ ಅನುವಾದ ಅನುವಾದವಷ್ಟೇ ಅಲ್ಲ.

ಜ್ಞಾನೇಶ್ವರಿಯ ಅರ್ಥ ವಿವರಣೆಯೂ ಹೌದು, ಕರ್ನಾಟಕದ ಹರಿಭಕ್ತರು ಮರಾಠಿಯ ವಿಠ್ಠಲ ಸಾಹಿತ್ಯವನ್ನು ಮರಾಠಿ ದಲಿತ ಭಾರತೀಯ ಸಾಹಿತ್ಯದ ಹೊಸಬೆಳಕಿನ ಕಾಂಡ. ದಲಿತ ಸಾಹಿತ್ಯಕ್ಕೆ ಸಹಜ ಶಕ್ತಿ ಲಭಿಸಿತು. ೧೯೬೦-೭೦ ರ ಕಾಲಾವಧಿಯಲ್ಲಿ ಮಹಾರಾಷ್ಟ್ರದ ಸಾಂಸ್ಕೃತಿಕ ಇತಿಹಾಸದಲ್ಲಿ ಮೊದಲಬಾರಿಗೆ ಉತ್ಸಾಹಿ, ದಲಿತರಿಗೆ ಅರಿವಿನ ಕಣ್ಣು ನೀಡಿದ ಡಾ. ಅಂಬೇಡ್ಕರ, ಮಹಾತ್ಮಾಫುಲೆ, ಪೆರಿಯಾರ ಮುಂತಾದವರ ಬಗ್ಗೆ ಈ ಕವಿಗಳಿಗೆ ಆದರವಿದೆ. ಮಾನವ ಮುಕ್ತಿ ವಿಶ್ವ ಬಂಧುತ್ವದ ಗೌರವವಿದೆ.

ನೊಂದು, ಬೆಂದು, ಊರ ಹೊರಗಿನ ಜನರ ಜೀವನದ ವ್ಯಥೆ ಹಾಗೂ ಶತಶತಮಾನಗಳ ಶೋಷಣೆಯ ಕಥೆ. ಈ ದಲಿತ ಕವಿತೆಗಳ ವಸ್ತು. ಸಮಾನತೆಯ ಹೊಸ ಸಮಾಜದ ನಿರ್ಮಾಣ ದಲಿತ ಕಾವ್ಯದ ಆಶಯ ಚಂದಿರನ ಬೆಳಕಿನಲ್ಲಿ ಸ್ನಾನ ಮಾಡುವು ಕವಿತೆಗಳು ಸಾಕು. ಹೊಲಗೇರಿ ಜೀವನದ ಕವಿತೆಗಳು ನಮಗೆ ಬೇಕು ಎನ್ನುತ್ತಾರೆ. ವಾಮನ ನಿಂಬಾಳ್ಕರ ರಾಮರಾಜ್ಯದ ಬಣಸ್ತುತಿ ಹಾಡುವ ಕವಿಗೆ 'ರ್‍ಯಾಸ್ಕಲ್ ಸೂಳೆಮಗ, ಎಂದು ಉಗಿಯುವರು. ನಿಜವಾದ ಕವಿತೆ ಕಸ್ಟಡಿಯಲ್ಲಿದೆ. ಕಾಗದದ ಕವಿತೆ ಅಂತರರಾಷ್ಟ್ರೀಯ ಮಹೋತ್ಸವದಲ್ಲಿ ಬಹುಮಾನ ಗಳಿಸಿದೆ. ಕಾಟ್ಕರ ಮರಾಠಿ ಕನ್ನಡ ದಲಿತ ಸಾಹಿತ್ಯದ ಆಳ-ಅಗಲಗಳನ್ನು ಅಳೆದು ಧೀಮಂತ ಕವಿ.

**ಕಬ್ಬಿಣದ ಸುತ್ತಿಗೆ, ಬಂಡಾಯ ಬೀಜಗಳ ಕಾವ್ಯ :**

ತನ್ನ ಬದುಕನ್ನು ಯಂತ್ರಗಳಿಗೆ ಉಗ್ಗಿ, ಕಬ್ಬಿಣದ ಸುತ್ತಿಗೆ ಕೈಯಲ್ಲಿ ಹಿಡಿದು ಬಂಡಯದ ಬೀಜ ಬಿತ್ತುವ ನಾರಾಯಣ ಸರ್ವೆ ಸುತ್ತಿಗೆ ಮರಾಠಿಯ ಮೇರು ಕವಿ. ೧೯೯೫ ರಲ್ಲಿ ಪರಭಣಿಯಲ್ಲಿ ಜರುಗಿದ ೬೮ನೇ ಅಖಿಲ ಮರಾಠಿ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಸತ್ಯದ ಸಹವಾಸಕ್ಕೆ ನಿತ್ಯ ಹೆಣಗುವ ಅದಯ್ಯ ಅತ್ತು ಈ ಸರಿಡುವ ಮನದ ಮೈದಡವುವ ನಾದವಿದೆ. ಮಾನವೀಯ ಕಳಕಳಿಯೇ

ಇದರ ಜೀವಾಳ. 'ಹೆಗಲ ಮ್ಯಾಲ ಮುಗಲ ಹೋರೊದಕ್ಕಿಂತ ಮನಷ್ಯಾಗ ಹೆಗಲ್ ಕೊಡುವುದು ಪುಣ್ಯದ ಕೆಲಸ', 'ಸಾಲಾ ಅಪನ ಲೋಗ ಪಾಂಡು ಹೈ ಇಸಲಿಯೇ ಇಂಡಿಯಾಕಾ ಪೊಲಿಟಿಕ್ಸ ಗಾಂಡೂ ಹೈ' ರೈಲು ಚಾಲಕನ ಮಾತು ಆಗಿದೆ. ಹಾಗೂ ರಾಜಕೀಯ ವಸ್ತು ಸ್ಥಿತಿ ತಿಳಿಸುತ್ತದೆ.

**ಬಾಲಚಂದ್ರ ನೇಮಾಡೆ ಕವಿತೆಗಳು :**

ಅರವತ್ತರ ದಶಕದ ಅತ್ಯಂತ ಮಹತ್ವದ ಮರಾಠಿ ಕವಿ, ಪತ್ರಿಕಾ ಚಳುವಳಿಯೊಂದಿಗೆ ಬೆಳೆದ ಅಯ್ದು ಮೂವತ್ತು ಕವಿತೆಗಳನ್ನು ಚಂದ್ರಕಾಂತ ಪೋಕಳೆ ಅನುವಾದಿಸಿ ಕನ್ನಡದ ಗಡಿ, ಗ್ರಾಮದ ಪೋಕಳೆ ಮರಾಠಿ ಕನ್ನಡ ಸಾಂಸ್ಕೃತಿಕ ಸೇತು ಅನುವಾದ ಪ್ರವೀಣರು ಕೊಂಕಣಿ ಲಯ ಮರಾಠಿಗೆ ಅನುರೂಪ, ಕನ್ನಡದ ಜಾಯಮಾನಕ್ಕೆ ತೊಡಕು, ಅಂತಹ ಅನುವಾದವನ್ನು ಕೈಬಿಟ್ಟಿರುವುದಾಗಿ ಪೋಕಳೆ ಸ್ಪಷ್ಟ.

**ಮರಾಠಿ ಕೈದಿಗಳ ಕವಿತೆಗಳು :**

'ಗಾಂಧಿ ವಿರುದ್ಧ ಗಾಂಧಿ' ನಾಟಕದ ಅನುವಾದದ ಖ್ಯಾತಿಯ ಬೆಳಗಾವಿ ಕಥೆಗಾರ ಪ್ರೋ. ಡಿ. ಎಸ್. ಚೌಗಲೆ ಮರಾಠಿ ಕೈದಿಗಳ ಕವಿತೆಗಳನ್ನು ಕನ್ನಡಕ್ಕೆ ತಂದಿದ್ದಾರೆ. ಸರಳುಗಳ ಮರೆಯ ಕವಿತೆ, ಸಂಪಾದಿಸಿ, ಪ್ರಸಿದ್ಧ ದಲಿತ ಕವಿ ಉತ್ತಮ ಕಾಂಬಳೆಯವರ ಸಂಕಲನದ ಜಗತ್ತಿನ ೨೨ ಕವಿಗಳ ೪೦ ಕವಿತೆಗಳಿವೆ. ಕೈದಿಗಳ ಮನದಾಳದ ಅಳಲು ಜೈಲಿನ ಬದುಕು ಪಾಲುದೇಗುಲ, ಅಲ್ಲಿಯ ಕೈದಿ ರೆಕ್ಕೆ ಕತ್ತರಿಸಿದ ಹಕ್ಕಿ, ಕೋಣೆಯ ತುಂಬೆಲ್ಲಾ ನೇತಾಡುವ ಕತ್ತಲೆ ಮೂಟೆಗಳು, ಕನಸು ತುಂಬೆಲ್ಲಾ ಬೆಳದಿಂಗಳ ಹಾಡು, ಯಾರದೋ ನವಿರಾದ ನೆನಪಿನಿಂದ ಹೃದಯ ಮೊಲದಂತೆ ಮುದಡಿ ಕಂಪಿಸುತ್ತದೆ. ಕೈದಿ ಮತ್ತು ಸಮಾಜದೊಳಗಿರುವ ನಾಗರಿಕರ ನಡುವಿನ ಅಂತರವನ್ನು ಕಿರಿದುಗೊಳಿಸುವ ಶಕ್ತಿಯೂ ಈ ಕವಿತೆಗಳಲ್ಲಿದೆ.

ಗ. ವಿ. ಮಾಡಗೂಳಕರ ಅವರ ಗೀತ ರಾಮಾಯಣದ ಕೊನೆಯ ಪದ್ಯ ರಾಮಕಾವ್ಯದ ಮಹತಿಯನ್ನು ವಾಲ್ಮೀಕಿಯ ಬಾಯಿಂದಲೇ ಬಿತ್ತರಿಸುವುದು. ರಾಮನ ಸಭೆಗೆ ಹೋಗಿ 'ರಾಮಾಯಣ' ಹಾಡುವಂತೆ ಬೋಧಿಸುವ ವಾಲ್ಮೀಕಿಯ ಕೊನೆಯ ಮಾತಿದು.

**"ಧನ ಕಾಂಚಗಳ ಬಯಕೆಯ ಪಡದಿರಿ**
**ದಾನ ದಕ್ಷಿಣೆಯ ಪಡೆಯಲೆಳೆಸದಿರಿ**
**ಮುನಿಜನಕಲ್ಲವೆ ಧನ ವ್ಯರ್ಥವೆ ಸರಿ**
**ಆಶಯವೊಂದೇ ಶ್ರೀ ರಾಮಾರ್ಪಣ"**

ಇದು 'ಗೀತ ರಾಮಾಯಣ'ದ ಮಂಗಲ ಪದ್ಯ ಈ ಸಂಗೀತ ಕಾವ್ಯದ ಅನುವಾದಕ್ಕೆ ತೋಫಖಾನೆ ಬಹಳ ಶ್ರಮಪಟ್ಟಿದ್ದಾರೆ. ಭಾಷಾಂತರ ಒಂದರ್ಥದಲ್ಲಿ ಪುನರ್ಲೇಖನ. ಅದು ಮೂಲ ಕೃತಿಯ ಪರಿವರ್ತಿತ ರೂಪ. 'ಭಾಷಾಂತರಕ್ಕೆ ಮುನ್ನೋಟವಿದೆಯೇ ಹೊರತು ಹಿನ್ನೋಟವಿಲ್ಲ. ಭಾಷಾಂತರವನ್ನು ಮೂಲ ಕೃತಿಯ ಭಾಷೆಯಲ್ಲಿ ಮತ್ತೊಮ್ಮೆ ಭಾಷಾಂತರಿಸಲು ಸಾಧ್ಯವಿಲ್ಲ'. ಆದರೆ ಇನ್ನೂಳಿದ ಅನೇಕ ಭಾಷೆಗಳಿಗೆ ಭಾಷಾಂತರಿಸಬಹುದು. ಸಾಮಾನ್ಯ ಕೃತಿಗಳ ಅನುವಾದದ ಹೆಬ್ಬಾಗಿಲಿಗೆ ಬರುವುದೇ ಇಲ್ಲ. ಚಿನ್ನದಂಥಹ ಕೃತಿಗಳು ಬೇರೆ ಬೇರೆ ಭಾಷೆಗಳಿಂದ ಕನ್ನಡಕ್ಕೆ ಬರಬೇಕೆಂದರೆ ಅನುವಾದಕರ ಸಂಖ್ಯೆ ಹೆಚ್ಚಾಗಬೇಕು. ಅನುವಾದವು ಭಾಷಾ ಸಾಮರಸ್ಯಕ್ಕೆ ಭದ್ರಬುನಾದಿ. ಈ ಮಾತುಗಳು ಭಾಷಾಂತರದ ಮಹತ್ವವನ್ನು ಸಾರುತ್ತದೆ.

**೩) ಹಳಕಟ್ಟಿ ಸಂಪಾದಿತ ಕಾವ್ಯ ಸಾಹಿತ್ಯ :**

'ವಚನ ಲೋಕ'ವನ್ನು ಅನಾವರಣಗೊಳಿಸದ ಶರಣ ಡಾ. ಪ. ಗು. ಹಳಕಟ್ಟಿ ಕನ್ನಡದ ವಚನ ಕೊಲಂಬಸ್, ಬಸವಣ್ಣ ವಚನ ಪುರುಷ, ಡಾ. ಪ. ಗು. ಹಳಕಟ್ಟಿ ವಚನ ಪುರುಷ, ಡಾ. ಎಂ. ಎಂ. ಕಲಬುರ್ಗಿಯವರ ಪ್ರಧಾನ ಸಂಪಾದ. ವಚನ ಪಿತಾಮಹನಿಗೆ ಸಂದ ವಚನ ಗೌರವ. ಪರಮ ಪವಿತ್ರವಾದ ಬದುಕನ್ನು ಹದಿನೈದು ಸಂಪುಟಗಳಲ್ಲಿ ಸಂಪಾದಿಸಿ ಡಾ. ಪ. ಗು. ಹಳಕಟ್ಟಿ, ಸಮಗ್ರ ಸಾಹಿತ್ಯ ೧೫ ಸಂಪುಟಗಳಲ್ಲಿ ಮೊದಲು ಆರು ಸಂಪುಟಗಳ ವಚನಗಳಿಗೆ ಮೀಸಲು ಅನಂತರದ ಒಂದು ಸಂಪುಟ ವಚನ ವಿವೇಚನೆಗೆ, ೮ ಮತ್ತು ೯ ನೇ ಸಂಪುಟಗಳು ಕಾವ್ಯ ಸಾಹಿತ್ಯ ಸಂಪಾದನೆಗಳು, ಉಳಿದ ಆರರಲ್ಲಿ ತಲಾ ಮೂರು ಸಂಪುಟಗಳಲ್ಲಿ ಅವರ 'ಚರಿತ್ರ ಸಾಹಿತ್ಯ' ಲೇಖನ ಸಾಹಿತ್ಯ, ತಾವೇ 'ಸಂಕಲನ' ವಚನ ಶಾಸ್ತ್ರಕಾರ ಶಿವಶರಣರ ಚರಿತ್ರೆ ಸಂಪುಟಗಳು ಮುಖ್ಯವೆನಿಸಿವೆ.

೧) ಸಮಗ್ರ ಸಾಹಿತ್ಯ : ಸಂ. ೮ – ಕಾವ್ಯ ಸಾಹಿತ್ಯ – ೧

೨) ಸಮಗ್ರ ಸಾಹಿತ್ಯ : ಸಂ. ೯ – ಕಾವ್ಯ ಸಾಹಿತ್ಯ – ೨

- ಅ) ರಗಳೆ ಕಾವ್ಯಗಳು – ೧೦
- ಆ) ಹಾಡುಗಬ್ಬಗಳು – ೦೫
- ಇ) ತ್ರಿಪದಿ ಕಬ್ಬಗಳು – ೦೨
- ಈ) ಚೌಪದಿ ಕಾವ್ಯಗಳು – ೦೧
- ಉ) ಷಟ್ಪದಿ ಕಾವ್ಯಗಳು – ೦೨

**೨) ಕಾವ್ಯ ಸಾಹಿತ್ಯ – ೦೧ :**

ವೀರಶೈವ ರಗಳೆ, ತೋಂಟದಾರ್ಯ ರಗಳೆ, ಪ್ರಸನ್ನ ಶಂಕರಲಿಂಗ, 'ವೀರಶೈವ ರಗಳೆ' ನಿರಂಜನಲಿಂಗ ೫ ಮತ್ತು ೯ನೇ ಕೃತಿಗಳಾಗಿ ೧೯೨೭ರಲ್ಲಿ ಪ್ರಕಟಗೊಂಡಿವೆ. ಹರಿಹರನ ೪೫ ರಗಳೆಗಳು ೮ ಭಾಗಗಳು ಬೆಳಕು ಕಂಡವು. ವೀರಶೈವ ರಗಳೆ, ಸಂಪಾದಿಸಿದ ಮೊದಲ ರಗಳೆ ಕಾವ್ಯ ಇದಾಗಿದೆ.

[illegible]

## ಅ) ರಗಳೆ ಕಾವ್ಯಗಳು :

ರಗಳೆ ಆದಿಕವಿ ಪಂಪನ 'ಆದಿಪುರಾಣ'ದಲ್ಲಿಯೇ ಲಿಂಗಾಯತ ಕವಿಗಳು ಹರಿಹರನ ಮಾರ್ಗ ಅನುಸರಿಸಿ ರಗಳೆ ಕಾವ್ಯ ರಚಿಸಿರುವ ಶಿವಶರಣರ ಚರಿತ್ರೆಗಳು ಶರಣರ ಜೀವನವನ್ನು ಕಾವ್ಯಗಳಿಗೆ ಹೊಂದಿಸಿದ ಮೊದಲಿಗರಲ್ಲಿ ಮೊದಲ ಕವಿ ಹರಿಹರದೇವ. ತಮೀಳುನಾಡಿನ ಪುರಾತನ, ಉತ್ತರ ಭಾರತದ ಶಿವಭಕ್ತರ, ಕನ್ನಡ ನಾಡಿನ ಶರಣರ ಪವಿತ್ರೆ ಚರಿತ್ರೆಗಳನ್ನು ಅಭಿವ್ಯಕ್ತಿಸಿರುವ ಹರಿಹರನ ಭಾವಿ ಜೀವಿ ಬದುಕು ಭಕ್ತಿ ಭಿನ್ನವಾಗಿರಲೇ ಇಲ್ಲ. ಹಳಕಟ್ಟಿಯವರ ಜೀವನವು ಹರಿಹರನ ಪಡಿಯಚ್ಚು. ಹರಿಹರನ ೪೫ ರಗಳೆರಗಳನ್ನು ೮ ಭಾಗಗಳಲ್ಲಿ ಸಂಪಾದಿಸಿರುವುರು.

೧) **ಭಾಗ – ೧ :** ಶಿವಾನುಭವ ಪತ್ರಿಕೆಯಲ್ಲಿ ಪ್ರಕಟಗೊಂಡಿದ್ದ ಏಳು ರಗಳೆಗಳನ್ನು ೩೪ ನೇ ಕೃತಿಯಾಗಿ ಪ್ರಕಟಿಸಿದರು.

೧. ಪುಷ್ಪ ರಗಳೆ
೨. ಲಿಂಗಾರ್ಚನೆಯ ರಗಳೆ
೩. ತಿರುನೀಲಕಂಠ ಮಹಾತ್ಮೆ
೪. ಕಣ್ಣಪ್ಪನ ಮಹಾತ್ಮೆ
೫. ಅನಾಯನಾರ ಭಕ್ತರ ಮಹಾತ್ಮೆ
೬. ಚನ್ನಯ್ಯಗಳ ಮಹಾತ್ಮೆ
೭. ಇಳೆಯಾಂಡ ಗುಡಿಮಾರರ ಮಹಾತ್ಮೆ

೨) **ಹರಿಹರನ ರಗಳೆಗಳ ಭಾಗ – ೨**

ಶಿವಾನುಭವ ಗ್ರಂಥಮಾಲೆಯ ೩೫ನೇ ಕುಸುಮೆ ಪ್ರಕಟನ ೧೯೩೩. ಇದರಲ್ಲಿ ಕೇವಲ ಎರಡು ರಗಳೆಗಳಿವೆ.

೧. ಪ್ರಭುದೇವ ರಗಳೆ
೨. ರೇವಣಸಿದ್ಧೇಶ್ವರ ರಗಳೆ

೩) **ಹರಿಹರನ ರಗಳೆಗಳು : ಭಾಗ – ೩ :**

೧೯೩೩ ಶಿವಾನುಭವ ಗ್ರಂಥಮಾಲಾ ಸಂಖ್ಯೆ ೩೬. ಇದರಲ್ಲಿಯೂ ಎರಡೇ ರಗಳೆಗಳಿವೆ.

೧. ಶಂಕರ ದಾಸಿಮಯ್ಯನ ರಗಳೆ
೨. ಅದಯ್ಯನ ರಗಳೆ

೪) **ಹರಿಹರನ ರಗಳೆಗಳು : ಭಾಗ – ೪ :**

ಶಿವಾನುಭವ ಗ್ರಂಥಮಾಲೆಯ ೩೭ ನೇ ಕೃತಿಯಾಗಿದ್ದು, ಇದರಲ್ಲಿ ತಮಿಳುನಾಡಿನ ಒಂಭತ್ತು ಶರಣರ ಒಂಭತ್ತು ರಗಳೆಗಳಿವೆ.

೧. ಕಾರಿಕಾಲಮ್ಮ
೨. ರುದ್ರಪಶುಪತಿ
೩. ತಿರುನಾಳ್ಪುವಲ್
೪. ತಿರುಕುರುಂಪೆತೋಡರ್
೫. ಅರಿವಾಳ್ತಾಂಡರ್
೬. ಒಳಘಾಂಡ್ ಮೂರ್ತಿ
೭. ಮುರುಘರ್
೮. ಅಯ್ಯಡಿಯರ್
೯. ಮಾನಕಂಜರ್

೫) **ಹರಿಹರನ ರಗಳೆಗಳು : ಭಾಗ – ೫ :**

ಪ್ರಕಟನ ವರ್ಷ : ೧೯೩೫. ಶಿವಾನುಭವ ಗ್ರಂಥಮಾಲೆಯ ಸಂಖ್ಯೆ ೪೨. ಇದರಲ್ಲಿ ಆರು ರಗಳೆಗಳ ಸಂಕಲನ.

೧. ಬಾಣ
೨. ಉದ್ಭಟದೇವ
೩. ಹಲಾಯುದ
೪. ಸಾಮವೇದಿ
೫. ಮಳೆಯರಾಜ
೬. ಓಹಿಲಯ್ಯ

೬) **ಹರಿಹರನ ರಗಳೆಗಳು : ಭಾಗ – ೬ :**

ಪ್ರಕಟನ ವರ್ಷ ೧೯೩೬. ಗ್ರಂಥಮಾಲೆಯ ಸಂಖ್ಯೆ ೪೪. ಇದರಲ್ಲಿ ಬಸವ ಸಮಕಾಲೀನ ಕನ್ನಡ ನಾಡಿನ ಶರಣರ ಆರು ರಗಳೆಗಳು.

೧. ಏಕಾಂತರಾಮಿ ತಂದೆಗಳ ರಗಳೆ
೨. ವೈಜಕವ್ವೆ ರಗಳೆ
೩. ಕೆಂಭಾವಿ, ಭೋಗಣ್ಣನ ರಗಳೆ
೪. ಕೇಶಿರಾಜ ದಣ್ಣಾಯಕರ ರಗಳೆ
೫. ಕುಂಬಾರ ಗುಂಡಯ್ಯನ ರಗಳೆ
೬. ಹಾಲಿನಹಾಳ ಕಲ್ಲಿದೇವನ ರಗಳೆ

೭) **ಹರಿಹರನ ರಗಳೆಗಳು : ಭಾಗ – ೭ :**

ಹತ್ತು ರಗಳೆಗಳ ಸಂಕಲನ ಪ್ರಕಟನ ವರ್ಷ ೧೯೪೦. ಗ್ರಂಥಮಾಲೆಯ ಸಂಖ್ಯೆ ೪೯. ಭಾಗ ಒಂದರಲ್ಲಿ ಪ್ರಕಟಗೊಂಡ ಲಿಂಗಾರ್ಚನೆಯ ರಗಳೆ ಇಂತಿವೆ.

೧. ಅತಿಭಕ್ತನ ರಗಳೆ
೨. ಮಲುಹಣನ ರಗಳೆ
೩. ಭಂಗೀಶ್ವರನ ರಗಳೆ
೪. ಪ್ರಾರ್ಥನೆಯ ರಗಳೆ
೫. ಹಂಪಿಯ ರಗಳೆ
೬. ಪಂಪಾಕ್ಷೇತ್ರದ ರಗಳೆ
೭. ಸಂಸಾರ ವ್ಯಾಮೋಹ ನಿರಸನ ರಗಳೆ
೮. ಚಂಡೇಶ ಪಿಳ್ಳೆಯ ರಗಳೆ
೯. ಅಮರ ನೀತಿಯ ರಗಳೆ

೮) **ಹರಿಹರನ ರಗಳೆಗಳು : ಭಾಗ – ೮ :**

ಶಿವಾನುಭವ ಗ್ರಂಥಮಾಲೆ ಸಂಖ್ಯೆ ೩೪. ಪ್ರಕಟನ ವರ್ಷ ೧೯೩೨. ಇದರಲ್ಲಿ ಒಟ್ಟು ನಾಲ್ಕು ರಗಳೆಗಳಿವೆ.

೧. ಬಾಹೂರ ಬೊಮ್ಮಯ್ಯನ ರಗಳೆ
೨. ತೆಲಗು ಬೊಮ್ಮಯ್ಯನ ರಗಳೆ
೩. ಶಿವ ಮಹಿಮಾ ರಗಳೆ
೪. ವೀರಭದ್ರ ದೇವರ ರಗಳೆ

೯) **ವೀರಶೈವ ರಗಳೆ :**

ಹಳಕಟ್ಟಿ ಸಂಪಾದಿತ ಪ್ರಥಮ ರಗಳೆ, ಪ್ರಕಟನ ವರ್ಷ ೧೯೨೩. ಗ್ರಂಥಮಾಲಾ ಸಂಖ್ಯೆ ೫. ಪ್ರಸ್ತಾವಣೆ ರಗಳೆಯ ಚರಿತ್ರೆ. ಪ್ರಯೋಗ, ಸ್ವರೂಪ, ವೈವಿಧ್ಯತೆಗಳನ್ನು ಈ ರಗಳೆಯ ಕರ್ತೃ ಹರಿಹರನಲ್ಲ. ಪ್ರಸನ್ನ ಶಂಕರಲಿಂಗ ಅಂಕಿತದಲ್ಲಿ ಬೇರೊಬ್ಬ ಕವಿ ಇದನ್ನು ರಚಿಸಿರುವನು. ವೀರಶೈವದ ಮಾಹಿತಿ ಬಿತ್ತರಿಸುವುದು.

೧೦) **ತೋಂಟದಾರ್ಯ ರಗಳೆ :**

೧೯೨೬ ರಲ್ಲಿಯೇ ಪ್ರಕಟಗೊಂಡ ಇದು ೯ನೇ ಸುಮ 'ನಿರಂಜನ ಲಿಂಗ' ಏಳೂನೂರು ವೀರಕ್ತರ ತಂಡದೊಂದಿಗೆ ಲಿಂಗವಂತ ಧರ್ಮ ೧೭ ಶತಮಾನದ ತೋಂಟದ ಯತಿಗಳ ಜೀವನಯಾತ್ರೆ.

**ಕಾವ್ಯ ಸಾಹಿತ್ಯ :**

ಸಮಗ್ರ ಸಾಹಿತ್ಯದ ಒಂಭತ್ತನೇ ಸಂಪುಟ ಒಟ್ಟು ೧೭ ಕೃತಿಗಳಿವೆ. ಡಾ. ಬಾಳಣ್ಣ ಸೀಗಿಹಳ್ಳಿ ವಿನ್ಯಾಸಗೊಳಿಸಿದ ಪದಮಂತ್ರ ಗೋಪ್ಯ. ನೂರೊಂದರ ಹಾಡುಗಳು, ಅವದೂತ ಗೀತೆ, ಪ್ರಾಣಲಿಂಗ ದರ್ಪಣ, ಚಾರಿತ್ರ, ಶಿವಯೋಗಾಚರಣೆ, ಶಿವಶರಣರ ಪದಗಳು – ೧, ಹರಳಯ್ಯನ ತ್ರಿಪದಿ, ಶಿವಾನುಭವ ದರ್ಪಣ, ಶ್ರೀ ಹಾನಗಲ್ಲ ಸ್ವಾಮಿಗಳು ಹಾಡುಗಳು ವರದಾನಿ ಗುಡ್ಡಮ್ಮೆಯ ಚರಿತ್ರೆ ಕಾವ್ಯಗಳಿವೆ. ಪ್ರಾಚೀನ ಗದ್ಯಕೃತಿಗಳೂ ಸಮಾವೇಶಗೊಂಡಿವೆ. ಹತ್ತು ಕಾವ್ಯಗಳನ್ನು ಹಾಡು, ತ್ರಿಪದಿ, ಚೌಪದಿ, ಷಟ್ಪದಿಗಳೆಂಬ ನಾಲ್ಕು ಭಾಗಗಳಲ್ಲಿ ವರ್ಗೀಕರಿಸಬಹುದು.

ಅ) **ಹಾಡುಗಬ್ಬಗಳು :**

೧. ಪದಮಂತ್ರಗೋಪ್ಯ
೨. ನೂರೊಂದರ ಹಾಡುಗಳು
೩. ಶಿವಶರಣರ ಪದಗಳ – ೧
೪. ಶಿವಾನುಭವ ದರ್ಪಣ
೫. ಹಾನಗಲ್ಲ ಸ್ವಾಮಿಗಳ ಹಾಡುಗಳು

ಇ) **ತ್ರಿಪದಿ :**

೧. ಶಿವಯೋಗಾಚಾರಣೆ
೨. ಹರಳಯ್ಯನ ತ್ರಿಪದಿ

ಈ) **ಚೌಪದಿ :**

ಗುರುಬಸವನ 'ಅವಧೂತ ಗೀತೆ' ಚೌಪದಗಳ ಕಬ್ಬು ಗುರು ಬಸವನ ಕಾಲ–ಕ್ರಿ.ಶ. ಸುಮಾರು ೧೩ನೇ ಶತಮಾನ.

೧. ಅವಧೂತ ಗೀತೆ : ಅವಧೂತ ಮಾರ್ಗ ನಿರೂಪಣೆಯ ಕಾವ್ಯ.

ಈ) **ಷಟ್ಪದಿ :**

ಹಳಕಟ್ಟಿಯವರು ಎರಡು ಷಟ್ಪದಿ ಕಾವ್ಯಗಳನ್ನು ಸಂಪಾದಿಸಿರುವರು.

೧. ಪ್ರಾಣಲಿಂಗ ಜ್ಞಾನದರ್ಪಣ ಚಾರಿತ್ರ

೨. ವರದಾನಿ ಗುಡ್ಡಮ್ಮೆಯ ಚರಿತ್ರೆ.

ಡಾ. ಫ. ಗು. ಹಳಕಟ್ಟಿ ಸಂಪಾದಿತ ಒಟ್ಟು ಕಾವ್ಯಗಳು ೨೦. ಇವುಗಳಲ್ಲಿ ೧೦ ರಗಳೆ ಸಂಕಲನಗಳು. ೫ ಹಾಡುಗಬ್ಬಗಳು, ೨ ತ್ರಿಪದಿ, ೧ ಚೌಪದಿ ಹಾಗೂ ೨ ಷಟ್ಪದಿ ಕಾವ್ಯಗಳು. ಹತ್ತು ರಗಳೆ ಸಂಕಲನಗಳು ಸಮಗ್ರ ಸಾಹಿತ್ಯದ ೮ನೇ ಸಂಪುಟದಲ್ಲಿ ಹಾಗೂ ಉಳಿದವು ೯ನೇ ಸಂಪುಟದಲ್ಲಿ ಸಂಯೋಜಿತಗೊಂಡಿವೆ. ಆದರೆ ೯ನೇ ಸಂಪುಟದ ಸಂಯೋಜನೆ ಸೂಕ್ತವೆನಿಸುವುದಿಲ್ಲ. ಅಲ್ಲಿಯ ಗದ್ಯಕೃತಿಗಳು ಪ್ರತ್ಯೇಕ ಸಂಪುಟದಲ್ಲಿ ಪ್ರಕಟಗೊಳ್ಳಬಹುದಿತ್ತು ಎಂದು ಡಾ. ವ್ಹಿ. ಎಸ್. ಮಾಳಿಯವರ ಸಂಶೋಧನೆಗೆ ಸಾಣೆಯ ಮಹತ್ವ ಬಂದಿದೆ. ವ್ಯಾಖ್ಯಾನ ವಿಶ್ಲೇಷಣೆಗಳಿಗಿಂತ ಮೂಲ ಶೋಧದ ಪರಿಚಯ ತಿಳಿಸುತ್ತಾರೆ.

ಈ ಕೆಲವೇ ಮಾತುಗಳಲ್ಲಿ ಹಳಕಟ್ಟಿಯವರ ಕಾರ್ಯವನ್ನು ಪರಿಚಯಿಸಿದ್ದಾರೆ. (ಪುಟ ೮೭) ಎನ್ನುವುದು 'ಹಳಕಟ್ಟಿಯವರ ಸಂಪಾದಿತ ಕಾವ್ಯ'ವನ್ನು ಖಚಿತವಾಗಿ ವಿವರಿಸಿದ್ದಾರೆ. ಮುಂದುವರಿದು ೯ನೇಯ ಸಂಪುಟದ ಸಂಯೋಜನ ಸೂಕ್ತವೆನಿಸುವುದಿಲ್ಲ. ಅಲ್ಲಿಯ ಗದ್ಯಕೃತಿಗಳು ಪ್ರತ್ಯೇಕ ಸಂಪುಟದಲ್ಲಿ ಪ್ರಕಟಗೊಳ್ಳಬಹುದಿತ್ತು. ಪುಟ – ೮೭ ಎಂದು ಹೇಳಿದ್ದು ಡಾ. ವ್ಹಿ. ಎಸ್. ಮಾಳಿಯವರ ಸೂಕ್ಷ್ಮ ನಿರೀಕ್ಷಣೆಗೆ ನಿದರ್ಶನವಾಗಿದೆ.

## ಶಿಷ್ಟಪದ ಸಾಹಿತ್ಯದಲ್ಲಿ ಜನಪದ ಉಗ್ರ ಆಚರಣೆಗಳು :

ಹೆಸರೇ ಸೂಚಿಸುವಂತೆ ಈ ಲೇಖನದಲ್ಲಿ 'ಜನಪದದ ಉಗ್ರ ಆಚರಣೆಗಳು' ಕುರಿತಾಗಿ ವಿಸ್ತೃತ ಚರ್ಚೆಯಿದೆ. ಬೇಟೆಯಾಡಿ ಹಸಿಮಾಂಸ ತಿಂದು ಬದುಕು ಸಾಗಿಸುತ್ತಿದ್ದ ಆದಿಮಾನವನ ಸುಲಭ ಭೇಟೆಯ ಅಗತ್ಯ ಸಾಧನಗಳ ಅನ್ವೇಷಣಾ ಮನೋವೃತ್ತಿಯೇ ವಿಕಾಸಕ್ಕೆ ಕಾರಣವಾಯಿತು. ಕಾಲಾಂತರದಲ್ಲಿ ನಿಸರ್ಗ ಸಹಜ ಭಯ-ಭಕ್ತಿಗಳ ಮೂಲದ ಆಚರಣೆಗಳ ಸುಳಿಗೆ ಸಿಕ್ಕಿಹಾಕಿಕೊಂಡ ಮಾನವನ ಇತಿಹಾಸ ಅದ್ಭುತ ಮತ್ತು ರೋಚಕವಾಗಿದೆ.

'ನಿಸರ್ಗದ ಉಗ್ರ ಶಕ್ತಿಯನ್ನು ಶಾಂತಗೊಳಿಸಿ ತನ್ನ ಪರವಾಗಿರುವಂತೆ ಮಾಡಿಕೊಳ್ಳುವ ಹಂಬಲದಿಂದ ಪ್ರಾರ್ಥನೆ, ಆರಾಧನೆಗಳನ್ನು ಆತರೂಢಿಸಿಕೊಂಡು ಬಂದು, ಆರಾಧನೆ ಪ್ರಾರಂಭವಾದುದು ಜನಪದ ದೇವತೆಗಳ ಸೃಷ್ಟಿಯ ಒಂದು ಮುಖ' ಭಯವಾದ, ಕೃತ್ಯವಾದ, ವಿಸ್ಮಯವಾದ, ಸ್ವಪ್ನವಾದ ಉದ್ಯೋಗವಂತರಾಗಿದ್ದ ಅವರು ಕಂಡ ಕಂಡ ಕಲ್ಲು ಕಟ್ಟೆಗೆಗಳಲ್ಲಿ ದೇವತೆಗಳನ್ನು ಪೂಜಿಸುವುದು, ಅನುಗ್ರಹ ಬೇಡುವುದು, ಮರಣ-ರೋಗ-ಸಂಕಟಗಳಿಂದ ಬಿಡುಗಡೆಗಾಗಿ ಪ್ರಾರ್ಥಿಸುವುದು ಮುಂತಾದವು ಕಾಲಾನುಕ್ರಮದಲ್ಲಿ ಬೆಳೆದು ಬಂದವು.

ಆಚರಣೆಗಳು ಪರಂಪರಾಗತವಾದ ಇಂದಿಗೂ ಕನ್ನಡಿಗರಲ್ಲಿವೆ. ದ್ರಾವಿಡರ ಆಚರಣೆಗಳಲ್ಲಿ ಬದಲಾವಣೆಗಳು ಕಾಣಿಸಿಕೊಂಡವು. 'ನಾಗಪೂಜೆ ದೇವತೆಗಳ ಪೂಜೆ, ಭೂತಾರಾಧನೆ ಮುಂತಾದವುಗಳೆಲ್ಲ ಮೂಲತಃ ಕನ್ನಡ ಶ್ರದ್ಧೆಯ ವಿಷಯಗಳಾಗಿದ್ದವು. ಆರ್ಯರು ಇದನ್ನು ಒಂದು ವ್ಯವಸ್ಥಿತ ಪದ್ಧತಿಯಾಗಿ ಪರಿಷ್ಕರಿಸಿ ಬಿಟ್ಟರು'.

ಶಕ್ತಿ ಆರಾಧನೆ ತುಂಬಾ ಪ್ರಾಚೀನವಾದುದು. ಸರ್ಪ, ವೃಷ ಮತ್ತು ಭೂತ ಪೂಜೆ ದ್ರಾವಿಡ ಪೂಜಾ ವಿಧಾನಗಳು ಪ್ರಾಚೀನ ಕರ್ನಾಟಕದಲ್ಲಿದ್ದರಬೇಕು, ಪಶು ನರಬಲಿಗಳನ್ನು ಒಂದು ಜನಾಂಗದ ಸಾಹಿತ್ಯವೆಂದರೆ ಆ ಜನಾಂಗದ ಸಂಸ್ಕೃತಿಯ ಸಾಧನೆಯ ಕೈಗನ್ನಡಿ ಬಾಹ್ಯ ಜೀವನದ ವ್ಯವಸ್ಥೆಯ ಗುರುತಾದ ನಾಗರಿಕತೆ ಹಾಗೂ ಆಂತರಿಕ ಜೀವನದ ಗುರುತಾದ ಸಂಸ್ಕೃತಿ ರಸಿಕತೆಗಳು ಒಂದು ಮಟ್ಟಕ್ಕೆ, ಬಂದಾಗ ಸಾಹಿತ್ಯದ ಉದಯವಾಗುತ್ತದೆ. ಒಂದು ಜನಾಂಗದ ಸಾಹಿತ್ಯವೆಂದರೆ ಆ ಜನಾಂಗದ ಸಂಸ್ಕೃತಿಯ ಸಾಧನೆಯ ಕೈಗನ್ನಡಿ. ಬಾಹ್ಯ ಜೀವನದ ವ್ಯವಸ್ಥೆಯ ಗುರುತಾದ ನಾಗರಿಕತೆ ಹಾಗೂ ಆಂತರಿಕ ಜೀವನದ ಗುರುತಾದ ಸಂಸ್ಕೃತಿ ರಸಿಕತೆಗಳು ಒಂದು ಮಟ್ಟಕ್ಕೆ ಬಂದಾಗ ಸಾಹಿತ್ಯದ ಉದಯವಾಗುತ್ತದೆ.

ಒಂದು ಭಾಷೆಯ ಸಾಹಿತ್ಯ ಪರಂಪರೆ ತನ್ನ ಜನಾಂಗದ ಸಂಸ್ಕೃತಿಯು ಎಲ್ಲ ಮುಖಗಳನ್ನು ದಾಖಲಿಸಿಕೊಳ್ಳುತ್ತದೆ. ಧರ್ಮ ರಾಜಾಶ್ರಯಗಳ ಮಿತಿಗಳನ್ನು ದಾಟಿ ಬೆಳೆಯುತ್ತದೆ. ಸಾಹಿತ್ಯವೆಂದರೆ

ಬದುಕಿನ ಚಟುವಟಿಕೆಗಳನ್ನು ಕಲಾತ್ಮಕವಾಗಿ ಸೆರೆ ಹಿಡಿಯುವ ಕೆಲಸ. ಪ್ರತಿಭಾ ಸಂಪನ್ನರಾದ ಕವಿ ತನ್ನ ಸಮಕಾಲಿನ ಸಮಾಜಕ್ಕೆ ಸಾಮಾಜಿಕ ಪ್ರಜ್ಞೆಯುಳ್ಳ ಕವಿಗಳು ಜನಸಾಮಾನ್ಯರ, ಆಚಾರ–ವಿಚಾರ, ಮೌಲ್ಯ–ದೌರ್ಬಲ್ಯಗಳು, ಅವರ ಧರ್ಮ, ಆದರ್ಶಗಳ ನಿರೂಪಣೆಗೆ ಒತ್ತು ನೀಡುತ್ತಾರೆ. ನಮ್ಮಲ್ಲಿ ಚಾರಿತ್ರಿಕ–ಸಾಂಸ್ಕೃತಿಕ ವಿವರಗಳ ಕೃತಿಗಳ ಕೊರತೆ. ಪಂಪ, ರನ್ನ, ಜನ್ನ, ನಯಸೇನ, ಬ್ರಹ್ಮಶಿವ, ನಾಗಚಂದ್ರ ಮೊದಲಾದ ಕವಿಗಳ ಕೃತಿಗಳಲ್ಲಿ ಶಿವಶರಣರ ವಚನಗಳಲ್ಲಿ, ದಾಸರ ಕೀರ್ತನೆಗಳಲ್ಲಿ ಸಮಾಜದ ವಿವಿಧ ಮುಖಗಳು ದಾಖಲಿತಗೊಂಡಿವೆ ಎಂದು ಡಾ. ವ್ಹಿ. ಎಸ್. ಮಾಳಿಯವರು ವಿವರಿಸಿದ್ದಾರೆ.

ಉರಿಮೆ ಉಯ್ಯಲೆ ಉಗ್ರ ಜನಪದ ಆಚರನೆ, ನೆಲದ ಮೇಲೆ ಉರಿಯನ್ನುಂಟು ಮಾಡಿ ಮರಕ್ಕೆ ಕಟ್ಟಿದ ಜೋಕಾಲಿಯಿಂದ ಉರಿಯಲ್ಲಿ ಜೀಗಿದು ಹೋಗುವ ಸಂಪ್ರದಾಯ ಮೂದಲೆಯ ವಿಲಿ ಎಂದರೆ ದೇವರ ಹೆಸರಿನಲ್ಲಿ ಪಠಿಸುವ ಅಶ್ಲೀಲ ಸಾಹಿತ್ಯ. ಡಾ. ಎಂ. ಎಂ. ಕಲಬುರ್ಗಿಯವರ ಊಹೆ, ವಸಂತ ಉದುರಿದ ಮೊಗ್ಗಗಳ ರಾಶಿಯನ್ನು ಮಾರಿಯೇ ಮಾಂಸದ ನೈವೇದ್ಯಕ್ಕೆ ಹೊಲಿಸಿದ ಜನ್ನನು ವಸಂತದ ಮಂದಾನಿಲವು, ನಿರಜವನವೆಂಬ ಕಂಡದಲ್ಲಿ ದಂಡ ನಮಸ್ಕಾರ ಹಾಕುತ್ತ ಬರುತ್ತಿತ್ತು ಎನ್ನುತ್ತಾರೆ. ಜನ್ನನು ಇವಳನ್ನು 'ಬಳರಿ' ಎಂದೂ ಕರೆದನು. ಕುರಿ ಇಲ್ಲವೇ ಮನುಷ್ಯನನ್ನು ಬಲಿಕೊಡುತ್ತಾರೆಂದು ಬ್ರಹ್ಮಶಿವ ಸಹ ಹೇಳುತ್ತಾನೆ. ಧರ್ಮಾಮೃತ, ಚತುರಾಸ್ಯ ನಿಘಂಟು, ಲೀಲಾವತಿ, ಪಂಚತಂತ್ರಗಳಲ್ಲಿಯೂ ಇವಳ ಉಲ್ಲೇಖವಿದೆ.

ಇವಳಿಗೆ ಕಾಳಿ ಎಂದೂ ಕರೆಯುವುದುಂಟು. ಚಂಡಿಗೆ ನರಬಲಿ, ಲಕ್ಷ್ಮೀಶನ ಜೈಮಿನಿ ಭಾರತದಲ್ಲಿದೆ. 'ಮುತ್ತಂ, ತನಯರಂ, ಪಡೆವೆನೆಂದು ಬನದಬ್ಬೆಗೆ ಪೇಲ ಬೆರಟೆಯ ನೀವುದುಂ........ ಜಕ್ಕಿಗೆ ಬಲಿಗೊಳಿಸಿಯುಂ' ಮುತ್ತೆರಡು ವ್ಯಕ್ತಿ ಕೇಂದ್ರಿತ ಉಗ್ರ ಜನಪದ ಆಚರಣೆಗಳು ಕಾಣಿಸುತ್ತವೆ. ಜಕ್ಕಿಯು ಜಲ ದೇವತೆಯಾಗಿರಬೇಕು. ಕೆರೆ, ತೊರೆ, ಭಾವಿಗಳಲ್ಲಿ, ಜಕ್ಕಣಿಯರು ಇರುವರೆಂಬ ನಂಬಿಗೆ ಇಂದಿಗೂ ಜನಪದದಲ್ಲಿ ರೂಢಿಯಲ್ಲಿದೆ. ಸ್ತ್ರೀ ದೇವತೆಯ ಹೆಸರಿನಲ್ಲಿ, ಸ್ತ್ರೀ ಪುರುಷರು ವೇಷಪಲ್ಲಟಿಸುವ ಸಂಪ್ರದಾಯವನ್ನು ಬ್ರಹ್ಮಶಿವ ತನ್ನ ಸಮಯ ಪರೀಕ್ಷೆಯಲ್ಲಿ ಹೇಳುತ್ತಾನೆ. ಯಾವ ದೇವತೆಯ ಹೆಸರಿನಲ್ಲಿ ಆಚರಿಸಲ್ಪಡುತ್ತಿತ್ತೆಂಬುದು ತಿಳಿಸಿಲ್ಲ. ಇಂದು ಎಲ್ಲಮ್ಮನ ಸಂಪ್ರದಾಯದಲ್ಲಿ ರೂಢಿಯಲ್ಲಿದೆ. ಉದಕದ ಕೊಡುವ ಹೊತ್ತಾಡುವ ಗೊರವಿತಿಯ ಕೈಯಲ್ಲಿ ಕಂಕಣ ಉಲಿವಗೆಜ್ಜೆ ಚರಣದಲ್ಲಿ –

**"ಉರಿಯ ಗೊರವನ ನೆರೆವ ಭರವಸದಿಂದ**
**ಬಂದಿರಲು ಬಹಳ ಮುಳ್ಳಡ್ಡವಾದುದಲ್ಲಾ**
**ಕಂಕಣದುಲುಹು ನಂದಿ ಕಣ್ಣೆರೆದಾ ಮುಳ್ಳೊಳಿಯಲು**
**ಕಾಡಿಗೆಜ್ಜೆದ್ದು ಕರಡವ ಸುಟ್ಟಂತೆ..............."**

ಅಲ್ಲಮನ ವಚನವು ನೀರು ಕೊಡ ಹೊತ್ತು ಕುಣಿಯುವ ಸಂಪ್ರದಾಯದ ಪ್ರಾಚೀನ ದಾಖಲೆಯೆಂದು ಡಾ. ಎಂ. ಎಂ. ಕಲಬುರ್ಗಿಯವರು ಸೂಚಿಸುವ ಕುಣಿಯುತ್ತಾ ಮುಂದುವರೆದು ಕೆಂಡ ಹಾಯುವ ಉಗ್ರ ಆಚರಣೆಯೆ ಸೂಚಿಸುವಂತೆ ಕಾಣುತ್ತದೆ. ಎಳೆಯುವ ಪ್ರಾಚೀನ ಕಾಲದ ಅತ್ಯಂತ ಪ್ರಬಲ ಪುರುಷ ಕ್ಷುದ್ರ ದೇವತೆ, ಮೈತುಂಬಿಕೊಂಡು ಕಾಡುವ ಭೂತದೇವತೆ, ನೀರಾಟದ ಆಚರಣೆಗೂ ಇವನಿಗೂ ಸಂಬಂಧ ನಡೆಯುವ ಓಕುಳಿಯನ್ನು ಸಂಕೇತಿಸುತ್ತಿರಬಹುದು. ಭೈರವ ಮತ್ತು ಮೈಲಾರ ಪ್ರಮುಖರು. ಸಮಯ ಪರೀಕ್ಷೆ, ಅಂಜನಾ ಚರಿತ್ರೆ, ಯಶೋಧಾ ಚರಿತ್ರೆ, ಕನಕದಾಸರ ಕೀರ್ತನೆ, ಬಸವಣ್ಣ, ಚನ್ನಬಸವಣ್ಣನವರ ವಚನದಲ್ಲಿ ಭೈರವನ ಪ್ರಸ್ತಾಪವಿದೆ. ಕಾಪಾಲಿಕರು ಈ ಭೈರವವನ್ನು ಪೂಜಿಸುತ್ತಿದ್ದರು ಹಾಗೂ ನರಬಲಿಯನ್ನು ಕೊಡಲಾಗುತ್ತಿತ್ತು. ಭೈರವಣಿಗೆ ಹರಕೆ ಹೊತ್ತು ತಲೆಗಳನ್ನು ಅರ್ಪಿಸುವ ಸಂಪ್ರದಾಯದ ಉಲ್ಲೇಖಗಳು ಶಾಸನಗಳಲ್ಲಿ ದೊರೆಯುತ್ತವೆ.

ಬೆನ್ನಸಿಡಿ, ಬಾಯಿಬೀಗ, ಉರಿಗೊಂಡ, ಚಬುಕದಿಂದ ಬೆನ್ನಲ್ಲಿ ಹೊಡೆದುಕೊಳ್ಳುವುದು, ನಾಯಿಯಂತೆ ಬೊಗಳುವುದು ಇವು ಮೈಲಾರನಿಗೆ ಭಕ್ತರು ಅರ್ಪಿಸುವ ಹರಕೆಗಳೆಂದು ಅನುಭವ ಶಿಖಾಮಣಿಯಲ್ಲಿ ಹೇಳಲಾಗಿದೆ. ಬೆರಳನ್ನು ಕತ್ತರಿಸಿ ದೇವರಿಗೆ ಅರ್ಪಿಸಿದ್ದ ಇಂತಹ ಆಚರಣೆ ಪ್ರಾಚೀನವಾದವು. ಕೊಲ್ಲಾಪುರದ ಮಹಾಲಕ್ಷ್ಮೀಗೆ ಬೆರಳು ನೀಡಿದ ವಿಷಯ ಲೋಕಪ್ರಸಿದ್ಧವಾದದ್ದು. ಬಳಿಗಾವೆ ಶಾಸನ, ತುಳುವ ಚಂಡಿಗನು ಬೆರಳ್ಗೆ ವೇಳೆಗೊಂಡನೆಂದು ಜನಪದರ ಉಗ್ರ ಹರಕೆಗಳನ್ನು ಬ್ರಹ್ಮಶಿವ ಸೂಚಿಸಿದ್ದಾನೆ.

ಕುರುಳು ಕೊಡುವುದು ಬಹುಶಃ ತಲೆಕೊಡುವ ಸಂಪ್ರದಾಯದ ಮಗುವಿನ ಕುರುಳು ದೇವರ ಸಮ್ಮುಖದಲ್ಲಿ ಇಳಿಸು, ತಿರುಪತಿ, ಮಂತ್ರಾಲಯ, ಧರ್ಮಸ್ಥಳ, ಕಾಶಿ, ಕ್ಷೇತ್ರಗಳ ಸಂದರ್ಶಿಸಿದಾಗ ತಲೆ ಬೋಳಿಸಿಕೊಳ್ಳುವರು ಮುಂದೆ ಸಾಮಾಜಿಕ ಆಚರಣೆಗಳಾಗಿ, ತಾವು ಒಲಿದು ಒಪ್ಪಿನ ಪುರುಷರಿಗಾಗಿ ಸ್ತ್ರೀಯರು ಸಮರ್ಪನಾ ಭಾವದ ದ್ಯೋತಕವಾಗಿ ಆಚರಿಸುತ್ತಿದ್ದು ಬರೆದುಕೊಳ್ಳುವುದು, ಉಗ್ರ ಜನಪದ ಆಚರಣೆಯ ವರ್ಣನೆ ಪಂಪ ಭಾರತದಲ್ಲಿದೆ.

ಪಾಂಡವರನ್ನು ನಾಶಗೊಳಿಸಲು ದುರ್ಯೋಧನ, ಪುರೋಹಿತ ಕನಕಸ್ವಾಮಿ ಒಂದು ಯಜ್ಞ ಮಾಡುತ್ತಾನೆ. ಯಜ್ಞದಿಂದ ಜನಸಿದ ಭೂತ ದೈವಿಶಕ್ತಿಗಳು ಪಾಂಡವರನ್ನು ನುಂಗಲು ವ್ಯಾಸ ಭಾರತದಲ್ಲಿಲ್ಲದ ಕೇವಲ ಪಂಪ ಭಾರತದಲ್ಲಿ ಮಾತ್ರ ಕಾಣಿಸಿಕೊಳ್ಳುವ ಮಾಟಮಂತ್ರಗಳಿಂದ ವ್ಯಕ್ತಿಗಳನ್ನು ಜನಪದ ಉಗ್ರ ಆಚರಣೆಯ ಆಶಯವೇ ವ್ಯಕ್ತಗೊಂಡಿರಬಹುದು.

ವಿವಿಧ ಧರ್ಮಗಳಲ್ಲಿ ವ್ಯಕ್ತಿಕೇಂದ್ರಿತ ಉಗ್ರ ಆಚರಣೆಗಳು ಮಾನವನನ್ನು ಹಿಂಸೆಯಿಂದ, ಅಹಿಂಸೆಯುತ್ತ ಸೆಳೆದೊಯ್ಯುದೆ ಜನಪದ ಉಗ್ರ ಆಚರಣೆಗಳು ಹಿಂದೂ, ಜೈನ, ಶೈವ ಮತ್ತು ವೀರಶೈವ ಧರ್ಮಗಳ ಆತ್ಮ ಬಲಿದಾನಗಳಿಗೆ ಧಾರ್ಮಿಕ ಮುದ್ರೆ ಒತ್ತಿ ಅಧಿಕೃತಗೊಳಿಸಿದ್ದವು.

| | | | |
|---|---|---|---|
| ೧) | ಎತ್ತರದಿಂದ ಬೀಳುವುದು | ೨) | ಅಗ್ನಿ ಪ್ರವೇಶ |
| ೩) | ಉಪವಾಸ | ೪) | ತೀರ್ಥಯಾತ್ರೆ |
| ೫) | ವಟವೃಕ್ಷದಿಂದ ನದಿಗೆ ದುಮುಕುವುದು | ೬) | ನದಿಯಲ್ಲಿ ಮುಳಗಿ ಸಾಯುವುದು. |

ಮಲ್ಲಯ್ಯನ ದರ್ಶನವಾಗದಿದ್ದಾಗ ಸಿದ್ದರಾಮನು ರುದ್ರಗಮ್ಮರಿಗೆ ಹಾರಿ ಪ್ರಾಣಬಿಡಲು ಇಚ್ಛೆ. ರಾಘವಾಂಕನ ಸಿದ್ಧರಾಮ ಸೋಲಿನಿಂದ ಅವಮಾನಿತಳಾದ ಜ್ವಾಲೆ, ಅಗ್ನಿ ಪ್ರವೇಶ ಚಿತ್ರ, ಲಕ್ಷ್ಮೀಶನ ಜೈಮಿನಿ ಭಾರತದಲ್ಲಿ ಘೋಷಯಾತ್ರೆಯ ವಿಫಲವಾದಾಗ ದುರ್ಯೋಧನನು ಉಪವಾಸ ಪ್ರಾಣತ್ಯಾಗ ಮಾಡಲು ನಿರ್ಧರಿಸಿ ಪ್ರಾಯೋಪ್ರವೇಶ ವೃತ ಕುಮಾರವ್ಯಾಸ ಕರ್ನಾಟಕದ ಶಾಸನವೊಂದರಲ್ಲಿದೆ. ಬೀರಯ್ಯ ಎನ್ನುವರು. ಕ್ರಿ.ಶ. ೧೧೩೩ ರಲ್ಲಿ ದೇವರಿಗೆ ಹರಕೆ ಹೊತ್ತು ಅಗ್ನಿ ಪ್ರವೇಶ ಮಾಡಿ ಶಿಲೋಕಪ್ರಾಪ್ತನಾದ ಆತ್ಮಬಲಿದಾನಗಳು ಅಮವಾಸ್ಯ, ಸಂಕ್ರಮಣ, ಗ್ರಹಣ ಸಂದರ್ಭಗಳಲ್ಲಿ ನಡೆಯುತ್ತವೆ. ೧೦೬೮ ರಲ್ಲಿ ಚಾಲುಕ್ಯ ದೊರೆ ಸೋಮೇಶ್ವರ ಮಹಾಜ್ವರ ಪೀಡಿತ, ತನ್ನ 'ವಿಕ್ರಮಾಂಕ ದೇವಚರಿತೆ'ಯಲ್ಲಿ ಅಹಿಂಸಾ ಪರಮೋಧರ್ಮ, ಜೈನಧರ್ಮವು ಸಾಧಕನ, ಸಾಧನೆಯ ಪಥದಲ್ಲಿ ಹಿಂಸೆಯ ಹಡದಿಯನ್ನು ವಿಪರ್ಯಾಸವೆಂದೇ ಹೇಳಬೇಕು. ಉಪಸರ್ಗಗಳ ಸಹನೆ, ನಗ್ನತೆ, ಕೇಶಲೋಚನೆ ಸಮಾಧಿ ಮರಣಗಳಂತೆ ಉಗ್ರ ಆಚರಣೆಗಳಾಗಿವೆ. ಸಮಾಧಿ ಮರಣವೆಂದರೆ ಧಾರ್ಮಿಕ ಆತ್ಮಹತ್ಯೆ ಎಂದು ಹೇಳಬಹುದು. ಹತ್ತೊಂಬತ್ತು ಕಥೆಗಳ ಸಂಕಲನವೇ ವಡ್ಡಾರಾಧನೆ.

ಬೌದ್ಧ ಧರ್ಮದ ತಾಂತ್ರಿಕ ಗ್ರಂಥ ಕೊಲೆ, ಸುಳ್ಳು, ಕಳ್ಳತನ, ವಿಷಯ ಲಂಪಟ ತತ್ವಗಳನ್ನು ಸಾಧಕನಿಗೆ ವಿಧಿಸಿದೆ ಎಂದಿರುವುದು ಸಮಂಜಸವಾಗಿದೆ. ಈ ಲೌಕಿಕ ಆತ್ಮಬಲಿದಾನ ಪತಿಗಾಗಿ ಪ್ರೀಯ ಸತಿ ವ್ಯಕ್ತಿಗಾಗಿ ಪ್ರೀಯ ವ್ಯಕ್ತಿಯು ಒಂದರ ಹೆಸರು ಸಹಗ, ಕಿಳ್ಗುಂಟೆ ಪುರುಷನಿಗಾಗಿ ಪುರುಷ, ಪುರುಷನಿಗಾಗಿ ಸ್ತ್ರೀಗಾಗಿ ಸ್ತ್ರೀ, ಗದುಗಿನ ಭಾರತ, 'ಪಂಪಭಾರತ', ಹರಿಹರನ ವೇಳವಾಳಿ, ಲೆಕ್ಕವಾಳಿಗಳ ಆತ್ಮ ಬಲಿದಾನಗಳು ನಮೂದಿತವಾಗಿವೆ. ವೇಳೆವಾಳೆಗಳೆಂದು ಸ್ಮಾರಕದ ಮೇಲೆ ಗರುಡ ಸಂಪ್ರದಾಯ ಹೊಯ್ಸಳರ ಕಾಲದಲ್ಲಿ ರೂಢಿಗೆ ಬಂದಿತು. ಡಾ. ಎಂ. ಎಂ. ಕಲಬುರ್ಗಿಯವರು ಕೆರೆ, ಸೇತುವೆ ಮತ್ತು ಕೋಟೆಗಳನ್ನು ಕಟ್ಟಿಸುವಾಗ ಪ್ರಾಣವನ್ನರ್ಪಿಸಿದ ಗಂಡು–ಹೆಣ್ಣುಗಳ, ಪತಿಗಾಗಿ–ಸತಿ, ಸತಿಗಾಗಿ–ಪತಿ, ಪ್ರಾಣವನ್ನರ್ಪಿಸಿದ ಜನಪದರ ಆಚರಣೆಗಳು, ಜನಪದ ಸಾಹಿತ್ಯದಲ್ಲಿ ಹಾಸುಹೊಕ್ಕಾಗಿ ಮೂಡಿನಿಂತಿವೆ. ಕೇವಲ ಕನ್ನಡ ಶಿಷ್ಟಪದ ಸಾಹಿತ್ಯದಲ್ಲಿ ಉಕ್ತವಾದ ವ್ಯಕ್ತಿಕೇಂದ್ರಿತ ಜನಪದ ಉಗ್ರ ಆಚರಣೆಗಳ ವಿವಿಧ ಬಗೆಗಳನ್ನು ಮತ್ತು ಅವುಗಳ ಸ್ವರೂಪದ ಕುರಿತು ಪರಿಚಯಿಸಲಾಗಿದೆ.

ಪ್ರಸ್ತುತ ಲೇಖನ ಪ್ರಾಚೀನ ಸಾಹಿತ್ಯ ಕೃತಿಗಳ ಅಧ್ಯಯನ, ಖ್ಯಾತ ಸಂಶೋಧಕರ ನಿರ್ಣಯಗಳು ಮತ್ತು ಸ್ವತಃ ಡಾ. ವ್ಹಿ. ಎಸ್. ಮಾಳಿಯವರೇ ಕ್ಷೇತ್ರ ಕಾರ್ಯ ಕೈಗೊಂಡು ಸಿದ್ಧಪಡಿಸಿರುವುದರಿಂದ ಇದಕ್ಕೆ ಮಹತ್ವ ಹೆಚ್ಚಾಗಿದೆ. ಅತ್ಯುತ್ತಮ ಸಂಶೋಧನೆಗೆ ನಿದರ್ಶನವಾಗಿದೆ.

## ೫) ಕೊಕಟನೂರು : ಐತಿಹಾಸಿಕ ಸಮೀಕ್ಷೆ :

ಇದು ಕ್ಷೇತ್ರವನ್ನು ಮಾಡಿ, ಮಾಹಿತಿ ಸಂಗ್ರಹಿಸಿ, ಸಂಗ್ರಹಿಸಿದ ಮಾಹಿತಿಯನ್ನು ಅರ್ಥಪೂರ್ಣವಾಗಿ ವಿಭಾಗಿಸಿ, ಮಾರ್ಮಿಕ ಪರಿಚಯಿಸಲಾಗಿದೆ. 'ಅಥಣಿಯಿಂದ ಪೂರ್ವಕ್ಕೆ ಸುಮಾರು ೧೯ ಕಿ.ಮೀ. ದೂರದಲ್ಲಿರುವ ಕೊಕಟನೂರು ಅಥಣಿ ತಾಲೂಕಿನ ಹಿರಿಯ ಗ್ರಾಮಗಳಲ್ಲೊಂದು ಯಲ್ಲಮ್ಮನ ದೇವಸ್ಥಾನದಿಂದ ಹೆಚ್ಚು ಪ್ರಸಿದ್ಧತೆ ಪಡೆಯತೊಡಗಿದೆ. ೩ ಕಿ.ಮೀ. ಅಂತರದಲ್ಲಿರುವ ಈ ದೇವಸ್ಥಾನ ಗ್ರಾಮದ ಸಾಂಸ್ಕೃತಿಕ ಜೀವನದಲ್ಲಿ ಪ್ರವೇಶಿಸುತ್ತಿದ್ದಂತೆಯೆ ಹಾಳು ಬಿದ್ದಿರುವ ಅರಮನೆ, ಕೋಟೆ–ಕೊತ್ತಲಗಳು ವೀಕ್ಷಕರ ಗಮನ ಸೆಳೆಯುತ್ತವೆ. ಪ್ರಾಚೀನ ವೈಭವವನ್ನು ವರ್ಣಿಇಸುವ ತುಂಡು ಶಾಸನಗಳು ಜೀರ್ಣ ದೇವಾಲಯಗಳು ಭಗ್ನ ಮೂರ್ತಿಗಳು, ಊರ ಮುಂದಿನ ಹಾಳು ಪ್ರದೇಶದಲ್ಲಿ ಬಿದ್ದುಕೊಂಡಿವೆ. ಪ್ರಾಕ್ತನ ಇಲಾಖೆ ಸಂಶೋಧಕರಿಂದ ವಂಚಿತಗೊಂಡು ಅಜ್ಞಾತವಾಸ ಅನುಭವಿಸುತ್ತಿರುವ ಕೊಕಟನೂರಿನ ಇತಿಹಾಸದತ್ತ ವಿದ್ವಾಂಸರ ಗಮನ ಸೆಳೆಯುವುದೇ ಪ್ರಸ್ತುತ ಲೇಖನದ ಉದ್ದೇಶ ಎನ್ನುವಲ್ಲಿ ಲೇಖಕರ ಆಶಯ ಸ್ಪಷ್ಟವಾಗಿದೆ.

ಸಾಮಾನ್ಯವಾಗಿ ನೀರಿನ ಸೆಲೆಯ ಮಗ್ಗುಲಲ್ಲಿಯೇ ಮಾನವ ನೆಲೆಗಳು ಹುಟ್ಟು ಬೆಳೆಯುತ್ತವೆ 'ಹರಿಹಳ್ಳ'ವೆಂದು ಖ್ಯಾತಿ ಹೊಂದಿದ ಮೇಲೆ ಹಬ್ಬಿಕೊಂಡಿದೆ ಈ ಗ್ರಾಮ. ನಾವು ಗ್ರಾಮಸ್ಥರನ್ನು ಕೇಳಿದಾಗ ಊರಿನ ಪಶ್ಚಿಮಕ್ಕಿರುವ ಮಾರಡಿಯಲ್ಲಿ ಕೊಕಟೆಗಳು (ಒಂದು ಜಾತಿಯ ಬೇಟೆಯ ಪ್ರಾಣಿಗಳು) ಬಹಳ. ದಾಸರು ಬೇಟೆ ಆಡುತ್ತಾರೆ. 'ಕೊಕಟ್ಯಾನ ಊರು' ಎಂದು ಡಾ. ಎಂ. ಎಂ. ಕಲಬುರ್ಗಿಯವರು ಅನಿಸಿಕೆ. ಇದು ಪಾಮರರ ನಿಷ್ಪತ್ತಿ ಕೊಕಟನೂರಿನ ಪ್ರಾಚೀನ ಶಾಸನದಲ್ಲಿ (ಕ್ರಿ.ಶ. ೧೦೫೦–೫೧) ರಲ್ಲಿ 'ಕೊರ್ಗ್ಗಟನೂರು', ಕ್ರಿ.ಶ. ೧೧೯೬ ರ ಕೊರ್ಗಟನೂರು, ಕ್ರಿ.ಶ. ೧೨೩೫ ರ ಶಾಸನದಲ್ಲಿ ಇದು ಕೊಗ್ಗಟನಗ್ರಹಾರ ಮೂಲ ಹೆಸರು ಕೊರ್ಗ್ಗಟನೂರು, ಕೊರ್ಗ್ಗಟನೆಂಬ ವ್ಯಕ್ತಿ ಗ್ರಾಮ ಸ್ಥಾಪನೆಗೆ ಕಾರಣರಾಗಬಹುದು. ಕರಹಡ, ನಾಲ್ಸಾಸಿರದ ಉಪವಿಭಾಗ ಕನಂಬಡೆ ಮುನ್ನೂರು ಕೊರ್ಗ್ಗಟನೂರು ಮುನ್ನೂರಲ್ಲಿಯ ಒಂದು ಅಗ್ರಹಾರ ವಿದ್ಯಾವಂತ ಬ್ರಾಹ್ಮಣರು ನೆಲೆಗೊಳ್ಳಲು ರಾಜನು ಬಿಟ್ಟ ಗ್ರಾಮ ಅವರಿಗೆ ಸಲ್ಲುತ್ತದೆ. ಉಪಲಬ್ಧ ಶಾಸನಗಳ ಒಟ್ಟು ಸಂಖ್ಯೆ ೯. ಒಂದು ಕಲ್ಯಾಣಿ ಚಾಲುಕ್ಯರಿಗೆ, ೩ ಕಲಚೂರ್ಯರಿಗೆ ೨, ದೇವಗಿರಿ ಯಾದವರಿಗೆ ಉಳಿದ ಶಾಸನಗಳು ಸಂಪೂರ್ಣ ಹಾಳಾಗಿದೆ.

ಕ್ರಿ.ಶ. ೧೦೫೦–೫೧ ರಲ್ಲಿ ರಚಿತಗೊಂಡ ಶಾಸನ ಕಲ್ಯಾಣದ ಚಾಲುಕ್ಯ, ಸಾಮ್ರಾಟ ತ್ರೈಲೋಕ್ಯಮಲ್ಲನಿಗೆ ಕಲ್ಯಾಣ, ಚಾಲುಕ್ಯರ ರಾಜದಾನಿಯಾಗಿತ್ತೆಂದು ಹೇಳುವ ಉಪಲಬ್ಧ ಪ್ರಥಮ ಶಾಸನ ಕರಡ ನಾಲ್ಸಾಸಿರ ಮಿರಿಂಜೆ' ಮಾಸಾಸಿರಗಳನ್ನು ಬೀಡಾನುವೃತ್ತಿಯಿಂದ ಆಳುತ್ತಿದ್ದ. ತ್ರೈಲೋಕ್ಯಮಲ್ಲನ ಮಹಾಮಂಡಳೇಶ್ವರ, ಜೋಗಪಯ್ಯರಸ ರಾಣಿ, ಮಲ್ಲಿಕಬ್ಬೆಯರು ಕಲಚೂರ್ಯರ ೩ ಶಾಸನಗಳಲ್ಲಿ ೨ ಬಿಜ್ಜಳನ ಕಾಲದಲ್ಲಿ ರಚಿತಗೊಂಡಿದ್ದಾರೆ. ರಾಯವಲೂರಿ ಸೋವಿ ದೇವನ

ಕಾಲದಲ್ಲಿ ರಚಿಸಲ್ಪಟ್ಟಿದೆ. ಈಗಿನ ಕಲ್ಲೇಶ್ವರ ದೇವಾಲಯದ ಹೊರಗೋಡೆಯೇ ಪೆರ್ಮಾಡಿಯ ಮಗ ಬಿಜ್ಜಳನಿಗೆ ಮೈಲುಗಿಯೆಂಬ ಸೋದರ ನಿರುವುದಾಗಿ ಹೇಳಾಗಿ ಪಾಪನಾಶಿ ದೇವಾಲಯದ ಶಾಸನವೊಂದು ಸಂಪೂರ್ಣ ನಾಶವಾಗಿ ಬಿಜ್ಜಳನ ಪಾಪನಾಶಿ ದೇವಾಲಯಕ್ಕೆ ದತ್ತಿ ಬಿಟ್ಟು ಅಸ್ಪಷ್ಟ ವಿಷಯವಿರುತ್ತದೆ.

ಕ್ರಿ.ಶ. ೧೧೯೯ ರ ಪಟ್ಟಕ್ಕೆ ಬಂದ ರಾಯ ಮುರಾರಿ, ಸೋವಿದೇವನ ಕಾಲದ್ದಾಗಿರುತ್ತಿದೆ. ಕಲ್ಮೇಶ್ವರ ದೇವಾಲಯ ಕ್ರಿ.ಶ. ೧೨೩೫ ರ ಶಾಸನದಲ್ಲಿ ಯಾದವ ಚಕ್ರವರ್ತಿ ಸಿಂಘನದೇವನ ಪ್ರಸ್ತಾಪ ಕ್ರಿ.ಶ. ೧೩೧೬ ರ ಶಾಸನದಲ್ಲಿ ಯಾದವ ಪ್ರೌಢ ಪ್ರತಾಪ ಚಕ್ರವರ್ತಿ ರಾಮಚಂದ್ರನ ಉಲ್ಲೇಖವಿದೆ. ಕಾಲಕ್ರಮದಂತೆ ಕಲ್ಯಾಣ ಚಾಲುಕ್ಯ, ಕಳಚೂರ್ಯ ದೇವಗಿರಿ ಯಾದವರ ಅಸ್ತಂಗತದೊಂದಿಗೆ ವಿಜಾಪೂರ ಸುಲ್ತಾನರ ಗ್ರಾಮಧಿಪತಿ ಚಂದ್ರಗೌಡನ ಮಗನಾದ ವಿಟ್ಟಗೌಡನ ಕಾರ್ಯ ಸಾಹಸಗಳನ್ನು ಮೆಚ್ಚಿದ ವಿಜಾಪುರದ ಒಂದನೆಯ (೧ನೇ) ಇಬ್ರಾಹಿಂ ಆದಿಲ್‌ಷಾ ಅವನಿಗೆ ಕೊಕಟನೂರು ಪರಗಣೆಯನ್ನು ಇನಾಮಾಗಿ ನೀಡಿದನು. ವಿಟ್ಟಗೌಡ (೧೫೬೫–೧೫೯೦) ಬೆಳವಲ ನಾಡನ್ನು ಪಡೆದ ಕುಡು ಒಕ್ಕಲಿಗ ಮತಸ್ಥ ವಂಶಜರಾದ ಇಲ್ಲಿಯೇ ದೇಸಾಯಿವರು ಹಲವು ವರ್ಷ ಆಳಿದರು. ಸಮಗ್ರ ಅಭ್ಯಾಸದ ಅವಶ್ಯಕತೆಯಿದೆ. ಮುಸ್ಲಿಂರ ಪತನಾ ನಂತರ ಮರಾಠರ ಆಡಳಿತಕ್ಕೆ ಒಳಪಟ್ಟಿತ್ತು. ಕ್ರಿ.ಶ. ೧೮ನೇಯ ಶತಮಾನದಲ್ಲಿ ಪೋಳ ಸರಕಾರ ಊರಿನ ಸುತ್ತಲೂ ಕೋಟೆ ನಿರ್ಮಿಸಿ ಅರಮನೆ ಕಟ್ಟಿಸಿದ. ಈಗ ಹಾಳು ಬಿದ್ದ ಕೋಟೆ ಕೊತ್ತಲುಗಳು ಇವನೇ ನಿರ್ಮಿಸಿ, ಇಂಗ್ಲೀಷರ ಆಡಳಿತ ಕಾಲದಲ್ಲಿ ಮುಂಬಯಿ ಪ್ರಾಂತ್ಯಕ್ಕೆ ಸೇರಿತ್ತು. 'ಬಹುಧರ್ಮ ಧನುನಿವಹಕ್ಕಾಡೊಂಬಲು ಕರ್ನಾಟಕಂ' ಕೊಕಟನೂರಿಗೆ ಅಕ್ಷರಶಃ ಅನ್ವಯಿಸುತ್ತ ಸರ್ವಧರ್ಮಗಳ ಸಂಗಮವಾಗಿತ್ತೆಂಬುದಕ್ಕೆ ಅಲ್ಲಿದ್ದ ತ್ರೈಪುರುಷ ದೇವಾಲಯವೇ ಹಿರಿಯ ಸಾಕ್ಷಿಯಾಗಿವೆ. ಹರಿಹರ ಹಿರಣ್ಯಗರ್ಭರ ತ್ರೈಪುರುಷ ದೇವಾಲಯವನ್ನು ಕೊಚಿ ಶೆಟ್ಟಿ ಕಟ್ಟಿಸಿದ ಸಂಗತಿ ಕ್ರಿ.ಶ. ೧೧೫೦–೫೧ ರ ಶಾಸನ ಮಂಡಳೇಶ ಜೋಗಪಯ್ಯರಸನು ಜನ್ನವಾಡ ಗ್ರಾಮವನ್ನು ಆ ದೇವರಿಗೆ ಸಂಕ್ರಾತಿ ಪರ್ವ ನಿಮಿತ್ತವಾಗಿ ಬಿಟ್ಟುಕೊಟ್ಟನು. ಕೂಚಿಶೆಟ್ಟಿಯೂ ಆ ದೇವರಿಗೆ ದಾನ ಬಿಟ್ಟ ಪ್ರಸ್ತಾಪ ಈಗ ಇಲ್ಲ, ತ್ರೈಪುರುಷ ದೇವಾಲಯವಿಲ್ಲ. ಹೂಗಾರ ಓಣಿಯಲ್ಲಿ ದೇವಾಲಯದ ಅವಶೇಷಗಳನ್ನು ನೋಡಬಹುದು. ಶಾಸನ ಮಣ್ಣಿನಲ್ಲಿ ಹೂಳಲ್ಪಟ್ಟಿದೆಯೆಂದು ಬಿಜ್ಜಳನ ಮಗ ಸೋಲಿಲದೇವ ದತ್ತಿಯನ್ನು ಪಾಪನಾಶಿ ದೇವಾಲಯ, ಪವಿತ್ರ ೨೦ ವರ್ಷಗಳ ಹಿಂದೆಯಷ್ಟೇ ಜೀರ್ಣೋದ್ಧಾರಗೊಂಡು ನಾಲ್ಕು ಚಿಕ್ಕ ಗೂಡುಗಳಾಗಿ ಮಾರ್ಪಟ್ಟಿರುವ ಇದರ ಬಳಿ ಮಡುವಿದ್ದು, ಪಾಪನಾಶಕ್ಕಾಗಿ ಜನರು ಅಲ್ಲಿ ಸ್ನಾನ ಮಾಡಿ ದೇವರ ದರ್ಶನ ಬೇಸಿಗೆಯಲ್ಲಿಯೂ ಅದೊಂದು ಪ್ರಸಿದ್ಧ ವಿದ್ಯಾಕೇಂದ್ರವು ಆಗಿತ್ತು.

ಕ್ರಿ.ಶ. ೧೧೯೯ ರ ಅಲ್ಲಿಯ ಶಾಸನದಲ್ಲಿ ಸೋವಿದೇವನು ಆಚಾರ್ಯ ವಿದ್ಯಾರಾಶಿ ದೇವಾಲಯದ ಸ್ಥಾನಚಾರ್ಯರಾಗಿರಬಹುದು. ಸಿದ್ದೇಶ್ವರ ದೇವಾಲಯವೇ ಪ್ರಾಚೀನ ಕಾಲದ ಭಾವ ಶುದ್ಧ ದೇವಾಲಯವಾಗಿರಬಹುದು. ಕಲ್ಲುಗಳನ್ನು ಸಾವಳಗಿಗೆ ಸಾಗಿಸಲಾಗಿದೆ. ಪ್ರಭು ಪಾರ್ವರ

ಬಲಹಮಲ್ಲದೇವನು ಮುನ್ನೂರರ ಅಧಿಪತಿ ನಾಗರಸನು ಭೂದಾನ ಮಾಡಿದ ವಿಷಯ ಕಲ್ಮೇಶ್ವರ ದೇವಾಲಯ ಕ್ರಿ.ಶ. ೧೨೩೫ ರ ಶಾಸನದಲ್ಲಿದೆ. ಮೂರು ತಿಂಗಳು ಶೈವ ವ್ರತಾಚಾರಣೆ ಆಚರಿಸಿ ಮಡಿದ ಬಂಗಪ್ರೇಮಿ ಮಲ್ಲದೇವನ ಸದ್ಭಕ್ತಿಯ ವರ್ಣನೆಯಿದೆ.

**ಅಷ್ಟುವಿದಾರ್ಚನೆ ನೇಮಂ**
**ನಿಷ್ಠೆಯ ಲಿಂಗಾನು ಪ್ರೇಮಭಯ ಭಕ್ತಿಚಲಂ ।**
**ಸೃಷ್ಟಿಗತಿ ಹೊಸತು ಶಿವಪಥ**
**ದೃಷ್ಟಾಂತಂ ಕಂಡು ಭಾಯ್ಯಲಿಂಗನುಗೊಂಡಂ ॥**

ಕ್ರಿ.ಶ. ೧೩೧೬ ರ ಶಾಸನವೊಂದು, ಯಾದವ ಪ್ರೌಢ ಪ್ರತಾಪ ಚಕ್ರವರ್ತಿ ರಾಮಚಂದ್ರದೇವರ ಮಹಾಪ್ರಧನಿ, ರಂಗನಾಥದೇವರ ಆಜ್ಞೆಯಂತೆ ಪ್ರಭು ಮೂಲಗರ, ಸಮಸ್ತ ಮಾನ್ಯಕಾರರ ಸನುಮತದಿಂದ ಕುಡಿಯರ ಕಲ್ಲಿಗೌಡ, ಹೊಲ್ಲಗೊಂಡ, ನಾಗನಗೌಡ, ಭಾಯಿಗೌಡ, ಮಲ್ಲಗೊಂಡ ಮುಖ್ಯ ಸಮಸ್ತರು 'ಬೆಳಲಿಗೆ'ಯ ಮೂಲಸ್ಥಾನ ಕಲ್ಲಿನಾಥದೇವರಿಗೆ ಭೂಮಿ ನಿವೇಶನ ದಾನ ನೀಡಿದೆ ವಿಷಯವನ್ನು ತಿಳಿಸುತ್ತದೆ. ಈ ಬೆಳಲಿಗೆ ಇಂದಿನ ಜಮಖಂಡಿ ತಾಲೂಕಿನಲ್ಲಿರುವ ಕಲ್ಲು ಬೀಳಗಿ ಗ್ರಾಮ. ಕುಂಬಾರ ಓಣಿಯಲ್ಲಿ ಪೂರ್ವಕ್ಕೆ ಕಲ್ಲೇಶ್ವರನ ತ್ರಿಕೂಟ ದೇವಾಲಯವೇ ಪ್ರಾಚೀನ ಚಂದಿಕೇಶ್ವರ ದೇವಸ್ಥಾನ ಶಿಲ್ಪಕಲೆಯ ಕಲಾಕೃತಿಯಾಗಿ ಒಳ-ಹೊರಗು ಮೂರ್ತಿಗಳ ಕೆತ್ತನೆಯಿಂದ ಭವ್ಯವಾಗಿದೆ. ಈ ದೇವಾಲಯ ಜೀರ್ಣೋದ್ಧಾರ ಗೊಂಡಂತಿದೆ. ಬಂದಿಕೇಶ್ವರ ದೇವಸ್ಥಾನ ತಾಂಬೂಲಕ್ಕಾಗಿ ಮಹಾಪ್ರಧಾನಿ ದಂಡನಾಯಕರ ಅಕ್ಕನ ಮಗ ನಾಗರಸ ಮತ್ತು ಸವದಿಯ ಚಿಖಲ ರಾಜ ಹಾಗೂ ಲಕ್ಕಿಯವ್ವ ಹಣವನ್ನು ದಾನ ನೀಡಿದ ಉಲ್ಲೇಖವಿದೆ. ಕ್ರಿ.ಶ. ೧೩ ನೇ ಶತಮಾನದ ಕಲ್ಮೇಶ್ವರ ದೇವಾಲಯದ ಶಾಸನವೊಂದರಲ್ಲಿ ಚೇರೇಶ್ವರ, ಮಹಾದೇವ, ಹನುಮಂತ, ಯಲ್ಲಮ್ಮ, ಕೋಣಮ್ಮ ಚಂದ್ರವ್ವ, ದುರ್ಗವ್ವ ಇವು ಇಲ್ಲಿಯ ಆಧುನಿಕ ಪ್ರಮುಖ ದೇವಾಲಯಗಳಾಗಿವೆ.

ಮಹಾವೀರ ತೀರ್ಥಂಕರರ ಹೊಸ ಬಸದಿ ಬ್ರಾಹ್ಮರ ಓಣಿಯ ಪಕ್ಕದಲ್ಲಿದೆ. ಹನುಮಂತದೇವರ ಗುಡಿಯ ಮುಂದೆ ಹಾಳು ಮಣ್ಣಿನಲ್ಲಿ ಹೂತುಕೊಂಡಿರುವ ನಿಷಧಿಗಲ್ಲಿನ ಮೇಲೆ, ಸಮಾಧಿ ಮರಣದಿಂದ ಮುಡುಪಿದ ಜೈನ ವೃತಸ್ಥನ ವಿಷಯ ತಿಳಿಸುವ ಶಾಸನವಿದ್ದು ಶೈವ, ವೀರಶೈವದಂತೆ ಜೈನಧರ್ಮವು ಪ್ರಬಲವಾಗಿತ್ತ. ಮೂರು ಮಠಗಳಿದ್ದು, ವೀರಕ್ತಮಠವಿದೆ. ಕನಮಡಿಯ ಶಾಖಾಮಠ, ಜೀರ್ಣಗೊಂಡಿದ್ದು, ಒಟ್ಟಿನಲ್ಲಿ ಈ ಗ್ರಾಮ ಕರ್ನಾಟಕದ ಪ್ರಮುಖ ಮತ-ಧರ್ಮಗಳ ತವರೂರು. ಒಂದು ಜನಾಂಗದ ಏಳಿಗೆಯಲ್ಲಿ ವಿದ್ಯೆಯ ಪಾತ್ರ ಪ್ರಮುಖವಾದುದು. ಅಗ್ರಹಾರಗಳು, ಪ್ರಾಚೀನ ಕರ್ನಾಟಕದ ವಿದ್ಯಾ ಕೇಂದ್ರಗಳು ಸಂಗತಿ ಜನಜನಿತವಾಗಿದೆ. ಅಗ್ರಹಾರದ ಮಹಾಜನರ ವರ್ಣನೆ ರಾಜರ, ಬಿರುದಾವಳಿಯಂತೆ ಸಾಂಪ್ರದಾಯಿಕವಾಗಿದ್ದು, ಕೆಲವು ಅಗ್ರಹಾರಗಳಲ್ಲಿ ಮಾತ್ರ ವಿದ್ಯಾಭ್ಯಾಸ ಸೌಕರ್ಯವಿತ್ತು. ಆದ್ದರಿಂದ ತ್ರೈಪುರುಷ ದೇವಾಲಯವಿದ್ದು, ಅದು ವಿದ್ಯಾಭ್ಯಾಸದ ಕೇಂದ್ರವಾಗಿತ್ತು. ಓದುವ ವಿದ್ಯಾರ್ಥಿಗಳಲ್ಲಿ ಶೈವ ಮತ್ತು ವೈಷ್ಣವ ಭಕ್ತಿ, ನಿಷ್ಠೆ, ಅದರ ಭಾವ ದೃಢೀಕರಿಸುವ ಸಲುವಾಗಿ ತ್ರೈಪುರುಷ ದೇವರ

(ಶಿವ, ವಿಷ್ಣು, ಬ್ರಹ್ಮ) ಪ್ರತಿಷ್ಠಾಪನೆ ಮಾಡುತ್ತಿದ್ದರು. ಕೊಗ್ಗಟನೂರಿನ ವೈಶ್ಯಾಗ್ರಣಿ, ಕೂಚಿಶೆಟ್ಟಿ ತ್ರೈಪುರುಷ ದೇವಾಲಯವನ್ನು ನಿರ್ಮಿಸಿ, ವಿದ್ಯಾರ್ಥಿಗಳಿಗೂ ಓದಿಸುವ ಜನರಿಗೂ ದಾನಬಿಟ್ಟ ವಿಷಯ ಕ್ರಿ.ಶ. ೧೦೫೦-೫೧ ರ ಶಾಸನದಲ್ಲಿ ವರ್ಣಿಸಲಾಗಿದೆ.

**'ಸುರರಿತು ವಿಮಾನವೊಂದರ**
**ಲೀ..........................ಕೂಚಸೆಟ್ಟಿ, ಕೊರ್ಗ್ಗಟನೂರೊಳ**
**ಧರೆಗೆ ಪಡೆಚನ್ದವಾಗಿರೆ**
**ನಿರತಂ ತ್ರೈಪುರುಷಶಾಲೆಯಂ ಮಾಡಿಸಿದಂ'**

ಅಲ್ಲಿದ್ದ ಎಂಟು ಜನ ನಿವಿಷ್ಟರು (ಅಧ್ಯಾಪಕರು) ಪಾಲಿಸಬೇಕಾದ, ನಿಯಮಗಳನ್ನು ೩ ಪದ್ಯಗಳಲ್ಲಿ ಹೇಳಲಾಗಿದೆ.

**'ಶಾಲೆಯ ಪರಿಸೂತ್ರದೊಳಾ**
**ತ್ಮಾಲಯವಂ ಮಾಡಿಕೊಳ್ಳುದಲ್ಲದೆ ಪೆಱತೊ**
**ನ್ನಾಲಯದೊಳರ್ಪವಂ ಪ್ರತಿ**
**ಕೂಲ ಲೋಲಂ ನಿವಿಷ್ಟನಲ್ಲಂ ದುಷ್ಟಂ' ॥**

ಕ್ರಿ.ಶ. ೧೦೫೦-೫೧ ರ ಶಾಸನವನ್ನು ಜಿನವರ್ಮ ಪಂಡಿತನೆಂಬ ರಚಿಸಿದ್ದು, 'ವಿದ್ವಜ್ಜನಾಂಭೋಜನೀಹಂಸ' ಬಿರುದು ಇತ್ತು ಜೋಗಪನ ಆಜ್ಞೆಯಂತೆ ಶಾಸನವನ್ನು ರಚಿಸಿರುವುದಾಗಿ ಹೇಳಿಕೊಂಡ ಅವನ ಪ್ರಾಯಶಃ ಜೋಗಭೂದನ ಆಸ್ಥಾನದಲ್ಲಿರಬಹುದೆಂದು ಈ ಕವಿಯ ಹೆಸರಿನ ಮೇಲಿಂದ ಜೈನ ಮತಸ್ಥನಾಗಿರಬಹುದೆಂದು ನಾಗರಹಾಳ ಗ್ರಾಮವನ್ನು ಕೊರ್ಗ್ಗಟನೂರಿನ ಆಚಾರ್ಯ ವಿದ್ಯಾರಾಶಿ ಪಂಡಿತರಿಗೆ ದೇವರ ಅಂಗಭೂಗ ರಂಗಭೋಗಕ್ಕೆ, ಖಂಡಸ್ಫುಟಿತ – ಜೀರ್ಣೋದ್ಧಾರ, ಮಠದ ತಪೋಧವ ವಿದ್ಯಾರ್ಥಿಗಳಿಗೆ ದಾನಬಿಟ್ಟ ಉಲ್ಲೇಖವಿದ್ದು, ಕೊಗ್ಗಟನೂರಿನಲ್ಲಿ ಮಠವಿತ್ತೆಂಬ ಅಂಶದ ಮೇಲೆ ಶಾಸನ ಬೆಳಕು ಚೆಲ್ಲುತ್ತದೆ. ಅಮರಕೋಶದಲ್ಲಿ 'ಮಠ' ಎಂಬುದಕ್ಕೆ ಶಿಷ್ಯರಿರುವ ಸ್ಥಳ ಎಂದು ಅರ್ಥ ಹೇಳಲಾಗಿದೆ. ಎರಡು ರೀತಿಯ ವಿದ್ಯಾರ್ಥಿ ಮಾಣಿಯರು ತಪೋಧನರೆಂದು ತಪೋಧಯ ಬ್ರಹ್ಮಚರ್ಯವ್ರತಸ್ಥರಾಗಿದ್ದ ವಿದ್ಯಾರ್ಜನೆ ನಂತರ ಒಂದು ಮಠದ ಸ್ಥಾನಾಚಾರ್ಯರಾಗುತ್ತಿದ್ದರು. ಮಠ, ಶೈವ ವಿದ್ಯಾಭ್ಯಾಸ ಕೇಂದ್ರ ಇದು ಪ್ರಾಯಶಃ ಪಾಪನಾಶಿ ದೇವಾಲಯ ಹೊಂದಿಕೊಂಡಿದ್ದಿರಬಹುದು. ಆಚಾರ್ಯ ವಿದ್ಯಾರಾಶಿ ಪಂಡಿತರು ಅಲ್ಲಿಯ ಯತಿಗಳಾಗಿದ್ದು. ಕ್ರಿ.ಶ. ೧೦೫೦ ಮತ್ತು ೧೧೯೬ ರ ಶಾಸನಗಳು ಒಂದು ಜನಾಂಗ ದ್ವಯ – ಆದರ್ಶಗಳನ್ನು ಹೊಂದಿದ್ದವು. ರಕ್ಷಣೆಗಾಗಿ ಪ್ರಾಣವನ್ನು ಪಣಕ್ಕೆ ಇಟ್ಟು ಹೋರಾಡುತ್ತದೆ, ಸಾಮಾಜಿಕ ಮೌಲ್ಯಗಳ ಪೂಜ್ಯನೀಯ ಫಲವಾಗಿ ಮಾಸ್ತಿಕಲ್ಲು, ನಿಷದಿಗಲ್ಲುಗಳು ಹುಟ್ಟಿಕೊಂಡಿವೆ. ಈ ಗ್ರಾಮದಲ್ಲಿ 'ಪೆಣ್ಬುಯ್ಯಲ್' ವೀರಗಲ್ಲೊಂದು ದ್ವಂದ್ವ ಕಾಳಗದ ಚಿತ್ರವಿದ್ದು, ಮಗುವನ್ನು ಎದೆಗಪ್ಪಿಕೊಂಡ ನಿಂತಿರುವ ನಗ್ನ ಸ್ತ್ರೀಯನ್ನು ಅವಮಾನ ಮಾಡುವ ಪ್ರಯತ್ನ ಮಾಡಿದಾಗ ವೀರನೊಬ್ಬ ಅವನೊಂದಿಗೆ ಕಾಳಗ ಮಾಡಿ ಮಡಿದಿರುವಂತೆ ಕಾಣುತ್ತದೆ.

ಅವನ ಸ್ಮರಣಾರ್ಥವಾಗಿ ಈ ವೀರಗಲ್ಲು ಹುಟ್ಟಿದೆ. ಕುದುರೆ ಕಾಳಗ, ಮತ್ತೊಂದು ವೀರಗಲ್ಲಿನ ತುಂಡವೊಂದು ಗುಡಿಯ ಗೋಡೆಗೆ ಹಾಕಲಾಗಿ ಶಾಸನವಿದ್ದರೂ ಓದುವ ಸ್ಥಿತಿ, 'ಕೋಣಮ್ಮ' ಕೊಕಟನೂರಿನ ಗ್ರಾಮದೇವತೆ ಕಲ್ಮೇಶ್ವರ ದೇವಾಲಯ ಬಲಪಕ್ಕದಲ್ಲಿಯೇ ಕೋಣಮ್ಮ ದೇವಾಲಯ ಐತಿಹ್ಯವೊಂದಿದೆ ಅದನ್ನು ದಾಖಲಿಸಿದ್ದಾರೆ.–

'ಕೊಕಟನೂರ : ಐತಿಹಾಸಿಕ ಸಮೀಕ್ಷೆ'ಯ ಮಹತ್ವದ ಸಂಶೋಧನಾ ಲೇಖನವಾಗಿದೆ. ಡಾ. ವ್ಹಿ. ಎಸ್. ಮಾಳಿಯವರು ಎಂ.ಎ. ಪದವಿ ಸಂಪಾದಿಸಿ ಪ್ರಾಧ್ಯಾಪಕರಾದ ಹೊಸದರಲ್ಲಿ ಕೈಗೊಂಡ ಸಂಶೋಧನೆಯಿದು. ಪಿ.ಎಚ್.ಡಿ. ಪೂರ್ವದಲ್ಲಿಯೇ ಸಂಶೋಧನೆಯು ಅವರ ಹವ್ಯಾಸವಾಗಿತ್ತೆಂಬುದಕ್ಕೆ ಪ್ರಸ್ತುತ ಲೇಖನ ಉತ್ತಮ ಉದಾಹರಣೆಯಾಗಿದೆ. ತುಂಬಾ ಶ್ರಮದಿಂದ ಸಾಮಗ್ರಿಯನ್ನು ಸಂಗ್ರಹಿಸಿದ್ದಾರೆ. ಸಾಮಗ್ರಿ ಮುಖಿ ಸಂಶೋಧನೆಗೆ ಇದೊಂದು ನಿದರ್ಶನ. ಅಷ್ಟಕ್ಕೆ ಬಿಡದೆ ಸಂಗ್ರಹಿಸಿದ ಸಾಮಗ್ರಿಯನ್ನು ವಿವೇಚಿಸಿದ್ದು, ವಿಶ್ಲೇಷಣೆಗೆ ಒಳಪಡಿಸಿದ್ದು, ಅಂತಿಮ ತೀರ್ಮಾನಕ್ಕೆ ತಲುಪಿದ್ದು ಪ್ರಬಂಧ ಸಂಶೋಧಕನ ನಿಲುವಾಗಿದೆ. ಲೇಖನ ತಯಾರಿಸಲು ಬಳಸಿದ ಆಕರ ಗ್ರಂಥ ನೀಡಿದ್ದು, ಶಾಸನ, ಕೃತಿಗಳನ್ನು ಸೂಚಿಸಿದ್ದು, ವ್ಯಕ್ತಿಋಣ ಸ್ಮರಿಸಿದ್ದು ಸಂಶೋಧನ ಶಿಸ್ತಿಗೆ ಅನುಗುಣವಾಗಿವೆ. ಕರ್ನಾಟಕ ವಿಶ್ವವಿದ್ಯಾಲಯ 'ಕರ್ನಾಟಕ ಭಾರತಿ'ಯಲ್ಲಿ ಬೆಳಕು ಕಂಡಿದ್ದು ವಿದ್ವತ್ ವಲಯದ ಗಮನ ಸೆಳೆದಿತ್ತು. ಯುವ ಸಂಶೋಧಕನ ಆಗಮನವನ್ನು ಸೂಚಿಸಿತ್ತು. ಹೀಗಾಗಿ ಈ ಲೇಖನ ತುಂಬಾ ಮಹತ್ವದ್ದಾಗಿದೆ.

## ೩.೨ ಸಂಶೋಧನಾ ಗ್ರಂಥಗಳು :

### ೧) ಮಹಾಮಾರ್ಗದ ಮಹಾನ್ವೇಷಕ :

**ಡಾ. ಎಂ. ಎಂ. ಕಲಬುರ್ಗಿ :**

ಸಾಹಿತ್ಯ ಪರಿಭಾಷೆಯಲ್ಲಿ 'ಮಾರ್ಗ' ಒಂದು ಪರಂಪರೆಯನ್ನು ಸೂಚಿಸುವ ಪದ. ಕನ್ನಡ ಸಾಹಿತ್ಯದ ಶ್ರೀಕಾರ, ಶ್ರೀವಿಜಯ, ಅವನೇ ಕನ್ನಡದ ಮೊದಲ ಮಾರ್ಗಕಾರ. ಈ ಮಾರ್ಗಕಾರ ಡಾ. ಎಂ. ಎಂ. ಕಲಬುರ್ಗಿಯವರ ಮಹಾಮಾರ್ಗದ ಮೊದಲ ಪ್ರೇರಣೆ. ಆತನ ಶಾಸ್ತ್ರ ಮಾರ್ಗವನ್ನು ದರ್ಶಿಸಿ, ಕನ್ನಡದಲ್ಲಿ ಸಂಶೋಧನೆಯ ಮಹಾಮಾರ್ಗ ನಿರ್ಮಿಸಿದ ಶ್ರೇಯಸ್ಸು ಕಲಬುರ್ಗಿಯವರದು. 'ಕನ್ನಡ ಸಂಶೋಧಕರಲ್ಲಿ ಅದ್ವಿತೀಯರೇನಿಸಿರುವ ಬಹುಮುಖ ಪ್ರತಿಭೆ ಮತ್ತು ಪಾಂಡಿತ್ಯಗಳ ಡಾ. ಎಂ. ಎಂ. ಕಲಬುರ್ಗಿಯವರು 'ಕವಿರಾಜ ಮಾರ್ಗ ಪರಿಸರದ ಕನ್ನಡ ಸಾಹಿತ್ಯ'ದಿಂದ ಈಚಿನ 'ಮಾರ್ಗ' ಸಂಪುಟಗಳವರೆಗೆ ಬೆಳೆದ ರೀತಿ ಬೆರಗುಗೊಳಿಸುವಂಥದ್ದು. ಶಾಸನ, ಜ್ಞಾನಪದ, ಗ್ರಂಥ ಸಂಪಾದನೆ, ಛಂದಸ್ಸು, ವ್ಯಾಕರಣ, ನಾಮವಿಜ್ಞಾನ ಹೀಗೆ ಏನೆಲ್ಲ ಕ್ಷೇತ್ರಗಳಲ್ಲಿ ತಲಸ್ಪರ್ಶಿಯಾಗಿ ಹರಿಯುವ ಅವರ ವಿದ್ವತ್ತು ಸಾಹಿತ್ಯ ಮಾರ್ಗದಲ್ಲಿ ಗುರುತರವಾದದ್ದನ್ನು ಕೊಟ್ಟಿದೆ. ದೇಶಿ ಒಲವಿನ ಅವರ ಬರಹಗಳು, ಸಂಸ್ಕೃತಿ ಶೋಧವೇ ಗುರಿಯಾದ ಅವರ ವಿಮರ್ಶಾ ಒಳನೋಟಗಳು, ಚರಿತ್ರೆಯ ವ್ಯಾಪ್ತಿಯಲ್ಲಿ ಕಾಣಿಸಿಕೊಳ್ಳುವ ಸಾಹಿತ್ಯ ಪರಂಪರೆ ಸಿದ್ಧಾಂತಗಳು ನಮ್ಮನ್ನು ಬೆರಗುಗೊಳಿಸುತ್ತವೆ. ಸತ್ಯ ಅಸ್ಪಷ್ಟವಾಗದಂತೆ ಭಾಷೆ ಕುರಿತು ಅವರು ವಹಿಸುವ ಕಲಾತ್ಮಕ ಎಚ್ಚರ ಅವರಿಗೆ ವಿಶಿಷ್ಟವಾದುದು.

ಡಾ. ಎಂ. ಎಂ. ಕಲಬುರ್ಗಿ, ಡಾ. ವೆಂಕಟಾಚಲ ಶಾಸ್ತ್ರಿ, ಡಾ. ಚಿದಾನಂದ ಮೂರ್ತಿ ಇವರನ್ನು ಸಂಶೋಧಕ ರತ್ನತ್ರಯರೆಂದು ಗುರುತಿಸುವ ಕಾಲವೊಂದಿತ್ತು. 'ಮಹಾಮಾರ್ಗದ' ಮೂಲಕ ಕಲಬುರ್ಗಿಯವರು ಎತ್ತರೆತ್ತರಕ್ಕೆ ಬೆಳೆದು ಕನ್ನಡ ಸಂಶೋಧನೆಗೆ ಶಿಖರವಾದರು. ಸಂಶೋಧನೆ ಅವರ ಚಿಂತನೆಯ ಕ್ರಮ. ಅಭಿವ್ಯಕ್ತಿ ವಿಧಾನ, ಬದುಕಿನ ಮಾರ್ಗ ಅಂತೆಯೇ ಸಂಶೋಧನೆ ಅವರಿಗೆ ಜನಪ್ರಿಯತೆಯ ಮಾಧ್ಯಮವಾಗದೆ ಉಸಿರಾದುದು. ಅವರ ಹಾಗೆ ರಿಸ್ಕ್ ತೆಗೆದುಕೊಂಡು ಬರೆಯುವವರು ಅತಿ ವಿರಳ. ಡಿಪೆನ್ಸಿವ್ ಬರಹ ಅವರಿಗೆ ಒಗ್ಗದ್ದು, ನಿರ್ವಂಚನೆಯಿಂದ ಆಲೋಚಿಸುವ, ನಿಷ್ಪಕ್ಷಪಾತವಾಗಿ ತೂಗುವ ನಿರ್ದಾಕ್ಷಿಣ್ಯವಾಗಿ ಬರೆಯುವ ಅವರ ಸತ್ಯ ನಿಷ್ಠುರತೆ ಅವರ ಸಂಶೋಧನೆಗಳನ್ನು ಸಜೀವಗೊಳಿಸಿದೆ.

ಉತ್ತರ ಕರ್ನಾಟಕದಲ್ಲಿ ಬೋಧನೆಗೆ ಮಾದರಿಗಳು ಎರಡು. ಒಂದು ಶ್ರೀ ಸಿದ್ಧೇಶ್ವರ ಶ್ರೀಗಳ ಪ್ರವಚನ; ಮತ್ತೊಂದು ಡಾ. ಎಂ. ಎಂ. ಕಲಬುರ್ಗಿಯವರ ಅಧ್ಯಾಪನ. ಅವರ ಉಪನ್ಯಾಸ ಹರಿಯುವ ನದಿಯಂತೆ ನಿರಂತರ ವಿದ್ಯಾರ್ಥಿಗಳ ಎದೆಯಲ್ಲಿ ಕುತೂಹಲ ಬಿತ್ತೊತ್ತಿದ್ದರು. ಕಲಬುರ್ಗಿಯವರ ಸಂಶೋಧನೆಯ ಪ್ರಮುಖ ಗುಣ ಸಮನ್ವಯತೆ. ಬಹುಶಿಸ್ತೀಯ – ಅಂತರ ಶಿಸ್ತೀಯ, ಶಿಷ್ಟಪದ –

ಜಾನಪದ, ಭಾಷಾಶಾಸ್ತ್ರ - ನಾಮಶಾಸ್ತ್ರ, ವಿಮರ್ಶೆ, ಸಂಶೋಧನೆ, ವ್ಯಾಖ್ಯಾನ, ವಿಶ್ಲೇಷಣೆ, ಪರಿಶ್ರಮ, ಪ್ರಾಮಾಣಿಕತೆ, ಚಾರಿತ್ರಕ, ಸತ್ಯ ಸಾಮಾಜಿಕ ಸ್ವಸ್ಥ್ಯಗಳ ಸಮನ್ವಯವನ್ನು ಅವರ ಸಂಶೋಧನೆಗಳಲ್ಲಿ ಕಾಣುತ್ತೇವೆ. ಪ್ರಾಚೀನ ಅರ್ವಾಚೀನ, ವಚನ-ವಚನೇತರ, ಜಾನಪದ-ಶಿಷ್ಟಪದ ಬೇಧಗಳ 'ಪ್ರತಿಷ್ಠೆ' ಒಳಗಾಗದೇ ಶುದ್ಧ ಸಂಶೋಧನೆಗೆ ತೊಡಗಿದುದು ಅವರ ಹೆಗ್ಗಳಿಕೆ. ಅವರ ಸಂಶೋಧನೆ ಪ್ರತಿಭೆ-ಪಾಂಡಿತ್ಯ-ಪರಿಶ್ರಮಗಳ ಸಂಗಮ. ಅವರ ಕ್ಷೇತ್ರ ಕಾರ್ಯದ ಪರಿಶ್ರಮ ನಮಗೆ ಅಚ್ಚರಿ ಮೂಡಿಸುತ್ತದೆ. ಅಧ್ಯಯನ ವಿಸ್ತಾರ ದಿಗಿಲು ಗೊಳಿಸುತ್ತದೆ. ಪಂಪ-ಕುವೆಂಪು ಅವರನ್ನು ತೂಗುವ ಕಾರ್ಯ ತಲೆದೂಗಿಸುತ್ತದೆ. ಅವರು ಕನ್ನಡದಲ್ಲಿ ಶಾಸ್ತ್ರ ಸಾಹಿತ್ಯದ ಮಾರ್ಗವನ್ನು ರೂಪಿಸಲು ಹಲವು ಶಾಸ್ತ್ರ ಕೃತಿಗಳನ್ನು ರಚಿಸಿದರು. ಕನ್ನಡ ಗ್ರಂಥ ಸಂಪಾದನ ಶಾಸ್ತ್ರ, ಸಾಹಿತ್ಯ ಸಂಪಾದನೆ, ಹಸ್ತಪ್ರತಿಶಾಸ್ತ್ರ, ಸಂಶೋಧನ ಶಾಸ್ತ್ರ, ಕನ್ನಡ ನಾಮ ವಿಜ್ಞಾನ, ನಿಘಂಟು ರಚನಾ ವಿಜ್ಞಾನ ಮೊದಲಾದ ಕೃತಿಗಳು ಹಾಗೂ ವ್ಯಾಕರಣ, ಭಾಷೆ, ಛಂದಸ್ಸಿಗೆ ಸಂಬಂಧಿಸಿದ 'ಮಾರ್ಗ'ಗಳಲ್ಲಿಯ ಲೇಖನಗಳು ಅವರ ಶಾಸ್ತ್ರ ಸಂಶೋಧನೆಗೆ ಕೆಲವು ಉದಾಹರಣೆಗಳಾಗಿವೆ.

ಡಾ. ಎಂ. ಎಂ. ಕಲಬುರ್ಗಿಯುವರ ಬದುಕು-ಬರಹದ ಕ್ರಿಯಾ ಸಮಾಸ, ಅವಿಭಕ್ತಪ್ರಜ್ಞೆ ಹಾಗೂ ಶ್ರಮ ಸಂಸ್ಕೃತಿಯ ಸಹಜಬಂಧ. ಸರಳ ಬದುಕು-ಸೌಜನ್ಯದ ನಡತೆ, ಪ್ರಾಮಾಣಿಕ ನುಡಿಯ ಮುಪ್ಪುರಿ, ಪಂಪ ಪ್ರಶಸ್ತಿಯ ಒಂದು ಲಕ್ಷ ಮೊತ್ತವನ್ನು ಸರಕಾರಕ್ಕೆ ಮರಳಿಸಿದರು. ಬಿಜ್ಜಳನ ರಾಜದಂಡ ಇಟ್ಟು ಬಸವಣ್ಣ ಕಲ್ಯಾಣ ಬಿಟ್ಟಂತೆ ಹಂಪಿ ಬಿಟ್ಟು ಧಾರವಾಡಕ್ಕೆ ಬಂದರು. ಬೇಂದ್ರೆ ಟ್ರಸ್ಟಿನ ಅಧ್ಯಕ್ಷತೆಗೆ ರಾಜಿನಾಮೆ ನೀಡಿದ ಸಂದರ್ಭದಲ್ಲಿ ಅವರು ಹೇಳಿದ ಈ ಮಾತು ಅವರ ವ್ಯಕ್ತಿತ್ವದ ದೃಢೀಕರಣ 'ಯಾವುದೇ ಒಬ್ಬ ವ್ಯಕ್ತಿ ಒಂದು ಸಾರ್ವಜನಿಕ ಸಂಸ್ಥೆಯಲ್ಲಿ ಮೂರು ವರ್ಷಗಳಿಗಿಂತ ಹೆಚ್ಚಿಗೆ ಅಧಿಕಾರದಲ್ಲಿ ಇರಬಾರದು' ಇದುವೇ ಚಲನಶೀಲತೆ. ಈ ಕಾರಣದಿಂದಲೇ ಅವರು ಪ್ರಮಾಣ ಪುರುಷರು. ಅವರ ಬದುಕು ಒಂದು ಪ್ರಮಾಣ ಪತ್ರ. ಅವರ ಸಂಶೋಧನೆಗಳು ಕೆಲವೊಮ್ಮೆ ವಿವಾದ ಸೃಷ್ಟಿಸಿರಬಹುದು. ಆದರೆ ಬದುಕು ಮಾತ್ರ ವಿವಾದತೀತ. ಅದು 'ಕೇಡಿಲ್ಲದ ಒಲವಿನ ಹಾಡು' ಅವರು ಒಗಟು ಅಲ್ಲ; ವಚನ-ಕೈ-ಬಾಯಿ-ಮನಸ್ಸು-ಸ್ವಚ್ಛ ಸ್ವಚ್ಛ, ಸಂತೃಪ್ತಿಯ ಸನ್ನಿಧಿ; ನಿರ್ಮಲ ಚಿನ್ನಿಧಿ, ಲಂಚ-ವಂಚನ ವಿರೋಧಿ.

> **"ನನ್ನ ಬಲ, ನನ್ನ ಛಲ**
> **ನೀರು ಗೊಬ್ಬರ ನನಗೆ**
> **ನಾನು ಹುಟ್ಟಿದ್ದು ಸಾಯಲಿಕ್ಕೆ ಅಲ್ಲ**
> **ಸೂರ್ಯ ಚಂದ್ರರ ಕೂಡ ಬದುಕಲಿಕ್ಕೆ"**

ಇದು ಅವರ ಆಶಯ, ಸಾವು ಸೋಲಿಸಿ, ಚಿರಂತನತೆ ಸಾಧಿಸುವ ಸಾಹಸ ಸಾಕಾರಗೊಂಡಿದೆ.

ಅಧ್ಯಾಪನ ವೃತ್ತಿಯ ಪ್ರೇರಣೆ ಡಾ. ಆರ್. ಸಿ. ಹಿರೇಮಠ; ಸಂಶೋಧನ ಪಥದ ನಿರ್ದೇಶಕ ಡಾ. ಎಂ. ಎಂ. ಕಲಬುರ್ಗಿ, ಸಂಶೋಧನೆಗೆ ಸಹಯೋಗಿ ಡಾ. ವೀರಣ್ಣ ರಾಜೂರ, ಹಸ್ತಪ್ರತಿ ಅಧ್ಯಯನದ ಸ್ನೇಹಿತ, ಶ್ರೀ ಎಸ್. ಶಿವಣ್ಣ, ಬದುಕಿಗೆ ಗೆಳೆಯ ಶ್ರೀ ಎ. ಮುರಗೆಪ್ಪ.

ಡಾ. ಬಿ. ಆರ್. ಹಿರೇಮಠರವರು ಮೂಲತಃ ಸೃಜನ ಪ್ರತಿಭೆ, ಕವಿತೆ–ಕತೆ, ನಾಟಕಗಳಲ್ಲಿ ಅಪಾರ ಆಸಕ್ತಿ ಹೊಂದಿದ್ದರು. ಇತ್ತೀಚೆಗೆ ಅವರ ಮನೆಯಲ್ಲಿ ಅವರ ವೈಯಕ್ತಿಕ ಪೈಲುಗಳನ್ನು ಪರಿಶೀಲಿಸುವ ಸಂದರ್ಭದಲ್ಲಿ ಅವರ ೧೭ ಕವಿತೆಗಳು, 'ಯಜ್ಞಪಶು' ಎಂಬ ಕಥೆ, ದಾಸ ಸಾಹಿತ್ಯ, ವಚನ ಸಾಹಿತ್ಯ ಹಾಗೂ ಶಿಲೆಯಲ್ಲಿ ಸಾಹಿತ್ಯ ಎಂಬ ಮೂರು ಬಾನುಲಿ ನಾಟಕಗಳು ಸಿಕ್ಕವು. ಈ ಮೂರು ನಾಟಕಗಳು ಬಾನುಲಿಯಲ್ಲಿ ಬಿತ್ತರಗೊಂಡಿವೆ. ಅವರ ಸಂಶೋಧನ ಪಥಕ್ಕೆ ಬಂದ ಮೇಲೆ ಕವಿತೆ–ಕಥೆ–ನಾಟಕ ಬರೆಯುವುದು ನಿಂತು ಹೋಯಿತು. ಕಲಬುರ್ಗಿಯವರು ಮತ್ತೆ ಮತ್ತೆ ಹೇಳುವ ಒಂದು ಮಾತು, ನೆನಪಾಗುವುದು 'ನಾನು ಮೈಸೂರಿನಲ್ಲಿದ್ದರೆ ಕವಿಯಾಗುತ್ತಿದ್ದೆ'. ಅದಕ್ಕಾಗಿ ಧಾರವಾಡದಲ್ಲಿದ್ದುದ್ದರಿಂದ ಸಂಶೋಧಕನಾದೆ. ಡಾ. ಬಿ. ಆರ್. ಹಿರೇಮಠರವರು ಡಾ. ಕಲಬುರ್ಗಿಯವರ ಪ್ರಭಾವ ವಲಯಕ್ಕೆ ಬಾರದಿದ್ದರೆ ಸಾಹಿತಿಯಾಗುತ್ತಿದ್ದರು. ಸಾಹಿತಿಯಾಗಿ ಇಷ್ಟು ಖ್ಯಾತಿ ಪಡೆಯುತ್ತಿದ್ದರೋ ಇಲ್ಲವೋ ತಿಳಿಯದು. ಆದರೆ ಕನ್ನಡ ನಾಡು ಪರಿಪೂರ್ಣ ಸಂಶೋಧಕನೊಬ್ಬನನ್ನು ಕಳೆದುಕೊಳ್ಳುತ್ತಿತ್ತು. ಡಾ. ಕಲಬುರ್ಗಿಯವರ ಸಂಶೋಧನ ಗರಡಿಯಲ್ಲಿ ಪಳಗಿದ ಡಾ. ಬಿ. ಆರ್. ಹಿರೇಮಠರು ಹಲವಾರು ಅಂಶ ವಿಷಯಗಳನ್ನು ಪ್ರಪ್ರಥಮ ಶೋಧಿಸಿದರು. ಅವರ ಸಂಶೋಧನೆಯ ವ್ಯಾಪ್ತಿ ವಿಸ್ತಾರವಾದದು. ಅಲ್ಲಿಯ ವಿಷಯಗಳು ವಿಸ್ಮಯ ಮೂಡಿಸುತ್ತವೆ. ಆಕರ ಸಾಮಗ್ರಿ ಅಳತೆಗೋಲು ಹಿಡಿಯುತ್ತದೆ. ವಸ್ತುನಿಷ್ಠತೆ, ಸ್ಪಷ್ಟತೆ, ಪರಿಶ್ರಮ, ಪ್ರಾಮಾಣಿಕತೆ, ನಾರ್ವಿಣ್ಯತೆ ಬೆಳಗುತ್ತವೆ. ಅವರ ಸಮಗ್ರ ಲೇಖನಗಳ ಸಂಪುಟಗಳು ಪ್ರಕಟಗೊಳ್ಳುವವರೆಗೂ ಅವರ ಸಂಶೋಧನೆಯ ನೈಜ ದರ್ಶನ ಸಾಧ್ಯವಿಲ್ಲ. ಹಲವಾರು ವಿದ್ವತ್ ಪತ್ರಿಕೆಗಳಲ್ಲಿ ಚದುರಿ ಹೋಗಿರುವ ೧೩೧ (ಸಂಕಲಿತ ೫೭, ಅಸಂಕಲಿತ ೭೧ ಹಾಗೂ ಅಪ್ರಕಟಿತ ೩) ಲೇಖನಗಳು ಒಂದೆಡೆ ಸಂಕಲಿತಗೊಂಡಾಗ ಅವರ 'ಶೋಧ' ಕನ್ನಡಕ್ಕೆ ಮತ್ತೊಂದು ಕನ್ನಡಿಯಾಗಬಲ್ಲದು. ಅವರ ಮಾರ್ಗದರ್ಶನದಲ್ಲಿ ೨೦ ಸಂಶೋಧಕರು ಪಿ.ಎಚ್.ಡಿ. ಹಾಗೂ ೧೨ ಜನರು ಎಂ.ಫಿಲ್. ಪದವಿ ಪಡೆದಿರುವರು.

**ಡಾ. ಬಿ. ಆರ್. ಹಿರೇಮಠರ ಸಾಹಿತ್ಯ :**

ಡಾ. ಬಿ. ಆರ್. ಹಿರೇಮಠರ ಪ್ರಕಟಿತ ಕೃತಿಗಳು ಒಟ್ಟು ೩೧. ಇದರಲ್ಲಿ ೬ ಸಂಶೋಧನ ಗ್ರಂಥಗಳು. ಒಂದು ಮಹಾಪ್ರಬಂಧ, ಒಂದು ಪ್ರಚಾರೋಪನ್ಯಾಸ ಮಾಲೆಯ ಪುಸ್ತಿಕೆ, ೧೪ ಸಂಪಾದನೆಗಳು ಹಾಗೂ ೯ ಸಂಕೀರ್ಣ ಗ್ರಂಥಗಳು. ಅವರ ಸಂಶೋಧನ ಕೃತಿಗಳಾದ ಸಂಶೋಧನ ಪಥ, ವೀರಶೈವ ಸಂಶೋಧನೆಗಳು, ಕನ್ನಡ ಹಸ್ತಪ್ರತಿ, ಲಿಪಿಕಾರರು – ಪ್ರಶಸ್ತಿಗಳು, ಸಾಹಿತ್ಯ ಸಂಶೋಧನ, ವೀರಶೈವ ಸಂಪದ, ವ್ಯಾಸಂಗ ತರಂಗಗಳಲ್ಲಿ ೫೭ ಲೇಖನಗಳಿವೆ. ೭೪ ಲೇಖನಗಳು ಗ್ರಂಥ ಸ್ವರೂಪ ಪಡೆಯಬೇಕಿವೆ.

ಡಾ. ಬಿ. ಆರ್. ಹಿರೇಮಠರು ವಿದ್ವತ್ತಿನ ಪ್ರಮುಖ ಆಯಾಮನಗಳು ಏಳು. ಅವು ಇಂತಿವೆ. ೧) ಶಾಸನ, ೨) ಸಾಂಸ್ಕೃತಿಕ ಚರಿತ್ರೆ, ೩) ಹಸ್ತಪ್ರತಿ, ೪) ಸಂಪಾದನಾ ಸಾಹಿತ್ಯ, ೫) ವೀರಶೈವ ಧರ್ಮ – ಸಾಹಿತ್ಯ, ೬) ಸಾಹಿತ್ಯ ಚರಿತ್ರೆ, ೭) ಜಾನಪದ.

ಡಾ. ಬಿ. ಆರ್. ಹಿರೇಮಠರು ಸಾಮಾಜಿಕ ಕಳಕಳಿಯ ಸಂಸ್ಕೃತಿ ಸಂಶೋಧಕ, ಅಧ್ಯಯನವು ಸಾಮಾಜಿಕ ಅಭಿವೃದ್ಧಿಗೆ ಪೂರಕವಾಗಿರಬೇಕು. ಸಮಾಜದ ಸ್ವಾಸ್ಥ್ಯ ಸಾಧಿಸಬೇಕು. ಕೆಡಿಸಬಾರದೆಂಬುದು ಅವರ ಸಂಶೋಧನೆಯ ಸ್ಪಷ್ಟ ದೋರಣೆ. ಆದ್ದರಿಂದ ಅವರ ಸಂಶೋಧನೆ ಎಂದಿಗೂ ವಿವಾದ ಸೃಷ್ಟಿಸಲಿಲ್ಲ. ಬಹಳಷ್ಟು ಸಂದರ್ಭಗಳಲ್ಲಿ ಕೀರ್ತಿ ಲಾಲಸೆ ವಿವಾದ ಹುಟ್ಟು ಹಾಕಲು ಕಾರಣವಾಗುತ್ತದೆ. ಡಾ. ಬಿ. ಆರ್. ಹಿರೇಮಠರು ಪ್ರಚಾರ ಪ್ರಿಯರಾಗಿರಲಿಲ್ಲ. ಎಂದೂ ಕೀರ್ತಿಗಾಗಿ ಹಪಾಹಪಿಸಿದವರಲ್ಲ. ಅವರಲ್ಲಿ ಗ್ರಂಥ ಸಂಖ್ಯೆ ಬೆಳೆಸುವ (ಕ್ರೇಜ್)ಗಳು ಇರಲಿಲ್ಲ. ಅವರದು ಅತ್ಯುತ್ಸಾಹದ ಓಟವಲ್ಲ. ಚಿಂತನೆಯ ನಿಧಾನ ಅಧ್ಯಯನ, ಅವಸರ, ಭಾವಾವೇಶ, ಭಾವೋದ್ರೇಕ, ವೈಯಕ್ತಿಕ ದೋಷಾರೋಪಣೆಗಳು ಅಲ್ಲಿ ಕಾಣುವುದೇ ಇಲ್ಲ. ಅವರದು ಅಹಂಕಾರ ನಿರಸನದ ವ್ಯಕ್ತಿತ್ವ. ಹಣ, ಪದವಿ, ಪ್ರಶಸ್ತಿ, ಅಧಿಕಾರಗಳಿಗೆ ಕೈಚಾಚಲಿಲ್ಲ. ಅಧ್ಯಯನದಲ್ಲಿಯೂ ಅಷ್ಟೇ ಅವರು ಯಾರದೇ ಅಭಿಪ್ರಾಯಗಳನ್ನು ದೋಚಲಿಲ್ಲ. ತಾವು ಬಳಸಿಕೊಂಡ ಅಭಿಪ್ರಾಯಗಳಿಗೆ ಆಕರ ಸೂಚಿಸುವ ಅಪ್ಪಟ ಪ್ರಾಮಾಣಿಕ ಸಂಶೋಧಕರು. ದೋಚುವ–ಯೋಚಿಸುವ ಸ್ವಭಾವ ಅವರದಲ್ಲ. ಅವರದು ಪ್ರಸಾದ ಗುಣ, ಮಾಡಿದುದ್ದನ್ನು ಆಡಿದವರಲ್ಲ. ಅವರಿಗೆ ತಮ್ಮ ವಿದ್ವತ್ತಿನ ಬಗ್ಗೆ ಯಾವುದೇ ಭ್ರಮೆಗಳಿರಲಿಲ್ಲ. ಕೆರೆಯ ನೀರನ್ನು ಕೆರೆಗೆ ಚೆಲ್ಲಿದ ಸಂತೃಪ್ತಭಾವ. ಖಚಿತ ಜ್ಞಾನವಿಲ್ಲದೇ ಬರೆಯಲಿಲ್ಲ. ಕಲ್ಪನೆಗಳಿಂದಲೇ ಪುಟ ತುಂಬಿಸಲಿಲ್ಲ. ದಣಿವರಿಯದೇ ದುಡಿದು ಸೊರಗಿದರು. ಹೀಗಿದ್ದರೂ, ಅವರ ಸಂಶೋಧನೆಗೆ ಸಿಗಬೇಕಾದ ಪುರಸ್ಕಾರ ಸಿಕ್ಕದಿರುವುದು ವಿಷಾದನೀಯ. ಇದಕ್ಕೆ ಅವರಿವರನ್ನು ದೂರುವುದು ಸಲ್ಲದು. ಅವರ ಸಮಗ್ರ ಸಂಶೋಧನ ಗ್ರಂಥ ಪ್ರಕಟಣೆಗೆ ಕಾಯಬೇಕು. ಬಿಡಿ ಲೇಖನಗಳು ಗಮನ ಸೆಳೆಯುವುದಿಲ್ಲ. ಅವು ಕೃತಿರೂಪ ತಳೆದಾಗಲೇ ಬೆಲೆ ಪಡೆಯುವುದು. ಆಗ ಡಾ. ಬಿ. ಆರ್. ಹಿರೇಮಠರ ಸಂಶೋಧನೆ ಬೆಲೆ ಪಡೆಯುವುದ ಕಂಡಿತ. ಇದೀಗ ಹಂಪಿಯ ಕನ್ನಡ ವಿಶ್ವವಿದ್ಯಾಲಯವು 'ಡಾ. ಬಿ. ಆರ್. ಹಿರೇಮಠ ಶಾಸನಗಳ ಅಧ್ಯಯನ' ಎಂಬ ಕೃತಿಯನ್ನು ಪ್ರಕಟಿಸಿದೆ. ಅದರಲ್ಲಿ ೩೪ ಲೇಖನಗಳಿವೆ. ಸಂಶೋಧನೆಯಲ್ಲಿ ಎರಡು ದಾರಿಗಳಿವೆ. ಒಂದು ಹೆದ್ದಾರಿ, ಮತ್ತೊಂದು ರಹದಾರಿ. ಮೂಲ ಆಕರಗಳನ್ನು ಸ್ವತಃ ಹುಡುಕಿ, ಕ್ರೋಢಿಕರಿಸಿ ವಿಂಗಡಿಸಿ, ಅಧ್ಯಯನ ಮಾಡುವುದು. ಸಂಶೋಧನೆಯ ಹೆದ್ದಾರಿ, ಉಪಲಬ್ಧ ಆಕರಗಳನ್ನು ಮಾತ್ರ ಬಳಸಿಕೊಳ್ಳುವುದು ರಹದಾರಿ. ಡಾ. ಬಿ. ಆರ್. ಹಿರೇಮಠರದು ರಹದಾರಿಯಲ್ಲ, ಅವರದು ಹೆದ್ದಾರಿ. ಡಾ. ಕಲಬುರ್ಗಿಯವರದು ಮಹಾಮಾರ್ಗ. ಅದರ ಪಕ್ಕದ ಹೆದ್ದಾರಿ ಹಿರೇಮಠರದು.

ತಾಣದೀವಿಗೆಯ ಕೊನೆಯ ವಿಭಾಗ 'ಪರಿಶೋಧನ' ಇದರಲ್ಲಿ ಕನ್ನಡದ ಶಿಖರ ಪ್ರಾಯರಾದ ಇವರು ಸಂಶೋಧಕರ ವ್ಯಕ್ತಿತ್ವ. ಶ್ರಮ, ಸಂಸ್ಕೃತಿ, ಸಾಧನೆಯ ಸಿದ್ಧಿ ಸಂಶೋಧನೆಯ ತಿರುಳು ಮುಂತಾದವುಗಳನ್ನು ತುಂಬ ಮಾರ್ಮಿಕವಾಗಿ ಪರಿಚಯಿಸಿದ್ದಾರೆ. ಡಾ. ವ್ಹಿ. ಎಸ್. ಮಾಳಿಯವರು

ಬರವಣಿಗೆ ಆದರ್ಶವಾಗಿದ್ದು, ಹೃದಯವನ್ನು ನೇರವಾಗಿ ಸ್ಪರ್ಶಿಸುತ್ತದೆ. ತಮ್ಮ ಗುರುಗಳ ಬಗ್ಗೆ, ಗುರು ಪರಂಪರೆಯ ಬಗ್ಗೆ ಇರಿಸಿದ ಗೌರವಾದರಗಳು. ಈ ಲೇಖನದ ಮೂಲಕ ಅನಾವರಣಗೊಂಡಿವೆ. ಪ್ರಸ್ತುತ 'ತಾಣದೀವಿಗೆ'ಯನ್ನು ತಮ್ಮ ಕಾಲೇಜು ಪ್ರಾಧ್ಯಾಪಕರಾದ ಪ್ರೋ. ಎಸ್. ಎಂ. ಗೌಡರ ಸರ್, ಅವರಿಗೆ ಅರ್ಪಿಸಿದ್ದು, ಯಥೋಚಿತವಾಗಿದೆ. ಸಂಶೋಧನಾ ಕೃತಿಯಲ್ಲಿ ಸಂಶೋಧಕರ ವ್ಯಕ್ತಿತ್ವ ಅನಾವರಣಗೊಳಿಸಿದ ಲೇಖನಗಳಿದ್ದು, ಅವುಗಳ ವಿಷಯ ಸಂಶೋಧನೆಯೇ ಆಗಿರುವುದರಿಂದ ಇವುಗಳ ಸೇರ್ಪಡೆಯು ಸ್ವಾಗತಾರ್ಹವಾಗಿದೆ.

## ೩.೩ ಸಂಶೋಧನಾ ಲೇಖನಗಳು :

ಡಾ. ವ್ಹಿ. ಎಸ್. ಮಾಳಿಯವರು ಮೂಲತಃ ಸಂಶೋಧಕರು. ಪಿ.ಎಚ್.ಡಿ. ಅಧ್ಯಯನಕ್ಕಿಂತ ಮುಂಚೆಯೇ ಅವರ ಸಂಶೋಧನಾ ಲೇಖನಗಳು ನಾಡಿನ ಪತ್ರಿಕೆಗಳಲ್ಲಿ ಬೆಳಕು ಕಂಡಿವೆ. ವಿವಿಧ ರಾಜ್ಯ ಮತ್ತು ರಾಷ್ಟ್ರೀಯ ವಿಚಾರ ಸಂಕೀರ್ಣಗಳಲ್ಲಿ ವಿದ್ವತ್ ಪ್ರಬಂಧಗಳನ್ನು ಶ್ರೀಯತರು ಮಂಡಿಸಿದ್ದಾರೆ. 'ಸಂಶೋಧನೆ ನನ್ನ ಆಸಕ್ತಿ, ವಿಮರ್ಶೆ ನನ್ನ ಹವ್ಯಾಸ'. ನನ್ನಲ್ಲಿ ಈ ಆಸಕ್ತಿಯನ್ನು ಬೆಳೆಸಿದವರು ಡಾ. ಎಂ. ಎಂ. ಕಲಬುರ್ಗಿಯವರು. ಅದನ್ನು ಪೋಷಿಸಿ ಬೆಳೆಸಿದವರು ಡಾ. ಬಿ. ಆರ್. ಹಿರೇಮಠರು. ತಾಣದೀವಿಗೆ ಬೆಳಕು ಮುಡಿಸುವ ಮೊದಲು ಪುಟ – ೧ರಲ್ಲಿ ಸ್ವತಃ ಡಾ. ವ್ಹಿ. ಎಸ್. ಮಾಳಿಯವರೇ ಹೇಳಿದ್ದು, ಅವರ ಅಧ್ಯಯನ ಕ್ಷೇತ್ರ ಮತ್ತು ಆಸಕ್ತಿಯನ್ನು ಸ್ಪಷ್ಟಪಡಿಸುತ್ತದೆ. ನಾಡಿನ ವಿದ್ವತ್ ಪತ್ರಿಕೆಗಳು, ಸಂಶೋಧನಾ ಕ್ಷೇತ್ರಕ್ಕೆಂದೇ ಮೀಸಲಾಗಿರುವ ಪತ್ರಿಕೆಗಳಲ್ಲಿ ಡಾ. ವ್ಹಿ. ಎಸ್. ಮಾಳಿಯವರ ಬಹುಪಾಲು ಲೇಖನಗಳು ಬೆಳಕು ಕಂಡಿವೆ. ಕರ್ನಾಟಕ ಭಾರತಿ, ಸಂಶೋಧನಾ ತರಂಗ, ಸುಕುಮಾರ, ಬಸವಪಥ, ಸ್ವಪ್ನಲೋಕ, ಲಿಂಗಾಯತ ಹಸ್ತಪತ್ರಿ ಅಧ್ಯಯನ, ವಚನ ಅಧ್ಯಯನ ಹೀಗೆ ಮುಂತಾದ ಪತ್ರಿಕೆಗಳಲ್ಲಿ ಕಳೆದ ಮೂರು ದಶಕಗಳಿಂದಲೂ ಇವರ ಸಂಶೋಧನೆಗಳು ಪ್ರಕಟವಾಗುತ್ತ ಬಂದಿವೆ. ಬಿಡಿ ಬಿಡಿಯಾಗಿ ಪ್ರಕಟವಾದ ಇವರ ಲೇಖನಗಳು ಪುಸ್ತಕ ರೂಪದಲ್ಲಿ ಸಂಕಲಿತ ಗೊಳ್ಳದಿರುವ ಡಾ. ವ್ಹಿ. ಎಸ್. ಮಾಳಿಯವರ ಸಂಶೋಧನಾ ಲೇಖನಗಳಲ್ಲಿ ಪರಿಶೀಲಿಸಲಾಗಿದೆ. ಸ್ಮರಣ ಸಂಚಿಕೆಗಳು, ಅಭಿನಂದನ ಗ್ರಂಥಗಳು, ಸಂಸ್ಕರಣ ಸಂಚಿಕೆಗಳು, ಸಂಭಾವನ ಗ್ರಂಥಗಳು ಇತ್ಯಾಧಿಗಳಲ್ಲಿ ಪ್ರಕಟವಾಗಿರುವ ಲೇಖನಗಳನ್ನು ಇಲ್ಲಿ ಅಳವಡಿಸಿಕೊಳ್ಳಲಾಗಿದೆ.

ಐನಾಪೂರ ಸಂಸ್ಕೃತಿಕ ಅಧ್ಯಯನ, ಅಥಣಿ ತಾಲೂಕು; ಸಮಗ್ರ ದರ್ಶನ, ಅಥಣಿ : ಬನಿ–ದನಿ, ಸುಕ್ಷೇತ್ರ ಗೋಟಖಿಂಡಿ ಮಠ, ಜಂಗಮಲಿಂಗಕ್ಷೇತ್ರ, ಶ್ರೀ ಮೊಟಗಿಮಠ, ಶ್ರೀ ಮಠದ ಗುರು ಪರಂಪರೆ, ಅಥಣಿ ತಾಲೂಕಿನ ಸಾಹಿತ್ಯದರ್ಶನ, ಪುರದ ಪುಣ್ಯ ಪುರುಷರು, ಇಪ್ಪತ್ತೆರಡು ಗಡಿ ಹಳ್ಳಿಗಳು, ಸಮಸ್ಯೆ ಮತ್ತು ಸಾಂತ್ವನ, ಕುವೆಂಪು, ಅವರ ಶ್ರೀ ರಾಮಾಯಣ ದರ್ಶನ, ಮಾಜಿ ಮುಖ್ಯಮಂತ್ರಿ ಶ್ರೀ ವೀರಪ್ಪ ಮೊಯ್ಲಿ ಅವರ ಶ್ರೀ ರಾಮಾಯಣ ಮಹಾನ್ವೇಷಣಂ, ನಿರುಪಾಧೀಶರ ಸಂಗನ ಬಸವ ವಿಜಯದಲ್ಲಿ ವಸ್ತು ಮತ್ತು ವಿನ್ಯಾಸ, ಮಹಾಮಾನವತಾವಾದಿ ಸಂಗನಬಸವ ವಿಷಯದಲ್ಲಿ ಸಾಮಾಜಿಕ ಮೌಲ್ಯಗಳು, ಪದ ನಿಷ್ಪತ್ತಿ, ನಾಮವಿಜ್ಞಾನ, ವಚನ ನಿರ್ವಚನ, ಹಳಗನ್ನಡ ಸಾಹಿತ್ಯದಲ್ಲಿ ಮಾರ್ಗ ಮತ್ತು ದೇಸಿ ಹೀಗೆ ಮುಂತಾದ ಹಲವಾರು ಸಂಶೋಧನಾ ಲೇಖನಗಳು ಪ್ರಕಟವಾಗಿವೆ.

ಮಾದರಿಗಾಗಿ ಕೆಲವನ್ನಿಲ್ಲಿ ಪರಿಚಯಿಸುವೆ –

**ಐನಾಪೂರ : ಇತಿಹಾಸ ಪುಟಗಳು :**

"ಐನಾಪೂರ ಈಗಿನ ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಕೃಷ್ಣಾ ತೀರದ ಪ್ರಾಚೀನ

[illegible]

ಗ್ರಾಮ. ಇದು ತಾಲೂಕಿನ ಶ್ರೀಮಂತ ಮತ್ತು ಸಮೃದ್ಧಗ್ರಾಮ. ಫಲವತ್ತಾದ ನೆಲ, ಕೃಷ್ಣೆಯ ಜಲ, ಸುರಕ್ಷಿತ ನೆಲೆ, ಇದರ ವೈಭವದ ಮೂರು ಮುಖ್ಯ ಕಾರಣಗಳು. ಊರಿನ ದಕ್ಷಿಣಕ್ಕೆ ಒಂದು ಕಿ.ಮೀ. ದೂರದ ಕೃಷ್ಣಾ ನದಿ ಪೂರ್ವ ವಾಹಿನಿಯಾಗಿ ಹರಿಯುತ್ತಿದ್ದು, ಅಲ್ಲಿ ಒಂದು ಘಟ್ಟವನ್ನು ನಿರ್ಮಿಸಲಾಗಿದೆ. ಈ ಘಟ್ಟದ ಸಮೀಪ ಪುಟ್ಟವಾದ ಎತ್ತರದ ಬೆಟ್ಟ, ಅದರ ಮೇಲೆ ರಾಮಲಿಂಗೇಶ್ವರ ಪ್ರಾಚೀನ ದೇವಾಲಯ, ಇಲ್ಲಿಯ ದೇವಾಲಯಗಳ ವಾಸ್ತು ಹಾಗೂ ಶಿಲ್ಪಗಳನ್ನು ಗಮನಿಸಿದರೆ ಈ ಗ್ರಾಮ ೧೫೦೦ ವರ್ಷಕ್ಕೂ ಹೆಚ್ಚು ಪ್ರಾಚೀನವೆನಿಸುವುದು. ಆದರೆ ಇಲ್ಲಿ ಪ್ರಾಚೀನ ಶಾಸನಗಳು ಸಿಗುವುದಿಲ್ಲ. ಅನೇಕ ಪ್ರಾಚೀನ ದೇವಸ್ಥಾನಗಳು ಹಲವು ಸಲ ಜೀರ್ಣೋದ್ಧಾರಗೊಂಡಿದ್ದು. ಆ ಶಾಸನಗಳು ಹಾಳಾದಂತಿವೆ. ನದಿ ಪಾತ್ರ ಬದಲಾವಣೆಯ ಬಗ್ಗೆ ಸ್ಥಳೀಯರು ಹೇಳುವ ಮಾತು ಕೇಳಿದರೆ ಇತಿಹಾಸವನ್ನು ಅಗಿಯಬೇಕೆನಿಸುತ್ತದೆ. ಸಮೀಪದ ಕುಡಚಿಯಲ್ಲಿ ಬೂದಿಯ ದಿಬ್ಬಗಳು ಪತ್ತೆಯಾಗಿವೆ. ಈ ದಿಬ್ಬಗಳು ಹೊಸ ಶಿಲಾಯುಗದ ಕುರುಹುಗಳು. ಇಲ್ಲಿಯ ಹಿರೇಮಠದ ತಲೆಬಾಗಿಲು ಬಲ ಗೋಡೆಯಲ್ಲಿ ಒಂದು ಮಾಸ್ತಿ ಶಾಸನವಿದೆ. ಅದರ ಕಾಲ ಶಕವರ್ಷ ೧೪೦೪. ಅಂದರೆ ಕ್ರಿ.ಶ. ೧೪೭೮. ಯಾಲೋಜಿಯ ಮಗ ನಾಗೋಜಿ ತೀರಿಕೊಂಡಾಗ ಆತನ ಸತಿಯರಾದ ಚಿನ್ನಾಂಬಿಕ ನಾಗಾಜಿ ಕೊಂಡವೇರಿದ. ವಿಷಯ ಶಾಸನದಲ್ಲಿದ್ದು, ಸಹೋದರಿ ಹೊನ್ನಾಂಬಿಕೆ ಮಾಸ್ತಿಗಲ್ಲು ಹಾಕಿಸಿರುವಳು, ಇದರಲ್ಲಿ ಗ್ರಾಮನಾಮ ವ್ಯಕ್ತಗೊಂಡಿಲ್ಲ.

ಐನಾಪೂರಕ್ಕೆ ಪ್ರಾಚೀನ ಇತಿಹಾಸವಿದ್ದರೂ ತಿಳಿಯವುದಿಲ್ಲ. ಇಲ್ಲಿಯ ದೇವಾಲಯಗಳ ಶಿಲ್ಪಗಳು, ವಾಸ್ತು ಅವಶೇಷಗಳನ್ನು ಲಕ್ಷಿಸಿದರೆ ಇಲ್ಲಿಯ ಪ್ರಾಚೀನತೆ ಅರ್ಥವಾಗುವುದು. ನದಿ ತೀರಗಳೇ ನಾಗರಿಕತೆಯ ತೊಟ್ಟಿಲುಗಳು. ಹಿಂದಿನ ಊರು ಸ್ಥಳಾಂತರಗೊಂಡಿದ್ದು, ಹಳೆಯ ಊರು ಈಗಿನ ವಿಶ್ವನಾಥ ದೇವಾಲಯದ ಪರಿಸರದಲ್ಲಿತ್ತೆಂದು ಹಿರಿಯರು ಹೇಳುತ್ತಾರೆ. ಐನಾಪುರದ ಇತಿಹಾಸದ ಪುಟಗಳು ಬಿಚ್ಚಬೇಕು. ಬ್ರಹ್ಮದೇವ, ವಿಷ್ಣು, ವಿಶ್ವನಾಥ, ರಾಮಲಿಂಗೇಶ್ವರ, ಪಾರ್ಶ್ವನಾಥ, ಆದಿನಾಥ, ವೆಂಕಟೇಶ್ವರ, ಸಿದ್ಧೇಶ್ವರ ಹೀಗೆ ಮುಂತಾದವು ಇಲ್ಲಿಯ ಪ್ರಮುಖ ದೇವಾಲಯಗಳು. ಚಾಲುಕ್ಯ ಶೈಲಿಯ ವಿಶ್ವನಾಥ, ಪಾರ್ಶ್ವನಾಥ, ಆದಿನಾಥ ದೇವಾಲಯಗಳು, ವಿಜಯನಗರ ಶೈಲಿಯ ಬ್ರಹ್ಮದೇವಾಲಯ ಮತ್ತು ರಾಮಲಿಂಗೇಶ್ವರ ಚಾಲುಕ್ಯರ ಕಾಲದ ವಿಷ್ಣು ದೇವಾಲಯ, ವೆಂಕಟೇಶ್ವರ ದೇವಾಲಯಗಳು ಗ್ರಾಮದ ಪ್ರಾಚೀನ ಮಂದಿರಗಳು. ಐನಾಪುರದ ಅಧಿ ದೇವತೆ ಸಿದ್ಧೇಶ್ವರನದು. ಇದು ಇತ್ತೀಚಿನ ಶೈಲಿಯ ಭವ್ಯ ದೇವಾಲಯವಾಗಿದೆ.

ಐನಾಪುರದ ಪ್ರಾಚೀನ ಹೆಸರು ಜಯಂತಿ ಪುರವಾಗಿತ್ತೆಂದು ಕೆಲವರು ಹೇಳುವರು. ಅನಂತರ ಅದು ಜೈನಾಪೂರವಾಗಿ ಕಾಲಾನಂತರದಲ್ಲಿ ಐನಾಪುರವಾಗಿರಬಹುದೆಂದು ಕೆಲವರು ಅಭಿಪ್ರಾಯ ಪಡುತ್ತಾರೆ.

ಜಯಂತಿಪುರ > ಜೈನಾಪುರ > ಐನಾಪುರ. ಜಯಂತಿಪುರ ಜೈನಾಪುರವಾಗುವ ಸಾಧ್ಯತೆಯಿದೆ. ಜೈನಾಪುರ > ಐನಾಪುರ ಆಗಬಹುದು. ಆದರೆ ಇದನ್ನು ಒಪ್ಪಲು ಆಧಾರಗಳು ಬೇಕು.

ಅಯ್ಯನಪುರದಿಂದ ಐನಾಪುರ ಪದನಿಷ್ಪನ್ನ ಗೊಂಡಿರಬಹುದೆಂಬ ಇತಿಹಾಸಕಾರರ ಮತವನ್ನು ಅಲ್ಲಗಳೆಯಲಾಗದು. ಪ್ರಾಚೀನ ಕಾಲದಲ್ಲಿ ಇದೊಂದು ವಾಣಿಜ್ಯ ಪಟ್ಟಣವಾಗಿರಬೇಕು. ಇದರ ಸಮೀಪದಲ್ಲಿಯೇ ಬಣಜವಾಡವೆಂಬ ಗ್ರಾಮವಿದೆ. ಅದು ಬಣಂಜುವಾಡ, ಬಣಂಜು ಪದವಣಿಖ ಪದದ ತದ್ಭವ ರೂಪ. ಅಯ್ಯನಪುರ ಅಗ್ರಹಾರ ಕೇಂದ್ರವಾಗಿರಬಹುದೆಂದು ಬೆಳಗಾವಿ ಜಿಲ್ಲಾ ಗ್ಯೆಜಿಟಿಯರ್‌ದಲ್ಲಿ ಊಹಿಸಲಾಗಿದೆ.

ಈ ಗ್ರಾಮದ ಹೆಸರಿನ ಮೊದಲ ಉಲ್ಲೇಖದ ದಾಖಲೆಯ ಕಾಲ ಕ್ರಿ.ಶ. ೧೬೩೯. ಜರ್ಮನ ಪ್ರವಾಸಿ ಮಂಡೆಸ್ಲೋ ಇದನ್ನು ಈಯಾನಾತೊರ್ (Eyna tour) ಎಂದು ಕರೆದಿರುವನು. ೧೭೯೧ ರಲ್ಲಿ ಕ್ಯಾಪ್ಟನ್ ಮೂರು (moor) ಇಲ್ಲಿಗೆ ಬೆಟ್ಟಿ ನೀಡಿದ್ದ. ಆತ ಟಿಪ್ಪುಸುಲ್ತಾನನ ವಿರುದ್ಧ ಮರಾಠರಿಗೆ ಸಹಾಯ ಮಾಡಲು ಬಂದಿದ್ದ. ಇದು ಆಗ ಮರಾಠರ ಅಧೀನದಲ್ಲಿತ್ತು. ಮಿರಜದ ಪಟವರ್ಧನರು ಇದನ್ನು ಆಳುತ್ತಿದ್ದರು. 'ಹಿಂದೂ ಪ್ಯಾಂಥೇನ್'ದ ಲೇಖಕ ಕ್ಯಾಪ್ಟನ್ ಮೂರ್ ಇದು ಮುಸ್ಲಿಂ ಬಹು ಸಂಖ್ಯಾತರನ್ನು ಹೊಂದಿರುವುದಾಗಿ ದಾಖಲಿಸಿರುವನು. (Ainapur as having a large muslim population, with several good building bath in the Hindu and Muslim styles) ಆದರೆ ಇಲ್ಲಿ ಮುಸ್ಲಿಂ ಪ್ರಾಬಲ್ಯವಿಲ್ಲ. ಇಲ್ಲಿಯ ಕಟ್ಟಡಗಳು ಹಿಂದೂ ಶೈಲಿಯಲ್ಲಿಯೇ ಇವೆ. ಪ್ರಾಯಶಃ ಮರಾಠರ ಆಡಳಿತದ ಮೊದಲು ಇದು ಮುಸ್ಲಿಂ ಅರಸರ ಆಡಳಿತಕ್ಕೆ ಒಳಪಟ್ಟಿರಬಹುದು. ಶಿರಾಸಾಹೇಬರ ಗಡ್ಡೆ, ಉಮ್ಮರ ಖಾದ್ರಿ ದರ್ಗಾ, ಮಸೀದೆ ಮುಂತಾದ ಅಂಶಗಳು ಇದನ್ನು ದೃಢಪಡಿಸುತ್ತವೆ. ಐನಾಪುರ ವಾಡೆಯ ಗೌಡರು ಬಿಜಾಪುರದ ಸುಲ್ತಾನರ ಅಧೀನತೆಯಲ್ಲಿ ಇದನ್ನು ಆಳಿದ ಐತಿಹ್ಯಗಳಿವೆ. ಅಂದರೆ ಈ ಊರು ಮುಸ್ಲಿಂ ಆಡಳಿತಕ್ಕೆ ಒಳಪಟ್ಟಿದ್ದು ಸುಸ್ಪಷ್ಟ. ಬಿಜಾಪುರದ ಆದಿಲ್ ಶಾಹಿಗಳ ಪತನಾ ನಂತರ ಮಿರಜ್‌ದ ಪಟವರ್ಧನರ ಹಿಡಿತದಲ್ಲಿತ್ತು. ಗೋಪಾಳರಾವ ಪಟವರ್ಧನರ ನಿಧನದ ತರುವಾಯ ಆಂಗ್ಲರ ವಶವಾಯಿತು.

ಆದಿನಾಥ ಜಿನಾಲಯದ ಕ್ರಿ.ಶ. ೧೬೩೭ ಶಾಸನದಲ್ಲಿ ಯತ (ನಾ ?) ಐನಾಪುರದ ಉಲ್ಲೇಖವಿದೆ. ಇದು ಐನಾಪುರದ ಅಪಭ್ರಂಶ ರೂಪವಿರಬಹುದು. ಗೌಡರ ವಾಡೆಯಲ್ಲಿರುವ ಕ್ರಿ.ಶ. ೧೮ ನೇ ಶತಮಾನದ ತಾಮ್ರಯಂತ್ರದ ಹಿಂದಿನ ಭಾಗದಲ್ಲಿ 'ಅೈನಾಪುರ'ದ ಹೆಸರಿದೆ. ಆದಿನಾಥ ಜಿನಾಲಯದ ಆದಿಜಿನ ಬಿಂಬದ ಪಾದಪೀಠದಲ್ಲಿ ಒಂದು ಶಾಸನವಿದೆ. ಆದರೆ ಸಂಪೂರ್ಣ ತ್ರುಟಿತಗೊಂಡಿದೆ. ಹೀಗಾಗಿ ಐನಾಪುರದ ಮೂಲ ಹೆಸರು ತಿಳಿಯದು. ನಾನು ಇಲ್ಲಿಯ ಎಂಟು ಶಾಸನಗಳನ್ನು ಪತ್ತೆ ಮಾಡಿದ್ದೇ ಅವುಗಳನ್ನು ಸಂಶೋಧಕ ಶ್ರೀಮತಿ ಹನುಮಾಕ್ಷಿ ಗೋಗಿ ಓದಿರುವರು. ಒಂದನ್ನು ಹೊರತುಪಡಿಸಿ ಊಳಿದ ಶಾಸನಗಳಲ್ಲಿ ಗ್ರಾಮದ ಹೆಸರಿಲ್ಲ. ಆದಿನಾಥನ ಪಾದ ಪೀಠ ಮತ್ತು ಸಹಸ್ರಕೂಟದ ಶಾಸನಗಳಲ್ಲಿ ಗ್ರಾಮದ ಹೆಸರು ಉಕ್ತಗೊಂಡಿರಬಹುದಾದರೂ ಸಿಗುವುದಿಲ್ಲ. ಇವೆರಡು ತ್ರುಟಿತಗೊಂಡಿದೆ. ಹೀಗೆ ಐನಾಪುರದ ಭೌಗೋಳಿಕ ಅಂಶಗಳು, ಶಾಸನೋಕ್ತ ಸಂಗತಿಗಳು.

ಗ್ರಾಮನಾಮದ ನಿಷ್ಪತ್ತಿ ಕುರಿತಾಗಿ ಚರ್ಚಿಸಿದ್ದಾರೆ. ಮುಂದುವರಿದು ಅಲ್ಲಿಯ ದೇವಾಲಯಗಳು, ವೆಂಕಟರಮಣ ಮಂದಿರ, ರಾಮಲಿಂಗೇಶ್ವರ ದೇವಾಲಯ, ಹಾಳುದೇಗುಲ, ವಿಶ್ವನಾಥ ದೇವಾಲಯ, ಬ್ರಹ್ಮೇಶ್ವರ ದೇವಾಲಯ, ಕಲ್ಲೇಶ್ವರ ದೇವಾಲಯ, ಸಿದ್ಧೇಶ್ವರ ದೇವಾಲಯ, ಕೋಟೆಪ್ಪನ ಗುಡಿ, ವೀರಭದ್ರ ದೇವಾಲಯ, ಪ್ರಾಚೀನ ಗಣಪತಿ ಹೀಗೆ ೨೦ ದೇವಾಲಯಗಳನ್ನು ಸ್ಥೂಲವಾಗಿ ಪರಿಚಯಿಸಿ, ಅವುಗಳ ವೈಶಿಷ್ಟ್ಯತೆಗಳನ್ನು ವಿವರಿಸಿದ್ದಾರೆ.

ಬಸದಿಗಳು ಉಪಶೀರ್ಷಿಕೆಯಡಿಯಲ್ಲಿ ದೊಡ್ಡ ಬಸ್ತಿ, ಹಳೆಬಸ್ತಿ, ಪೇಟೆಬಸ್ತಿ, ವಾಡೆಬಸ್ತಿ, ಸಣ್ಣವಾಡೆ ಬಸ್ತಿ ಎಂಬ ಐದು ಬಸದಿಗಳು ಐನಾಪುರದಲ್ಲಿರುವುದನ್ನು ಗುರುತಿಸಿ ಅವುಗಳನ್ನು ಸಂಕ್ಷಿಪ್ತವಾಗಿ ಪರಿಚಯ ಮೂಡಿಸಿದ್ದಾರೆ. ಐನಾಪುರದಲ್ಲಿರುವ ಮಠಗಳು, ಮಂದಿರಗಳು, ಮಸೀದೆ ಮತ್ತು ದರ್ಗಾಗಳು ಹಾಗೂ ಕೆರೆಗಳು ಮುಂತಾದ ಸಾಂಸ್ಕೃತಿಕ ಅಂಶಗಳನ್ನು ಪರಿಚಯಸಿದ್ದಾರೆ. ಐನಾಪುರ ಗ್ರಾಮದ ಪ್ರಾಚೀನತೆ, ಭೂತ ಮತ್ತು ವರ್ತಮಾನಗಳ ಪಕ್ಷಿನೋಟವನ್ನು ತಮ್ಮ ಸಂಶೋಧನೆಯ ಮೂಲಕ ಡಾ. ವ್ಹಿ. ಎಸ್. ಮಾಳಿಯವರು ಸೊಗಸಾಗಿ ಕಟ್ಟಿಕೊಟ್ಟಿದ್ದಾರೆ.

### ಡಾ. ವ್ಹಿ. ಎಸ್. ಮಾಳಿಯವರ ಅಥಣಿ ದರ್ಶನ :

ಡಾ. ವ್ಹಿ. ಎಸ್. ಮಾಳಿಯವರು 'ಅಥಣಿ' ತಾಲೂಕಿನ ಜಂಬಗಿಯವರು ಅಥಣಿ ತಾಲೂಕಿನ ಕುರಿತಾದ ಅವರ ಸಂಶೋಧನೆ ತೂಕ ಬದ್ಧವಾಗಿ ಮತ್ತು ತುಂಬಾ ಮೌಲಿಕವಾಗಿದೆ. ಅಥನಿಯ ಬನಿ-ದನಿ ಕೃತಿಯಲ್ಲಿ ಶ್ರೀಯುತರು ದಾಖಲಿಸಿದ್ದು ಹೀಗಿದೆ.

ಅಥಣಿ ಆಚಾರದ ಹಣತೆ. ಈ ತಾಲೂಕಿನ ಕನ್ನಡ ನಾಡಿನ ಸೆರಗಿನ ಅಂಚು, ಬೋಳು ಬೆಟ್ಟಗಳಿಂದ ಕೂಡಿದ ಬರಡು ಮಣ್ಣಿನ ಬಯಲು ಪ್ರದೇಶವಿದು. ಕಡಿಮೆ ಮಳೆ, ಹೆಚ್ಚು ಬಿಸಿಲು, ಬರದ ತಲೆದಿಂಬು. ಕರ್ನಾಟಕದ ಗಡಿ ತೋರಿಸುವ ಈ ತಾಲ್ಲೂಕಿನ ಪಶ್ಚಿಮೊತ್ತರ ಮತ್ತು ಈಶಾನ್ಯ ಭಾಗಗಳು ಮಹಾರಾಷ್ಟ್ರಕ್ಕೆ ಹೊಂದಿಕೊಂಡಿವೆ. ನೈಋತ್ಯಕ್ಕೆ ಚಿಕ್ಕೋಡಿ, ದಕ್ಷಿಣಕ್ಕೆ ರಾಯಬಾಗ, ಅಗ್ನೇಯಕ್ಕೆ ಬಾಗಲಕೋಟ ಜಿಲ್ಲೆಯ ಜಮಖಂಡಿ ತಾಲುಕುಗಳಿವೆ. ಪೂರ್ವಕ್ಕೆ ಬಿಜಾಪುರ ಜಿಲ್ಲೆ, ಅಥಣಿಯ ದಕ್ಷಿಣದಲ್ಲಿ ಹರಿಯುವ ಜೀವದಾನಿ ಕೃಷ್ಣೆ, ಬರಡು ಬದುಕಿಗೆ ಚಿಗುರು ಮೂಡಿಸುವ ದೇವಗಂಗೆ, ಕೃಷ್ಣೆಯ ಇಕ್ಕೆಲದಲ್ಲಿ ಫಲವತ್ತಾದ ಗದ್ದೆಗಳಿವೆ. ಕಬ್ಬು ಹುಲುಸಾಗಿ ಬೆಳೆಯುತ್ತದೆ. ತಾಲೂಕಿನ ಪೂರ್ವೋತ್ತರ ಭಾಗಗಳು ಬರಡಾಗಿದ್ದರೆ ಪಶ್ಚಿಮ ಮತ್ತು ದಕ್ಷಿಣ ಭಾಗಗಳು ಹಸಿರಿನಿಂದ ಸಮೃದ್ಧವಾಗಿದೆ.

ಈ ತಾಲೂಕಿಗೆ ಸುಮಾರು ಐದು ಸಾವಿರ ವರ್ಷಗಳಿಗಿಂತಲೂ ಪ್ರಾಚೀನ ಇತಿಹಾಸವಿದೆ. ಹಿರಿಹೊಳೆ ಪಕ್ಕದ ಸತ್ತಿ ಗ್ರಾಮದಲ್ಲಿ ಇತಿಹಾಸ ಪೂರ್ವ ಕುರುಹುಗಳಿವೆ. ಕ್ರಿ.ಶ.ಪೂ. ೨೦೦೦ ರಿಂದ ೧೦೦೦ ದ ಅವಧಿಯಲ್ಲಿ ರಚಿತಗೊಂಡಿಬಹುದಾದ ಸಚಿತ್ರ ಮಡಿಕೆ ಇಲ್ಲಿ ದೊರೆತಿದೆ. ನೂತನ

ಶಿಲಾಯುಗದ ಅವಶೇಷಗಳು ಸಪ್ತಸಾಗರದಲ್ಲಿ ಪತ್ತೆಯಾಗಿವೆ. ಅಥಣಿ ತಾಲೂಕಿನ ಪ್ರಾಚೀನ ಇತಿಹಾಸವನ್ನು ಶೋಧಿಸಬೇಕಿದೆ. ತಾಲೂಕಿನ ಬಹುಭಾಗ ಕಲ್ಯಾಣದ ಚಾಲುಕ್ಯರ ಆಡಳಿಕ್ಕೊಳಪಟ್ಟಿತ್ತು. ಚಾಲುಕ್ಯ ಜಯಸಿಂಹ, ಆರನೇ ವಿಕ್ರಮಾದಿತ್ಯರ ಶಾಸನಗಳು ಇಲ್ಲಿವೆ. ಕರಹಾಡ ನಾಲ್ಸಾಸಿರದ ಉಪವಿಭಾಗ ಕನಂಬಡೆ ಮುನ್ನೂರು.

ಈಗಿನ ಅಥಣಿ ತಾಲೂಕಿನ ಪಶ್ಚಿಮ ಭಾಗವನ್ನು ಹೊರತುಪಡಿಸಿ ಉಳಿದೆಲ್ಲ ಭಾಗಗಳು ಕನಂಬಡೆ ಮುನ್ನೂರರ ಆಡಳಿತದಲ್ಲಿದ್ದವು. ಪಶ್ಚಿಮ ಭಾಗವನ್ನು ವಳವಾಡದ ಶಿಲಾಹಾರರು ಆಳುತ್ತಿದ್ದರು. ಚಾಲುಕ್ಯರ ಅನಂತರ ಕಲಚುರ್ಯ ಬಿಜ್ಜಳ, ಯಾದವ ಸಿಂಘಣ ಮತ್ತು ಮರಾಠಾ ಸಾಮ್ರಾಟ ಶಿವಾಜಿ ಈ ಪ್ರದೇಶವನ್ನು ಆಳಿದರು. ಅಥಣಿಯನ್ನು ಕ್ರಿ.ಶ. ೧೬೭೯ ರಲ್ಲಿ ಶಿವಾಜಿ ಮಗ ಸಂಭಾಜಿಯಿಂದ ಮೊಗಲರು ಕಿತ್ತುಕೊಂಡರು. ಕ್ರಿ.ಶ. ೧೭೨೦ ರಲ್ಲಿ ನಿಜಾಮ್–ಉಲ್–ಮುಲ್ಕ ಅಥಣಿಯನ್ನು ಗೆದ್ದುಕೊಂಡು ಕೊಲ್ಲಾಪುರದ ಅರಸನಿಗೆ ಕೊಟ್ಟನು. ಬಳಿಕ ಇದು ಶಾಹೂ ರಾಜನಿಗೆ ಸೇರಿತು. ಆತನ ಮರಣಾನಂತರ ಕ್ರಿ.ಶ. ೧೮೪೯ ರಲ್ಲಿ ಆಂಗ್ಲರ ವಶವಾಯಿತು. ಇಲ್ಲಿಯ ಕೆಲವು ಹಳ್ಳಿಗಳು ಸಾಂಗ್ಲಿ, ಜಮಖಂಡಿ, ಕುರುಂದವಾಡ, ಜತ್ತ, ಬುಧಗಾವ, ಮಿರಜ ಸಂಸ್ಥಾನಗಳಿಗೆ ಸೇರಿದ್ದವು. ಪ್ರಮುಖ ರಾಜಮನೆತನಗಳು ಇಲ್ಲಿ ನೆಲೆ ಕಂಡುಕೊಳ್ಳಲಿಲ್ಲವಾದ್ದರಿಂದ ಅಥಣಿ ತಾಲೂಕಿನ ಸಾಂಸ್ಕೃತಿಕ ಸಂಪುಟ ತೆರೆದುಕೊಳ್ಳಲಿಲ್ಲ. ಪ್ರತಿಭಾ ಪಲಾಯನದಿಂದಾಗಿ ಸಾಂಸ್ಕೃತಿಕ ಬಡತನ ತಲೆದೋರಿರಬಹುದು.

ಕೋವೂರ ಬೊಮ್ಮಯ್ಯನೆಂಬ ಶರಣ ಕೋಹಳ್ಳಿಯವನಂತೆ ಕವಿ ಹರಿಹರ ಈತನ ಕುರಿತು ರಗಳೆಯನ್ನು ರಚಿಸಿರುವನು. ಆತ ಅಂಬುಧಾರಾತೀರ್ಥದ ರಾಮನಾಥನ ಭಕ್ತನೆಂದು ಹರಿಹರ ಬಣ್ಣಿಸಿದ್ದಾನೆ. ಅಂಬುಧಾರಾ ರಾಮನಾಥ ಸಮೀಪದ ರಾಮತೀರ್ಥವೇ ಆಗಿರಬೇಕು. ಕ್ರಿ.ಶ. ೧೧೧೫ ರ ಅಲ್ಲಿಯ ಶಾಸನದಲ್ಲಿ ತೀರ್ಥದ ರಾಮೇಶ್ವರನ ಪ್ರಸ್ತಾಪವಿದೆ. ಈ ಕುರಿತು ಇನ್ನು ಹೆಚ್ಚಿನ ಸಂಶೋಧನೆ ನಡೆಯಬೇಕು. ಶರಣ ಕೋವುರ ಬೊಮ್ಮಯ್ಯ ಹಾಗೂ ಆತನ ಮಗ ಮಲ್ಲದೇವ (ಭೀಮಯ್ಯ)ರ ವಚನಗಳನ್ನು ಹುಡುಕಬೇಕು. ಕೋಹಳ್ಳಿಯ ಸಮೀಪ ಶಿವಪುರ ಎಂಬ ಹಳ್ಳಿ ಇತ್ತಂತೆ. ಅದು ಈಗ ಇಲ್ಲ. ಅಥಣಿ ತಾಲೂಕು ಸಂಶೋಧನೆಯ ಕನ್ನೆನೆಲ, ಅಪ್ರಕಟಿತ ಶಾಸನಗಳ ರಾಶಿಯೇ ಇಲ್ಲಿದೆ. ಬಳ್ಳಿಗೇರಿ, ಕೊಕಟನೂರ, ತೆಲಸಂಗ, ಸತ್ತಿ, ಸವದಿ, ಮದಭಾವಿ, ಶೇಡಬಾಳ, ಐನಾಪುರ, ಕೋಹಳ್ಳಿ, ಅಥಣಿ ಮುಂತಾದ ಪ್ರಾಚೀನ ಸ್ಥಳಗಳ ಇತಿಹಾಸವನ್ನು ಶೋಧಿಸಬೇಕಾಗಿದೆ.

ಅಥಣಿಯ ಸ್ವಾತಂತ್ರ್ಯ ಹೋರಾಟ, ಶೈಕ್ಷಣಿಕ ಸಂಘಟನೆಗಳು, ಸಾಹಿತ್ಯ, ಸಂಶೋಧನೆ, ಪತ್ರಿಕಾಲೋಕ, ಪ್ರಕಾಶನ ಸಂಸ್ಥೆಗಳು, ಜನಪದ ಕವಿಗಳು, ಅಥಣಿಯಬನಿ, ಸ್ವಾತಂತ್ರ್ಯ, ಸೇನಾನಿಗಳು, ಏಕೀಕರಣದ ರೂವಾರಿಗಳು ಹೀಗೆ ಮುಂತಾದ ಉಪಶೀರ್ಷಿಕೆಗಳಲ್ಲಿ ಅಥಣಿಯ ವೈಶಿಷ್ಟ್ಯವನ್ನು ಶೋಧಿಸುತ್ತ ಸಾಂಸ್ಕೃತಿಕ ಅಂಶಗಳನ್ನು ದಾಖಲಿಸಿದ್ದಾರೆ. ಅಥಣಿ ಭಾಷಾ ಸಾಮರಸ್ಯದ ತವರೂರು. ಎರಡು ಭಾಷೆ ಎರಡು ಸಾಂಸ್ಕೃತಿಕಯನ್ನು ಕೂಡಿಸಿ ಹೊಲಿದ ಸುಂದರ ಕುಂಚಿಗೆ. ಇಲ್ಲಿ ಕರ್ನಾಟಕ

ಏಕೀಕರಣವು ಸೌಹಾರ್ದಯುತ ಚಳುವಳಿಯಾಗಿತ್ತು. ದ್ವೇಷವಿಲ್ಲದ ಸಾಮರಸ್ಯ ಇಲ್ಲಿಯ ಜನರ ಬದುಕಾಗಿತ್ತು. ಕನ್ನಡ ಸಂಸ್ಕೃತಿ, ಕನ್ನಡ ಅಸ್ಮಿತತೆಯನ್ನು ಇಲ್ಲಿಯ ಜನ ತಮ್ಮ ಅಂತರಗಂಗದಲ್ಲಿ ಪೋಷಿಸಿಕೊಂಡು ಬಂದಿದ್ದಾರೆ. ಕನ್ನಡಕ್ಕಾಗಿ ಆತ್ಮ ಬಲಿದಾನಗೈದ ಮಹಾದೇವ ಕುಳ್ಳೊಳ್ಳಿಯವರನ್ನು ಸ್ಮರಿಸಲೇಬೇಕು. ಇದು ಕೊನೆಯಿಲ್ಲದ ಹಾಡು, ಅಥಣಿಯ ಸಾಂಸ್ಕೃತಿಕ ಸಂಪುಟಕ್ಕೆ ಪುಟಗಳು ಸೇರುತ್ತಲೇ ಹೋಗಬೇಕು.

ಡಾ. ವ್ಹಿ. ಎಸ್. ಮಾಳಿಯವರು ಭಾಷೆ ತುಂಬಾ ಸುಂದರ ಸುಲಲಿತ, ಮರ್ಧರವಾದದ್ದು. ಸರಳ ಮತ್ತು ಸಹಜತೆ ಅವರ ಭಾಷೆಯ, ವೈಶಿಷ್ಟ್ಯ, ಸಂಶೋಧನೆಗೂ ಕಾವ್ಯದ ಮಿಂಚನ್ನು ಮೂಡಿಸುವ ಶಬ್ಧಗಾರೂಡಿಗ ಡಾ. ವ್ಹಿ. ಎಸ್. ಮಾಳಿಯವರು. ಆದ್ದರಿಂದಲೇ ಶ್ರೀಯುತರು ಯಾವುದೇ ಬರವಣಿಗೆ ಇರಲಿ, ಸಹೃದಯಿಗಳನ್ನು ಚುಂಬಕ ಶಕ್ತಿಯಾಗಿ ಸೆಳೆಯುತ್ತದೆ.

'ಸಂಶೋಧನೆ ಮತ್ತು ವಿಮರ್ಶೆಗಳು ಸೃಜನೇತರ ಕ್ಷೇತ್ರಗಳು ಶಾಸ್ತ್ರ ಸಾಹಿತ್ಯವಾದ್ದರಿಂದ ಜನರಿಂದ ದೂರ ಉಳಿದಿವೆ' ಎಂಬ ದೂರು ಇದೆ. ಆದರೆ ಡಾ. ವ್ಹಿ. ಎಸ್. ಮಾಳಿಯವರು ಸಂಶೋಧನೆ ಮತ್ತು ವಿಮರ್ಶೆಗಳೆರಡು ಮೇಲಿನ ಮಾತಿಗೆ ಅಪವಾದಗಳಾಗಿವೆ. ಸೃಜನ ಮತ್ತು ಸೃಜನೇತರ ಗೆರೆ ಮಾಳಿಯವರಲ್ಲಿ ಅಳುಕಿ ಹೋಗುತ್ತದೆ. ಡಾ. ವ್ಹಿ. ಎಸ್. ಮಾಳಿಯವರ ಬರವಣಿಗೆಯಲ್ಲಿ ಲವಲವಿಕೆ ಓದಿಸಿಕೊಳ್ಳುವ ಆಕರ್ಷಕ ಗುಣ ತಾನೇ ತಾನಾಗಿ ವಿಜೃಂಭಿಸುತ್ತದೆ. ಇದುವೇ ಡಾ. ವ್ಹಿ. ಎಸ್. ಮಾಳಿಯವರ ಹೆಚ್ಚುಗಾರಿಕೆಯಾಗಿದೆ.

**ಇನ್ನೊಂದು ಉದಾಹರಣೆಯಾಗಿ ನೋಡುವುದಾದರೆ :**

'ಇಪ್ಪತೆರಡು ಗಡಿ ಹಳಿಗಳು ; ಸಮಸ್ಯೆ ಮತ್ತು ಸಾಂತ್ವನ' ಎಂಬ ಲೇಖನ ತುಂಬಾಮೌಲಿಕವಾಗಿದೆ. ಕರ್ನಾಟಕ – ಮಹಾರಾಷ್ಟ್ರ ಗಡಿ ವಿವಾದ ಅರ್ಧಶತಕದಷ್ಟು ಹಳೆಯದು. ಮಹಾರಾಷ್ಟ್ರ ೧೯೫೭ ರಲ್ಲಿ ಈ ವಿವಾದಕ್ಕೆ ಚಾಲನೆ ನೀಡಿತು. ತಮಗೆ ಸೇರಬೇಕಾಗಿದ್ದ ಬೆಳಗಾವಿ, ಕಾರವಾರ ಮತ್ತು ಬೀದರ ಜಿಲ್ಲೆಗಳ ೮೧೪ ಹಳ್ಳಿಗಳು ಮೈಸೂರು ರಾಜ್ಯಕ್ಕೆ ಸೇರಿವೆ. ಮೈಸೂರು ರಾಜ್ಯಕ್ಕೆ ಸೇರಬೇಕಾಗಿದ್ದ ೨೬೦ ಹಳ್ಳಿಗಳು ತಮ್ಮಲ್ಲಿ ಸೇರಿವೆಯೆಂದು ಹೇಳಿ, ಸರಿಪಡಿಸುವಂತೆ ಮುಂಬೈ ಸರಕಾರ ಕೇಂದ್ರಕ್ಕೆ ದೂರು ಸಲ್ಲಿಸಿತು. ಮಹಾರಾಷ್ಟ್ರದ ಒತ್ತಾಸೆಯಿಂದಾಗಿಯೇ ಕೇಂದ್ರ ಸರಕಾರ ೧೯೬೬ ಅಕ್ಟೋಬರ್ ೨೫ ರಂದು ಸುಪ್ರೀಮ ಕೋರ್ಟಿನ ನಿವೃತ್ತ ನ್ಯಾಯಮೂರ್ತಿ ಮೆಹರ್‌ಚಂದ ಮಹಾಜನ ಏಕಸದಸ್ಯ ಆಯೋಗ ನೇಮಕ ಮಾಡಿ ಆದೇಶ ಹೊರಡಿಸಿತು. (ಮಹಾಜನ ವರದಿಯ ಅವಲೋಕನ : ಡಾ. ಓಂಕಾರ ಕಾಕಡೆ, ಪುಟ ೨೦) ಆಯೋಗದ ತೀರ್ಮಾಣವನ್ನು ಒಪ್ಪಿಕೊಳ್ಳುವುದಾಗಿ ಮಹಾರಾಷ್ಟ್ರ ವಚನ ನೀಡಿತ್ತು. ವರದಿ ಪ್ರಕಟಗೊಂಡಾಗ ಮಹಾರಾಷ್ಟ್ರ ತನ್ನ ವಚನಕ್ಕೆ ಬದ್ಧವಾಗಲಿಲ್ಲ.

**ಇತಿಹಾಸ :**

ಮಹಾರಾಷ್ಟ್ರ ಸರಕಾರ ೧೯೬೭ ಮಾರ್ಚ ೩೧ ರಂದು ಮಹಾಜನ ಆಯೋಗಕ್ಕೆ ಸಲ್ಲಿಸಿದ ಮನವಿಯಲ್ಲಿ ಅಥಣಿ ತಾಲೂಕಿನ ಹತ್ತು ಹಳ್ಳಿಗಳು ತಮಗೆ ಬರಬೇಕೆಂದು ಕೇಳಿತ್ತು. ಇದಕ್ಕೆ ಪೂರಕವಾಗಿ ಅಥಣಿ ತಾಲೂಕಿನ ಮಂಗಸೂಳಿಯ ಮಹಾರಾಷ್ಟ್ರ ಏಕೀಕರಣ ಸಮಿತಿ ಮತ್ತು ೧೧ ಗ್ರಾಮ ಪಂಚಾಯತಗಳು ಆಯೋಗದ ಎದುರು ಹಾಜರಾಗಿ ನಾವೆಲ್ಲಾ ಮಹಾರಾಷ್ಟ್ರೀಯರು. ತಮ್ಮ ಮಹಾರಾಷ್ಟ್ರಕ್ಕೆ ಸೇರಿಸಲು ಒತ್ತಾಯಿಸಿದರು. ಮಂಗಸೂಳಿ, ಉಗಾರಖುರ್ದ, ಲೋಕೂರು ಈ ಮೂರು ಹಳ್ಳಿಗಳನ್ನು ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆ ಮಿರಜ್ ತಾಲೂಕಿಗೆ ಸೇರ್ಪಡೆ ಮಾಡಬೇಕು. ಈ ಸಂಬಂಧ ಈಗಾಗಲೇ ಹಲವಾರು ಮನವಿ ಪತ್ರಗಳನ್ನು ಸಲ್ಲಿಸಲಾಗಿದೆ ಎಂದು ತಿಳಿಸಿದರು. ಇದೇ ರೀತಿ ಶಿರೂರು, ಸಂಬರಗಿ, ಪಾಂಡೇಗಾಂವ್, ಕಲ್ಲೋತ್ತಿ, ಅರಳಿಹಟ್ಟಿ, ಜಂಬಗಿ, ಮದಭಾವಿ, ಬೊಮನಾಳ ಮುಂತಾದ ಗ್ರಾಮಗಳನ್ನು ಮಹಾರಾಷ್ಟ್ರಕ್ಕೆ ಹಸ್ತಾಂತರಿಸಬೇಕೆಂದು ಮನವಿ ಮಾಡಿಕೊಂಡಿದ್ದವು. (ಮಹಾಜನ ವರದಿಯ ಅವಲೋಕನ – ಪುಟ : ೩೪).

ಮಂಗಸೂಳಿ, ಉಗಾರಖುರ್ದ ಮತ್ತು ಲೋಕೂರುಗಳನ್ನು ಹೊರತು ಪಡಿಸಿದರೆ ಉಳಿದೆಲ್ಲವೂ ಅಥಣಿಯ ಉತ್ತರ ಭಾಗದ ಗಡಿಗ್ರಾಮಗಳು. ಆದರೆ ಸಮಸ್ಯೆಯ ಮೂಲಬೇರು ಮಂಗಸೂಳಿಯಲ್ಲಿತ್ತು. ಈ ನಡುವೆ ಮಹಾರಾಷ್ಟ್ರ ಕಲ್ಲೋತ್ತಿಯ ಬೇಡಿಕೆಯನ್ನು ಕೈಬಿಟ್ಟಿತು. ಅದೊಂದು ಪುಟ್ಟ ಗ್ರಾಮ. ಭೌಗೋಳಿಕವಾಗಿ ಮಹಾರಾಷ್ಟ್ರಕ್ಕೆ ಹೊಂದುವುದು ಕಷ್ಟಸಾಧ್ಯ. ಅಲ್ಲಿ ಕರ್ನಾಟಕ ಸರಕಾರ ಬಾಂದಾರ ಯೋಜನೆ ಕೈಗೊಂಡು ಲಕ್ಷಾಂತರ ಹಣ ವಿನಿಯೋಗಿಸಿತ್ತು. ಈ ಹಲವು ಕಾರಣಗಳಿಂದ ಮಹಾರಾಷ್ಟ್ರ ಕಲ್ಲೋತ್ತಿ ವಿಷಯದಲ್ಲಿ ನಿರಾಸಕ್ತಿ ತಳೆಯಿತು. ಮಹಾಜನ ಆಯೋಗ ಮಂಗಸೂಳಿ, ಉಗಾರಖುರ್ದ ಮತ್ತು ಲೋಕೂರು ಗ್ರಾಮಗಳನ್ನು ಮಹಾರಾಷ್ಟ್ರಕ್ಕೆ ಸೇರಿಸಲು ಶಿಫಾರಸ್ಸು ಮಾಡಲಿಲ್ಲ. ಮದಭಾವಿಯನ್ನು ಹೊರತು ಪಡಿಸಿ ಶಿರೂರ, ಪಾಂಡೇಗಾಂವ, ಸಂಬರಗಿ, ಜಂಬಗಿ, ಅರಳಿಹಟ್ಟಿ, ಬೋಮನಾಳ – ಹೀಗೆ ಆರು ಹಳ್ಳಿಗಳಲ್ಲಿ ಮರಾಠಿ ಭಾಷಿಕರು ಜಾಸ್ತಿಯಾಗಿದ್ದು, ಕನ್ನಡಿಗರ ಪ್ರಮಾಣ ಕೇವಲ ಶೇ. ೩೦% ೧೯೬೧ ರ ಜನಗಣತಿಯ ಪ್ರಕಾರ ಈ ಆರು ಹಳ್ಳಿಗಳ ಜನಸಂಖ್ಯೆ ಕೇವಲ ೧೦,೦೦೦ (ಹತ್ತು ಸಾವಿರ) ಭೌಗೋಳಿಕ ಪರಿಸ್ಥಿತಿ. ಜನಸಂಖ್ಯೆ, ಆಡಳಿತ ಮತ್ತು ಆರ್ಥಿಕ ಸ್ಥಿತಿ–ಗತಿಗಳನ್ನು ಪರಿಗಣಿಸಿ ಮಹಾಜನರು ಇವುಗಳನ್ನು ತಮಗೆ ಹಸ್ತಾಂತರಿಸಬೇಕೆನ್ನುವ ಮಹಾರಾಷ್ಟ್ರದ ಮನವಿಯನ್ನು ತಳ್ಳಿ ಹಾಕಿದರು. ಮಹಾರಾಷ್ಟ್ರಕ್ಕೆ ಅಥಣಿ ತಾಲೂಕಿನ ಹಳ್ಳಿಗಳನ್ನು ಪಡೆಯುವ ಆಸಕ್ತಿ ಗಾಢವಾಗಿರಲಿಲ್ಲ. ಅದು ಮತ್ತೆ ಮತ್ತೆ ಕೆದಕುವುದು ಬೆಳಗಾವಿ ಸಮಸ್ಯೆಯನ್ನು ಅವರಿಗೆ ಬೇಕಾಗಿದ್ದು ಬೆಳಗಾವಿ. ಅಥಣಿ ತಾಲೂಕಿನ ಬರಡು ಹಳ್ಳಿಗಳು.

ಇದರಲ್ಲಿ ಇತಿಹಾಸ, ಭೂಗೋಳ, ವರ್ತಮಾನ, ಗಡಿಸಮಸ್ಯೆಗೆ ತಿರುವು, ವಿವಾದಗ್ರಸ್ತ ಇಪ್ಪತ್ತೆರಡು ಹಳ್ಳಿಗಳ ಸಮಸ್ಯೆಯ ಸ್ವರೂಪ, ಸಮಸ್ಯೆಯ ಮೂಲಬೇರು, ಭವಿಷ್ಯತ್ತು

ಹೀಗೆ ಉಪಶಿರ್ಷಿಕೆಗಳಲ್ಲಿ ತುಂಬಾ ಆಕರ್ಷಕವಾಗಿ ವಿಷಯವನ್ನು ಪ್ರತಿಪಾದಿಸಿದ್ದಾರೆ. ಕೇವಲ ಸಮಸ್ಯೆಗಳನ್ನು ಗುರುತಿಸುವಲ್ಲಿ ಪರ್ಯಾಯ ಸವಾಗದೆ. ಸಮಸ್ಯೆಗಳಿಗೆ ಮಾರ್ಗೋಪಾಯ ಮತ್ತು ಪರಿಹಾರಗಳನ್ನು ಸೂಚಿಸಿರುವುದು ಡಾ. ವ್ಹಿ. ಎಸ್. ಮಾಳಿಯವರು ವಿದ್ವತ್ತು ಮತ್ತು ಚಿಂತನೆ ಶೀಲತೆಗೆ ಸಾಕ್ಷಿಯಾಗಿದೆ.

ಡಾ. ವ್ಹಿ. ಎಸ್. ಮಾಳಿಯವರು ಯಾವುದೇ ಸಂಶೋಧನಾ ಲೇಖನಗಳನ್ನು ಪರಿಶೀಲಿಸಿದರೂ ಅಲ್ಲಿ ಕ್ಷೇತ್ರ ಕಾರ್ಯ, ಸಾಮಗ್ರಿ ಮುಖಿ ಸಂಶೋರ್ಧನೆ, ವ್ಯವಸ್ಥಿತ ವಿಂಗಡನೆ, ಅರ್ಥಪೂರ್ಣ ವಿವೇಚನೆ, ಮೌಲಿಕವಾದ ವಿಶ್ಲೇಷಣೆಯಿದ್ದು, ಕೊನೆಗೆ ಅಂತಿಮ ಫಲಿತವನ್ನು ಕಾಣುತ್ತೇವೆ. ಸಂಶೋಧನೆಯ ಶಿಸ್ತು, ಅಧ್ಯಯನದ ಅಚ್ಚುಕಟ್ಟುತನ ಎದ್ದು ಕಾಣುತ್ತದೆ. ನಾಡಿನ ಪತ್ರಿಕೆಗಳಲ್ಲಿ ಅಭಿನಂದನ ಗ್ರಂಥಗಳಲ್ಲಿ, ಸ್ಮರಣ ಸಂಚಿಕೆಗಳಲ್ಲಿ, ವಾರ್ಷಿಕ ಸಂಚಿಕೆಗಳಲ್ಲಿ ಚೆದುರಿಹೋಗಿರುವ ಶ್ರೀಯುತರ ಸಂಶೋಧನಾ ಲೇಖನಗಳನ್ನು ಸಂಕಲಿಸುವ, ಸಂಪಾದಿಸುವ ಮತ್ತು ಪ್ರಕಟಿಸುವ ಕಾರ್ಯ ಆಗಬೇಕಾಗಿದೆ. ಡಾ. ವ್ಹಿ. ಎಸ್. ಮಾಳಿಯವರ ಸಂಶೋಧನಾ ಸಂಪುಟ ಹೊರ ಬಂದರೆ, ಇಡಿಯಾಗಿ ಅವರ ಕಾರ್ಯ ವೈಖರಿ, ಸಂಶೋಧನಾ ಮಾದರಿ ಓದುಗರಿಗೆ ಲಭ್ಯವಾಗುತ್ತದೆ. ಡಾ. ವ್ಹಿ. ಎಸ್. ಮಾಳಿಯವರ ಸಂಶೋಧನೆಗಳು ಸಮಾಜಕ್ಕೆ ಹೊಸ ಬೆಳಕು ನೀಡಿ, ಸಮಾಜ ಮುನ್ನಡೆಸುವ ಸದಾಶಯ ಹೊಂದಿರುವುದು ಅವರ ಸಂಶೋಧನೆಗೆ ಮೌಲ್ಯವನ್ನು ತಂದಿತ್ತಿವೆ.

**ಅಡಿಟಿಪ್ಪಣಿ** :

೧) ಕನ್ನಡ ಸಾಹಿತ್ಯದಲ್ಲಿ ಕರ್ಣ – ಡಾ. ವ್ಹಿ. ಎಸ್. ಮಾಳಿ

೨) ಕರ್ಣಾಟ ಭಾರತ ಕಥಾ ಮಂಜರಿ – ಕುಮಾರವ್ಯಾಸ

೩) ವಿಕ್ರಮಾರ್ಜುನ ವಿಜಯ – ಪಂಪ

೪) ಅಥಣಿ ತಾಲೂಕು ಸಮಗ್ರ ದರ್ಶನ (ಸಂ) – ಡಾ. ವ್ಹಿ. ಎಸ್. ಮಾಳಿ

೫) ಕೊಕಟನೂರ ಸಾಂಸ್ಕೃತಿಕ ಅಧ್ಯಯನ (ಸಂ) – ಡಾ. ವ್ಹಿ. ಎಸ್. ಮಾಳಿ

೬) ತಾಣದೀವಿಗೆ (ಸಂ) – ಡಾ. ವ್ಹಿ. ಎಸ್. ಮಾಳಿ

೭) ಐನಾಪುರ ಸಾಂಸ್ಕೃತಿಕ ಅಧ್ಯಯನ (ಸಂಂ – ಡಾ. ವ್ಹಿ. ಎಸ್. ಮಾಳಿ

೮) ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ – ಡಾ. ಬಿ. ಆರ್. ಹಿರೇಮಠ

೯) ಹಸ್ತಪ್ರತಿಗಳ ಅಧ್ಯಯನ – ಡಾ. ಬಿ. ಕೆ. ಹಿರೇಮಠ

* * * * *

ಅಧ್ಯಾಯ – ೪ :

# ಡಾ. ವ್ಹಿ. ಎಸ್. ಮಾಳಿಯವರ ಸಂಶೋಧನೆಯ ವೈಶಿಷ್ಟ್ಯತೆ

ಅಧ್ಯಾಯ – ೪ :

# ಡಾ. ವ್ಹಿ. ಎಸ್. ಮಾಳಿಯವರ ಸಂಶೋಧನೆಯ ವೈಶಿಷ್ಟ್ಯತೆ

ಕನ್ನಡದ ಮಹಾಕವಿ ಪಂಪ, ರನ್ನ, ಕುಮಾರವ್ಯಾಸರನ್ನು ಮಾತ್ರ ಪ್ರಾತಿನಿಧಿಕವಾಗಿ ಆಯ್ಕೆ ಮಾಡಿಕೊಂಡಿದ್ದಾರೆ. ಅನುಷಂಗಿಕವಾಗಿ ಬೇರೆ ಬೇರೆ ಕವಿಗಳ ಭಾರತವನ್ನು ಉಪಯೋಗಿಸಿದ್ದಾರೆ. ಕರ್ಣನ ಆದಿ ಮಧ್ಯಾಂತ ಸಹಿತ ಬದುಕಿನ ಮಜಲುಗಳನ್ನು ತಾರ್ಕಿಕವಾಗಿ ಝುರಡಿ ಹಿಡಿದು ಸೋಸಿದ್ದಾರೆ. ತರ್ಕದ ಸಾಣೆಹಿಡಿದು ಹದನಗೊಳಿಸಿದ್ದಾರೆ. ಡಾ. ವ್ಹಿ. ಎಸ್. ಮಾಳಿಯವರ ಈ ಕಾರ್ಯ ಬಹುಶೃತವಾಗಿದೆ. ಶ್ರೀಯುತ ಕರ್ಣನೆಂಬ ಪಾತ್ರವನ್ನು ಶೋಧಿಸುವುದರೊಂದಿಗೆ ಇಡೀ ಭಾರತ ಕಾವ್ಯವನ್ನೆ ಸಮೀಕ್ಷೆಗೆ ಒಳಪಡಿಸಿಕೊಂಡಿದ್ದು ವಿಶೇಷ ಅಂಶವಾಗಿದೆ.

ಪ್ರಾಚೀನ ಕನ್ನಡ ಭಾರತ ಕೃತಿಗಳನ್ನು ಶ್ರೀಯುತರು ಒಂದರ್ಥದಲ್ಲಿ ಪುರ್ನಮೌಲ್ಯಮಾಪನ ಮಾಡಿದ್ದಾರೆ. ಪಂಪ, ರನ್ನ, ಕುಮಾರವ್ಯಾಸರಂತಹ ಮಹಾಕವಿಗಳ ಬಗೆಗೆ ಅವರ ಸಾಹಿತ್ಯದ ಮೌಲ್ಯವನ್ನು ಪ್ರಸ್ತುತ ಪರಿಸ್ಥಿತಿಗೆ ಓದುಗರಿಗೆ ಹೊಸ ನೋಟದೊಂದಿಗೆ ಕಟ್ಟಿಕೊಟ್ಟಿದ್ದಾರೆ. ಮಹಾಪ್ರಬಂಧದಲ್ಲಿ ಕರ್ಣನ ಬದುಕಿನ ಜೀವನ, ಜೀವಿತದ ಸ್ಥರಗಳನ್ನು ಡಾ. ವ್ಹಿ. ಎಸ್. ಮಾಳಿಯವರು ಮೂರು ಹಂತಗಳಲ್ಲಿ ಶೋಧಿಸಿ ಪ್ರತ್ಯೇಕಿಸಿ ಓದುಗರಿಗೆ ವಿಷಯ ಗ್ರಾಹ್ಯಕ್ಕೆ ಸರಳ ಸ್ಪಷ್ಟ ದಾರಿಯನ್ನೇ ಮಾಡಿಕೊಟ್ಟಿದ್ದಾರೆ. ಅವರ ಸಂಶೋಧನೆಯ ಜಾಡ ಸುಲಲಿತವಾಗಿದೆ. ಒಂದೇ ಮಾತಿನಲ್ಲಿ ಹೇಳಬಹುದಾದರೆ ಮಹಾಭಾರತ ಕಾವ್ಯವೆಂಬ ಮೊಸರನ್ನು ಕಡೆದು ಕರ್ಣನೆಂಬ ನವನೀತವನ್ನು ಓದುಗನ ಮನದೆಡೆಗೆ ಒಪ್ಪವಾಗಿಟ್ಟಿದ್ದಾರೆ. ಡಾ. ವ್ಹಿ. ಎಸ್. ಮಾಳಿಯವರು ಕರ್ಣನ ಪಾತ್ರವನ್ನು ಆಳವಾಗಿ ಅಧ್ಯಯಿನಿಸಿ ಹಲವು ಆಕರಗಳಿಂದ ಆಯ್ದ ಸಮಗ್ರ ಕರ್ಣನ ಪಾತ್ರದ ಸ್ಪಷ್ಟ ಚಿತ್ರವನ್ನು ಆಮಾಲಾಗ್ರವಾಗಿ ಸಂಗ್ರಹಿಸಿ ನಮ್ಮ ಮುಂದೆ ಇರಿಸಿದ್ದಾರೆ. ಅವರು ಕಂಡುಕೊಂಡತಹ ಕರ್ಣನ ಬದುಕಿನ ಮೂರು ಮಜಲುಗಳನ್ನು ನಮ್ಮ ಮುಂದೆ ಸಾಕ್ಷೀಕರಿಸುತ್ತಾರೆ.

ಕರ್ಣನು ಮೊದಲ ಕನ್ನಡದ ಕಾವ್ಯ ಸಂದರ್ಭದಲ್ಲಿ ರಾಧೆಯ ಎರಡನೆಯದು ಅಂಗಾಧಿಪತಿ ರಾಧೆಯ, ಮೂರನೆ ಘಟ್ಟದಲ್ಲಿ ಕಾಂತೇಯತೀರ ಮಾನಸಿಕ ಸಂಘರ್ಷದಲ್ಲಿ ಸಿಲುಕಿಕೊಳ್ಳುವ ಪಾತ್ರ ಇತ್ತ ಕೌಂತೇಯನೂಲ್ಲ. ಅತ್ತ ಅಂಗಾಧಿಪತಿ ಕರ್ಣನು ಅಲ್ಲ, ರಾಧೇಯನು ಅಲ್ಲ, ಅಥವಾ ಎಲ್ಲವೂ ಒಂದೇ ವ್ಯಕ್ತಿತ್ವದಲ್ಲಿ ಮೂರು ವ್ಯಕ್ತಿತ್ವಗಳ ಪ್ರವೇಶ. ಕರ್ಣನು ಗೊಂದಲದ ಗೂಡಾದ ವಿಚಿತ್ರ ಸಂಘರ್ಷದ ಸನ್ನಿವೇಶ. ಶಾಂತವಾಗಿ ನಿಂತ ಮಾನಸ ಸರೋವರಕ್ಕೆ ದುರ್ಯೋಧನ ಕುಂತಿ, ಕೃಷ್ಣ ಕಲ್ಲೆಸೆಯುತ್ತಾರೆ. ಜೊತೆಗೆ ಇಂದ್ರನು ಸಹ ಆತನನ್ನು ದುರ್ಬಲನಾಗಿಸುತ್ತಾನೆ. ಕರ್ಣನ ಕ್ಷಾತ್ರತೆ, ನನ್ನಿತನ, ಸ್ನೇಹ,

ನಿಷ್ಠೆಗಳಲ್ಲವು ಕಷ್ಟಗಳ ಕುಲುಮೆಗಳಲ್ಲಿ ಬೆಂದು ಪರಿಶುದ್ಧವಾಗಿ ಹೊರಹೊಮ್ಮಿದೆ. ಈ ಘಟ್ಟದಲ್ಲಿ ಕರ್ಣನು ಪರಿಶುದ್ಧ ಅಪರಂಜಿಯ ಚಿನ್ನ ಎಂಬುದನ್ನು ಡಾ. ವ್ಹಿ. ಎಸ್. ಮಾಳಿಯವರು ಅಧ್ಯಾಯದಲ್ಲಿ ಸಾಧಾರವಾಗಿ ನಿರೂಪಿಸಿದ್ದಾರೆ. ಮಹಾಭಾರತಗಳು ಪಾಂಡವರ ಪರವಾಗಿವೆ. ನಿರ್ಭಾಗ್ಯ ಕಾಂತೇಯ ಕರ್ಣನ ದುರಂತ ಚಿತ್ರಣವೇ ಬರೆಯಲ್ಪಟ್ಟಿವೆ.

ಮಹಾಭಾರತದ ಕಥಾ ನಾಯಕರಾದ ಕೃಷ್ಣ – ಪಾಂಡವರು ಇಲ್ಲಿ ಗೆಲ್ಲುವುದು ಸಹಜ, ಕಥೆಗಾರನ ಉದ್ದೇಶವೇ ಆದಾಗಿರುವಾಗ ಕರ್ಣನ ಪಾತ್ರವನ್ನು ಕೆಳಗೆ ನೂಕದೆ ಪ್ರತಿನಾಯಕನಂತೆ ಚಿತ್ರಿಸಲಾಗಿದೆ.

ವ್ಯಾಸಭಾರತದ ಕರ್ಣ ದುಷ್ಟ ಚತುಷ್ಟಯರಲ್ಲಿ ಒಬ್ಬ. ಆದರೆ ಕನ್ನಡದ ಮಹಾಭಾರತಗಳಲ್ಲಿ ಕರ್ಣ ಧೀರೋದಾತ್ತನಾಗಿ, ದುರಂತ ನಾಯಕನಾಗಿ, ಕೊಡುಗೈ ದಾನಿಯಾಗಿ, ದೈವ ದುರಂತವಾಗಿ ಚಿತ್ರಿತನಾಗಿರುವುದು ವಿಶೇಷವಾಗಿದೆ. ಆಶ್ರಯದಾತನಾದ ಅರಿಕೇಸರಿ ಅರ್ಜುನನೊಡನೆ ಹೋಲಿಸಿದ್ದಾರೆ. ಪ್ರತಿನಾಯಕ ಕರ್ಣನನ್ನು ಪಂಪ, ಮನಸಾರಿ ಕೊಂಡಾಡಿದ್ದಾನೆ. ಆತನ ಘನತೆಯನ್ನು ಚಿತ್ರಿಸುತ್ತ 'ಕರ್ಣ ರಸಾಯನಮಲ್ತೂ ಭಾರತಂ' ಎಂದಿದ್ದು ಗಮನಾರ್ಹ. ಡಾ. ವ್ಹಿ. ಎಸ್. ಮಾಳಿಯವರು ಕನ್ನಡದಲ್ಲಿ ಮೂಡಿಬಂದ ಕರ್ಣ ಪಾತ್ರ ಚಿತ್ರಣವನ್ನು ತೌಲನಿಕವಾಗಿ ನಿರೂಪಿಸಿದ್ದಾರೆ. ಹಲವಾರು ಕರ್ಣನನ್ನು ಕುರಿತು ಹೊಸಗನ್ನಡ ಸಾಹಿತ್ಯ ರಚನೆ ಬನ್ನಂಜೆ ಗೋವಿಂದಾಚಾರ್ಯರ 'ಕರ್ಣನ ದುರಂತ ಕಥೆ'. ವಂಶಿಯವರ ಗ್ರಂಥ 'ಸತ್ಯಕಾಮರ ಸಾಹಿತ್ಯ', ಎಸ್.ಎಲ್. ಬೈರಪ್ಪನವರ 'ಪರ್ವ ಕಾದಂಬರಿ' ಹೀಗೆ ಸಾಕಷ್ಟು ಸಾಹಿತ್ಯ ಸೃಷ್ಟಿಯಾಗಿದೆ. ಕರ್ಣನ ಪಾತ್ರ ಇಲ್ಲಿ ಹಲವಾರು ಮುಖಗಳಿಂದ ಚಿಂತನೆಗೆ ಹೆಚ್ಚುತ್ತವೆಯೆಂದು ವಿವರಿಸಿದ್ದಾರೆ.

ನಮ್ಮ ನವೋದಯದ ಕೆಲವು ಲೇಖಕರಲ್ಲಿ ಪುರಾಣಗಳಲ್ಲಿಯ ಖಳನಾಯಕರನ್ನು ಹಿಡಿದು ತಂದು ಉದಾತ್ತರನ್ನಾಗಿ ನಿರೂಪಿಸುವ ಚಟವಿತ್ತು. ಕೀಚಕ, ದುರ್ಯೋಧನ, ಕೈಕೇಯಿ, ಮಂಥರೆ, ಗಾಂಧಾರಿ ಹೀಗೆ ಮುಂತಾದವರನ್ನು ಉದಾತ್ತ ಚರಿತರನ್ನಾಗಿಸಿದ್ದಾರೆ. ಆಧುನಿಕ ಕವಿ ಲೇಖಕರು.

ಅದೇನೆ ಆದರೂ ಹೊಸಗನ್ನಡ ಸಾಹಿತ್ಯದಲ್ಲಿ ಮೂಡಿಬಂದ ಕರ್ಣನು ಸಾಂಪ್ರದಾಯಿಕ ಕಾವ್ಯಗಳಲ್ಲಿ ಚಿತ್ರಿತಗೊಂಡ ಕರ್ಣನಿಂದ ಸಂಪೂರ್ಣ ಭಿನ್ನವಾಗಿಲ್ಲ. ಕನ್ನಡ ಕಥಾ ಪ್ರಪಂಚಲದಲ್ಲಿಯೂ ಸಹ ಅವನ ಬದುಕಿನಲ್ಲಿಯ ದುರಂತವನ್ನು ಚಿತ್ರಿಸಲು ಹೆಚ್ಚು ಒತ್ತು ನೀಡಲಾಗಿದೆ. ಕರ್ಣನ ಪಾತ್ರದ ಆಳಕ್ಕೆ ಇಳಿದು ಮನೋ ವಿಶ್ಲೇಷಣಾತ್ಮಕ ದೃಷ್ಟಿಕೋನದಿಂದ ಅವನ ವ್ಯಕ್ತಿತ್ವವನ್ನು ಅರ್ಥೈಸಿಕೊಳ್ಳಲು ಯತ್ನಿಸಲಾಗಿದೆ.

ಕರ್ಣನನ್ನು ಕುರಿತು ಅಧ್ಯಯನ, ಸಂಶೋಧನಾ ಪ್ರಬಂಧ ಇದಾಗಿದೆ. ಈ ಗ್ರಂಥದಲ್ಲಿ ಕರ್ಣ ಪಾತ್ರದ ಸಂಪೂರ್ಣ ಚಿತ್ರಣ ಮೂಡಿ ಬಂದಿದೆ. ಅಧ್ಯಯನಕ್ಕೆ ಆರಿಸಿಕೊಂಡ ವಿಷಯವಸ್ತು

ಬಹುಮೌಲಿಕವಾಗಿದೆ. ಡಾ. ವ್ಹಿ. ಎಸ್. ಮಾಳಿಯವರು ಮಹತ್ವಪೂರ್ಣ ವಿಷಯವನ್ನೇ ಆಯ್ಕೆ ಮಾಡಿಕೊಂಡಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಕರ್ಣ ಪಾತ್ರದ, ಮೂಲಕ ಮಹಾಭಾರತ ಕಾವ್ಯದ ವಿಭಿನ್ನ ಶೋಧನೆಯ ಕೊರತೆಯಿತ್ತು. ಆ ಕೊರತೆಯನ್ನು ಬಹು ಯಶಸ್ವಿಯಾಗಿ ಡಾ. ವ್ಹಿ. ಎಸ್. ಮಾಳಿಯವರು ತಮ್ಮ ಈ ಪ್ರಬಂಧದ ಮೂಲಕ ತುಂಬಿಕೊಟ್ಟಿದ್ದಾರೆ. ಕನ್ನಡ ಸಾಹಿತ್ಯದ ಸಾರಸ್ವತ ಲೋಕಕ್ಕೆ ತುಂಬಾ ಉಪಕಾರವನ್ನೇ ಮಾಡಿದ್ದಾರೆ. ಅವರ ಈ ಕಾಯಕ ಪ್ರಶಂಸನೀಯ ಮೂಲ ಭಾರತವನ್ನು ಆಧಾರವಾಗಿರಿಸಿಕೊಂಡು ಕನ್ನಡ ಪ್ರಾಚೀನ ಕವಿಗಳ ಕನ್ನಡ ಭಾರತ ಕಾವ್ಯಗಳ ತೌಲನೀಕ ಅಧ್ಯಯನ ಮಾಡಿದ್ದಾರೆ.

ಅಧ್ಯಯನವು ಚಿಂತನಾಶೀಲವಾಗಿದೆ. ವಿದ್ವತ್ವ ಪೂರ್ಣವಾಗಿದೆ. ಹೊಸ ಸಂಶೋಧಕರ ಮಾರ್ಗದರ್ಶಿಯಾಗಿದೆ. ಮಹರ್ಷಿ ವ್ಯಾಸ, ಪಂಪ, ರನ್ನ, ಕುಮಾರವ್ಯಾಸ, ಕವಿಗಳ ಭಾರತ ಕಾವ್ಯವನ್ನು ಸಮಗ್ರವಾಗಿ ಅಧ್ಯಯನವನ್ನು ಡಾ. ವ್ಹಿ ಎಸ್. ಮಾಳಿಯವರು ಮಾಡಿದ್ದಾರೆ. ಹಲವು ದೃಷ್ಟಿಕೋನಗಳಿಂದ ಮಾಡಿದ್ದಾರೆ. ಮೂಲ ಕವಿಗಳ ಸಾಹಿತ್ಯದಲ್ಲಿಯ ಪಾಂಡಿತ್ಯವನ್ನು ಕವಿತ್ವವನ್ನು ಹೊಗಳಿದ್ದಾರೆ. ನ್ಯೂನ್ಯತೆ ಕಂಡಲ್ಲಿ ನಿರ್ದಾಕ್ಷಣ್ಯವಾಗಿ ಟೀಕಿಸಿದ್ದಾರೆ. ಭಾಷೆಯ ಸ್ವರೂಪ, ವ್ಯಾಕರಣ ಸ್ವರೂಪಗಳನ್ನು ಅಂದಿನ ಕಾಲದ ಕವಿಗಳ ಮನೋಭೂಮಿಕೆಗಳನ್ನು, ಸಾಮಾಜಿಕ ಸ್ಥಿತಿಗಳನ್ನು ಸೂಕ್ಷ್ಮವಾಗಿ ಗುರುತಿಸಿದ್ದಾರೆ. ಕಾವ್ಯ ಕಾರಣಗಳನ್ನು ಆಯಾ ಕವಿಗಳ ಬದುಕಿನ ಇತಿಮಿತಿಗಳನ್ನು ಪತ್ತೆ ಹಚ್ಚಿದ್ದಾರೆ. ಉದಾಹರಣೆ : ಪಂಪನ ಆಗಾಧ ಪ್ರೌಢಮೆ, ಹೊಸತನ ಹುಡುಕಾಟ, ಸೃಜನತೆಯ ಕೌಶಲ್ಯಗಳನ್ನು ಡಾ. ವ್ಹಿ. ಎಸ್. ಮಾಳಿಯವರು ಪ್ರಬಂಧದ ಉದ್ದಕ್ಕೂ ವಿಶ್ಲೇಷಿಸಿದ್ದಾರೆ. ಕುಮಾರವ್ಯಾಸನ ಆಗಾಧ ಪಾಂಡಿತ್ಯ, ರಚನಾ ಶೈಲಿ, ಆತನ ಪಾರಮಾರ್ಥಿಕ, ಒಲವು ಶ್ರೀಕೃಷ್ಣನ ಭಕ್ತಿಗಳನ್ನು ಕೊಂಡಾಡಿದ್ದಾರೆ.

ರನ್ನನ – ಗಧಾಯುದ್ಧದ ಸಿಂಹಾವಲೋಕನ, ಪಂಪನ ಪ್ರಭಾವಗಳನ್ನು ಗ್ರಹಿಸಿದ್ದಾರೆ. ಉಳಿದಂತೆ ಅಂದಿನ ಪ್ರಾಚೀನರ ಸಾಹಿತ್ಯವನ್ನು ಸಹ ಪರಿಶೀಲಿಸಿದ್ದಾರೆ. ಆಧುನಿಕ ಹೊಸಗನ್ನಡ ಸಾಹಿತ್ಯದ ದಿಗ್ಗಜರ ಕೃತಿಗಳನ್ನು ಸಹ ಬಹು ಜಾಗರೂಕತೆಯಿಂದ ಅಧ್ಯಯನ ಮಾಡಿದ್ದಾರೆ. ನವೋದಯ, ನವ್ಯ, ಬಂಡಾಯ, ದಲಿತ ಇತ್ಯಾಧಿ ಸ್ತರಗಳಲ್ಲಿ ಮಹಾಭಾರತ ಕಾವ್ಯವೂ ಭಿನ್ನ ಆಯಾಮಗಳಲ್ಲಿ ರೂಪಗೊಂಡದನ್ನು ಗುರುತಿಸಿ ವಿನೂತನವಾಗಿ ವ್ಯಾಖ್ಯಾನಿಸಿದ್ದಾರೆ. ಡಾ. ವ್ಹಿ. ಎಸ್. ಮಾಳಿಯವರು ಕಟ್ಟಿಕೊಟ್ಟಿರುವ 'ಕನ್ನಡ ಸಾಹಿತ್ಯದಲ್ಲಿ ಕರ್ಣ' ಸಂಶೋಧನಾ ಪ್ರಬಂಧವು ಅಧ್ಯಯನದ ಶಿಸ್ತಿನಿಂದ ಕೂಡಿದೆ. ಪಾತ್ರ ಕೇಂದ್ರಿತ ಅಧ್ಯಯನಕ್ಕೆ ಮಾದರಿಯಾಗಿದೆ. ವಿಮರ್ಶೆಯಾಗಿ ಸಂಶೋಧನೆಗೆ ಸಂಶೋಧನೆಯಾಗಿ ನಿಂತುಕೊಳ್ಳುವ ತೌಲನಿಕ ಗ್ರಂಥವಾಗಿದೆ.

ಸಂಶೋಧನೆಯ ಶಿಸ್ತು ನಿರ್ಣಯಗಳನ್ನು ಮಂಡಿಸುವಾಗ ನೀಡುವ ಆಧಾರಗಳು, ಪರಸ್ಪರ ತೌಲನಿಕವಾಗಿ ಚರ್ಚಿಸುವಾಗ ಒದಗಿಸುವ ಆಕರ ಸಾಮಗ್ರಿ ಅಪಾರ ವ್ಯಾಪಕ ಅಧ್ಯಯನಕ್ಕೆ ನಿದರ್ಶನ ಒದಗಿಸುತ್ತವೆ. ಪಂಪ, ರನ್ನ, ಕುಮಾರವ್ಯಾಸರ ಕರ್ಣ ಹೇಗೆ ಮೂಡಿ ಬಂದಿದ್ದಾನೆ. ಪರಸ್ಪರ ಸೌಮ್ಯ-ವೈಷಮ್ಯ ಮತ್ತು ವೈಶಿಷ್ಟ್ಯತೆಗಳನ್ನು ಸೊಗಸಾಗಿ ನಿರೂಪಿಸಿದ್ದಾರೆ. ಪಿ.ಎಚ್.ಡಿ. ಸಂಶೋಧನಾ ಗ್ರಂಥಗಳಲ್ಲಿ

ಪ್ರಸ್ತುತ 'ಕನ್ನಡ ಸಾಹಿತ್ಯದಲ್ಲಿ ಕರ್ಣ' ಕೃತಿಗೆ ವಿಶೇಷ ಪ್ರಾಶಸ್ತ್ಯ ಲಭಿಸಿದೆ. ಡಾ. ವ್ಹಿ. ಎಸ್. ಮಾಳಿಯವರು ಬಹುಶ್ರೂತ, ವಿದ್ವಾಂಸರು, ಸಾಂಸ್ಕೃತಿಕ ಸಂಶೋಧಕರಾಗಿ ನಾಡಿನ ಗಮನ ಸೆಳೆದಿದ್ದಾರೆ. ಕನ್ನಡದಲ್ಲಿ ಪಾತ್ರ ಕೇಂದ್ರಿತ ಸಂಶೋಧನೆಗೆ ಶ್ರೀಕಾರ ಹಾಕಿದ ಶ್ರೇಯಸ್ಸು ಶ್ರೀಯುತರಿಗೆ ಸಲ್ಲುತ್ತದೆ. ಪಾತ್ರದ ಒಳಹೊರಗನ್ನು ಅರ್ಥಪೂರ್ಣವಾಗಿ ಶೋಧಿಸಿದ್ದಾರೆ. ಕವಿಯ ಕಾಲ, ದೇಶ ಹಾಗೂ ಯುಗದ ಮನೋಧರ್ಮವನ್ನು ವಿವೇಚಿಸಿದ್ದಾರೆ. ಕೆಲವಡೆ ಹೊಸ ರೀತಿಯಾಗಿ ವ್ಯಾಖ್ಯಾನಿಸಿದ್ದಾರೆ. ವಿವಿಧ ವಿದ್ವಾಂಸರ ಅಭಿಪ್ರಾಯಗಳನ್ನು ಚರ್ಚಿಸಿದ್ದರೂ ಸಹ ಕೊನೆಗೆ ತಮ್ಮದೇ ಆದ ತಿರ್ಮಾನಕ್ಕೆ ಬಂದಿರುವುದು ಇವರ ವೈಶಿಷ್ಟ್ಯವಾಗಿದೆ. ಪ್ರಸ್ತುತ ಮಹಾಪ್ರಬಂಧದಲ್ಲಿ ಕರ್ಣನ ಬದುಕಿನ ಬೆಳವಣಿಗೆಯನ್ನು ಅಧ್ಯಯನದ ಅನುಕೂಲತೆಗಾಗಿ ಮೂರು ಘಟ್ಟಗಳಲ್ಲಿ ಪರಾಮರ್ಶಿಸಲಾಗಿದೆ. ಈ ಮೂರು ಘಟ್ಟಗಳು ಸ್ವತಂತ್ರ ಅಧ್ಯಯನದ ವ್ಯಾಪ್ತಿಯನ್ನು ಹೊಂದಿದ್ದು, ಇವು ಒಂದಕ್ಕೊಂದು ಸಂಪೂರ್ಣ ಭಿನ್ನಸ್ವರೂಪದವುಗಳಾಗಿರುತ್ತವೆ. ಈ ಪ್ರತಿಯೊಂದು ಘಟ್ಟದಲ್ಲಿಯೂ ಕರ್ಣನ ಬದುಕು ಹೊಸ ತಿರುವು ಪಡೆದಿರುವುದು ಗೊತ್ತಾಗುತ್ತದೆ.

ಕರ್ಣನ ಜನನ-ಪಾಲನೆ-ಪೋಷಣೆ, ವಿದ್ಯಾಭ್ಯಾಸ-ಹವ್ಯಾಸ, ಶೌಚ ಹಸ್ತಿನಾವತಿಯ ರಾಜಕುಮಾರರ ಪರೀಕ್ಷಾರಂಗದಲ್ಲಿ ಅವನು ವರ್ತಿಸಿದ ರೀತಿ, ದುರ್ಯೋಧನ ಆತ್ಮೀಯ ಆಕರ್ಷಣೆ ಹಾಗೂ ಸೂತ ಬದುಕಿನ ಅಂತ್ಯದವರೆಗಿನ ವಿವರಗಳನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ, ಹೊಸ ವ್ಯಾಖ್ಯಾನಗಳೊಂದಿಗೆ ಇಲ್ಲಿ ವ್ಯವಸ್ಥಿತವಾಗಿ ಅಭ್ಯಸಿಸಲಾಗಿದೆ. ಹೀಗೆ ಕ್ಷತ್ರೀಯ ರಾಜಕುಮಾರಿಯಲ್ಲಿ ಜನಿಸಿ, ಸೂತ ದಂಪತಿಗಳ ಆಶ್ರಯದಲ್ಲಿ ಬೆಳೆದು, ಅನಾಥ ಪ್ರಜ್ಞೆಯನ್ನು ಅನುಭವಿಸಿದ, ಪರಿಶ್ರಮ-ಪರಾಕ್ರಮಗಳ ಮೂಲಕ ಕ್ಷತ್ರೀಯತ್ವವನ್ನು ಪಡೆಯಲು ಹಂಬಲಿಸಿದ ಕರ್ಣನ ಆಂತರಿಕ ಬದುಕಿನ ಮಹಾಸಂಗ್ರಾಮದ ಸಂಘರ್ಷದ ಚಿತ್ರಣ ಇಲ್ಲಿ ಚೆನ್ನಾಗಿ ಮೂಡಿಬಂದಿದೆ. ಇದು ಕರ್ಣನ ಬದುಕಿನ ಪ್ರಥಮ ಘಟ್ಟ, ಈಗ ಕರ್ಣ, ರಾಧೇಯ ಕರ್ಣ. ಅಂಗರಾಜ್ಯದ ಪಟ್ಟ, ಕರ್ಣನ ಬದುಕಿನ ಎರಡನೆಯ ಘಟ್ಟ, ಸೂತಪುತ್ರ ಕರ್ಣನಿಗೆ ಅಂಗರಾಜ್ಯದ ಪಟ್ಟ ದೊರೆತುದು ಅತ್ಯಂತ ಆಕಸ್ಮಿಕ. ಇದು ಆತನ ಬದುಕಿಗೆ ಹೊಸ ಆಯಾಮವನ್ನು ಆದ್ಯತೆ ಒದಗಿಸಿಕೊಟ್ಟಿತು. ಕರ್ಣನ ಬದುಕಿಗೆ ಹೊಸ ತಿರುವು ನೀಡಿದ ಆದ್ಯ ವ್ಯಕ್ತಿ ದುರ್ಯೋಧನ. ಅಂದಿನಿಂದ ಕರ್ಣನ ಜೀವನ ವಾಹಿನಿಗೆ ತೀವ್ರ ಆವೇಗ ಸಂಪ್ರಾಪ್ತವಾಯಿತು. ಹೀಗೆ ಅಂಗಾಧಿಪತಿ ಕರ್ಣನ ಬದುಕಿನ ವಿವರಗಳನ್ನು ಇಲ್ಲಿ ತಲಸ್ಪರ್ಶಿಯಾಗಿ, ತೂಕಬದ್ಧವಾಗಿ ವಿವೇಚಿಸಲಾಗಿದೆ. ಈಗ ಕರ್ಣ, ಅಂಗಾಧಿಪತಿ ಕರ್ಣ.

ಕಾಂತೇಯ ಕರ್ಣನ ಸಂಕೀರ್ಣ ಬದುಕಿನ ಹೊರಾಟದ ಚಿತ್ರಣವೂ ಈ ಗ್ರಂಥದಲ್ಲಿದೆ. ಅನಾಥರಕ್ಷಕ ದುರ್ಯೋಧನನಲ್ಲಿ ಸ್ವಾಮಿನಿಷ್ಠೆಯ ಸೇವೆ ಮಾಡುತ್ತಿದ್ದ ಕರ್ಣ. ಈಗ ದುರ್ಯೋಧನ ಮಯವಾಗಿದ್ದ, ಇಂತಹ ಪರಿಸ್ಥಿತಿಯಲ್ಲಿ ಶ್ರೀ ಕೃಷ್ಣನ ಕುಟಿಲ ರಾಜತಾಂತ್ರಿಕ ಕೌಶಲ್ಯದ ಮೂಲಕ ಕರ್ಣನ ಬದುಕಿನಲ್ಲಿ ಬಿರುಕು ಕಾಣಿಸಿಕೊಂಡಿತು. ಇದರಿಂದ ಕರ್ಣನ ಮನೊರಂಗದಲ್ಲಿ ಧರ್ಮ ಸಂಕಟದ ಸಂಘರ್ಷ, ಸಹೋದರ ಪ್ರೇಮ ಹಾಗೂ ಸ್ವಾಮಿ ನಿಷ್ಠೆಗಳ ಮಧ್ಯದ ಹೋರಾಟ ಪ್ರಾರಂಭವಾಯಿತು. ಇದು ಕರ್ಣನ ಅಂತರಂಗದಲ್ಲಿ ನಡೆದ ಕುರುಕ್ಷೇತ್ರಯುದ್ಧ. ಇದರೊಂದಿಗೆ ಕರ್ಣನ

ಬಹಿರಂಗ ಕುರುಕ್ಷೇತ್ರ ಯುದ್ಧದ ಸಾಫಲ್ಯ - ವೈಫಲ್ಯ. ಸಂದಿಗ್ಧತೆ ಸಂಕೀರ್ಣತೆಗಳನ್ನು ಇಲ್ಲಿ ಪರಿಶೀಲಿಸಲಾಗಿದೆ. ಕರ್ಣ ಒಬ್ಬ ವ್ಯಕ್ತಿಯಲ್ಲ. ಪರಂಪರೆಯ ಮಹಾಶಕ್ತಿ. ಇಂತಹ ಮಹಾಶಕ್ತಿ ವರ್ಗ ವ್ಯವಸ್ಥೆ, ವರ್ಣ ವ್ಯವಸ್ಥೆಗಳ ತೀವ್ರ ಶೋಷಣೆಗೆ ಒಳಗಾಗಬೇಕಾಯಿತು. ಇಂತಹ ಶೋಷಿತ ಬದುಕಿನ ವ್ಯಕ್ತಿಯ ವ್ಯಥೆಯ ಕಥೆಯೇ ಕರ್ಣನ ಬದುಕಿನ ಕಥೆಯಾಗಿದೆ. ಡಾ. ವ್ಹಿ. ಎಸ್. ಮಾಳಿಯವರು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ, ಕೌಟುಂಬಿಕವಾಗಿ ಶೋಷಣೆಗೊಳಗಾದ ಕರ್ಣನ ಪಾತ್ರವನ್ನು ಕುರಿತು ತೌಲನಿಕ ಅಧ್ಯಯನವನ್ನು ಈ ಸಂಶೋಧನ ಗ್ರಂಥದಲ್ಲಿ ಕೈಕೊಂಡಿದ್ದಾರೆ.

ವ್ಯಾಸಭಾರತವನ್ನು ಮೂಲವಾಗಿಟ್ಟುಕೊಂಡು ಕನ್ನಡ (ಪ್ರಾಚೀನ, ಅರ್ವಾಚೀನ) ಸಂಸ್ಕೃತ ಪ್ರಾತಿನಿಧಿಕ ಕೃತಿಗಳಲ್ಲಿ ಬರುವ ಕರ್ಣ ಪಾತ್ರದ ವಿವರಣೆಗಳೊಂದಿಗೆ ತೌಲನಿಕವಾಗಿ ಅಭ್ಯಸಿಸಿದ್ದಾರೆ. ಸಮಕಾಲೀನ ಸಂದರ್ಭದಲ್ಲಿ ಚರ್ಚಿಸುತ್ತಿರುವ ಸಾಂಸ್ಕೃತಿಕನಿಷ್ಠ ಸಂಶೋಧನೆಯ ಮಾದರಿಯನ್ನು ಎರಡು ದಶಕಗಳ ಹಿಂದೆಯೇ ಡಾ. ವ್ಹಿ. ಎಸ್. ಮಾಳಿಯವರು ಕಟ್ಟಿಕೊಟ್ಟಿರುವುದು ಅವರ ಸಂಶೋಧನಾ ವೈಶಿಷ್ಟ್ಯವಾಗಿದೆ.

**ಜ್ಞಾನೇಶ್ವರಿ ಕಾವ್ಯದ ಕನ್ನಡ ಅನುವಾದಗಳು :**

ಬಸವಣ್ಣನವರು ವೇದಗಳಿಗೆ ಒರೆಯ ಕಟ್ಟಿದರೆ ಜ್ಞಾನೇಶ್ವರರು ವೇದಗಳ ಒರೆಗಲ್ಲುಗಳನ್ನು ಜನಸಾಮಾನ್ಯರ ಕೈಗೆ ಇತ್ತರು. ೧೨ನೇ ಶತಮಾನದ ಶರಣರ ಆಂದೋಲನದ ಸಮಾಜೋ-ಧಾರ್ಮಿಕ ಶರಣ ಸಾಹಿತ್ಯ ಮತ್ತು ಸಂತ ಸಾಹಿತ್ಯಗಳನ್ನು ತೂಗುವ ಸಂದರ್ಭ. ಇಬ್ಬರೂ ಪೂಜ್ಯನಿಯರು ಪರಮಭಕ್ತಿರು, ವಚನ ಅವೈದಿಕ ಸಾಹಿತ್ಯ, ಜ್ಞಾನೇಶ್ವರಿ ವೈದಿಕ ಸಾಹಿತ್ಯ, ಸಮಾಜಿಕ ಬದಲಾವಣೆಗಳು ಕಾಣದಿದ್ದರೂ ಆಧ್ಯಾತ್ಮಿಕ ಸಮಾನತೆಯ ಹೆಚ್ಚಿದೆ.

**ಈ ನೆಲೆಗಳಲ್ಲಿ ಗುರುತಿಸಬಹುದು :**

೧) ನೈತಿಕ ಸಂಹಿತೆ
೨) ಜ್ಯಾತ್ಯಾತೀತ ನಿಲುವು
೩) ವ್ಯಸನ ಮೂಕ್ತ ಸಮಾಜ
೪) ಸ್ತ್ರೀ ಸ್ವಾತಂತ್ರ್ಯ ಮತ್ತು ಅಸಮಾನತೆ
೫) ಪ್ರಪಂಚ ಪರಮಾರ್ಥಗಳ ಸಮನ್ವಯ
೬) ಸಖ್ಯ ಭಕ್ತಿಯ ಸಹಜಯೋಗ
೭) ಭಾವ ಸಮಾರಾಧನೆ
೮) ಸಮುದಾಯಿಕ ಸಾಮರಸ್ಯ

ಶರಣರಂತೆ ವೇದ ವ್ಯವಸ್ಥಿಯನ್ನು ಅದರೊಳಗಡೆಯೇ ಸಮಾನತೆಯೆ ಒಂದು ಹೊಸ ಸಂಪ್ರದಾಯವನ್ನು ನಿರ್ಮಿಸಿತು. 'ದೇಹವೇ ಪಂಢರಿ, ಆತ್ಮನೇ ಪುಂಡಲೀಕ' ಎಂದು ಸಂತರು ಅಂಭಂಗಿಸಿದರೂ ವಿಠ್ಠಲ ದೇವಾಲಯದ ಅವರ ವ್ಯಾಮೋಹ ಕಡಿಮೆಯಾಗಲಿಲ್ಲ.

ಜ್ಞಾನೇಶ್ವರಿಯಲ್ಲಿ ಗೋಚರಿಸುವ ಅಲಂಕಾರಗಳಲ್ಲಿ ಜ್ಞಾನೇಶ್ವರಿರ ಸಾಮಾಜಿಕ ದರ್ಶನವಿದೆ. ಸಮಾಜದೊಂದಿಗೆ ನಡೆಸಿದ ಸಂವಾದವಿದೆಯೆಂದು ಕೆಲವು ವಿದ್ವಾಂಸರು ಗುರುತಿಸಿದ್ದರೂ, ಅದು ಪಾರಾಯಣಕಾರರ ಅನುಭವಕ್ಕೆ ಬರಲಿಲ್ಲ. ಅದು ಅವರಿಗೆ ಬೇಕಾಗಿಯೂ ಇರಲಿಲ್ಲ. ಅದನ್ನು ಮುಖೋದ್ಗತಗೊಳಿಸಿಕೊಂಡು ಅದರ ಮೌಖಿಕ ಪಠ್ಯ ಸೃಷ್ಟಿಸುವುದು ಅವರ ಉದ್ದೇಶವಾಗಿದೆ. ಆದ್ದರಿಂದ ಡಾ. ವ್ಹಿ. ಎಸ್. ಮಾಳಿಯವರ ಸಂಶೋಧನೆಯ ನೆಲೆಗಳು ಎರಡು ಭಾಷೆಯ, ಸಮಾಜೋ-ಧಾರ್ಮಿಕ, ಸಂಸ್ಕೃತಿಯ ವಿನಮಯ ಸ್ಪಷ್ಟವಾಗಿ ಗೋಚರಿಸುತ್ತದೆ.

ಸಾಮಾಜಿಕ ದರ್ಶನವಿದೆ ಎಂಬುದು ಪರಂಪರೆ ಬಗ್ಗೆ ಡಾ. ವ್ಹಿ. ಎಸ್. ಮಾಳಿಯವರ ಅಭಿಪ್ರಾಯ. ಜ್ಞಾನೇಶ್ವರಿ ಕಾವ್ಯದ ಕನ್ನಡ ಅನುವಾದಗಳ ಸಾಮಾಜೋ-ಧಾರ್ಮಿಕ ಸ್ವರೂಪವು ಹೊಸ ಬೆಳಕು ಚೆಲ್ಲುತ್ತದೆ.

**ಶಿಷ್ಟಪದ ಸಾಹಿತ್ಯದಲ್ಲಿ ಜನಪದ ಉಗ್ರ ಆಚರಣೆಗಳು :**

ಹೆಸರೇ ಸೂಚಿಸುವಂತೆ ಈ ಲೇಖನದಲ್ಲಿ ಜನಪದದ ಉಗ್ರ ಆಚರಣೆಗಳು ಕುರಿತಾಗಿ ವಿಸ್ತೃತ ಚರ್ಚೆಯಿದೆ. ಬೇಟೆಯಾಡಿ ಹಸಿಮಾಂಸ ತಿಂದು ಬದುಕು ಸಾಗಿಸುತ್ತಿದ್ದ ಆದಿಮಾನವನ ಸುಲಭ ಬೇಟೆಯ ಅಗತ್ಯ ಸಾಧನಗಳ ಅನ್ವೇಷಣಾ ಮನೋವೃತ್ತಿಯೇ ವಿಕಾಸಕ್ಕೆ ಕಾರಣವಾಯಿತು. ಕಾಲಾಂತರದಲ್ಲಿ ನಿಸರ್ಗ ಸಹಜ ಭಯ ಭಕ್ತಿಗಳ ಮೂಲದ ಆಚರಣೆಗಳ ಸುಳಿಗೆ ಸಿಕ್ಕಿಹಾಕಿಕೊಂಡು ಮಾನವನ ಇತಿಹಾಸ ಅದ್ಭುತ ಮತ್ತು ರೋಚಕವಾಗಿದೆ. ನಿಸರ್ಗದ ಉಗ್ರ ಶಕ್ತಿಯನ್ನು ಶಾಂತಗೊಳಿಸಿ ತನ್ನ ಪರವಾಗಿರುವಂತೆ ಮಾಡಿಕೊಳ್ಳುವ ಹಂಬಲದಿಂದ ಪ್ರಾರ್ಥನೆ, ಆರಾಧನೆಗಳನ್ನು ಆತ ರೂಢಿಸಿಕೊಂಡು ಬಂದು, ಆರಾಧನೆ ಪ್ರಾರಂಭವಾದುದು. ಜನಪದ ದೇವತೆಗಳ ಸೃಷ್ಟಿಯ ಒಂದು ಮುಖ. ಭಯವಾದ ಕೃತ್ಯವಾದ ವಿಸ್ಮಯವಾದ, ಸ್ವಪ್ನವಾದ ಉದ್ಯೋಗವಂತರಾಗಿದ್ದ ಅವರು ಕಂಡ ಕಲ್ಲು ಕಟ್ಟೆಗೆಗಳಲ್ಲಿಯ ದೇವತೆಗಳನ್ನು ಪೂಜಿಸುವುದು. ಅನುಗ್ರಹ ಬೇಡುವುದು, ಮರಣ-ರೋಗ-ಸಂಕಟಗಳಿಂದ ಬಿಡುಗಡೆಗಾಗಿ ಪ್ರಾರ್ಥಿಸುವುದು ಮುಂತಾದವು ಕಾಲಾನುಕ್ರಮದಲ್ಲಿ ಬೆಳೆದು ಬಂದವು.

ಆಚರಣೆಗಳು ಪರಂಪರಾಗತವಾದ ಇಂದಿಗೂ ಕನ್ನಡಿಗರಲ್ಲಿವೆ. ದ್ರಾವಿಡರ ಆಚರಣೆಗಳಲ್ಲಿ ಬದಲಾವಣೆಗಳು ಕಾಣಿಸಿಕೊಂಡವು. ನಾಗಪೂಜೆ ದೇವತೆಗಳ ಪೂಜೆ, ಭೂತಾರಾಧನೆ ಮುಂತಾದವುಗಳೆಲ್ಲ ಮೂಲತಃ ಕನ್ನಡ ಶ್ರದ್ಧೆಯ ವಿಷಯಗಳಾಗಿದ್ದವು. ಆರ್ಯರು ಇದನ್ನು ಒಂದು ವ್ಯವಸ್ಥಿತ ಪದ್ಧತಿಯಾಗಿ ಪರಿಷ್ಕರಿಸಿ ಬಿಟ್ಟರು. ಶಕ್ತಿ ಆರಾಧನೆ ತುಂಬಾ ಪ್ರಾಚೀನವಾದುದು. ಸರ್ಪ, ವೃಷ ಮತ್ತು ಭೂತ ಪೂಜೆ ದ್ರಾವಿಡ ಪೂಜಾ ವಿಧಾನಗಳು ಪ್ರಾಚೀನ ಕರ್ನಾಟಕದಲ್ಲಿದ್ದಿರಬೇಕು. ಪಶು-ನರಬಲಿಗಳನ್ನು ಒಂದು ಜನಾಂಗದ ಸಾಹಿತ್ಯವೆಂದರೆ ಆ ಜನಾಂಗದ ಸಂಸ್ಕೃತಿಯ ಸಾಧನೆಯ ಕೈಗನ್ನಡಿ. ಕೆರೆ, ಸೇತುವೆ ಮತ್ತು ಕೋಟೆಗಳನ್ನು ಕಟ್ಟಿಸುವಾಗ ಪ್ರಾಣವನ್ನರ್ಪಿಸುವ ಗಂಡು-ಹೆಣ್ಣುಗಳ, ಪತಿಗಾಗಿ-ಸತಿ ಕಟ್ಟಿಸುವಾಗ ಪ್ರಾಣವನ್ನರ್ಪಿಸಿದ ಗಂಡು-ಹೆಣ್ಣುಗಳ, ಪತಿಗಾಗಿ-ಸತಿ, ಸತಿಗಾಗಿ-

ಪತಿ, ಪ್ರಾಣವನ್ನರ್ಪಿಸಿದ ಜನಪದರ ಆಚರಣೆಗಳು ಜನಪದ ಸಾಹಿತ್ಯದಲ್ಲಿ ಹಾಸುಹೊಕ್ಕಾಗಿ ಮೂಡಿನಿಂತಿವೆ. ಕೇವಲ ಕನ್ನಡ ಶಿಷ್ಟಪದ ಸಾಹಿತ್ಯದಲ್ಲಿ ಉಕ್ತವಾದ ವ್ಯಕ್ತಿ ಕೇಂದ್ರಿತ ಜನಪದ ಉಗ್ರ ಆಚರಣೆಗಳ ವಿವಿಧ ಬಗೆಗಳನ್ನು ಮತ್ತು ಅವುಗಳ ಸ್ವರೂಪದ ಕುರಿತು ಪರಿಚಯಿಸಲಾಗಿದೆ.

ಪ್ರಸ್ತುತ ಲೇಖನ ಪ್ರಾಚೀನ ಸಾಹಿತ್ಯ ಕೃತಿಗಳ ಅಧ್ಯಯನ ಖ್ಯಾತ ಸಂಶೋಧಕರ ನಿರ್ಣಯಗಳು ಮತ್ತು ಸ್ವತಃ ಡಾ. ವ್ಹಿ. ಎಸ್. ಮಾಳಿಯವರೇ ಕ್ಷೇತ್ರ ಕಾರ್ಯ ಕೈಗೊಂಡು ಸಿದ್ದಪಡಿಸಿರುವುದರಿಂದ ಮಹತ್ವ ಹೆಚ್ಚಾಗಿದೆ. ಅತ್ಯುತ್ತಮ ಸಂಶೋಧನೆಗೆ ನಿದರ್ಶನವಾಗಿದೆ.

ಕೊಕಟನೂರ : 'ಐತಿಹಾಸಿಕ ಸಮೀಕ್ಷೆ'ಯ ಮಹತ್ವದ ಸಂಶೋಧನಾ ಲೇಖನವಾಗಿದೆ. ಡಾ. ವ್ಹಿ. ಎಸ್. ಮಾಳಿಯವರು ಎಂ.ಎ ಪದವಿ ಸಂಪಾದಿಸಿ, ಪ್ರಾಧ್ಯಾಪಕರಾದ ಹೊಸದರಲ್ಲಿ ಕೈಗೊಂಡ ಸಂಶೋಧನೆಯಿದು. ಪಿ.ಎಚ್.ಡಿ. ಪೂರ್ವದಲ್ಲಿಯೇ ಸಂಶೋಧನೆಯ ಅವರ ಹವ್ಯಾಸವಾಗಿತ್ತೆಂಬುದಕ್ಕೆ ಪ್ರಸ್ತುತ ಲೇಖನ ಉತ್ತಮ ಉದಾಹರಣೆಯಾಗಿದೆ. ತುಂಬಾ ಶ್ರಮದಿಂದ ಸಾಮಗ್ರಿಯನ್ನು ಸಂಗ್ರಹಿಸಿದ್ದಾರೆ. ಸಾಮಗ್ರಿ ಮುಖಿ ಸಂಶೋಧನೆಗೆ ಇದೊಂದು ನಿದರ್ಶನ. ಅಷ್ಟಕ್ಕೆ ಬಿಡದೆ ಸಂಗ್ರಹಿಸಿದ ಸಾಮಗ್ರಿಯನ್ನು ವಿವೇಚಿಸಿದ್ದು, ವಿಶ್ಲೇಷಣೆಗೆ ಒಳಪಡಿಸಿದ್ದು, ಅಂತಿಮ ತೀರ್ಮಾನಕ್ಕೆ ತಲುಪಿದ್ದು ಪ್ರಬಂಧ ಸಂಶೋಧಕರ ನಿಲುವಾಗಿದೆ. ಲೇಖನ ತಯಾರಿಸಲು ಬಳಸಿದ ಆಕರಗ್ರಂಥ ನೀಡಿದ್ದು, ಶಾಸನ, ಕೃತಿಗಳನ್ನು ಸೂಚಿಸಿದ್ದು, ವ್ಯಕ್ತಿಋಣ ಸ್ಮರಿಸಿದ್ದು ಸಂಶೋಧನ ಶಿಸ್ತಿಗೆ ಅನುಗುಣವಾಗಿದೆ.

**ಸಮಾರೋಪ :**

ಡಾ. ವ್ಹಿ. ಎಸ್. ಮಾಳಿಯವರು ಯಾವುದೇ ಸಂಶೋಧನಾ ಲೇಖನಗಳನ್ನು ಪರಿಶೀಲಿಸಿದರೂ ಅಲ್ಲಿ ಕ್ಷೇತ್ರ ಕಾರ್ಯ, ಸಾಮಗ್ರಿಮುಖಿ ಸಂಶೋಧನೆ, ವ್ಯವಸ್ಥಿತ ವಿಂಗಡನೆ, ಅರ್ಥಪೂರ್ಣ ವಿವೇಚನೆ, ಮೌಲಿಕವಾದ ವಿಶ್ಲೇಷಣೆಯಿದ್ದು ಕೊನೆಗೆ ಅಂತಿಮ ಫಲಿತವನ್ನು ಕಾಣುತ್ತೇವೆ. ಸಂಶೋಧನೆಯ ಶಿಸ್ತು, ಅಧ್ಯಯನದ ಅಚ್ಚುಕಟ್ಟುತನ ಎದ್ದು ಕಾಣುತ್ತದೆ. ನಾಡಿನ ಪತ್ರಿಕೆಗಳಲ್ಲಿ ಅಭಿನಂದನ ಗ್ರಂಥಗಳಲ್ಲಿ, ಸ್ಮರಣ ಸಂಚಿಕೆಗಳಲ್ಲಿ ವಾರ್ಷಿಕ ಸಂಚಿಕೆಗಳಲ್ಲಿ ಚೆದುರಿ ಹೋಗಿರುವ ಶ್ರೀಯುತರ ಸಂಶೋಧನಾ ಲೇಖನಗಳನ್ನು ಸಂಕಲಿಸುವ ಸಂಪಾದಿಸುವ ಮತ್ತು ಪ್ರಕಟಿಸುವ ಕಾರ್ಯ ಆಗಬೇಕಾಗಿದೆ. ಡಾ. ವ್ಹಿ. ಎಸ್. ಮಾಳಿಯವರ ಸಂಶೋಧನಾ ಸಂಪುಟ ಹೊರಬಂದರೆ, ಇಡಿಯಾಗಿ ಅವರ ಕಾರ್ಯ ವೈಖರಿ, ಸಂಶೋಧನಾ ಮಾದರಿ ಓದುಗರಿಗೆ ಲಭ್ಯವಾಗುತ್ತದೆ. ಡಾ. ವ್ಹಿ. ಎಸ್. ಮಾಳಿಯವರ ಸಂಶೋಧನೆಗಳು ಸಮಾಜಕ್ಕೆ ಹೊಸ ಬೆಳಕು ನೀಡಿ, ಸಮಾಜ ಮುನ್ನಡೆಸುವ ಸದಾಶಯ ಹೊಂದಿರುವುದು. ಅವರ ಸಂಶೋಧನೆಗೆ ಮೌಲ್ಯವನ್ನು ತಂದಿತ್ತಿವೆ.

**ಅಡಿಟಿಪ್ಪಣಿ :**

೧) ಮಾಳಿಯವರ ಸಂಶೋಧಿತ ಗ್ರಂಥಗಳ ಅವಲೋಕನ

೨) 'ಕನ್ನಡ ಸಾಹಿತ್ಯದಲ್ಲಿ ಕರ್ಣ' ಪಿ.ಎಚ್.ಡಿ. ಮಹಾಪ್ರಬಂಧ (ಸಂ) : ಡಾ. ವ್ಹಿ. ಎಸ್. ಮಾಳಿಯವರು

೩) 'ತಾಣದೀವಿಗೆ' ಸಂಶೋಧನ ಕೃತಿ : ಡಾ. ವ್ಹಿ. ಎಸ್. ಮಾಳಿಯವರು

೪) ಕೊಕಟನೂರ ಸಾಂಸ್ಕೃತಿಕ ಅಧ್ಯಯನ : ಡಾ. ವ್ಹಿ. ಎಸ್. ಮಾಳಿಯವರು

೫) ಐನಾಪೂರ ಸಾಂಸ್ಕೃತಿಕ ಅಧ್ಯಯನ : ಡಾ. ವ್ಹಿ. ಎಸ್. ಮಾಳಿಯವರು

೬) ಡಾ. ವ್ಹಿ. ಎಸ್. ಮಾಳಿಯವರ ಬಿಡಿ ಲೇಖನಗಳು

೭) ಮಹಾಮಾರ್ಗದ ಮಹಾನ್ವೇಷಕ : ಡಾ. ಎಂ. ಎಂ. ಕಲಬುರ್ಗಿ

೮) ಸಮಾಜವಾದಿ ಸಂಸ್ಕೃತಿ ಸಂಶೋಧಕ : ಡಾ. ಬಿ. ಆರ್. ಹಿರೇಮಠ

* * * * *

# ಅಧ್ಯಾಯ – ೫ :

# ಸಮಾರೋಪ

## ಅಧ್ಯಾಯ – ೫ :

# ಸಮಾರೋಪ

### ೧. ಪ್ರವೇಶ :

ಖ್ಯಾತ ವಿಮರ್ಶಕರು ಮತ್ತು ಸಾಹಿತ್ಯ ಸಂಶೋಧಕರು ಸಂಸ್ಕೃತಿಯ ದರ್ಶನವನ್ನು ಇಟ್ಟುಕೊಂಡು ಸಾಗಿರುವ ಡಾ. ವ್ಹಿ. ಎಸ್. ಮಾಳಿಯವರು ಆಧುನಿಕ ಸಾಹಿತ್ಯ ಪ್ರಕಾರಗಳು ಹಲವು ಆಶಯ ಇಟ್ಟುಕೊಂಡು ಪ್ರಗತಿಪರವಾದ ಕಾಳಜಿಯ ಹಿನ್ನಲೆಯಲ್ಲಿ ವೈಚಾರಿಕ ನೆಲಗಟ್ಟಿನ ಮೇಲೆ ವಿಭಿನ್ನ ರೂಪಾತ್ಮಕ ನೆಲೆಗಳಲ್ಲಿ ಕಾಣಿಸಿಕೊಂಡಿದೆ. ಸುಮಾರು ೨೫ (ಇಪ್ಪತ್ತೈದು) ವರ್ಷಗಳ ಕಾಲ ಸಂಶೋಧನ ಸಾಹಿತ್ಯ ಸೇವೆಯಲ್ಲಿ ದಣಿವರಿಯಿದೆ. ವೃತ್ತಿ ಬದುಕಿನ ಜೊತೆಗೆ 'ವಿಮರ್ಶಾ ಕ್ಷೇತ್ರ ಮತ್ತು ಸಂಶೋಧನ ಕ್ಷೇತ್ರ'ದಲ್ಲಿ ಅಪಾರವಾದ ಕಾರ್ಯ ಮಾಡಿರುವ ಡಾ. ವ್ಹಿ. ಎಸ್. ಮಾಳಿಯವರು ಉತ್ತರ ಕರ್ನಾಟಕದ ಪ್ರತಿಷ್ಠಿತ ವಿದ್ಯಾ ಸಂಸ್ಥೆಗಳಲ್ಲಿ ಒಂದಾಗ ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕಿನ ಹಾರೂಗೇರಿಯ 'ಶ್ರೀ ವೃಷಬೇಂದ್ರ ಶಿಕ್ಷಣ ಸಂಸ್ಥೆಯ ಕಲಾ ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯ'ದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ೧೯೮೫ ರಿಂದ ಸದ್ಯ ಅದೇ ಸಂಸ್ಥೆಯ ಕನ್ನಡ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರಾಗಿ, ಕನ್ನಡ ವಿಶ್ವವಿದ್ಯಾಲಯದ ಅಡಿಯಲ್ಲಿ ನಡೆಯುವ ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರದ ಮಾರ್ಗದರ್ಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಡಾ. ವ್ಹಿ. ಎಸ್. ಮಾಳಿಯುವರು ಇಲ್ಲಿಯವರೆಗೆ ಅಧ್ಯಯನ ನಡೆಸಿದ ರೀತಿ ಅದ್ಭುತವಾದ್ದುದಾಗಿದೆ. ಸಂಶೋಧನೆ, ವಿಮರ್ಶೆ, ವೈಚಾರಿಕತೆಯ ಚಿಂತನ, ಜನಾಂಗೀಯ ಅಧ್ಯಯನ, ಪತ್ರಿಕಾ ಸಂಪಾದನೆ, ವಿಚಾರ ಸಾಹಿತ್ಯ, ಕಾದಂಬರಿ, ಸಂಪಾದನ ಕೃತಿಗಳು, ವಿಚಾರ ಸಾಹಿತ್ಯ ಹೀಗೆ ಹತ್ತು ಹಲವು ವಿಭಿನ್ನ ನೆಲೆಗಳಲ್ಲಿ ಸಾಹಿತ್ಯ ಕೃಷಿಯನ್ನು ಮಾಡಿದ ಶ್ರೇಷ್ಠಮಟ್ಟದ ಸಾಹಿತಿಯಾಗಿ, ಸಂಶೋಧಕರಾಗಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಸರಳ ಸಜ್ಜನ ಸಾತ್ವಿಕ ಬದುಕಿಗೆ ಹೆಸರಾದ ಡಾ. ವ್ಹಿ. ಎಸ್. ಮಾಳಿಯವರು ಬದುಕು ಆದರ್ಶಪ್ರಾಯ. ಪ್ರಚಾರ, ಪ್ರಸಿದ್ಧಿಯಿಂದ ದೂರುಳಿದವರು ಎಲೆಯ ಮರೆಯ ಹೂವಿನಂತಹ ವ್ಯಕ್ತಿತ್ವದವರು. ತಮ್ಮ ಆಶ್ರಯಗೆ ಬಂದ ಸಂಶೋಧನಾ ವಿದ್ಯಾರ್ಥಿಗಳಿಗೆ ವಿದ್ವತ್‌ನ್ನು ದಾರೆಯರೆಯುತ್ತಾ ಹೊಸ ಪಿಳಿಗೆಗೆ ಬೆಳೆಸುತ್ತಾ ಬಂದಿರುವರು. ಅದರಲ್ಲಿ ನಾನು ಬಿ.ಎ. ಪದವಿಯಿಂದ ಸಂಶೋಧನವರೆಗೆ ಗುರುವಿನ ಜ್ಞಾನದ ವೈಚಾರಿಕ ವಿಚಾರಗಳನ್ನು ಹಂಚಿಕೊಂಡಿರುವೆ.

ಸಂಶೋಧನಾ ವಿದ್ಯಾರ್ಥಿಗಳ ಬೆಳವಣಿಗೆ ಕಂಡು ಸಂತಸ ಪಡುವ ಜಾಯಮಾನದವರು. ಜಾತಿ, ಮತ, ಪಂಥಗಳನ್ನು ಮೀರಿ ಎಲ್ಲರನ್ನು ಪ್ರೀತಿಸುತ್ತಲೇ ಎಲ್ಲರೊಳಗೊಂದಾದವರು. ಎಲ್ಲವನ್ನು ಎಲ್ಲರನ್ನು ವ್ಯವಹಾರಿಕವಾಗಿ ನೋಡುವ ಇಂದಿನ ದಿನಗಳಲ್ಲಿ ಇಂಥವರು ಸಾಹಿತ್ಯವಲಯದಲ್ಲಿರುವುದು ವಿರಳ ಮತ್ತು ಅಪರೂಪ. ಡಾ. ವ್ಹಿ. ಎಸ್. ಮಾಳಿಯವರನ್ನು ಮತ್ತು ಅವರ ಸಂಶೋಧನ ಸಾಹಿತ್ಯ ಅಧ್ಯಯನ ಮಾಡುವಾಗ ಕಲಬುರ್ಗಿ, ಚಿದಾನಂದ ಮೂರ್ತಿ, ಶಂಭಾ ಜೋಷಿ, ಹೊಸರರು ದುಡಿ ದುಡಿಯುತ್ತಲೇ ಬೆಳೆದಿದ್ದು ಇಂತಹ ಹೋರಾಟ ಚಟುವಟಿಕೆಗಳಿಂದ ಸಾಹಿತಿಗೆ ಸಾಕಷ್ಟು ಜೀವಾನುನುಭವ ಲಭಿಸುತ್ತದೆ. ಅನಂತರ ಆತನ ಸಾಹಿತ್ಯ ಕೃತಿಯಲ್ಲಿ ಆ ಅನುಭವ ಪ್ರಕಟಗೊಂಡು ಅದಕ್ಕೆ ಜೀವಂತಿಕೆ ಪ್ರಾಪ್ತವಾಗುತ್ತದೆ. ಈ ದೃಷ್ಟಿಯಿಂದ ಡಾ. ವ್ಹಿ. ಎಸ್. ಮಾಳಿಯವರ ಭವಿಷ್ಯ ಇನ್ನೂ ಶ್ರೀಮಂತವಾಗುವುದರಲ್ಲಿ ಸಂಶಯವಿಲ್ಲ.

ಡಾ. ವ್ಹಿ. ಎಸ್. ಮಾಳಿಯವರು ಎಂ. ಎಂ. ಕಲಬುರ್ಗಿ, ಚಿದಾನಂದ ಮೂರ್ತಿ, ಬಿ. ಆರ್. ಹಿರೇಮಠರ ಗರಡಿಯಲ್ಲಿ ಪಳಗಿದವರು. ಸಂಶೋಧನಾ ಹಾಗೂ ವಿಮರ್ಶೆ ಅವರ ಆಸಕ್ತಿ ಕ್ಷೇತ್ರಗಳು. ಕಳೆದ ೨೫ ವರ್ಷಗಳಿಂದ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುತ್ತ ಕನ್ನಡ ಸಾಹಿತ್ಯ, ಸಂಸ್ಕೃತಿಯ ಶೋಧನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಹಳಗನ್ನಡ ಕಾವ್ಯಗಳನ್ನು ಅರಗಿಸಿಕೊಂಡವರು. ಅವರ ಪರಿಶ್ರಮ, ಅಧ್ಯಯನದ ಶಿಸ್ತು, ಚಿಕತ್ಸಿಕ ದೃಷ್ಟಿಕೋನ ಮೊದಲಾದ ಸಂಶೋಧನಾ ಗುಣ. ವಿಶೇಷಗಳಿಗೆ 'ತಾಣದೀವಿಗೆ' ಸಂಶೋಧಿತ ಗ್ರಂಥ, 'ಕನ್ನಡ ಸಾಹಿತ್ಯದಲ್ಲಿ ಕರ್ಣ' ಮಹಾಪ್ರಬಂಧ ಮತ್ತು 'ಕೊಕಟನೂರ ಸಾಂಸ್ಕೃತಿಕ ಸಂಶೋಧನ ಅಧ್ಯಯನದ' ಗುಣ ವಿಶೇಷಗಳು ಸಾಕ್ಷಿಯಾಗುತ್ತವೆ.

ಸಂಶೋಧನೆ, ವಿಮರ್ಶಾ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಹಲವಾರು ಕೃತಿಗಳನ್ನು ರಚಿಸಿ ಆಯಾ ಕ್ಷೇತ್ರಗಳಿಗೆ ತೂಕ ಹಿಡಿದು ಅವುಗಳಿಗೆ ಮೌಲ್ಯ ಹೆಚ್ಚಿಸಿದವರು. ಸಾಹಿತ್ಯದ ಕ್ಷೇತ್ರಗಳಲ್ಲಿ ಶ್ರೀಯುತರು ಗೈಯ್ದಿರುವ ಸಾಧನೆಯ ಹಾದಿಯಲ್ಲಿರುವವರು. ಅವರ ಸಮಗ್ರ ಸಂಶೋಧನ ಸಾಹಿತ್ಯ ದೃಷ್ಟಿಕೋನವಾಗಿದೆ. ಡಾ. ವ್ಹಿ. ಎಸ್. ಮಾಳಿಯವರು ಕಂಡುಕೊಂಡ ಸಾಹಿತ್ಯ ಕ್ಷೇತ್ರ ಕೇವಲ ಒಂದು ಪ್ರಕಾರದಲ್ಲಿಲ್ಲ. ಅದು ಹಲವು ಪ್ರಕಾರಗಳಲ್ಲಿ ಮುಂದುವರೆದಿದೆ. ಅವುಗಳ ವಿವರಣೆ ಮುಖ್ಯವಲ್ಲ, ಆ ಕೃತಿಗಳ ಸತ್ವ, ವಿಚಾರಶೀಲತೆ, ಆಶಯ, ಸಾಂಸ್ಕೃತಿಕ ಕಳಕಳಿ ಸಂಶೋಧನಾ ಹಿನ್ನಲೆ ಮಹತ್ವದ್ದಾಗಿದೆ. ಈ ನಿಟ್ಟಿನಲ್ಲಿ ಈ ಅಧ್ಯಯನದಲ್ಲಿ ಅವುಗಳನ್ನು ಒಂದು ತಾತ್ವಿಕ ಹಿನ್ನಲೆಯ ಚೌಕಟ್ಟಿನಲ್ಲಿ ಹಿಡಿದಿಟ್ಟು, ನನ್ನದೇ ಆದ ಹೊಸರೂಪವನ್ನು ನೀಡಿದ್ದೇನೆ. ಡಾ. ವ್ಹಿ. ಎಸ್. ಮಾಳಿಯವರು ಜನ ಸಾಮಾನ್ಯರಿಗೂ ಅರ್ಥವಾಗುವ ಗ್ರಾಮೀಣ ಸೊಗಡಿನ ನೆಲದ ಭಾಷೆಯ ಬಳಕೆ ರಚನಾತ್ಮಕ ಬರವಣಿಗೆ ಪ್ರಯೋಗದ ಸಹಜತೆ ಸರಳತೆ ಗಮನ ಸೆಳೆಯುತ್ತದೆ.

## ೨. ಫಲಿತಗಳು :

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ ವಿಭಾಗದಲ್ಲಿ ಡಾ. ವ್ಹಿ. ಎಸ್. ಮಾಳಿಯವರು ಬದುಕು ಬರಹ ಬಹುಮುಖ ಪ್ರತಿಭೆ ಸಂಶೋಧನಾ ವಿಶೇಷತೆಯ ಸಂಕ್ಷಿಪ್ತ ಪರಿಚಯದೊಂದಿಗೆ ನನ್ನ ಎಂ.ಫಿಲ್ ಅಧ್ಯಯನ ಸಂದರ್ಭದಲ್ಲಿ ಡಾ. ವ್ಹಿ. ಎಸ್. ಮಾಳಿಯವರ ಸಂಶೋಧನ ಪ್ರಬಂಧ, ಸಂಶೋಧಿತ ಗ್ರಂಥ, ಸಾಂಸ್ಕೃತಿಕ ಅಧ್ಯಯನ ವಸ್ತುವನ್ನು ಆಯ್ಕೆ ಮಾಡಿಕೊಳ್ಳಬೇಕಾಯಿತು. ನನ್ನ ಸಂಶೋಧನೆಯ ಉದ್ದೇಶ ಅದರ ಸ್ವರೂಪ ಕುರಿತು ಪ್ರಸ್ತಾಪಿಸುತ್ತಾ ಅವರ ಪ್ರಕಟಿತ 'ಕನ್ನಡ ಸಾಹಿತ್ಯದಲ್ಲಿ ಕರ್ಣ' ಸಂಶೋಧನ ಮಹಾಪ್ರಬಂಧ. ತಾಣದೀವಿಗೆ ಸಂಶೋಧನ ಗ್ರಂಥಗಳ ಅವಲೋಕನ ಕೃತಿ, ಕೊಕಟನೂರ ಸಾಂಸ್ಕೃತಿಕ ಸಂಶೋಧಿತ ಗ್ರಂಥಗಳ ಜೊತೆಗೆ ಹಲವಾರು ವಿಮರ್ಶಾ ಕೃತಿಗಳಿವೆ ಹಾಗೂ ಸಂಪಾದನೆ ಕೃತಿಗಳಿದ್ದಾವೆ. ಅವುಗಳ ಕುರಿತು ತಿಳಿಸುವದರೊಂದಿಗೆ ಮುಖ್ಯವಾಗಿ ಮೊದಲ ಮೂರು ಸಂಶೋಧನ ಕೃತಿಗಳನ್ನು ಅಧ್ಯಯನಕ್ಕೆ ಮೂಲ ಆಕಾರವಾಗಿ ಇಟ್ಟುಕೊಂಡಿರುವ ಅಭ್ಯಾಸದ ಮಿತಿಗಳನ್ನು ಸಾದರಪಡಿಸಲಾಗಿದೆ.

ಎರಡನೇಯ ಅಧ್ಯಾಯದಲ್ಲಿ ಸಂಶೋಧಕ ಡಾ. ವ್ಹಿ. ಎಸ್. ಮಾಳಿಯವರ ಹುಟ್ಟಿ ಬೆಳೆದ ಬದುಕಿದ ಪರಿಸರ ಮತ್ತು ಅವರ ಸಾಹಿತ್ಯದ ಪ್ರೇರಣೆ ಪ್ರಭಾವಗಳ ಕುರಿತು, ಸಂಶೋಧನೆ ಬೆಳೆದು ಬಂದಿರುವ ವಿಚಾರಗಳನ್ನು ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ. ಅವರು ಖ್ಯಾತ ಸಂಶೋಧನೆ ಮತ್ತು ವಿಮರ್ಶೆ ಕ್ಷೇತ್ರದಲ್ಲಿ ರೂಪಗೊಳ್ಳುವಲ್ಲಿ ಸ್ಥಳಿಯ ಕಲಬುರ್ಗಿ, ಚಿದಾನಂದ ಮೂರ್ತಿ, ಬಿ. ಆರ್. ಹಿರೇಮಠ, ಜ್ಯೋತಿ ಹೊಸರೂರ, ಶಂಬಾ ಜೋಷಿ ಮತ್ತು ಸ್ಥಳಿಯ ವಾತಾವರಣ ಪರಿಸ್ಥಿತಿ ಪ್ರಸಂಗಗಳು ಸಾಹಿತ್ಯ, ಸಾಮಾಜಿಕ ಹೋರಾಟಗಳ ಸಂಸ್ಕೃತಿಯ ಕೊಂಡಿಯಂತೆ ಸಂಬಂಧಗಳ ಕುರಿತು ಉಲ್ಲೇಖಿಸಲಾಗಿದೆ. ಆರಂಭದ ಸಂಶೋಧನ ವಿದ್ವಾಂಸರ ಪಕ್ಷಿನೋಟ ಒದಗಿಸುವ ಸಾಂಸ್ಕೃತಿಕ, ಸಂಸ್ಕೃತಿಯ ಸಾಹಿತ್ಯ ರಚನೆಯೊಂದಿಗೆ ವಿವರಿಸಲಾಗಿದೆ. ಮೂರನೆಯ ಅಧ್ಯಾಯದಲ್ಲಿ ಡಾ. ವ್ಹಿ. ಎಸ್. ಮಾಳಿಯವರ ಸಂಶೋಧನಾ ಕೃತಿಗಳು ಅವಲೋಕನ ಮಾಡಲಾಗಿದೆ.

### ಅ. 'ಕನ್ನಡ ಸಾಹಿತ್ಯದಲ್ಲಿ ಕರ್ಣ' :

ಡಾ. ವ್ಹಿ. ಎಸ್. ಮಾಳಿಯವರು ಪಿ.ಎಚ್.ಡಿ. ಮಹಾಪ್ರಬಂಧ ಸದರಿ ವಿದ್ವಾಂಸರ ಶೋಧಿತ ಈ ಕೃತಿ ಸಮುದ್ರ ಮಥನದಿಂದ ಪ್ರಾಪ್ತವಾದ ಲಕ್ಷ್ಮೀ ಚಂದ್ರ ಬೆಳ್ಳನೆಯ ಕುದುರೆ ಕೊನೆಗೆ ಬಂದ ಅಮೃತದಂತೆ ಕರ್ಣ ರಾಸಾಯನ ಶ್ರೀಮಂತ ಸೃಜನತೆಯನ್ನು ಸಾಕ್ಷೀಕರಿಸುವ ಮೌಲಿಕ ಸಾಹಿತ್ಯ ಕೃತಿಯಾಗಿದೆ.

ಕರ್ಣನೆಂಬ ಪಾತ್ರವನ್ನು ಅವರು ನೋಡಿದ ದೃಷ್ಟಿ ನಿತ್ಯ ನೂತನವಾಗಿದೆ. ಕರ್ಣನ ಪಾತ್ರಕ್ಕೆ ಗಟ್ಟಿತನವನ್ನು ನೀಡಲು ಸಾರ್ಥಕ ಪ್ರಯತ್ನ ಮಾಡಿದ್ದಾರೆ. ಪ್ರಾಚೀನ ಕವಿಗಳೆಲ್ಲ ಕರ್ಣನೆಂಬ ಪಾತ್ರವನ್ನು ಚಿತ್ರಿಸಿದ ಶೈಲಿಯನ್ನೇ ಮೂಲ ವಸ್ತುವಾಗಿಸಿಕೊಂಡು ತೀರಾ ಗಂಭೀರವಾದ ಅಧ್ಯಯನ ಮಾಡಿದ್ದಾರೆ.

ಆಯ್ದುಕೊಂಡ ಮೂಲ ಸಾಮಗ್ರಿಯೂ ವೈಶಿಷ್ಟ್ಯ ಪೂರ್ಣವಾಗಿದೆ. ಮಹಾಭಾರತ ಕಾವ್ಯವೇ ಬಹು ಸಂಕೀರ್ಣ. ಅದರಲ್ಲೂ ವ್ಯಾಸರ ಸೃಷ್ಟಿ ಪಂಪ, ರನ್ನ, ಕುಮಾರವ್ಯಾಸರ ಕನ್ನಡದ ಪ್ರಾಚೀನ ಕವಿಗಳು ತಮ್ಮ ತಮ್ಮ ದೃಷ್ಟಿಕೋನಗಳಿಂದ ಮಹಾಭಾರತ ಕಾವ್ಯವನ್ನು ಕನ್ನಡದ ಮಹಾಭಾರತವನ್ನಾಗಿ ಬರೆಯುವಾಗ ಪಾಂಡಿತ್ಯದಿಂದ ರೂಪಗಳನ್ನೇ ನೀಡಿದ್ದಾರೆ.

ಡಾ. ವ್ಹಿ. ಎಸ್. ಮಾಳಿಯವರು ಸಂಸ್ಕೃತದ ವ್ಯಾಸ ಭಾಸರಂತಹ ಕವಿಗಳನ್ನು ಕನ್ನಡದ ಜೈನ, ಬ್ರಾಹ್ಮಣ ಕವಿಗಳನ್ನು ಆಮೂಲಾಗ್ರವಾಗಿ ಅಭ್ಯಸಿಸಿ ಅವೆಲ್ಲವುಗಳ ತೌಲನಿಕ ಅಧ್ಯಯನ ಮೂಲಕ ಸಂಶೋಧನೆ ಮಾಡಿದ್ದಾರೆ. 'ಕನ್ನಡ ಸಾಹಿತ್ಯದಲ್ಲಿ ಕರ್ಣ' ಈ ಮಹಾಪ್ರಬಂಧದಲ್ಲಿ ಎಂಟು ಅಧ್ಯಾಯಗಳಿವೆ. ಇವುಗಳಲ್ಲಿ ಸತ್ಯದ ಶೋಧನೆಯ ತೀವ್ರ ತುಡಿತವಿದೆ. ಹಾಗೂ ತರ್ಕದ ಸಾಣೆಗೆ ಹಿಡಿದು ಹಂಸ – ಕ್ಷೀರ ನ್ಯಾಯದಂತೆ ತುಲನೆ ಮಾಡಿದ್ದಾರೆ. ಮಹಾಪ್ರಬಂಧದಲ್ಲಿ ಕರ್ಣನ ಬದುಕಿನ ಜೀವನ. ಜೀವಿತ ಸ್ಥರಗಳನ್ನು ಮೂರು ಹಂತಗಳಲ್ಲಿ ಶೋಧಿಸಿ ಪ್ರತ್ಯೇಕಿಸಿ ಓದುಗರ ವಿಷಯ ಗ್ರಾಹ್ಯಕ್ಕೆ ಸರಳ, ಸ್ಪಷ್ಟ ದಾರಿಯನ್ನೇ ಮಾಡಿಕೊಟ್ಟಿದ್ದಾರೆ. ಒಂದೇ ಮಾತಿನಲ್ಲಿ ಹೇಳಬಹುದಾದರೆ ಮಹಾಭಾರತ ಕಾವ್ಯವೆಂಬ ಮೊಸರನ್ನು ಕಡೆದು ಕರ್ಣನೆಂಬ ನವನೀತವನ್ನು ಓದುಗನ ಮನದೆಡೆಗೆ ಒಪ್ಪವಾಗಿಟ್ಟಿದ್ದಾರೆ. ಕನ್ನಡ ಭಾರತ ಬಾಂಧವ್ಯ, ರಾಧೇಯ ಕರ್ಣ, ಅಂಗಾಧಿಪತಿ ಕರ್ಣ, ಕಾಂತೇಯ ಕರ್ಣ, ಆಗಮಿಕರ ಕರ್ಣ, ವೈದಿಕರ ಕರ್ಣ, ತೌಕಿಕ ಕರ್ಣ, ವ್ಯಾಸ, ಭಾಸರ ಕರ್ಣ, ಸಾಹಿತ್ಯಾಸಕ್ತರ ಹಸಿವನ್ನೇ ಗುರಿಯಾಗಿಸಿಕೊಂಡು ಕರ್ಣನನ್ನು ಸಂಶೋಧಿಸಿದ್ದಾರೆ.

ಪ್ರತಿನಾಯಕನಂತೆ ಚಿತ್ರಿಸಲಾಗಿದೆ. ವ್ಯಾಸಭಾರತದ ಕರ್ಣ ದುಷ್ಟ ಚತುಷ್ಟಯರಲ್ಲಿ ಒಬ್ಬ. ಆದರೆ ಕನ್ನಡ ಮಹಾಭಾರತಗಳಲ್ಲಿ ಕರ್ಣ ಧೀರೋದಾತ್ತನಾಗಿ ದುರಂತ, ನಾಯಕನಾಗಿ, ಕೊಡುಗೈ ದಾನಿಯಾಗಿ, ದೈವ ದುರಂತವಾಗಿ ಚಿತ್ರಿತನಾಗಿರುವುದು ವಿಶೇಷವಾಗಿದೆ. ಆಶ್ರಯದಾತನಾದ ಅರಿಕೇಸರಿ ಅರ್ಜುನನೊಡನೆ ಹೋಲಿಸಿದ್ದರೆ, ಪ್ರತಿನಾಯಕ ಕರ್ಣನನ್ನು ಪಂಪ ಮನಸಾರಿ ಕೊಂಡಾಡಿದ್ದಾನೆ. ಆತನ ಘನತೆಯನ್ನು ಚಿತ್ರಿಸುತ್ತ 'ಕರ್ಣ ರಸಾಯನಯಂಲ್ತು ಭಾರತಂ' ಎಂದಿದ್ದು ಗಮನಾರ್ಹ. ಡಾ. ವ್ಹಿ. ಎಸ್. ಮಾಳಿಯವರು ಕನ್ನಡದಲ್ಲಿ ಮೂಡಿ ಬಂದ ಕರ್ಣನ ಪಾತ್ರ ಚಿತ್ರಣವನ್ನು ತೌಲನಿಕವಾಗಿ ನಿರೂಪಿಸಿದ್ದಾರೆ.

ಡಾ. ವ್ಹಿ. ಎಸ್. ಮಾಳಿಯವರು ಕಟ್ಟಿಕೊಟ್ಟಿರುವ 'ಕನ್ನಡ ಸಾಹಿತ್ಯದಲ್ಲಿ ಕರ್ಣ' ಸಂಶೋಧನಾ ಪ್ರಬಂಧವು ಅಧ್ಯಯನದ ಶಿಸ್ತಿನಿಂದ ಕೂಡಿದೆ. ಪಾತ್ರಕೇಂದ್ರಿತ ಅಧ್ಯಯನಕ್ಕೆ ಮಾದರಿಯಾಗಿದೆ. ವಿಮರ್ಶೆಗೆ ವಿಮರ್ಶೆಯಾಗಿ, ಸಂಶೋಧನೆಗೆ ಸಂಶೋಧನೆಯಾಗಿ, ನಿಂತುಕೊಳ್ಳುವ ತೌಲನಿಕ ಗ್ರಂಥವಾಗಿದೆ. ಸಂಶೋಧನೆಯು ಶಿಸ್ತು, ನಿರ್ಣಯುಗಳನ್ನು ಮಂಡಿಸುವಾಗ ನೀಡುವ ಆಧಾರಗಳು, ಪರಸ್ಪರ ತೌಲನಿಕವಾಗಿ ಚರ್ಚಿಸುವಾಗ ಒದಗಿಸುವ ಆಕರ ಸಾಮಗ್ರಿ ಅವರ ವ್ಯಾಪಕ ಅಧ್ಯಯನಕ್ಕೆ ನಿದರ್ಶನ ಒದಗಿಸುತ್ತದೆ.

ಪಂಪ, ರನ್ನ, ಕುಮಾರವ್ಯಾಸರ ಕರ್ಣ ಹೇಗೆ ಮೂಡಿಬಂದಿದ್ದಾನೆ. ಪರಸ್ಪರ ಸೌಮ್ಯ, ವೈಶಮ್ಯ ಮತ್ತು ವೈಶಿಷ್ಟ್ಯತೆಗಳನ್ನು ಸೊಗಸಾಗಿ ನಿರೂಪಿಸಿದ್ದಾರೆ. ಪಿ.ಎಚ್.ಡಿ. ಸಂಶೋಧನಾ ಗ್ರಂಥಗಳಲ್ಲಿ ಪ್ರಸ್ತುತ 'ಕನ್ನಡ ಸಾಹಿತ್ಯದಲ್ಲಿ ಕರ್ಣ' ಕೃತಿಗೆ ವಿಶೇಷ ಪ್ರಾಶಸ್ತ್ಯ ಲಭಿಸಿದೆ.

## ಬ. ಸಂಶೋಧನಾ ಗ್ರಂಥ ತಾಣದೀವಿಗೆ :

ತಾಣದೀವಿಗೆ ಸಂಶೋಧನ ಲೇಖನಗಳ ಸಂಕಲನ, ಸಂಶೋಧನೆಯು ವಿವಿಧ ಆಯಾಮಗಳಿಗೆ ಒಳಪಡುವ ಹನ್ನೆರಡು ಲೇಖನಗಳಿವೆ. ಅವುಗಳನ್ನು ಪರಿಶೀಲನ, ಪರಿಶೋಧನ ಮತ್ತು ಪರಿವರ್ಧನ ಎಂಬ ಮೂರು ವಿಭಾಗಗಳಲ್ಲಿ ವರ್ಗೀಕರಿಸಲಾಗಿದೆ.

ಪರಿಶೀಲನ, ಭಾಗದಲ್ಲಿರುವ ಐದು ಲೇಖನಗಳು ಮಹಾಪ್ರಬಂಧಗಳ ಪರಾಮರ್ಶೆ ಮಾಡಿದ್ದಾರೆ.

೧) ಡಾ. ಜಿ. ಆಯ್. ನಂದಿಕೋಲಮಠರ – 'ಕರಸ್ಥಲ ಪರಂಪರೆ'

೨) ಡ. ಯಾಕೋಳ್ಳಿಯವರ – 'ಪ್ರಾಚೀನ ಕನ್ನಡ ಕಾವ್ಯ ಸಂಕಲನಗಳು'

೩) ಡಾ. ಸಂಗಮೇಶ ಬಿರಾದಾರರ – 'ವೈಯಾಕರಣ ಎರಡನೆಯ ನಾಗವರ್ಮ'

೪) ಡಾ. ಬಸುಪಟ್ಟದ ಅವರ – 'ನಿಜಗುಣ ಶಿವಯೋಗಿಗಳು'

೫) ಸಂಶೋಧನಾ ಮಹಾಪ್ರಬಂಧಗಳು.

ಈ ಐದು ಬರಹಗಳು ಸಂಶೋಧನೆಯ ಕ್ರಮ ಡಾ. ವ್ಹಿ. ಎಸ್. ಮಾಳಿಯವರು ಪಿ.ಎಚ್.ಡಿ. ಮಹಾಪ್ರಬಂಧ ಆಳ ವಿಸ್ತಾರಗಳನ್ನು ಪರಿಣಾಮಕಾರಿಯಾಗಿ ಪರಿಚಯಿಸಿದ್ದಾರೆ. ಸಂಶೋಧಕರ ಶ್ರಮ, ಆಕರ ಶೋಧ, ಸಾಮಗ್ರಿ ಮುಖಿ ಸಂಶೋಧನೆ, ವಿಭಜನಾ ಕ್ರಮ, ವಿಶ್ಲೇಷಣಾ ರೀತಿ, ಪ್ರತಿಯೊಂದನ್ನು ಡಾ. ವ್ಹಿ. ಎಸ್. ಮಾಳಿಯವರು ಪ್ರಸ್ತುತ ಸಂಶೋಧನ ಕೃತಿಗಳ ಜೊತೆ ಚರ್ಚಿಸಿದ್ದಾರೆ. ಓದುವವರಿಗೆ ಲೇಖನ ಪ್ರಾಶಸ್ತ್ಯವಾದ ಪ್ರವೇಶವನ್ನು ಒದಗಿಸುತ್ತದೆ. ಡಾ. ವ್ಹಿ. ಎಸ್. ಮಾಳಿಯವರು ಸಾಹಿತ್ಯ ಮತ್ತು ಸಾಂಸ್ಕೃತಿಕ ವ್ಯಕ್ತಿತ್ವಕ್ಕೆ ಸಲ್ಲಿಸುವ ಗೌರವ ಎಂಥಹದು ಎಂಬುದನ್ನು ಪರಿಚಯಿಸುತ್ತದೆ. ಅಂದಿನ ಕೃತಿಗಳನ್ನು ಆಯಾ ಕಾಲಮಾನದ ಪರಿಸರದಲ್ಲಿರಿಸಿ ಬೆಲೆಗಟ್ಟಿರುವುದು ಅವರ ಸಹೃದಯತೆಗೆ ಸಾಕ್ಷಿಯಾಗಿದೆ ಹಾಗೂ ಸಾಂಸ್ಕೃತಿಕ ಪ್ರೀತಿಗೆ ದ್ಯೋತಕವಾಗಿದೆ.

**ಪರಿಶೋಧನ :**

ಸಂಶೋಧನೆಯ ಮೊದಲ ಆಯಾಮ ಇದರಲ್ಲಿ ಐದು ಸಂಶೋಧನ ಲೇಖನಗಳಿವೆ.

೧) ಜ್ಞಾನೇಶ್ವರಿ ಕಾವ್ಯದ ಕನ್ನಡ ಅನುವಾದಗಳ 'ಸಮಾಜೋ – ಧಾರ್ಮಿಕ ಸ್ವರೂಪ'

೨) ಕನ್ನಡದಲ್ಲಿ ಮರಾಠಿ ಕಾವ್ಯ

೩) ಹಳಕಟ್ಟಿ ಸಂಪಾದಿತ ಕಾವ್ಯಗಳು

೪)	ಶಿಷ್ಟಪದ ಸಾಹಿತ್ಯದಲ್ಲಿ ಜನಪದ ಉಗ್ರ ಆಚರಣೆಗಳು

೫)	ಕೊಕಟನೂರು : ಐತಿಹಾಸಿಕ ಸಮೀಕ್ಷೆ

ಈ ಲೇಖನಗಳು ಸಾಂಸ್ಕೃತಿಕ ಪರಂಪರೆಯ ಪ್ರಾಚೀನ ಸಾಹಿತ್ಯ ಕೃತಿಗಳ ಅಧ್ಯಯನ. ಖ್ಯಾತ ಸಂಶೋಧಕರ ನಿರ್ಣಯಗಳು ಮತ್ತು ಸ್ವತಃ ಡಾ. ವ್ಹಿ. ಎಸ್. ಮಾಳಿಯವರೇ ಕ್ಷೇತ್ರ ಕಾರ್ಯ ಕೈಗೊಂಡು ಸಿದ್ಧಪಡಿಸಿರುವುದರಿಂದ ಮಹತ್ವ ಹೆಚ್ಚಾಗಿದೆ. ಅತ್ಯುತ್ತಮ ಸಂಶೋಧನೆಗೆ ನಿದರ್ಶನಗಳಾಗಿವೆ.

**ಪರಿವರ್ಧನ :**

ಈ ಮೂರನೆ ವಿಭಾಗವು ಕನ್ನಡ ಸುವಿಖ್ಯಾತ ಸಂಶೋಧಕರ ಜೀವನ, ಸಾಹಿತ್ಯ ಸಾಧನೆ, ಸಂಶೋಧನಾ ಕ್ರಮಗಳನ್ನು ಸ್ಥೂಲವಾಗಿ ಪರಿಚಯಿಸುವ ಎರಡು ಮಹತ್ವದ ರಚನೆಗಳಿವೆ.

೧)	ಮಹಾಮಾರ್ಗದ ಮಹಾನ್ವೇಷಕ : ಡಾ. ಎಂ. ಎಂ. ಕಲಬುರ್ಗಿ

೨)	ಸಮಾಜವಾದಿ ಸಂಸ್ಕೃತಿ ಸಂಶೋಧಕ : ಡಾ. ಬಿ. ಆರ್. ಹಿರೇಮಠ

ತಾಣದೀವಿಗೆ ಕೊನೆಯ ವಿಭಾಗ ಪರಿವರ್ಧನದಲ್ಲಿ ಕನ್ನಡದ ಶಿಖರ ಪ್ರಾಯರಾದ ಇರ್ವರು ಸಂಶೋಧಕರ ವ್ಯಕ್ತಿತ್ವ, ಶ್ರಮ ಸಂಸ್ಕತಿ, ಸಾಧನೆಯ ಸಿದ್ಧಿ, ಸಂಶೋಧನೆಯ ತಿರುಳು ಮುಂತಾದವುಗಳನ್ನು ತುಂಬಾ ಮಾರ್ಮಿಕವಾಗಿ ಪರಿಚಯಿಸಿದ್ದಾರೆ. ಡಾ. ವ್ಹಿ. ಎಸ್. ಮಾಳಿಯವರು ಬರವಣಿಗೆ ಆದರ್ಶವಾಗಿದ್ದು ಹೃದಯವನ್ನು ನೇರವಾಗಿ ಸ್ಪರ್ಶಿಸುತ್ತದೆ. ತಮ್ಮ ಗುರುಗಳ ಬಗ್ಗೆ ಗುರು ಪರಂಪರೆಯ ಬಗ್ಗೆ ಇರಿಸಿದ ಗೌರವಾದರಗಳು ಈ ಲೇಖನದ ಮೂಲಕ ಅನಾವರಣಗೊಂಡಿವೆ. 'ಪ್ರಸ್ತುತ ತಾಣದೀವಿಗೆ'ಯನ್ನು ತಮ್ಮ ಕಾಲೇಜು ಪ್ರಾಧ್ಯಾಪಕರಾದ ಪ್ರೋ. ಎಸ್. ಎಂ. ಗೌಡರ ಸರ್ ಅವರಿಗೆ ಅರ್ಪಿಸಿದ್ದು ಯಥೋಚಿತವಾಗಿದೆ. ಸಂಶೋಧನಾ ಕೃತಿಯಲ್ಲಿ ಸಂಶೋಧಕರ ವ್ಯಕ್ತಿತ್ವ ಅನಾವರಣಗೊಳಿಸಿದ ಲೇಖನಗಳಿದ್ದು, ಅವುಗಳ ವಿಷಯ ಸಂಶೋಧನೆಯೇ ಆಗಿರುವುದರಿಂದ ಇವುಗಳ ಸೇರ್ಪಡೆಯು ಸ್ವಾಗತಾರ್ಹವಾಗಿದೆ. ಆದ್ದರಿಂದ ಡಾ. ವ್ಹಿ. ಎಸ್. ಮಾಳಿಯವರ ಸಂಶೋಧನ ಸಾಹಿತ್ಯವು ಫಲಿತಗಳಿಂದ ಕೂಡಿದೆ.

**ಕ.	ಸಂಶೋಧನಾ ಲೇಖನಗಳು :**

ಡಾ. ವ್ಹಿ. ಎಸ್. ಮಾಳಿಯವರು ಮೂಲತಃ ಸಂಶೋಧಕರು ಪಿ.ಎಚ್.ಡಿ. ಅಧ್ಯಯನಕ್ಕಿಂತ ಮುಂಚೆಯೇ ಅವರ ಸಂಶೋಧನಾ ಲೇಖನಗಳು ನಾಡಿನ ಪತ್ರಿಕೆಗಳಲ್ಲಿ ಬೆಳಕು ಕಂಡಿವೆ. 'ಸಂಶೋಧನೆ ನನ್ನ ಆಸಕ್ತಿ, ವಿಮರ್ಶೆ ನನ್ನ ಹವ್ಯಾಸ' ನನ್ನಲ್ಲಿ ಈ ಆಸಕ್ತಿಯನ್ನು ಬೆಳೆಸಿದವರು ಡಾ. ಎಂ. ಎಂ. ಕಲಬುರ್ಗಿಯವರು. ಅದನ್ನು ಪೋಷಿಸಿ ಬೆಳೆಸಿದವರು ಡಾ. ಬಿ. ಆರ್. ಹಿರೇಮಠ'ರು ಎಂದು ಸ್ವತಃ ಡಾ. ವ್ಹಿ. ಎಸ್. ಮಾಳಿಯವರು ಹೇಳಿದ್ದು ಅವರ ಅಧ್ಯಯನ ಕ್ಷೇತ್ರ ಮತ್ತು ಆಸಕ್ತಿಯನ್ನು ಸ್ಪಷ್ಟಪಡಿಸುತ್ತದೆ.

(ತಾಣದೀವಿಗೆ : 'ಬೆಳಕು ಮೂಡಿಸುವ ಮೊದಲು' ಪುಟ – ೧). ನಾಡಿನ ವಿದ್ವತ್ ಪತ್ರಿಕೆಗಳು, ಸಂಶೋಧನಾ ಕ್ಷೇತ್ರಕ್ಕೆಂದು ಮೀಸಲಾಗಿರುವ ಪತ್ರಿಕೆಗಳಲ್ಲಿ ಡಾ. ವ್ಹಿ. ಎಸ್. ಮಾಳಿಯವರ ಬಹುಪಾಲು ಲೇಖನಗಳು ಬೆಳಕು ಕಂಡಿವೆ. 'ಕರ್ನಾಟಕ ಭಾರತಿ, ಸಂಶೋಧನಾ ತರಂಗ, ಬಸವ ಪಥ, ಸ್ವಪ್ನಲೋಕ, ಹಸ್ತಪ್ರತಿ ಅಧ್ಯಯನ, ಲಿಂಗಾಯತ ಮುಂತಾದ ಪತ್ರಿಕೆಗಳು.

೧) **ಡಾ. ವ್ಹಿ. ಎಸ್. ಮಾಳಿಯವರ ಅಥಣಿ :**

ತಾಲೂಕಿನ ಜಂಬಗಿಯವರು ಅಥಣಿ ತಾಲೂಕಿನ ಕುರಿತಾದ ಅವರ ಸಂಶೋಧನೆ ತರ್ಕಬದ್ಧವಾಗಿದೆ ಮತ್ತು ತುಂಬಾ ಮೌಲ್ವಿಕವಾಗಿದೆ. 'ಅಥಣಿಯ : ಬನಿ–ದನಿ' ಕೃತಿಯಲ್ಲಿ ಶ್ರೀಯುತರು ದಾಖಲಿಸಿದ್ದು ಸಂಸ್ಕೃತಿಯ ಸಂಶೋಧನಾ ಸಾಹಿತ್ಯ ಪರಂಪರೆಯನ್ನು ಕಟ್ಟಿಕೊಡುತ್ತದೆ. ಅಥಣಿ ಭಾಷಾ ಸಾಮರಸ್ಯದ ತವರೂರು. ಎರಡು ಭಾಷೆ ಎರಡು ಸಾಂಸ್ಕೃತಿಯನ್ನು ಕೂಡಿಸಿ ಹೋಲಿದ ಸುಂದರ ಕೊಂಚಿಗೆ ಇದಾಗಿದೆ.

೨) **ಇಪ್ಪತ್ತೇರಡು ಗಡಿ ಹಳ್ಳಿಗಳು : ಸಮಸ್ಯೆ ಮತ್ತು ಸಾಂತ್ವನ :**

ಲೇಖನ ತುಂಬಾ ಮೌಲಿಕವಾಗಿದೆ. ಇತಿಹಾಸ, ಭೂಗೋಳ, ವರ್ತಮಾನ ಗಡಿ ಸಮಸ್ಯೆಗೆ ತಿರುವು, ವಿವಾದಗ್ರಸ್ತ ಸಮಸ್ಯೆಯ ಮೂಲಬೇರು ಮತ್ತು ಪರಿಹಾರಗಳನ್ನು ಸೂಚಿಸಿರುವುದು ಡಾ. ವ್ಹಿ. ಎಸ್. ಮಾಳಿಯವರು ವಿದ್ವತ್ ಮತ್ತು ಚಿಂತನ ಶೀಲತೆಗೆ ಸಾಕ್ಷಿಯಾಗಿದೆ.

೩) **ಐನಾಪುರ ಸಾಂಸ್ಕೃತಿಕ ಅಧ್ಯಯನ :**

ಸುಕ್ಷೇತ್ರ ಗೋಟಖಿಂಡಿ ಮಠ, ಜಂಗಮಲಿಂಗಕ್ಷೇತ್ರ ಮೊಟಗಿಮಠ, ಶ್ರೀ ಮಠದ ಗುರು ಪರಂಪರೆ, ಅಥಣಿ ತಾಲೂಕಿನ ಸಾಹಿತ್ಯ ದರ್ಶನ ಮಾದರಿಗಾಗಿ ಪರಿಚಯಿಸುವೆ. ಐನಾಪುರದ ಭೌಗೋಳಿಕ ಅಂಶಗಳು ಶಾಸನೋಕ್ತ ಸಂಗತಿಗಳು, ಗ್ರಾಮನಾಮದ ನಿಷ್ಪತ್ತಿ, ಮುಂದುವರೆದು ದೇವಾಲಯ ಹಾಳುದೇಗುಲ, ಪ್ರಾಚೀನ ಗಣಪತಿ ಹೀಗೆ ೧೦ ದೇವಾಲಯಗಳ ಪರಿಚಯಿಸಿ ಅವುಗಳ ವಿಶೇಷತೆಯನ್ನು ಸಂಶೋಧಿಸಿದ್ದಾರೆ. ಐನಾಪುರದಲ್ಲಿರುವ ಮಠಗಳು, ಮಂದಿರಗಳು, ಮಸೀದಿಗಳು ಮತ್ತು ದರ್ಗಾಗಳು ಹಾಗೂ ಕೆರೆಗಳು ಮುಂತಾದ ಸಾಂಸ್ಕೃತಿಕ ಅಂಶಗಳನ್ನು ಪರಿಚಯಿಸಿದ್ದಾರೆ. ಗ್ರಾಮದ ಪ್ರಾಚೀನತೆ ಭೂತ ಮತ್ತು ವರ್ತಮಾನಗಳ ಪಕ್ಷಿನೋಟವನ್ನು ತಮ್ಮ ಸಂಶೋಧನೆಯ ಮೂಲಕ ಡಾ. ವ್ಹಿ. ಎಸ್. ಮಾಳಿಯವರು ಸೊಗಸಾಗಿ ಕಟ್ಟಿಕೊಟ್ಟಿದ್ದಾರೆ.

೪) **ಕೊಕಟನೂರ : ಐತಿಹಾಸಿಕ ಸಮೀಕ್ಷೆ :**

ಐತಿಹಾಸಿಕ ಸಮೀಕ್ಷೆಯ ಮಹತ್ವದ ಸಂಶೋಧನಾ ಲೇಖನವಾಗಿದೆ. ಡಾ. ವ್ಹಿ. ಎಸ್. ಮಾಳಿಯವರು ಎಂ.ಎ. ಪದವಿ ಸಂಪಾದಿಸಿ ಪ್ರಾಧ್ಯಾಪಕರಾದ ಹೊಸದರಲ್ಲಿ ಕೈಗೊಂಡ ಸಂಶೋಧನೆ ಇದಾಗಿದೆ. ಅಥಣಿ ತಾಲೂಕಿನ ಬರುವ ಹಿರಿಯ ಗ್ರಾಮಗಳಲ್ಲೊಂದು. ಇತ್ತೀಚಿಗೆ ಯಲ್ಲಮ್ಮ

ದೇವಸ್ಥಾನದಿಂದ ಪ್ರಸಿದ್ಧಿ ಪಡೆದಿರುವ ಈ ಕೊಕಟನೂರ ಗ್ರಾಮದ ಸಾಂಸ್ಕೃತಿಕ ಜೀವನದಲ್ಲಿ ಮಹತ್ತರ ಪಾತ್ರವನ್ನು ವಹಿಸುವ ಸಂಶೋಧನ ಲೇಖನವಾಗಿದೆ.

ಕೊಕಟ್ಯಾನ ಊರು > ಕೊರ್ಗ್ಗಟನೂರ > ಕೊರ್ಗ್ಗಟನ ಗ್ರಹಾರ ಮುಂದುವರೆದು ಕೊರ್ಗ್ಗಟನೂರು > ಕೊಗ್ಗಟನೂರು > ಕೊಗಟನೂರು > ಕೊಕಟನೂರು ಎಂದು ಬದಲಾವಣೆಯಾಗಿರುವುದು. ಅನೇಕ ಶಾಸನಗಳ ಆಧಾರವಾಗಿ ಡಾ. ವ್ಹಿ. ಎಸ್. ಮಾಳಿಯವರು ಗುರುತಿಸಿದ್ದಾರೆ.

ಕರಹಡ ನಾಲ್ಸಾಸಿರದ ಉಪವಿಭಾಗದ ಕನಂಬಡೆ ಮುನ್ನೂರುರ ಒಂದು ಅಗ್ರಹಾರ. ಇಲ್ಲಿ ವಿದ್ಯಾವಂತ ಬ್ರಾಹ್ಮಣರು ನೆಲೆಯಿದ್ದಂತಹ ಸಂಗತಿ ತಿಳಿಯುತ್ತದೆ. ಒಟ್ಟು ೯ ಶಾಸನಗಳು, ಕಲ್ಯಾಣ ಚಾಲುಕ್ಯರು, ಕಲಚೂರ್ಯರು, ದೇವಗಿರಿ ಯಾದವರು ಇಲ್ಲಿ ಆಡಳಿತ ನಡೆಸಿದ ಆಧಾರಗಳು ಸಿಗುತ್ತವೆ. ಕಲ್ಲಿನಾಥ ದೇವಾಲಯ, ಚಂದಿಕೇಶ್ವರ ಹನುಮಂತ, ಕೋಣಮ್ಮ, ಚಂದ್ರವ್ವ, ಮುಂತಾದ ಆಧುನಿಕ ದೇವರುಗಳ ಜೊತೆಗೆ ಸಾಂಸ್ಕೃತಿಕ ಪರಂಪರೆ ಬೆಳೆಸಿದ ಮಹತ್ವದ ಸಂಶೋಧನ ಲೇಖನ.

ಕೊಕಟನೂರಿನಲ್ಲಿ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಅನೇಕ ಸಾಮಗ್ರಿಗಳು ಸಿಗುವ ಸಂಭವ ಹೆಚ್ಚು ಎಂದು ಡಾ. ವ್ಹಿ. ಎಸ್. ಮಾಳಿಯವರು ಹೇಳಿರುವ ಶೋಧನೆ ಹಾಗೂ ರಕ್ಷಣೆಯ ಕಾರ್ಯವಾಗಬೇಕಾಗಿದೆ. ಸಂಶೋಧನೆಯು ಅವರ ಹವ್ಯಾಸವಾಗಿತ್ತೆಂಬುದಕ್ಕೆ ಪ್ರಸ್ತುತ ಲೇಖನ ಉತ್ತಮ ಉದಾಹರಣೆಯಾಗಿದೆ. ಶ್ರಮದಿಂದ ಸಾಮಗ್ರಿಯನ್ನು ಸಂಗ್ರಹಿಸಿದ್ದಾರೆ. ಸಾಮಗ್ರಿ ಮುಖಿ ಸಂಶೋಧನೆಗೆ ಇದೊಂದು ನಿದರ್ಶನ. ಅಷ್ಟಕ್ಕೆ ಬಿಡದೆ ಸಂಗ್ರಹಿಸಿದ ಸಾಮಗ್ರಿಯನ್ನು ವಿವೇಚಿಸಿದ್ದು, ವಿಶ್ಲೇಷಣೆಗೆ ಒಳಪಡಿಸಿದ್ದು, ಅಂತಿಮ ತೀರ್ಮಾಣಕ್ಕೆ ತಲುಪಿದ್ದು, ಪ್ರಬುದ್ಧ ಸಂಶೋಧನ ನಿಲುವಾಗಿದೆ. ಲೇಖನ ತಯಾರಿಸಲು ಬಳಸಿದ ಆಕರ ಗ್ರಂಥ ನೀಡಿದ್ದು, ಶಾಸನ, ಕೃತಿಗಳನ್ನು ಸೂಚಿಸಿದ್ದು, ವ್ಯಕ್ತಿಋಣ ಸ್ಮರಿಸಿದ್ದು ಸಂಶೋಧನ ಶಿಸ್ತಿಗೆ ಅನುಗುಣವಾಗಿದೆ.

ಡಾ. ವ್ಹಿ. ಎಸ್. ಮಾಳಿಯವರು ಹಲವಾರು ಬಿಡಿ ಲೇಖನಗಳು ಬೆಳಕು ಕಂಡಿದ್ದು, ವಿದ್ವತ್ ವಲಯದ ಗಮನ ಸೆಳೆಯುತ್ತವೆ. ಪ್ರತಿಭಾವಂತ ಸಂಶೋಧಕನ ಆಗಮನವನ್ನು ಸೂಚಿಸುತ್ತಾ ಹೀಗಾಗಿ ಈ ಲೇಖನ ತುಂಬಾ ಮಹತ್ವದ್ದಾಗಿದೆ.

## ೩. ಸಮಾರೋಪ :

ಡಾ. ವ್ಹಿ. ಎಸ್. ಮಾಳಿಯವರ ಸಂಶೋಧನೆ ವೈವಿಧ್ಯಮಯವಾಗಿದೆ. ಸಂಶೋಧನ ಮಹಾಪ್ರಬಂಧದಲ್ಲಿ ಕರ್ಣನ ಪಾತ್ರ ವೈಭವೀ ವಿಶೇಷತೆ ತೌಲನಿಕ ಶೋಧನೆ ಗೋಚರಿಸುತ್ತದೆ. ಮತ್ತು ತಾಣದೀವಿಗೆ ಸಂಶೋಧನ ಕ್ಷೇತ್ರಕ್ಕೆ ಸಂಬಂಧಿಸಿದ ಲೇಖನಗಳ ಸಂಕಲನವು ನವ ಸಂಶೋಧಕರ ವಿಶೇಷತೆಯನ್ನು ಪರಿಶೀಲಿಸುವ ಕ್ರಮ. ಮತ್ತೊಂದು ಪರಿಶೋಧನ ಭಾಗದಲ್ಲಿ ಕನ್ನಡ ಮರಾಠಿ ಸಾಂಸ್ಕೃತಿಕ, ಸಂಸ್ಕೃತಿ ಬಿಂಬಿಸುವ ಮಹತ್ವದ ಗ್ರಂಥಗಳ ಸಮೀಕ್ಷೆ ತೆರೆದಿಡುತ್ತಾರೆ. ಪರಿವರ್ಧನದಲ್ಲಿ ತಮ್ಮ ಸಂಶೋಧನ ಬೆಳವಣಿಗೆಗೆ ಕಾರಣಿಭೂತರು. ಪರಿಚಯ ಅವರ ಸಂಶೋಧನಾ ವಿಶೇಷತೆ ಹಾಗೂ ಸಂಸ್ಕೃತಿಯ ಚಿಂತನೆಯನ್ನು ಹಂಚಿಕೊಂಡಿದ್ದಾರೆ. ಸಂಶೋಧನಾ ಬಿಡಿ ಲೇಖನಗಳ ಮಹತ್ವ ಶೋಧಿಸುವ ಕ್ರಮ ವಿಶಿಷ್ಟ.

ಕನ್ನಡದಲ್ಲಿ ವೈಚಾರಿಕ ಚಿಂತನಶೀಲ ಸಾಹಿತಿಗಳೆಂದು ಮಾನವೀಯ ಮೌಲ್ಯಗಳು ಹಾಗೂ ವಿಮರ್ಶೆ ಮತ್ತು ಸಂಶೋಧನೆ ಪಥವನ್ನು ಮುಂದುವರೆಸಿಕೊಂಡು ಬಂದಿರುವ, ಕಲಬುರ್ಗಿ, ಚಿದಾನಂದ ಮೂರ್ತಿ, ಬಿ. ಆರ್. ಹಿರೇಮಠ, ಶಂಭಾ ಜೋಷಿ, ಜ್ಯೋತಿ ಹೊಸರು ಮುಂತಾದವರ ಸಾಲಿನಲ್ಲಿ ಮತ್ತೊಂದು ಯುಗ ಆರಂಭಿಸುವ ಡಾ. ವ್ಹಿ. ಎಸ್. ಮಾಳಿಯವರ ಸಂಶೋಧನೆ, ವೈಚಾರಿಕ ಚಿಂತನೆಗಳು, ಜನಾಂಗಿಕ ಅಧ್ಯಯನ, ಸಂಶೋಧನಾತ್ಮಕ, ವಿಮರ್ಶಾತ್ಮಕ, ಸಂಘಟನೆ, ಪತ್ರಿಕಾನೆಲೆ, ಸಾಂಸ್ಕೃತಿಕ ನೆಲೆಯಲ್ಲಿ ಡಾ. ವ್ಹಿ. ಎಸ್. ಮಾಳಿಯವರು ವಿಶಿಷ್ಟ ಪೂರ್ಣವಾದ ಕಾರ್ಯ ಕೈಗೊಂಡಿದ್ದು ಪ್ರಶಂಸನೀಯವಾಗಿದೆ. ಕನ್ನಡ ಸಾಹಿತ್ಯದಲ್ಲಿ ಡಾ. ವ್ಹಿ. ಎಸ್. ಮಾಳಿಯವರು ಬರಹಗಾರರಾಗಿ, ಸಂಪಾದಕರಾಗಿ, ಸಂಘಟಕರಾಗಿ ಮಾಡಿದ ಕಾರ್ಯ ವಿಶಿಷ್ಟ ಅದಕ್ಕಾಗಿ ಅವರ ಬಗ್ಗೆ ಸಂಕ್ಷೇಪ್ತವಾಗಿ ಸಮೀಕ್ಷೆ ಮಾಡಲಾಗಿದೆ.

ಇದೇ ರೀತಿ ಉಪೇಕ್ಷೆಗೊಳಗಾದ ಸಾಹಿತ್ಯದ ಸಂಶೋಧನೆಯ ಬಳಗ ನಾಡಿನ ತುಂಬಾ ವಿಭಿನ್ನ ನೆಲೆಗಳನ್ನು ಅಧ್ಯಯನ ಮಾಡಲು ಅವಕಾಶವಿದೆ. ಡಾ. ವ್ಹಿ. ಎಸ್. ಮಾಳಿಯವರ ಸಮಗ್ರ ಅಧ್ಯಯನ, ವಿಮರ್ಶಾ ಸಾಹಿತ್ಯ, ಸಂಪಾದನಾ ಸಾಹಿತ್ಯ, ಪತ್ರಿಕಾ ಸಾಹಿತ್ಯ ಇತ್ಯಾಧಿ ಅಧ್ಯಯನ ಮಾಡಲು ಮುಕ್ತ ಅವಕಾಶವಿದೆ ಹಾಗೂ ಆಸಕ್ತರು ಕೈಗೆತ್ತಿಕೊಳ್ಳಬಹುದು.

# ಅನುಬಂಧಗಳು

## ಅನುಬಂಧ – ೧ :

ಡಾ. ವ್ಹಿ. ಎಸ್. ಮಾಳಿಯವರ ಜೀವನದ ಪ್ರಮುಖ ಘಟ್ಟಗಳು

## ಅನುಬಂಧ – ೨ :

ಡಾ. ವ್ಹಿ. ಎಸ್. ಮಾಳಿಯವರ ಕೃತಿಗಳು

## ಅನುಬಂಧ – ೩ :

ಪರಾಮರ್ಶನ ಗ್ರಂಥಗಳು

ಅನುಬಂಧ - ೧

## ಡಾ. ವ್ಹಿ. ಎಸ್. ಮಾಳಿಯವರ ಜೀವನದ ಪ್ರಮುಖ ಘಟ್ಟಗಳು

### : ಡಾ. ವಿಠ್ಠಲ ಸದಾಶಿವ ಮಾಳಿಯವರು :

೧. ೦೧-೦೬-೧೯೬೨ ಜನನ : ಬೆಳಗಾವಿ ಜಿಲ್ಲೆ ಅಥಣಿ ತಾಲೂಕಿನ ಜಂಬಗಿ ಗ್ರಾಮ. ತಂದೆ : ಸದಾಶಿವ, ತಾಯಿ : ದಾನವ್ವ, ಸಹೋದರರು ೨, ಸಹೋದರಿಯರು ೩.

೨. ೦೧-೦೬-೧೯೬೭ ರಲ್ಲಿ ಶಿಕ್ಷಣ ಪ್ರಾಥಮಿಕ : ಜಂಬಗಿ ಗ್ರಾಮದಲ್ಲಿ ಕನ್ನಡ ಗಂಡು ಮಕ್ಕಳ ಶಾಲೆ, ೧೯೭೩ ಕ್ಕೆ ಪ್ರೌಢಶಾಲೆ, ಮದಭಾವಿಯಲ್ಲಿ ಪಡೆದು ಬಾಲ್ಯತಹ ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದರು.

೩. ೧೯೮೩ ರಲ್ಲಿ ಮಾಧ್ಯಮಿಕ (ಪ.ಪೂ) ಮತ್ತು ಪದವಿ ಶ್ರೀ ಎಸ್. ಎಮ್. ಎಸ್. ಕಾಲೇಜು, ಅಥಣಿ.

೪. ೧೯೮೫ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಲ್ಲಿ ಎಂ.ಎ. ಎರಡು ಸ್ವರ್ಣ ಪದಕ ಹಾಗೂ ರಾಜ್ಯಕ್ಕೆ ಪ್ರಥಮ ಸ್ಥಾನ.

೫. ೧೯೯೩ ರಲ್ಲಿ ಪಿ.ಎಚ್.ಡಿ. ಪದವಿ ಕನ್ನಡ ವಿಶ್ವವಿದ್ಯಾಲಯ, ಡಾ. ಬಿ. ಆರ್. ಹಿರೇಮಠರು ಮಾರ್ಗದರ್ಶಕರು, 'ಕನ್ನಡ ಸಾಹಿತ್ಯದಲ್ಲಿ ಕರ್ಣ' ಸಂಶೋಧನ ಮಹಾಪ್ರಬಂಧ ಮಂಡನೆ.

೬. ೧೯೮೫ ರಲ್ಲಿ ಸೇವೆಗೆ ಸೇರ್ಪಡೆ ಶ್ರೀ ವೃಷಬೇಂದ್ರ ಶಿಕ್ಷಣ ಸಂಸ್ಥೆ, ಹಾರೂಗೇರಿಯಲ್ಲಿ ಉಪನ್ಯಾಸಕರಾಗಿ.

೭. ೧೯೮೬ ರಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾಗಿ

೮. ೧೯೮೬ ರಲ್ಲಿ ಆರಂಭದ ಸಂಶೋಧಕರಾಗಿ 'ಕೊಕಟನೂರ ಸಾಂಸ್ಕೃತಿಕ ಅಧ್ಯಯನ'.

೯. ೨೦೦೫ ರಲ್ಲಿ ಮಾರ್ಗದರ್ಶಕರಾಗಿ (ಸಂಶೋಧನ ವಿದ್ಯಾರ್ಥಿಗಳಿಗೆ) ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ. ೮ ಪಿ.ಎಚ್.ಡಿ. ಸಂಶೋಧಕ ವಿದ್ಯಾರ್ಥಿಗಳು, ೭ ಎಂ.ಫಿಲ್. ವಿದ್ಯಾರ್ಥಿಗಳು.

೧೦. ೨೦೦೬ ರಲ್ಲಿ ನ್ಯಾಕ್ ಸಂಯೋಜನಕರಾಗಿ.

೧೧. ೨೦೦೭ ರಲ್ಲಿ ಶ್ರೀ ಬಿ. ಆರ್. ದರೂರ, ಸಂಶೋಧನಾ ಕೇಂದ್ರ, ಹಾರೂಗೇರಿಯಲ್ಲಿ ೪ ವರ್ಷಗಳ ಅನುಭವ (ಕನ್ನಡ ವಿಶ್ವವಿದ್ಯಾಲಯ, ಹಂಪಿ ಸಹಭಾಗಿತ್ವದಲ್ಲಿ) ನಿರ್ದೇಶಕರಾಗಿ.

೧೨. ೨೦೧೧ ರಿಂದ ಸ್ನಾತಕೋತ್ತರ ಅಧ್ಯಯನ ಕೇಂದ್ರ, ಶ್ರೀ ವೃಷಬೇಂದ್ರ ಶಿಕ್ಷಣ ಸಂಸ್ಥೆ, ಹಾರೂಗೇರಿ. ಸಂಯೋಜಕರಾಗಿ.

೧೩. ೨೦೦೮ ರಿಂದ ಬೋರ್ಡ್ ಅಧ್ಯಯನ ಸದಸ್ಯರು

ಯು.ಜಿ. ಕನ್ನಡ – ಸೊಲ್ಲಾಪೂರ ವಿಶ್ವವಿದ್ಯಾಲಯ.

೨೦೧೦ ರಿಂದ ಯು.ಜಿ. ಕನ್ನಡ ಬೆಳಗಾವಿ ವಿಶ್ವವಿದ್ಯಾಲಯ.

೨೦೧೧ ರಿಂದ ಪಿ.ಯು.ಸಿ. ಕನ್ನಡ ಪಿ.ಯು. ಬೋರ್ಡ್ ಪೂನೆ (ಮಹಾರಾಷ್ಟ್ರ)

೧೪. ೨೦೧೧ ರಲ್ಲಿ ಪಿ.ಎಚ್.ಡಿ. ಕನ್ನಡ – ಸೊಲ್ಲಾಪುರ ವಿಶ್ವವಿದ್ಯಾಲಯ.

೧೫. ೨೦೦೭ ರಿಂದ ಹಂಪಿ ಕನ್ನಡ ವಿಶ್ವವಿದ್ಯಾಲಯ, ಶ್ರೀ ಬಿ. ಆರ್. ದರೂರ ೧೨ ಎಂ.ಫಿಲ್. ವಿದ್ಯಾರ್ಥಿಗಳು, ೧೪ ಪಿ.ಎಚ್.ಡಿ. ಸಂಶೋಧನಾ ವಿದ್ಯಾರ್ಥಿಗಳಿಗೆ ಸಾಹಿತ್ಯಕ ಅರಿವು ಮೂಡಿಸಿದ ಗರಿಮೆ ಸಲ್ಲುತ್ತದೆ.

೧೬. ೨೮ ಎಫ್.ಡಿ. ಪ್ರೋಗ್ರಾಮಗಳು

೨೨೫ಕ್ಕೂ ಹೆಚ್ಚು ಸೃಜನಾತ್ಮಕ ಚಟುವಟಿಕೆಗಳು

೨೫ ರಾಜ್ಯ, ರಾಷ್ಟ್ರಮಟ್ಟ ಹಾಗೂ ಅಂತರರಾಷ್ಟ್ರ ಮಟ್ಟದ ವಿಚಾರ ಸಂಕೀರಣಗಳಲ್ಲಿ ಭಾಗಿಯಾಗಿ ಪ್ರಬಂಧ ಮಂಡಣೆ.

~ ೧೦೦೦ ಕ್ಕೂ ಹೆಚ್ಚು ಸಾರ್ವಜನಿಕ ಉಪನ್ಯಾಸಗಳು

~ ಅನೇಕ ಮಹಾವಿದ್ಯಾಲಗಳಿಗೆ ಅತಿಥಿ ಉಪನ್ಯಾಸಗಳು

~ ಕರ್ನಾಟಕ ಸಾಹಿತ್ಯ ಪರಿಷತ್ತಿನ ಸದಸ್ಯರು

~ ಗಮಕ ಕಲಾ ಪರಿಷತ್

~ Life member of KUCTA

Consultancy - Advisory Commitee Member of ಶರಣ ಚೇತನ
- Advisory Commitee Member of ಲಿಂಗಾಯತ Journal
- Advisory Commitee Member of ಪುಸ್ತಕ ಮಾಲಾ
- B.O.S. member of Distance Education for UG of KUD.

Radio Talks - 12 Talks in A.I.R Dharwad.

Journalism - New Reporter for Famous Kannada Daily Samyukt Karnataka.
- National Commitee Member (working) Journalism

Govt. Works - District Commitee Member of World Kannada meet
- Chairman - Cultural Committee

Central Govt. Work :

- District Member for Kannada Development Counsil
- District Co-ordination for Nation Mission of Manuscripts Survey Project.

N.G.O Work :

- Secretory - Taluka K.S.P.
- Secretory - Ranga Tarang Vedike
- President - Sharan Sahitya Parishat
- Member - Basav Samiti

Social Works :

- Fecilitator of Vidya Poshak, Dharwad. (Infosys)
- Active Commitee Member of Vimochana Sangh Athani. Branch - Raibag.

Project Works : (Completed)

- Halakatti Sahitya
- Cultural Study of Ainapur
- Historical Study of Kokatanur
- Servey of Manuscript of Balgaum Dist.
- A Seet Study of Mali (Malagar)

* On Going -

- A Gazzetier of Athani Taluka.

Awards :

- Educational - 04
- Academic - 03

# ಅನುಬಂಧ – ೨

## ಡಾ. ವ್ಹಿ. ಎಸ್. ಮಾಳಿಯವರ ಕೃತಿಗಳು

೧.೧ **ಸಂಶೋಧನಾ ಸಾಹಿತ್ಯ :**

೧. ಕೊಕಟನೂರ ಸಾಂಸ್ಕೃತಿಕ ಶೋಧ
೨. ಕನ್ನಡ ಸಾಹಿತ್ಯದಲ್ಲಿ ಕರ್ಣ (ಮಹಾಪ್ರಬಂಧ)
೩. ತಾಣದೀವಿಗೆ ಸಂಶೋಧನೆ
೪. ಐನಾಪುರ ಸಾಂಸ್ಕೃತಿಕ ಅಧ್ಯಯನ ಶೋಧ
೫. ಅಥಣಿ ತಾಲೂಕಾ ದರ್ಶನ. (ಸಮಗ್ರ ದರ್ಶನ)
೬ ಮೊಟಗಿ ಮಠದ ಪರಂಪರೆ

೧.೨ **ವಿಮರ್ಶಾ ಸಾಹಿತ್ಯ :**

೧. ರಸಾಲ
೨. ಸ್ಪಂದನ
೩. ಮರಾಳ
೪. ಅಮೃತದ ಬೆಳಸು
೫. ಕನ್ನಡಿ
೬. ಸಂವಾದ
೭. ಸಖ್ಯದ ಆಖ್ಯಾನ
೮. ಕನ್ನಡ ಪ್ರಾಚೀನ ಸಾಹಿತ್ಯ ಸ್ವರೂಪ
೯. ಬೆಡಗಿನ ವಚನಗಳು

೧.೩ **ಕಾದಂಬರಿ :**

೧. ಕೂಡಲದ ಕಲ್ಪತರು

೧.೪ **ಅಂಕಣ ಸಾಹಿತ್ಯ :**

೧. ಕಡೆ ಗೀಲು
೨. ಮಹಾಮನೆಯ ಮಕ್ಕಳು

೧.೫ **ಲಿಂಗಾಯತ ಪತ್ರಿಕೆ :**

೧. ಶರಣ ಚೇತನ ಪತ್ರಿಕೆ
೨. ಪುಸ್ತಕ ಮಾಲೆ ಪತ್ರಿಕೆ
೩. ವಿವೇಚನಾ ಪ್ರಕಟನಾಂಗ (ನಿರ್ದೇಶಕರು)
೪. ಆಜೂರ ಪುಸ್ತಕ ಪ್ರತಿಷ್ಠಾನ (ನಿರ್ದೇಶಕರು)

## ೧.೬ ಸಂಪಾದನಾ ಸಾಹಿತ್ಯ :

೧. ಅರಳು
೨. ಭೂಮಿವಿಸ್ತಾರ
೩. ಮಲ್ಲಿಕಾಲತೆ
೪. ಭಗವಂತ
೫. ಶುಭ ಲಗ್ನವೆನ್ನಿರಯಾ
೬. ಐನಾಪುರ ಒಂದು ಅಧ್ಯಯನ
೭. ಸಮೂಹ ಸಂವಹನ
೮. ನೆಲ–ಜಲ–ಕನ್ನಡ
೯. ಐನಾಪುರ ಐಸಿರಿ
೧೦. ಹಳಕಟ್ಟಿ ಸಮಗ್ರ ಸಾಹಿತ್ಯ ಸಂ. ೫
೧೧. ಯುವ ಭಾರತಿ
೧೨. ಸಾಹಿತ್ಯ ನಿಧಿ
೧೩. ಅಥಣೀಶ
೧೪. ಹಳಗನ್ನಡ ಕಾವ್ಯ ಸಂಚಯ – (ಬಿ.ಎ. ೨ – ಕ.ವಿ.ವಿ)
೧೫. ಚೆನ್ನ ಬಸವಣ್ಣನವರ ವಚನಗಳು
೧೬. ಅಥಣಿ : ಬನಿ–ದನಿ

ಇಂತಹ ಹಲವಾರು ಪ್ರಕಾರಗಳಲ್ಲಿ ಸಾಹಿತ್ಯಿಕ ಬರಹಗಳು ಕನ್ನಡ ಸಾಹಿತ್ಯಕ್ಕೆ ನೀಡಿದ ಅಮೂಲ್ಯ ಕೊಡುಗೆಗಳು ಇವಾಗಿವೆ.

## ೧.೭ ಪ್ರಶಸ್ತಿಗಳು :

೧. ಆಜೂರ ಪುಸ್ತಕ ಪ್ರತಿಷ್ಠಾನದ ಅತ್ಯುತ್ತಮ ಪ್ರಶಸ್ತಿ.
೨. ಸಾಹಿತ್ಯ ರತ್ನ ಪ್ರಶಸ್ತಿ
೩. ವಾಗ್ಭೂಷಣ ಪ್ರಶಸ್ತಿ
೪. ಆದರ್ಶ ಪ್ರಾಧ್ಯಾಪಕ ಪ್ರಶಸ್ತಿ
೫. ಹಳಕಟ್ಟಿ ಶ್ರೀ ಪ್ರಶಸ್ತಿ
೬. ಸಿರಿಗನ್ನಡ ಪುಸ್ತಕ ಪ್ರಶಸ್ತಿ
೭. ಮಿರ್ಜಿ ಅಣ್ಣಾರಾಯ ಪ್ರತಿಷ್ಠಾನ ಪ್ರಶಸ್ತಿ
೮. ಬಸವಶ್ರೀ ಪ್ರಶಸ್ತಿ

ಇನ್ನೂ ಮಾನ ಸನ್ಮಾನಗಳು ಹಲವಾರು ಸಣ್ಣ ಪುಟ್ಟ ಅನೇಕ ಸಂಘ ಸಂಸ್ಥೆಗಳಿಂದ ಸಂದಿವೆ. ಡಾ. ವ್ಹಿ. ಎಸ್. ಮಾಳಿಯವರ ಸಾಂಸ್ಕೃತಿಕ ಬರಹಗಳು ಉತ್ತರ ಕರ್ನಾಟಕದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

## ಅನುಬಂಧ – ೩

## ಪರಾಮರ್ಶನ ಗ್ರಂಥಗಳು

| ಕ್ರ.ಸಂ | ಕೃತಿ | ಲೇಖಕರು | ಪ್ರಕಾಶನ | ಪ್ರ. ವರ್ಷ |
|---|---|---|---|---|
| ೧ | ಬೆಳಗಾವಿ ಬೆಳಕು | ಗುಂಜಾಳ ಎಸ್. ಆರ್. | ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು. | ೨೦೦೨ |
| ೨ | ಕನ್ನಡ ಸಂಶೋಧನೆ ತಾತ್ವಿಕ ವಿಚಾರ | ತರಕೇರಿ ರಹಮತ್ | ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. | ೨೦೦೭ |
| ೩ | ಕನ್ನಡ ಸಾಹಿತ್ಯಕೋಶ | ದಳವಾಯಿ ರಾಜಪ್ಪ | ಕದಿರು ಪ್ರಕಾಶನ, ಮೈಸೂರು. | ೧೯೯೮ |
| ೪ | ಸಂಶೋಧನೆ ಮಾರ್ಗ | ಮಹಾಬಲೇಶ್ವರಾವ | ನವ ಕರ್ನಾಟಕ ಪ್ರಕಾಶನ, | ೨೦೦೦ |
| ೫ | ಕನ್ನಡ ಸಾಹಿತ್ಯದ ಸಂಶೋಧನೆ ಮಾರ್ಗ ಮತ್ತು ಇತಿಹಾಸ | ಸವದತ್ತಿ ಮಠ ಸಂಗಮೇಶ | ರೂಪಶ್ರೀ ಪ್ರಕಾಶನ, ಧಾರವಾಡ. | ೨೦೦೮ |
| ೬ | ಕನ್ನಡ ಸಾಹಿತ್ಯ ಚರಿತ್ರೆ | ಮುಗಳಿ ರಂ. ಶ್ರೀ | ಸಮಾಜ ಪ್ರಕಾಶನ, ಧಾರವಾಡ. | ೧೯೬೯ |
| ೭ | ಸಾಹಿತ್ಯ ವಿಮರ್ಶೆ | ಸಬರದ ಬಸವರಾಜ | ಪಲ್ಲವಿ ಪ್ರಕಾಶನ, ಗುಲ್ಬರ್ಗಾ. | ೨೦೦೫ |
| ೮ | ಹೊಸಗನ್ನಡ ಸಾಹಿತ್ಯ ಚರಿತ್ರೆ | ಪ್ರೋ. ಎಲ್. ಎಸ್. ಶೇಷಗಿರಿರಾವ | | |
| ೯ | ಹೊಸಗನ್ನಡ ಸಾಹಿತ್ಯದ ರೂಪುಗಳು | ಡಾ. ವೀರಣ್ಣಾ ರಾಜುರ | | |
| ೧೦ | ಸಂಕ್ರಮಣ ಕಾವ್ಯ ಸಮೀಕ್ಷೆ | ಚಂಪಾ | | |
| ೧೧ | ಕನ್ನಡ ಸಾಹಿತ್ಯ ಸಂಸ್ಕೃತಿಕೋಶ | ಡಾ. ಟಿ. ಸಿ. ನಿಂಗಣ್ಣ | | |
| ೧೨ | ಕನ್ನಡ ಸಾಹಿತ್ಯ ಮೀಮಾಂಸೆ | ಡಾ. ಸಿ. ಬಿ. ಹೊನ್ನಯ್ಯ | | |

| ಕ್ರ.ಸಂ | ಕೃತಿ | ಲೇಖಕರು | ಪ್ರಕಾಶನ | ಪ್ರ. ವರ್ಷ |
|---|---|---|---|---|
| ೧೩ | ಅಧ್ಯಯನದ ವಿಧಿ ವಿಧಾನಗಳು | ಡಾ. ಕೆ. ರವೀಂದ್ರನಾಥ | | |
| ೧೪ | ಏನು? ಏಕೆ? ಹೇಗೆ? | ಡಾ. ಎಂ. ಚಂದ್ರ ಪೂಜಾರಿ | | |
| ೧೫ | ಕನ್ನಡ ಸಂಶೋಧನೆಯ ವೈಧಾನಿಕತೆಗಳು | ಡಾ. ಅಮರೇಶ ನಗಡೋಣೆ | | |
| ೧೬ | ಹಂಡೆ ಅರಸು ಮನೆತನದ ವಂಶಾವಳಿ | ಡಾ. ಎಸ್. ಸಿ. ಪಾಟೀಲ | | |
| ೧೭ | ಕನ್ನಡ ಜಾನಪದ ವಿಶ್ವಕೋಶ | ಡಾ. ಚಂ. ಕಂಬಾರ | | |
| ೧೮ | ಯುಗಧರ್ಮ ಹಾಗೂ ಸಾಹಿತ್ಯ ದರ್ಶನ | ಕೀರ್ತಿನಾಥ ಕುರ್ತಕೋಟಿ | | |
| ೧೯ | ಸಂಶೋಧನೆ | ಎಂ. ಚಿದಾನಂದ ಮೂರ್ತಿ | | |
| ೨೦ | ಕನ್ನಡ ಸಂಶೋಧನ ತರಂಗ | ಎಂ. ಚಿದಾನಂದ ಮೂರ್ತಿ | | |
| ೨೧ | ಸಂಶೋಧನ ಮಹಾಮಾರ್ಗ | ಡಾ. ಎಂ. ಎಂ. ಕಲಬುರ್ಗಿ | | |
| ೨೨ | ಸಮಗ್ರ ವಚನ ಸಾಹಿತ್ಯ | ಡಾ. ಎಂ. ಎಂ. ಕಲಬುರ್ಗಿ | | |
| ೨೩ | ಶಾಸನ ವ್ಯಾಸಂಗ | ಡಾ. ಎಂ. ಎಂ. ಕಲಬುರ್ಗಿ | | |
| ೨೪ | ಸಮಗ್ರ ವಚನ ಸಾಹಿತ್ಯ | ಡಾ. ಎಂ. ಎಂ. ಕಲಬುರ್ಗಿ | | |
| ೨೫ | ಗ್ರಾಮೀಣ | ಎಂ. ಚಿದಾನಂದ ಮೂರ್ತಿ | | |
| ೨೬ | ಕನ್ನಡ ನುಡಿಯ ಜೀವಾಳ | ಶಂಭಾ ಜೋಶಿ | | |
| ೨೭ | ಕರ್ನಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ | ಶಂಭಾ ಜೋಶಿ | | |

| ಕ್ರ.ಸಂ | ಕೃತಿ | ಲೇಖಕರು | ಪ್ರಕಾಶನ | ಪ್ರ. ವರ್ಷ |
|---|---|---|---|---|
| ೨೮ | ಸಂಸ್ಕೃತಿ ಕಥನ | ಡಿ. ಆರ್. ನಾಗರಾಜ | | |
| ೨೯ | ಪಂಪಭಾರತ | ಪಂಪ (ವಿಕ್ರಮಾರ್ಜುನ) | | |
| ೩೦ | ಗದಾಯುದ್ಧ | ರನ್ನ (ಸಾಹಸ ಭೀಮವಿಜಯ) | | |
| ೩೧ | ಕರ್ನಾಟಕ ಭಾರತ ಕಥಾಮಂಜರಿ | ಕುಮಾರವ್ಯಾಸ | | |
| ೩೨ | ಪರ್ವ (ಕಾದಂಬರಿ) | ಎಸ್. ಎಲ್. ಬೈರಪ್ಪ | | |
| ೩೩ | ಕನ್ನಡ ಶಾಸನಶಿಲ್ಪ | ಡಾ. ಡಿ. ವ್ಹಿ. ಪರಮಶಿವಮೂರ್ತಿ | | |
| ೩೪ | ಧರ್ಮ ಮತ್ತು ಸಂಸ್ಕೃತಿ | ಡಾ. ಅಶೋಕ ಎಂ. ನರೋಡೆ | | |
| ೩೫ | ಕನ್ನಡ ಸಾಹಿತ್ಯ ವಿಭಿನ್ನ ನೆಲೆಗಳು | ಡಾ. ಅಶೋಕ ಎಂ. ನರೋಡೆ | | |
| ೩೬ | ವಚನ ಸಾಹಿತ್ಯ ಮತ್ತು ಹೊಸ ಸಮಾಜದ ಪರಿಕಲ್ಪನೆ | ಡಾ. ಅಶೋಕ ಎಂ. ನರೋಡೆ | | |
| ೩೭ | ಏಕಲವ್ಯನ ಪಾತ್ರ ಒಂದು ಅಧ್ಯಯನ | ಡಾ. ಅಶೋಕ ಎಂ. ನರೋಡೆ | | |
| ೩೮ | ಕನ್ನಡ ಶಾಸನ ಸಂಪದ | ಡಾ. ಆರ್. ಸಿ. ಹಿರೇಮಠ | | |
| ೩೯ | ಪರಶೋಧನೆ | ಡಾ. ಬಿ. ಆರ್. ಹಿರೇಮಠ | | |
| ೩೯ | ಶಾಸನಗಳಲ್ಲಿ ಕರ್ನಾಟಕದ ವರ್ತಕರು | ಡಾ. ಬಿ. ಆರ್. ಹಿರೇಮಠ | | |
| ೪೦ | ಹಳಗನ್ನಡ ಸಂಪದ | ಡಾ. ವ್ಹಿ. ಎಸ್. ಮಾಳಿ | | |